ವಿಶ್ವವಾಣಿ

ವಿಶ್ವಾಸವೇ ವಿಶ್ವ

ಪಂಜಾಬ್‌ಗೆ 10 ರನ್‌ಗಳ ಜಯ

ಭಾನುವಾರ ಜೈಪುರದಲ್ಲಿ ನಡೆದ ರಾಜಸ್ಥಾನ ವಿರುದ್ಧದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ತಂಡವು 10 ರನ್ ಅಂತರದಿಂದ ಜಯಿಸಿದ್ದು, ಆ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಎರಡನೇ ಸ್ಥಾನಕ್ಕೇರಿತು. ಐಪಿಎಲ್ ಟೂರ್ನಿಯ ಪ್ಲೇ ಆಫ್ ಹಂತದ ಸನಿಹಕ್ಕೆ ಬಂದು ನಿಂತಿದೆ.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ ಕಂದಾಯ ಇಲಾಖೆ

ಉತ್ತಮ ಆಡಳಿತ ನಿಮಗಾಗಿ

ಪರಿಹಾರ 2.0
ವಿಳಂಬವಿಲ್ಲದೆ ವಿಪತ್ತು ಪರಿಹಾರ

2 ವರ್ಷಗಳಲ್ಲಿ **38+ ಲಕ್ಷ ರೈತರಿಗೆ ₹3700 ಕೋಟಿ ಪರಿಹಾರ.**
ನಿಖರವಾದ ಫಲಾನುಭವಿಗಳನ್ನು ಗುರುತಿಸಲು **ಭೂಮಿ ಮತ್ತು ಆಧಾರ್‌ನೊಂದಿಗೆ ಸಂಯೋಜನೆ.**
15-20 ದಿನಗಳೊಳಗೆ ಪರಿಹಾರ ವಿತರಣೆ.

ಇ-ಸಂಯೋಜನೆ
ವಂಚನೆ ಜಾಲಕ್ಕೆ ಕಡಿವಾಣ

ವಹಿವಾಟುಗಳಲ್ಲಿ **ವಂಚನೆಗೆ ತಡೆ.**
ಪ್ರಮುಖ ಸರ್ಕಾರಿ ಡೇಟಾಬೇಸ್‌ಗಳೊಂದಿಗೆ ಸಂಯೋಜನೆ.

ಕಂದಾಯ ಗ್ರಾಮ
ಗುರುತಿಗೊಂದು ವಿಳಾಸ, ಬದುಕಿಗೊಂದು ಭರವಸೆ

2,600+ ಹೊಸ ಕಂದಾಯ ಗ್ರಾಮಗಳು.
20 ಮೇ 2025 ರಂದು **1 ಲಕ್ಷ ಹಕ್ಕುಪತ್ರಗಳ** ವಿತರಣೆ.
2 ವರ್ಷಗಳಲ್ಲಿ **1,000+ ಗ್ರಾಮಗಳ ಸೇರ್ಪಡೆ.**

ಬಗ್ಗೈರ್ ಹುಕುಂ
ಸಾಗುವಳಿದಾರರಿಗೆ ಕಾನೂನು ಮಾನ್ಯತೆ

ಪಾರದರ್ಶಕ ಮತ್ತು ಸಂಪೂರ್ಣ ಡಿಜಿಟಲ್ ಪ್ರಕ್ರಿಯೆ.

ಲ್ಯಾಂಡ್ ಬೀಟ್
ಸಾರ್ವಜನಿಕ ಆಸ್ತಿಗಳ ರಕ್ಷಣೆ

96.91% ಕಂದಾಯ ಇಲಾಖಾ ಭೂಮಿಗಳ ಪರಿಶೀಲನೆ.
ವಿ.ಎ.ಓ.ಗಳಿಂದ **100% ಆ್ಯಪ್ ಬಳಕೆ.**
ತಮ್ಮ **ಆಸ್ತಿ ರಕ್ಷಣೆಗಾಗಿ** ಇತರ ಇಲಾಖೆಗಳಿಂದಲೂ **ಲ್ಯಾಂಡ್ ಬೀಟ್ ಆ್ಯಪ್ ಬಳಕೆ.**

ಇ-ಪೌತಿ ಆಂದೋಲನ
ವಾರಸುದಾರರಿಗೆ ಮನ್ನಣೆ, ಹಕ್ಕುಗಳಿಗೆ ಗೌರವ

52 ಲಕ್ಷ ಲ್ಯಾಂಡ್ ಪಾರ್ಸೆಲ್ ಉತ್ತರಾಧಿಕಾರಿಗಳಿಗೆ ವರ್ಗಾಯಿಸುವ ಅಭಿಯಾನ.

ಭೂ ಸುರಕ್ಷಾ
ನಿಮ್ಮ ಭೂ ದಾಖಲೆಗಳ ಇ-ಖಜಾನೆ

22+ ಕೋಟಿ ಪುಟಗಳ ಡಿಜಿಟಲೀಕರಣ.
1 ವರ್ಷದಲ್ಲಿ **100%** ಪೂರ್ಣಗೊಳ್ಳಲಿದೆ.

ಡಿಜಿಟಲ್ ಸೇವೆಗಳ ವಿತರಣೆ
ಸರತಿ ಸಾಲು ಇನ್ನಿಲ್ಲ ಆನ್‌ಲೈನ್‌ನಲ್ಲೇ ಇನ್ನೆಲ್ಲಾ

ಕಳೆದ ವರ್ಷ **2+ ಕೋಟಿ ಆನ್‌ಲೈನ್ ವಹಿವಾಟು.**
60+ ಭೂಮಿ ಮತ್ತು ಕಂದಾಯ ಸೇವೆಗಳು.
SMS ಮೂಲಕ **1.3 ಕೋಟಿ** ಜಾತಿ, ಆದಾಯ ಪ್ರಮಾಣಪತ್ರಗಳ ವಿತರಣೆ.

ಪೋಡಿ ಮುಕ್ತ ಗ್ರಾಮ ಅಭಿಯಾನ
ಸಂಪೂರ್ಣ ಸರ್ವೇ ಅಭಿಯಾನ

1 ವರ್ಷದಲ್ಲಿ **2204** ಗ್ರಾಮಗಳ ಪೋಡಿ ಮುಕ್ತ.
2025-26 ರಲ್ಲಿ **6,925** ಗ್ರಾಮಗಳ ಗುರಿ.

ಭೂ ಗ್ಯಾರಂಟಿ
ಕಂದಾಯ ಸೇವೆಗಳ ಸುಧಾರಣೆ

ಆಟೋ ಮ್ಯುಟೇಶನ್
ತಕ್ಷಣ ಖಾತೆ ಬದಲಾವಣೆ

70% ಮ್ಯುಟೇಷನ್‌ಗಳಿಗೆ ಸ್ವಯಂ-ಅನುಮೋದನೆ.
5 ದಿನಗಳ ಪ್ರಕ್ರಿಯೆ 12 ಗಂಟೆಗಳಿಗೆ ಇಳಿಕೆ.

ನನ್ನ ಆಸ್ತಿ
ಆರ್‌ಟಿಸಿ-ಆಧಾರ್ ಜೋಡಣೆ - ಮಾಲೀಕತ್ವಕ್ಕೆ ಭದ್ರತೆ

73+ ಲಕ್ಷ ವಿಶಿಷ್ಟ ಭೂ ಮಾಲೀಕರು ಆಧಾರ್ ಗೆ ಲಿಂಕ್.

ಭೂ ನ್ಯಾಯ
ಆರ್‌ಸಿಸಿಎಂಎಸ್ 2.0 - ನ್ಯಾಯದೀಕ್ಷೆಗೆ ತಂತ್ರಜ್ಞಾನದ ಸ್ಪರ್ಶ

ಬಾಕಿ ಪ್ರಕರಣಗಳು: ತಹಶೀಲ್ದಾರ್ ನ್ಯಾಯಾಲಯಗಳಲ್ಲಿ **10000 ದಿಂದ 400 ಕ್ಕೆ**
AC ನ್ಯಾಯಾಲಯಗಳಲ್ಲಿ **70000 ದಿಂದ 30000 ಕ್ಕೆ ಇಳಿಕೆ.**

ಇ-ಕಛೇರಿ
ಕಾಗದರಹಿತ ಆಡಳಿತ

1200+ ಕಚೇರಿಗಳು ಈಗ ಡಿಜಿಟಲ್.
15 ದಿನಗಳ ಪ್ರಕ್ರಿಯೆ ಈಗ **15 ನಿಮಿಷಗಳಲ್ಲಿ.**

ಇ-ದಾಖಲೆ
ಬೆರಳ ತುದಿಯಲ್ಲೇ ದಾಖಲೆ

ಆನ್‌ಲೈನ್ ನಲ್ಲೇ ಅಪ್ಲಿಕೇಶನ್ ಮತ್ತು ವಿತರಣೆ.

ನನ್ನ ಭೂಮಿ
ರೈತರಿಗೆ ಹಕ್ಕು ಖಚಿತಪಡಿಸುವ ಅಭಿಯಾನ

ಕಳೆದ 3 ತಿಂಗಳಲ್ಲಿ **88000+ ಅನುಮೋದನೆ**
30000 ಭೂಮಿಗಳ ಸರ್ವೆ ಪೋಡಿ ಪೂರ್ಣ.
ಎಲ್ಲಾ ಪ್ರಕ್ರಿಯೆ ಈಗ **ಆನ್‌ಲೈನ್‌ನಲ್ಲಿ** ಮತ್ತು **100% ಕಾಗದರಹಿತ.**

ಸಂಯೋಜಿತ ಮುಟೇಷನ್ ಪೋಡಿ
ಪಹಣಿ ಜೊತೆಗೆ ಆಕಾರಬಂದ್ ಗಣಕೀಕರಣ

2024-25 ನೇ ಸಾಲಿನಲ್ಲಿ **8.5 ಲಕ್ಷ** ಮುಟೇಷನ್ ಪ್ರಕರಣಗಳ ವಿಲೇ.
ಪಹಣಿಯಲ್ಲಿ ಸ್ವಯಂಚಾಲಿತ ಬದಲಾವಣೆ **90%** ಸಮಯ ಉಳಿತಾಯ.
ಮಾಸಿಕ **45,000 ಆಕಾರ್** ಬಂದ್ ಪ್ರಕರಣಗಳ ಸಂಯೋಜಿತ ಪರಿಹಾರ.

ಸಮರ್ಪಣೆ ಸಂಕಲ್ಪ
1,11,111 ಕುಟುಂಬಗಳಿಗೆ
ಕಂದಾಯ ಗ್ರಾಮ ಹಕ್ಕು ಪತ್ರ ಸಮರ್ಪಣೆ

20 ಮೇ 2025 ಬೆಳಿಗ್ಗೆ 11.00 ಘಂಟೆಗೆ
ಜಿಲ್ಲಾ ಕ್ರೀಡಾಂಗಣ, ಹೊಸಪೇಟೆ

www.revenuecommissionerate.karnataka.gov.in ಭಾರತದ ಸಾರ್ವಭೌಮತ್ವ, ಅಖಂಡತೆ ಮತ್ತು ಏಕತೆಯನ್ನು ಎತ್ತಿ ಹಿಡಿಯುವುದು ಮತ್ತು ಕಾಪಾಡುವುದು.

ವಿಶ್ವವಾಣಿ
ವಿಶ್ವಾಸವೇ ವಿಶ್ವ

ಎಚ್‌ಡಿಡಿ@93

ಬೆಂಗಳೂರಿನ ಜೆಡಿಎಸ್ ಕಚೇರಿ ಜೆ.ಪಿ.ಭವನದಲ್ಲಿ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರ 93ನೇ ಜನ್ಮದಿನವನ್ನು ಕೇಕ್ ಕತ್ತರಿಸುವ ಮೂಲಕ ಆಚರಿಸಿದರು.

ಸೊಂಪಾದ ಪುಟಗಳು

ಶುರುವಾಗಲಿದೆ ನಿಖಿಲ್ ಪಟ್ಟಾಭಿಷೇಕ ಯಾತ್ರೆ

ಮೂರ್ತಿಪೂಜೆ
ಆರ್.ಟಿ.ವಿಠ್ಠಲಮೂರ್ತಿ 6

ಕಣ್ಣುಕಟ್ಟುವ ವಿದ್ಯೆಯೇ ಇಂದು ಕೆಲಸಕ್ಕೆ ಬಂದಿದೆ!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್ 7

ದಾರಿದೀಪೋಕ್ತಿ

ಕೆಲವು ಸಲ ನಿಮಗೆ ಕೆಟ್ಟ ಅನುಭವ ಆಗುವುದು ಸಹ ಒಳ್ಳೆಯದೇ ಎಂದು ಭಾವಿಸಬೇಕು. ಯಾಕೆಂದರೆ ಆಗ ನಿಮಗೆ ಜೀವನದಲ್ಲಿ ಉತ್ತಮ ಸಂಗತಿಗಳ ಮಹತ್ವ ಗೊತ್ತಾಗುತ್ತದೆ. ಕಹಿ ಅನುಭವ ಆದಾಗಲೇ, ಸಿಹಿಯ ಅನುಭವ ತಿಳಿಯುತ್ತದೆ.

ವಕ್ರತುಂಡೋಕ್ತಿ

ಒಂದಕ್ಕಿಂತ ಹೆಚ್ಚು ಸಲ ಯಾರಾದರೂ ತಮ್ಮ ವಾಚನ್ನು ನೋಡಿದರೆ, ಅವರು ಸಮಯ ನೋಡುತ್ತಿಲ್ಲ, ನಿಮಗೆ ತಮ್ಮ ವಾಚನ್ನು ತೋರಿಸಲು ಪ್ರಯತ್ನಿಸುತ್ತಿದ್ದಾರೆಂದು ಭಾವಿಸಬಹುದು.

ಚಿನ್ನಾಭರಣ ಅಂಗಡಿಯಲ್ಲಿ ಬೆಂಕಿ: 17 ಸಾವು

ಹೈದರಾಬಾದ್: ಚಾರ್‌ಮಿನಾರ್ ಬಳಿ ಗುಲ್ಜಾರ್ ಹೌಸ್‌ನಲ್ಲಿರುವ ಚಿನ್ನಾಭರಣ ಅಂಗಡಿಯಲ್ಲಿ ಭಾನುವಾರ ಬೆಳಗ್ಗೆ 6 ಗಂಟೆ ಸುಮಾರಿಗೆ ಬೆಂಕಿ ಅವಘಡ ಸಂಭವಿಸಿದ್ದು, 8 ಮಕ್ಕಳು ಸೇರಿ 17 ಮಂದಿ ಮೃತಪಟ್ಟಿದ್ದಾರೆ. ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ. ಮೃತಪಟ್ಟವರ ಕುಟುಂಬ ಸದಸ್ಯರಿಗೆ ಪ್ರಧಾನಿ ಮೋದಿ ಪಿಎಂಎನ್‌ಆರ್‌ಎಫ್‌ನಿಂದ ₹2 ಲಕ್ಷ, ಗಾಯಾಳುಗಳಿಗೆ ₹50,000 ಪರಿಹಾರ ಘೋಷಿಸಿದ್ದಾರೆ.

ಕಾರ್ಖಾನೆಯಲ್ಲಿ ಅಗ್ನಿ ಅವಘಡ; 8 ಮಂದಿ ದಹನ

ಮುಂಬೈ: ಸೋಲಾಪುರದ ಸೆಂಟ್ರಲ್ ಜವಳಿ ಮಿಲ್ಸ್‌ನಲ್ಲಿ ಭಾನುವಾರ ಬೆಳಗಿನ ಜಾವ 3:45 ರ ಸುಮಾರಿಗೆ ಬೆಂಕಿ ಅವಘಢ ಸಂಭವಿಸಿದ್ದು, 8 ಮಂದಿ ಸಜೀವ ದಹನವಾಗಿದ್ದಾರೆ. ಕಾರ್ಖಾನೆ ಮಾಲೀಕ ಹಾಜಿ ಉಸ್ಮಾನ್ ಹಸನ್ಭಾಯ್ ಮನ್ಸೂರಿ, ಅವರ ಒಂದೂವರೆ ವರ್ಷದ ಮೊಮ್ಮಗ ಸೇರಿದಂತೆ ಕುಟುಂಬದ ಮೂವರು ಸದಸ್ಯರು ಮತ್ತು ನಾಲ್ವರು ಕಾರ್ಮಿಕರು ಮೃತಪಟ್ಟಿದ್ದಾರೆ.

ಪಾಕ್‌ಗೆ ಸಾಲ 11 ಷರತ್ತು

ಇಸ್ಲಾಮಾಬಾದ್: ಪಾಕಿಸ್ತಾನಕ್ಕೆ ಒಂದು ಬಿಲಿಯನ್ ಡಾಲರ್ ಸಾಲ ಮಂಜೂರು ಮಾಡಿರುವ ಐಎಂಎಫ್, ಈ ಹಣಕಾಸು ನೆರವಿಗಾಗಿ ಪಾಕಿಸ್ತಾನಕ್ಕೆ 11 ಷರತ್ತುಗಳನ್ನು ವಿಧಿಸಿದೆ. ಮುಂದಿನ ಹಂತದ ಹಣ ಬಿಡುಗಡೆಗೆ ಈ ಷರತ್ತುಗಳನ್ನು ಐಎಂಎಫ್ ನೀಡಿದೆ.

ಫನ್‌ತರಂಗ
- ರಘುಪತಿ ಶೃಂಗೇರಿ -



ಸಮಾವೇಶಕ್ಕೆ ಪ್ರಗತಿಯತ್ತ ಕರ್ನಾಟಕ-ಸಮರ್ಪಣೆ ಸಂಕಲ್ಪವೆಂದು ನಾಮಕರಣ
ಲಕ್ಷಾಂತರ ಕಾರ್ಯಕರ್ತರನ್ನು ಒಂದೇ ವೇದಿಕೆಯಲ್ಲಿ ಸೇರಿಸಲು ಸಕಲ ಸಿದ್ಧತೆ

ಸರಕಾರಕ್ಕೆ ಎರಡು ವರ್ಷ ಸಂಭ್ರಮಾಚರಣೆಗೆ ಸಜ್ಜು

ಬೆಂಗಳೂರು/ಹೊಸಪೇಟೆ: ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರಕಾರ ಎರಡನೇ ವರ್ಷದ ಹೊಸ್ತಿಲಲ್ಲಿದ್ದು, ಅದ್ದೂರಿ ಸಮಾವೇಶಕ್ಕೆ ಐತಿಹಾಸಿಕ ವಿಜಯನಗರ ಸಾಮ್ರಾಜ್ಯದ ಹೊಸಪೇಟೆ ಸಜ್ಜಾಗಿದೆ. ಈ ಸಂಭ್ರಮಾಚರಣೆಯಲ್ಲಿ ಲಕ್ಷಾಂತರ ಕಾರ್ಯಕರ್ತರನ್ನು ಒಂದೇ ವೇದಿಕೆಯಲ್ಲಿ ಸೇರಿಸುವ ನಿಟ್ಟಿನಲ್ಲಿ ಕಾಂಗ್ರೆಸ್ ಸಕಲ ಸಿದ್ಧತೆ ನಡೆಸಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಸಚಿವರು, ಶಾಸಕರು ಈಗಾಗಲೇ ಹೊಸಪೇಟೆಯಲ್ಲಿ ವಾಸ್ತವ್ಯ ಹೂಡಿದ್ದು, ಸಂಭ್ರಮಾಚರಣೆಯ ತಯಾರಿಯಲ್ಲಿ ತೊಡಗಿದ್ದಾರೆ. ಮಂಗಳವಾರ ಹೊಸಪೇಟೆಯ ಜಿಲ್ಲಾ ಕ್ರೀಡಾಂಗಣದಲ್ಲಿ ಬೃಹತ್ ಸಮಾವೇಶ ನಡೆಯಲಿದ್ದು, ಸಮಾವೇಶದಲ್ಲಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಸೇರಿದಂತೆ ಹಲವು ಪ್ರಮುಖ ನಾಯಕರು ಭಾಗವಹಿಸುವುದು ಖಚಿತವಾಗಿದೆ.

ಸಮಾವೇಶದಲ್ಲಿ ನಾಲ್ಕು ಲಕ್ಷ ಜನ ಸೇರುವ ನಿರೀಕ್ಷೆಯಲ್ಲಿ ಪಕ್ಷದ ನಾಯಕರು ಹೊಂದಿದ್ದರೂ, ಕನಿಷ್ಠ ಮೂರು ಲಕ್ಷ ಜನರನ್ನು ಸೇರಿಸಬೇಕು ಎನ್ನುವ ಲೆಕ್ಕಾಚಾರದಲ್ಲಿದ್ದಾರೆ. ಆದ್ದರಿಂದ ಈಗಾಗಲೇ ಎಲ್ಲ ಸಚಿವರಿಗೆ ಹೊಸಪೇಟೆ, ಬಳ್ಳಾರಿಯ ಸುತ್ತಲಿನ ಜಿಲ್ಲೆಗಳಿಂದ ಭಾರಿ ಪ್ರಮಾಣದಲ್ಲಿ ಕಾರ್ಯಕರ್ತರನ್ನು ಕರೆತರುವ ಜವಾಬ್ದಾರಿ ನೀಡಲಾಗಿದೆ. ಇದರೊಂದಿಗೆ ರಾಜ್ಯದ ಎಲ್ಲ ಜಿಲ್ಲೆಗಳಿಂದಲೂ ಕಾರ್ಯಕರ್ತರನ್ನು ಕರೆತರಲು ಅಗತ್ಯ ಸಿದ್ಧತೆ ಮಾಡಿಕೊಳ್ಳಲಾಗಿದೆ.

ಸಮಾವೇಶದಲ್ಲಿ ಕಂದಾಯ ಇಲಾಖೆಯಿಂದ ಕಂದಾಯ ಗ್ರಾಮ ಹಕ್ಕು ಪತ್ರ ವಿತರಣೆಯನ್ನು ಹಮ್ಮಿಕೊಂಡಿದ್ದು, ಸುಮಾರು ಒಂದು ಲಕ್ಷ ಅರ್ಹರಿಗೆ ಹಕ್ಕು ಪತ್ರ ವಿತರಣೆ ಮಾಡಲಾಗುತ್ತದೆ. ಈ ಸಮಾವೇಶದಲ್ಲಿ ರಾಹುಲ್ ಗಾಂಧಿ ಹಾಗೂ ಮಲ್ಲಿಕಾರ್ಜುನ ಖರ್ಗೆ ಅವರು ಭಾಗವಹಿಸುತ್ತಿದ್ದು, ಈ ಇಬ್ಬರು ಸಾಂಕೇತಿಕವಾಗಿ ಹಕ್ಕುಪತ್ರ ವಿತರಣೆ ಮಾಡಲಿದ್ದಾರೆ. ಈ ವೇಳೆ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಸಂಪುಟ ಸಹೋದ್ಯೋಗಿಗಳು ವೇದಿಕೆ ಮೇಲಿರಲಿದ್ದಾರೆ ಎಂದು ತಿಳಿದುಬಂದಿದೆ.

300ಕ್ಕೂ ಹೆಚ್ಚು ಗಣ್ಯರು: ರಾಜ್ಯ ಹಾಗೂ ರಾಷ್ಟ್ರೀಯ ನಾಯಕರಿಗೆ ಸಮಾವೇಶಕ್ಕೆ ಆಹ್ವಾನ ನೀಡಿರುವುದರಿಂದ ಮುಖ್ಯ ವೇದಿಕೆಯ ಜತೆಜತೆಗೆ ಕಿರು ವೇದಿಕೆಗಳನ್ನು ನಿರ್ಮಿಸಲಾಗಿದೆ. ಮುಖ್ಯ ವೇದಿಕೆಯಲ್ಲಿಯೇ 300 ಗಣ್ಯರಿಗೆ ಆಸನದ ವ್ಯವಸ್ಥೆ ಮಾಡಲಾಗಿದ್ದು, ಎರಡು ಕಿರು ವೇದಿಕೆಯಲ್ಲಿ ಮಾಜಿ ಸಚಿವರಿಗೆ ಹಾಗೂ ನಿಗಮ ಮಂಡಳಿಗಳ ಅಧ್ಯಕ್ಷರು, ಪಕ್ಷದ ಪ್ರಮುಖರಿಗೆ ತಲಾ 50 ಆಸನದ ವ್ಯವಸ್ಥೆ ಮಾಡಲಾಗಿದೆ.

ಹವಾಮಾನ ಇಲಾಖೆಯು ರಾಜ್ಯಾದ್ಯಂತ ಭಾರಿ ಮಳೆಯ ಎಚ್ಚರಿಕೆ ನೀಡಿದ್ದರೂ, ಹೊಸಪೇಟೆಯಲ್ಲಿ ಭಾರಿ ಬಿಸಿಲಿದೆ. ಆದ್ದರಿಂದ ಜರ್ಮನ್ ಟೆಂಟ್ ನಿರ್ಮಿಸಲಾಗುತ್ತಿದೆ. 200 ಅಡಿ ಅಗಲ, 70 ಅಡಿ ಉದ್ದದ ಪ್ರಧಾನ ವೇದಿಕೆ ನಿರ್ಮಿಸಲಾಗಿದೆ. ವೇದಿಕೆಯ ಮುಂಭಾಗ 1,50,000 ಆಸನಗಳ ವ್ಯವಸ್ಥೆ ಕಲ್ಪಿಸಲಾಗಿದೆ. 50 ಸಾವಿರ ಕುರ್ಚಿಗಳನ್ನು ಹೆಚ್ಚುವರಿಯಾಗಿ ತರಿಸಲಾಗಿದೆ. ಇದರೊಂದಿಗೆ ಕ್ರೀಡಾಂಗಣದ ಅಕ್ಕಪಕ್ಕದ ರಸ್ತೆಯಲ್ಲಿಯೂ ಎಲ್‌ಇಡಿ ಪರದೆ ವ್ಯವಸ್ಥೆ ಮಾಡಲಾಗುತ್ತಿದೆ. ಭೋಜನದ ವ್ಯವಸ್ಥೆಗಾಗಿ ಟೆಂಟ್‌ಗಳನ್ನು ನಿರ್ಮಿಸಿ ಕೌಂಟರ್‌ಗಳನ್ನು ತೆರೆಯಲಾಗುತ್ತಿದೆ. ಈ ಭವ್ಯ ವೇದಿಕೆಯ ಅಕ್ಕಪಕ್ಕ ಹಾಗೂ ಹೊರಗೆ ಹಂಪಿ ಸ್ಮಾರಕಗಳನ್ನು ಹೋಲುವ ಕಂಬಗಳ ಮಾದರಿ ಬಳಸಲಾಗುತ್ತಿದೆ.

ಸಮಾವೇಶಕ್ಕೆ ವಿಜಯನಗರ, ಬಳ್ಳಾರಿ, ದಾವಣಗೆರೆ, ಚಿತ್ರದುರ್ಗ, ಕೊಪ್ಪಳ, ರಾಯಚೂರು ಭಾಗಗಳಿಂದ ಹೆಚ್ಚಿನ ಜನರು ಬರಲಿದ್ದಾರೆ. ಜನರನ್ನು ಕರೆತರಲು 3,700 ಸಾರಿಗೆ ಬಸ್, ಸ್ವಂತ ಖರ್ಚಿನಲ್ಲಿ 2,000 ಬಸ್ ಸೇರಿ 10 ಸಾವಿರಕ್ಕೂ ಅಧಿಕ ವಾಹನಗಳನ್ನು ಮೀಸಲಿಡಲಾಗಿದೆ.

ಹೊಸಪೇಟೆಗೆ ಭೇಟಿ ನೀಡಿದ್ದ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್, ಸಚಿವ ಎಚ್.ಕೆ.ಪಾಟೀಲ್, ಜಿಲ್ಲಾ ಉಸ್ತುವಾರಿ ಸಚಿವ ಜಮೀರ್ ಅಹ್ಮದ್ ಖಾನ್ ಅವರು ಸಮಾವೇಶದ ಸಿದ್ಧತೆ ಕುರಿತು ಮಾಹಿತಿ ಪಡೆದರು.

3,00,000
ಸಮಾವೇಶಕ್ಕೆ ಆಗಮಿಸಿದವರ ದಾಹ ತೀರಿಸಲು ಮಜ್ಜಿಗೆ ಪ್ಯಾಕೆಟ್

2,50,000
ಜನರಿಗೆ ಊಟದ ವ್ಯವಸ್ಥೆ

1,50,000
ಸಮಾವೇಶದಲ್ಲಿ ವ್ಯವಸ್ಥೆ ಮಾಡಿರುವ ಖುರ್ಚಿಗಳು

3,700
ಸಮಾವೇಶಕ್ಕೆ ಬರುವವರನ್ನು ಕರೆತರುವ ಬಸ್‌ಗಳು

ಇದೊಂದು ಎರಡನೇ ಸಿದ್ದರಾಮೋತ್ಸವವಿದ್ದಂತೆ. ಸಮಾವೇಶದಲ್ಲಿ ಕನಿಷ್ಠ ನಾಲ್ಕು ಲಕ್ಷ ಜನ ಸೇರುವ ನಿರೀಕ್ಷೆಯಿದೆ. ಒಂದು ಲಕ್ಷ ಫಲಾನುಭವಿಗಳು ಇರುತ್ತಾರೆ. 200 ಎಕರೆಯಲ್ಲಿ ವಾಹನ ನಿಲ್ದಾಣಕ್ಕೆ ವ್ಯವಸ್ಥೆ ಮಾಡಲಾಗಿದೆ. ತಾಲೂಕುವಾರು ವಾಹನಗಳನ್ನು ನಿಲ್ಲಿಸಲು ವ್ಯವಸ್ಥೆ ಮಾಡಲಾಗಿದೆ.
- ಜಮೀರ್ ಅಹ್ಮದ್, ವಿಜಯನಗರ ಜಿಲ್ಲಾ ಉಸ್ತುವಾರಿ ಸಚಿವ

ಭಾರತದ ಬೆನ್ನಲ್ಲೇ ವಿದೇಶಗಳಿಗೆ ನಿಯೋಗ ಕಳುಹಿಸಲು ಮುಂದಾದ ಪಾಕ್ ಸರಕಾರ । ಶೀಘ್ರದಲ್ಲೇ ಅಮೆರಿಕ, ಬ್ರಿಟನ್, ಬ್ರುಸೆಲ್ಸ್, ಫ್ರಾನ್ಸ್, ರಷ್ಯಾ ದೇಶಗಳಿಗೆ ಭೇಟಿ

ಕಾಪಿಸ್ತಾನ



ಇಸ್ಲಾಮಾಬಾದ್: ಆಪರೇಷನ್ ಸಿಂದೂರ ಹಿನ್ನೆಲೆಯಲ್ಲಿ ಭಯೋತ್ಪಾದನೆಯನ್ನು ಎದುರಿಸುವ ತನ್ನ ಸಂಕಲ್ಪವನ್ನು ವ್ಯಕ್ತಪಡಿಸಲು ಭಾರತವು ತನ್ನ ನಿಯೋಗಗಳನ್ನು ಪ್ರಮುಖ ಪಾಲುದಾರ ರಾಷ್ಟ್ರಗಳಿಗೆ ಕಳುಹಿಸಲು ನಿರ್ಧರಿಸಿದ ಕೆಲವೇ ಗಂಟೆಗಳಲ್ಲಿ, ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್ ಅವರು ದೇಶದ ನಿಲುವನ್ನು ಮಂಡಿಸಲು ವಿಶ್ವದ ಪ್ರಮುಖ ದೇಶಗಳ ರಾಜಧಾನಿಗಳಿಗೆ ರಾಜತಾಂತ್ರಿಕ ತಂಡವನ್ನು ಕಳುಹಿಸುವುದಾಗಿ ಘೋಷಿಸಿದ್ದಾರೆ.

ಮಾಜಿ ವಿದೇಶಾಂಗ ಸಚಿವ ಮತ್ತು ಪಾಕಿಸ್ತಾನ ಪೀಪಲ್ಸ್ ಪಾರ್ಟಿ (ಪಿಪಿಪಿ) ಮುಖ್ಯಸ್ಥ ಬಿಲಾವಲ್ ಭುಟ್ಟೋ ಜರ್ದಾರಿ ಅವರೊಂದಿಗೆ ದೂರವಾಣಿ ಸಂಭಾಷಣೆಯ ನಂತರ ಶನಿವಾರ ಪ್ರಧಾನಿ ಶೆಹಬಾಜ್ ಈ ನಿರ್ಧಾರವನ್ನು ತೆಗೆದುಕೊಂಡಿದ್ದಾರೆ. ನಿಯೋಗದ ನಾಯಕತ್ವವನ್ನು ಬಿಲಾವಲ್ ಭುಟ್ಟೋ ಅವರಿಗೆ ವಹಿಸಿದ್ದಾರೆ. 'ಇತ್ತೀಚಿನ ಸಂಘರ್ಷದ ಕುರಿತು ಪಾಕಿಸ್ತಾನದ ನಿಲುವನ್ನು ಎತ್ತಿ ತೋರಿಸಲು ನಿಯೋಗವು ಶೀಘ್ರದಲ್ಲೇ ಅಮೆರಿಕ, ಬ್ರಿಟನ್, ಬ್ರುಸೆಲ್ಸ್, ಫ್ರಾನ್ಸ್ ಮತ್ತು ರಷ್ಯಾಕ್ಕೆ ಭೇಟಿ ನೀಡಲಿದೆ' ಎಂದು ಪಾಕಿಸ್ತಾನ ವಿದೇಶಾಂಗ ಸಚಿವ ಇಶಾಕ್ ದಾರ್ ಹೇಳಿದ್ದಾರೆ.

ಕದನ ವಿರಾಮ ರದ್ದಾಗಿಲ್ಲ

ಮೇ 12ರ ಸಭೆಯಲ್ಲಿ ತೆಗೆದುಕೊಂಡ ನಿರ್ಧಾರದಂತೆ ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮ ಮುಂದುವರಿಯಲಿದೆ ಎಂದು ಸೇನಾ ಅಧಿಕಾರಿಯೊಬ್ಬರು ಭಾನುವಾರ ತಿಳಿಸಿದ್ದಾರೆ. ಕದನ ವಿರಾಮ ಒಪ್ಪಂದ ಭಾನುವಾರ ಕೊನೆಗೊಳ್ಳಲಿದೆ ಎಂಬ ವದಂತಿಯನ್ನು ತಳ್ಳಿಹಾಕಿದ ಅವರು, ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕರ ಸಭೆಯಲ್ಲಿ ನಿರ್ಧರಿಸಿದಂತೆ ಕದನ ವಿರಾಮ ಮುಂದುವರಿಯುತ್ತದೆ. ಕದನ ವಿರಾಮಕ್ಕೆ ಇಂತದ್ದೆ ಮುಕ್ತಾಯದ ದಿನ ಎಂಬುವುದು ಇಲ್ಲ. ಅಲ್ಲದೇ, ಭಾರತ ಮತ್ತು ಪಾಕಿಸ್ತಾನ ಡಿಜಿಎಂಒಗಳ ನಡುವೆ ಯಾವುದೇ ಮಾತುಕತೆ ನಿಗದಿಯಾಗಿಲ್ಲ ಎಂದು ಹೇಳಿದರು.

ಭಾನುವಾರ ಬೆಳಗ್ಗೆ ಪ್ರಧಾನಿ ಶೆಹಬಾಜ್ ಷರೀಫ್ ನನ್ನನ್ನು ಸಂಪರ್ಕಿಸಿದರು. ಅಂತಾರಾಷ್ಟ್ರೀಯ ವೇದಿಕೆಯಲ್ಲಿ ಶಾಂತಿಗಾಗಿ ಪಾಕಿಸ್ತಾನದ ವಾದವನ್ನು ಮಂಡಿಸಲು ನಿಯೋಗದ ನೇತೃತ್ವ ವಹಿಸುವಂತೆ ವಿನಂತಿಸಿದರು. ಈ ಜವಾಬ್ದಾರಿಯನ್ನು ಸ್ವೀಕರಿಸಲು ಮತ್ತು ಈ ಸವಾಲಿನ ಸಮಯದಲ್ಲಿ ಪಾಕಿಸ್ತಾನಕ್ಕೆ ಸೇವೆ ಸಲ್ಲಿಸಲು ಬದ್ಧರಾಗಿರಲು ನನಗೆ ಗೌರವವಿದೆ.
- ಬಿಲಾವಲ್ ಭುಟ್ಟೋ ಜರ್ದಾರಿ
ಪಾಕಿಸ್ತಾನ ಪೀಪಲ್ಸ್ ಪಾರ್ಟಿ ಮುಖ್ಯಸ್ಥ

ಉಗ್ರ ಅಬು ಸಯುಲ್ಲಾ ಹತ್ಯೆ

2005ರಲ್ಲಿ ಬೆಂಗಳೂರಿನಲ್ಲಿ ನಡೆದ ಭಾರತೀಯ ವಿಜ್ಞಾನ ಸಂಸ್ಥೆಯ ದಾಳಿಯ ಮಾಸ್ಟರ್ ಮೈಂಡ್ ಲಷ್ಕರ್-ಎ-ತಯಬಾದ ಉಗ್ರ ರಾಜುಲ್ಲಾ ನಿಜಾಮನಿ ಅಲಿಯಾಸ್ ಅಬು ಸಯುಲ್ಲಾ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಅಪರಿಚಿತರು ನಡೆಸಿದ ಗುಂಡಿನ ದಾಳಿಯಲ್ಲಿ ಮೃತಪಟ್ಟಿದ್ದಾನೆ. ನಿಜಾಮನಿಗೆ ಪಾಕಿಸ್ತಾನ ಸರಕಾರ ಭದ್ರತೆ ಕಲ್ಪಿಸಿತ್ತು, ಆದರೆ ಆತ ಭಾನುವಾರ ಮಧ್ಯಾಹ್ನದ ವೇಳೆ ತನ್ನ ನಿವಾಸದಿಂದ ಹೊರಹೋಗಿದ್ದ ವೇಳೆ ದಾಳಿಕೋರರು ಗುಂಡಿನ ದಾಳಿ ನಡೆಸಿದ್ದಾರೆ. ಭಾರತದಲ್ಲಿ ನಡೆದ ಪ್ರಮುಖ ದಾಳಿ ಗಳ ಮಾಸ್ಟರ್ ಮೈಂಡ್ ನಿಜಾಮನಿ ಆಗಿದ್ದ. 2001ರಲ್ಲಿ ರಾಂಪುರದಲ್ಲಿ ಸಿಆರ್‌ಪಿಎಫ್ ಶಿಬಿರದ ಮೇಲೆ ನಡೆದ ಭಯೋತ್ಪಾದಕ ದಾಳಿ, 2006ರಲ್ಲಿ ನಾಗ್ಪುರದಲ್ಲಿ ನಡೆದ ಆರ್‌ಎಸ್‌ಎಸ್ ಕಚೇರಿನ ಮೇಲಿನ ದಾಳಿಯಲ್ಲೂ ಭಾಗಿಯಾಗಿದ್ದ ಎಂದು ಹೇಳಲಾಗಿದೆ.

ಪಿಎಸ್‌ಎಲ್‌ವಿ-ಸಿ 61 ರಾಕೆಟ್ ಮೂರನೇ ಹಂತದಲ್ಲಿ ವೈಫಲ್ಯ

ಭೂ ವೀಕ್ಷಣಾ ಉಪಗ್ರಹ ಉಡ್ಡಯನ ವಿಫಲ

ಶ್ರೀಹರಿಕೋಟಾ: ಇಸ್ರೊದ ಭೂ ವೀಕ್ಷಣಾ ಉಪಗ್ರಹ ಉಡ್ಡಯನ ವಿಫಲವಾಗಿದೆ ಎಂದು ಬಾಹ್ಯಾಕಾಶ ಸಂಸ್ಥೆಯ ಅಧ್ಯಕ್ಷ ವಿ.ನಾರಾಯಣನ್ ಹೇಳಿದ್ದಾರೆ.

ಪಿಎಸ್‌ಎಲ್‌ವಿಸಿ61 ಇಒಎಸ್-09 ಮಿಷನ್ ಪ್ರಯುಕ್ತ ಭಾನುವಾರ ನಾವು ಶ್ರೀಹರಿಕೋಟಾದಿಂದ ಇಸ್ರೊದ 101ನೇ ಉಡ್ಡಯನವನ್ನು ಭಾನುವಾರ ಬೆಳಗ್ಗೆ 5.59ಕ್ಕೆ ಪೂರ್ವಪ್ರತ್ಯಯ ಸಮಯದಲ್ಲಿ ಪ್ರಾರಂಭಿಸಿದ್ದೆವು. ಇಸ್ರೊದ ವಿಶ್ವಾಸಾರ್ಹ ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (ಪಿಎಸ್‌ಎಲ್‌ವಿ) 4-ಹಂತದ ರಾಕೆಟ್ ಆಗಿದ್ದು, ಮೊದಲ ಎರಡು ಹಂತದವರೆಗೆ ಕಾರ್ಯಕ್ಷಮತೆ ಸಾಮಾನ್ಯವಾಗಿತ್ತು. 3ನೇ ಹಂತದ ಮೋಟಾರ್ ಸುರಕ್ಷಿತ ವಾಯಿತು. ಆದರೆ, 3ನೇ ಹಂತದ ಕಾರ್ಯನಿರ್ವಹಣೆಯ ಸಮಯದಲ್ಲಿ ಕಾರ್ಯಾಚರಣೆ ಪೂರ್ಣಗೊಳಿಸಲು ಸಾಧ್ಯವಾಗಲಿಲ್ಲ. ವೈಫಲ್ಯಕ್ಕೆ ಕಾರಣ ಏನೆಂಬುದನ್ನು ವಿಶ್ಲೇಷಣೆ ಮಾಡುತ್ತೇವೆ ಎಂದು ಹೇಳಿದ್ದಾರೆ.

ಇಒಎಸ್-09 ಮಿಷನ್, 2022ರಲ್ಲಿ ಉಡ್ಡಯನ ಮಾಡಲಾಗಿದ್ದ ಇಒಎಸ್-04 ಅನ್ನು ಹೋಲುವ ಪುನರಾವರ್ತಿತ ಉಪಗ್ರಹವಾಗಿದ್ದು, ಕಾರ್ಯಾಚರಣೆಯ ರಿಮೋಟ್ ಸೆನ್ಸಿಂಗ್ ಡೇಟಾವನ್ನು ಖಚಿತಪಡಿಸಿಕೊಳ್ಳುವುದು ಮತ್ತು ವೀಕ್ಷಣೆಯ ಆವರ್ತನವನ್ನು ಸುಧಾರಿಸುವ ಉದ್ದೇಶದೊಂದಿಗೆ ವಿನ್ಯಾಸಗೊಳಿಸಲಾಗಿತ್ತು ಎಂದು ತಿಳಿಸಿದ್ದಾರೆ.

ಗಾಜಾ ಮೇಲೆ ಇಸ್ರೇಲ್ ವೈಮಾನಿಕ ದಾಳಿ: 103 ಸಾವು

ಕೈರೊ: ಗಾಜಾ ಪಟ್ಟಿಯ ಮೇಲೆ ಇಸ್ರೇಲ್ ನಡೆಸಿದ ವೈಮಾನಿಕ ದಾಳಿಯಲ್ಲಿ ಕನಿಷ್ಠ 103 ಪ್ಯಾಲೆಸ್ಟೀನಿಯರು ಮೃತಪಟ್ಟಿದ್ದಾರೆ ಎಂದು ಸ್ಥಳೀಯ ಆರೋಗ್ಯ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ. ಗಾಜಾದ ಮೇಲಿನ ನಿಯಂತ್ರಣ ಸಾಧಿಸಲು ಕಳೆದ ಗುರುವಾರದಿಂದ ದಾಳಿ ನಡೆಸುತ್ತಿರುವ ಇಸ್ರೇಲ್ ಈ ಕುರಿತು ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಇಸ್ರೇಲಿ ಬಾಂಬ್ ದಾಳಿಯಿಂದಾಗಿ ನಾಗರಿಕ ನೋಂದಣಿ ದಾಖಲೆಯಲ್ಲಿರುವ ಅನೇಕ ಕುಟುಂಬಗಳೇ ನಾಶವಾಗಿವೆ ಎಂದು ತಿಳಿಸಿದ್ದಾರೆ.

ಅಮೆರಿಕದಲ್ಲಿ ಬಿರುಗಾಳಿ ಅಬ್ಬರಕ್ಕೆ 27 ಮಂದಿ ಸಾವು

ಸೇಂಟ್ ಲೂಯಿಸ್: ಶುಕ್ರವಾರ ತಡರಾತ್ರಿಯಿಂದ ಬೀಸುತ್ತಿರುವ ಬಿರುಗಾಳಿಯಿಂದಾಗಿ ಅಮೆರಿಕದ ಸೇಂಟ್ ಲೂಯಿಸ್, ಮಿಸೌರಿ, ಕೆಂಟುಕಿ ಮತ್ತು ವರ್ಜೀನಿಯಾದಲ್ಲಿ ಕನಿಷ್ಠ 27 ಮಂದಿ ಮೃತಪಟ್ಟಿದ್ದು, ಹಲವರು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಸಾವಿನ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಪ್ರತಿ ವರ್ಷ ವಸಂತಕಾಲದ ಋತುವಿನಲ್ಲಿ ಬಿರುಗಾಳಿಯು ಈ ಪ್ರದೇಶದಲ್ಲಿ ಮಾರಕ ವಿನಾಶ ಉಂಟ ಮಾಡುತ್ತದೆ.

17 ಸಂಸದರಿಗೆ ಸಂಸದ ರತ್ನ ಪ್ರಶಸ್ತಿ

ದೆಹಲಿ: 17 ಸಂಸದರು ಮತ್ತು ಎರಡು ಸಂಸದೀಯ ಸ್ಥಾಯಿ ಸಮಿತಿಗಳನ್ನು 2025ರ ಸಂಸದ ರತ್ನ ಪ್ರಶಸ್ತಿಗೆ ಆಯ್ಕೆ ಮಾಡಲಾಗಿದೆ.

ಮಹತಾಬ್, ಸುಪ್ರಿಯಾ ಸುಳೆ (ಎನ್‌ಸಿಪಿ-ಎಸ್‌ಪಿ), ಎನ್.ಕೆ. ಪ್ರೇಮಚಂದ್ರನ್ (ಆರ್‌ಎಸ್‌ಪಿ) ಮತ್ತು ಶ್ರೀರಂಗ ಅಪ್ಪ ಬಾರ್ನೆ ಅವರು 'ಸಂಸದೀಯ ಪ್ರಜಾಪ್ರಭುತ್ವಕ್ಕೆ ಅತ್ಯುತ್ತಮ ಮತ್ತು ಸ್ಥಿರ ಕೊಡುಗೆ'ಗಾಗಿ ಪ್ರಶಸ್ತಿಗಳನ್ನು ಸ್ವೀಕರಿಸಲಿದ್ದಾರೆ. ಸ್ಮಿತಾ ವಾಘ್ (ಬಿಜೆಪಿ), ಅರವಿಂದ ಸಾವಂತ್ (ಶಿವಸೇನಾ ಯುಬಿಟಿ), ನರೇಶ್ ಗಣಪತ್ ಮಾಸ್ಕೆ (ಶಿವಸೇನಾ), ವರ್ಷಾ ಗಾಯಕ್ವಾಡ್ (ಕಾಂಗ್ರೆಸ್), ಮೇಧಾ ಕುಲಕರ್ಣಿ(ಬಿಜೆಪಿ), ಪ್ರವೀಣ್ ಪಟೇಲ್ (ಬಿಜೆಪಿ), ರವಿ ಕಿಶನ್ (ಬಿಜೆಪಿ), ನಿಶಿಕಾಂತ್ ದುಬೆ (ಬಿಜೆಪಿ), ಬಿದ್ಯುತ್ ಬರನ್ ಮಹಾತೋ (ಬಿಜೆಪಿ), ಪಿ.ಪಿ.ಚೌಧರಿ (ಬಿಜೆಪಿ), ಮದನ್ ರಾಥೋಡ್ (ಬಿಜೆಪಿ), ಸಿ.ಎನ್.ಅಣ್ಣಾದೊರೈ (ಡಿಎಂಕೆ) ಮತ್ತು ದಿಲೀಪ್ ಸೈಕಿಯಾ (ಬಿಜೆಪಿ) ಇತರ ಪ್ರಶಸ್ತಿ ಪುರಸ್ಕೃತರು. ಸಂಸದರು ನೀಡಿದ ಕೊಡುಗೆಗಾಗಿ ಪ್ರೈಮ್ ಪಾಯಿಂಟ್ ಫೌಂಡೇಶನ್ ಸಂಸದರಿಗೆ ಈ ಪ್ರಶಸ್ತಿ ನೀಡುತ್ತಿದೆ.

ಈವರೆಗೆ ನಡೆಸಿದ ಅತಿದೊಡ್ಡ ಡ್ರೋನ್ ದಾಳಿ

ಉಕ್ರೇನ್‌ನ ಹಲವೆಡೆ 273 ಕ್ಷಿಪಣಿ ಉಡಾಯಿಸಿದ ರಷ್ಯಾ

ಶಾಂತಿ ಮಾತುಕತೆ ಬೆನ್ನಲ್ಲೇ ದಾಳಿ

ಕೀವ್: ರಷ್ಯಾ ಮತ್ತು ಉಕ್ರೇನ್ ನಡುವೆ ಶಾಂತಿ ಮಾತುಕತೆ ನಡೆದಿರುವ ಬೆನ್ನಲ್ಲೇ ಉಕ್ರೇನ್‌ನ ಪ್ರಮುಖ ಸ್ಥಳಗಳನ್ನು ಗುರಿಯಾಗಿಸಿ ರಷ್ಯಾ 273 ಕ್ಷಿಪಣಿಗಳನ್ನು ಉಡಾಯಿಸಿದೆ.

ಉಕ್ರೇನ್ ರಾಜಧಾನಿ ಕೀವ್ ಪ್ರಾಂತ್ಯ, ನಿಪ್ರೋ ಪೆಟ್ರೋವಸ್ಕ್ ಮತ್ತು ದೇಶದ ಪೂರ್ವಭಾಗದಲ್ಲಿರುವ ಡೊನೆಟ್‌ಸ್ಕ್ ಪ್ರಾಂತ್ಯಗಳನ್ನು ಗುರಿಯಾಗಿಸಿಕೊಂಡು ರಷ್ಯಾ ಡ್ರೋನ್‌ಗಳನ್ನು ಉಡಾಯಿಸಿದೆ. ಈ ಘಟನೆಯಲ್ಲಿ ಒಬ್ಬ ಮಹಿಳೆ ಮೃತಪಟ್ಟಿದ್ದು, ನಾಲ್ಕು ವರ್ಷದ ಮಗು ಸೇರಿದಂತೆ ಕನಿಷ್ಠ ಮೂವರು ಗಾಯಗೊಂಡಿದ್ದಾರೆ ಎಂದು ಉಕ್ರೇನ್ ಅಧಿಕಾರಿಗಳು ಭಾನುವಾರ ತಿಳಿಸಿದ್ದಾರೆ.

ಕದನ ವಿರಾಮದ ನಿಟ್ಟಿನಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಮತ್ತು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರೊಂದಿಗೆ ಸೋಮವಾರ ಮಾತುಕತೆ ನಡೆಸುವುದಾಗಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದರು. ಇದರ ಬೆನ್ನಲ್ಲೇ, ರಷ್ಯಾ ಡ್ರೋನ್ ದಾಳಿ ನಡೆಸಿದೆ. ಉಕ್ರೇನ್ ಮೇಲೆ ಯುದ್ಧ ಆರಂಭವಾದಾಗಿನಿಂದಲೂ ಈವರೆಗೆ ರಷ್ಯಾ ನಡೆಸಿದ ಅತಿದೊಡ್ಡ ಡ್ರೋನ್ ದಾಳಿ ಇದಾಗಿದೆ.

ಶುಕ್ರವಾರ ಮೊದಲ ಬಾರಿಗೆ ಇಸ್ತಾನ್ಬುಲ್‌ನಲ್ಲಿ ರಷ್ಯಾ ಮತ್ತು ಉಕ್ರೇನ್ ಮಧ್ಯೆ ನೇರ ಮಾತುಕತೆ ನಡೆದಿತ್ತು. 90 ನಿಮಿಷಗಳ ಮಾತುಕತೆಯಲ್ಲಿ ಉಭಯ ರಾಷ್ಟ್ರಗಳು ಪರಸ್ಪರ 1,000 ಯುದ್ಧ ಕೈದಿಗಳನ್ನು ವಿನಿಮಯ ಮಾಡಿಕೊಳ್ಳುವ ಒಪ್ಪಂದಕ್ಕೆ ಬಂದಿದ್ದವು.

ರಷ್ಯಾ ಎಸಗಿದ ಡ್ರೋನ್ ದಾಳಿಯಲ್ಲಿ ಸುಟ್ಟುಹೋಗಿರುವ ಕಾರುಗಳು.

ಪಂಚ ಗ್ಯಾರಂಟಿಗಳಿಂದ ಕರ್ನಾಟಕ ರಾಜ್ಯದಲ್ಲಿ ಅಚ್ಛೇದಿನ್

ಕಾಂಗ್ರೆಸ್ ಸರಕಾರ ಇಷ್ಟೆಲ್ಲ ಅಭಿವೃದ್ಧಿ ಮಾಡುತ್ತಿದ್ದರೂ, ಕೇಂದ್ರ ಸರಕಾರದಿಂದ ಸರಿಯಾದ ಸಹಕಾರ ಸಿಗುತ್ತಿಲ್ಲ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಬರ ಪರಿಹಾರ, ತೆರಿಗೆ ಮರು ಹಂಚಿಕೆ, ನಬಾರ್ಡ್ ಸಾಲ ಕಡಿತ ಸೇರಿದಂತೆ ಅನೇಕ ರೀತಿಗಳಲ್ಲಿ ಕೇಂದ್ರ ಸರಕಾರ ಕರ್ನಾಟಕಕ್ಕೆ ನಿರಂತರವಾಗಿ ಅನ್ಯಾಯ ಮಾಡುತ್ತಲೇ ಇದೆ. ಬೆಂಗಳೂರಿನಲ್ಲಿ ಸುರಂಗ ರಸ್ತೆ, ಮೆಟ್ರೋ ಸಂಪರ್ಕ ವಿಸ್ತರಣೆ, ನೀರಾವರಿ ಯೋಜನೆಗಳಿಗೆ ವಿಶೇಷ ಅನುದಾನ ನೀಡುವಂತೆಯೂ ಖುದ್ದಾಗಿ ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದೆ. ಈ ಯಾವುದೇ ಮನವಿಗಳನ್ನು ಕೇಂದ್ರ ಸರಕಾರ ಕಿವಿಗೆ ಹಾಕಿಕೊಳ್ಳಲೇ ಇಲ್ಲ.



ಡಿ.ಕೆ.ಶಿವಕುಮಾರ್
ಉಪಮುಖ್ಯಮಂತ್ರಿ, ಕೆಪಿಸಿಸಿ ಅಧ್ಯಕ್ಷರು

ನುಡಿದಂತೆ ನಡೆಯುವ ಮಹಾ ಪ್ರತಿಜ್ಞೆಯೊಂದಿಗೆ ನಮ್ಮ ರಾಷ್ಟ್ರೀಯ ನಾಯಕರಾದ ರಾಹುಲ್ ಗಾಂಧಿ , ಎಐಸಿಸಿ ಅಧ್ಯಕ ಮಲ್ಲಿಕಾರ್ಜುನ ಖರ್ಗೆ ಅವರ ಮಾರ್ಗದರ್ಶನದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ನಾನು ಪಂಚ ಗ್ಯಾರಂಟಿಗಳ ಕ್ರಾಂತಿಯೊಂದಿಗೆ ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಎರಡು ವರ್ಷಗಳನ್ನು ಯಶಸ್ವಿಯಾಗಿ ಪೂರೈಸಿದೆ. ಈ ಎರಡು ವರ್ಷ ಎಂದರೆ ಕೇವಲ ದಿನಗಳಲ್ಲ. ಇದು ಆರ್ಥಿಕಾಭಿವೃದ್ಧಿಯ ನಾಗಾಲೋಟದ ದಿನಗಳು, ಬಡ ಕುಟುಂಬಗಳಲ್ಲಿ ಆಶಾಕಿರಣ ತಂದ ದಿನಗಳು, ದಿನಗೂಲಿ ಮಾಡುವ ಬಡವನೊಬ್ಬ ನಿರಾಳತೆಯಿಂದ ಸಂಭ್ರಮಿಸಿದ ದಿನಗಳು, ಗೃಹಿಣಿಯೊಬ್ಬಳು ಮನೆಗೆ ಬೇಕಾದ ವಸ್ತುಗಳನ್ನು ದುಡ್ಡು ಕೊಟ್ಟು ತಂದು ಸ್ವಾಭಿಮಾನದಿಂದ ಮುಗುಳ್ನಗೆ ಬೀರಿದ ದಿನಗಳು. ಇದೇ 'ಗ್ಯಾರಂಟಿಗೂ ಜೈ, ಅಭಿವೃದ್ಧಿಗೂ ಸೈ' ಎಂದ ಅಮೂಲ್ಯ ದಿನಗಳು. ಈ ಅದ್ಭುತ ದಿನಗಳು ಇನ್ನಷ್ಟು ಪ್ರಗತಿಯೊಂದಿಗೆ ಸಾಗುತ್ತಿವೆ. ಇದು ನಿರಂತರ ಪ್ರಗತಿ.

ನೀವು ಯಾವುದೇ ಜಿಲ್ಲೆಗೆ ಹೋದರೂ, ಯಾರದ್ದೇ ಮನೆಗೆ ಹೋದರೂ 'ಕಾಂಗ್ರೆಸ್ ಬಂತು ಅಭಿವೃದ್ಧಿ ತಂತು' ಎಂದು ಜನರು ಹೇಳುವುದನ್ನು ಕೇಳಿರಬಹುದು. ಸುಮ್ಮನೆ ಬಡವರೊಬ್ಬರ ಮನೆಗೆ ಹೋದರೆ, ಆ ಮನೆಯಲ್ಲಿ ಕರೆಂಟ್ ಬಿಲ್ ಮೂಲೆಯಲ್ಲಿ ಬಿದ್ದಿರುತ್ತದೆ. ಮನೆಯ ಯಜಮಾನನಿಗೆ ಆ ಬಿಲ್ ಪಾವತಿಸಬೇಕಾದ ಅಗತ್ಯವಿಲ್ಲ. ಮನೆಯಲ್ಲಿ ಊಟಕ್ಕೆ ಬೇಕಾದ ಅಕ್ಕಿ ಇರುತ್ತದೆ. ಯಜಮಾನನಿಗೆ ಅಕ್ಕಿಯನ್ನು ಹಣ ಕೊಟ್ಟು ಖರೀದಿಸಬೇಕಿಲ್ಲ. ಯಾವಾಗಲೂ ಹಣವಿಲ್ಲ ಎಂಬ ಹಣೆಬರಹವನ್ನು ಹಳಿಯುತ್ತಿದ್ದ ಆ ಮನೆಯ ಬಡ ಗೃಹಿಣಿ ಈಗ ಚಿಂತೆ ಇಲ್ಲದೆ 2,000 ರುಪಾಯಿ ಪಡೆಯುತ್ತಿರುತ್ತಾಳೆ. ಆಕೆ ಈ ಹಿಂದೆ ಎಲ್ಲಿಗಾದರೂ ಹೋಗಬೇಕೆಂದರೆ ಬಸ್‌ನಲ್ಲಿ ಪ್ರಯಾಣಿಸಲು ಚಿಲ್ಲರೆ ಕಾಸು ಹುಡುಕುತ್ತಿದ್ದಳು. ಈಗ ಗುರುತಿನ ಚೀಟಿ ಇಟ್ಟುಕೊಂಡು ಹಗುರ ಮನಸ್ಸಿನಿಂದ ಬಸ್ ಹತ್ತುತ್ತಾಳೆ. 'ನಾನು ಬಡವಳಾದರೂ ಪರವಾಗಿಲ್ಲ, ನನ್ನ ಕೈ ಹಿಡಿದೆತ್ತಲು ಕಾಂಗ್ರೆಸ್ ಇದೆಯಲ್ಲ' ಎಂಬ ಧೈರ್ಯ ಅವಳಲ್ಲಿರುತ್ತದೆ. ಆಕೆಯ ನಿರುದ್ಯೋಗಿ ಮಗನ ಬಗ್ಗೆಯೂ ಆಕೆಗೆ ಚಿಂತೆ ಇಲ್ಲ. ಏಕೆಂದರೆ ಆತ ಯುವನಿಧಿ ಪಡೆದು ಬೇರೆ ಕೋರ್ಸ್, ಕೌಶಲ್ಯ ಕಲಿಯುತ್ತಿದ್ದಾನೆ. ವಿಜಯಪುರ ಜಿಲ್ಲೆಯ ಇಂಡಿಯ 20 ಮಹಿಳೆಯರು 'ಒಡಲ ಧ್ವನಿ' ಎಂಬ ಸಂಘ ರಚಿಸಿಕೊಂಡು, ಹೋಳಿಗೆ ತಯಾರಿಸಿ ಬೆಂಗಳೂರಿಗೆ ಬಂದು ಮಾರಾಟ ಮಾಡುತ್ತಿದ್ದಾರೆ. ತಿಂಗಳಿಗೆ 20 ಸಾವಿರ ರು. ಆದಾಯ ಬರುತ್ತಿದೆ. ಇವರಿಗೆ ನೆರವಾಗಿರುವುದು ಉಚಿತ ಬಸ್-ಶಕ್ತಿ ಯೋಜನೆ. ಇಂತಹ ಕೋಟ್ಯಂತರ ಮಹಿಳೆಯರ ಬದುಕಿಗೆ ಈ ಯೋಜನೆ ಶಕ್ತಿ ನೀಡಿದೆ.

ಅದೇ 2023ಕ್ಕಿಂತ ಮೊದಲಿನ ಪರಿಸ್ಥಿತಿ ಹೇಗಿತ್ತು ಎಂದು ಊಹಿಸಿದರೆ ಜನರ ಬವಣೆ ಹೇಳತೀರದು. ಒಬ್ಬ ಬಡವ ಸರಕಾರಿ ಕೆಲಸಕ್ಕೆಂದು ಕಚೇರಿಗೆ ಹೋದರೆ ಅಲ್ಲಿ ಲಂಚ ಕೊಡದೇ ಕೆಲಸ ನಡೆಯುತ್ತಿರಲಿಲ್ಲ. ಯೋಜನೆಗಳು ಸರಿಯಾಗಿ ಕೈ ಸೇರುತ್ತಿರಲಿಲ್ಲ. ಎಲ್ಲಿ ನೋಡಿದರೂ ಭ್ರಷ್ಟಾಚಾರ, ಕಮಿಷನ್, ಅಭಿವೃದ್ಧಿ ಹೀನ ಪರಿಸ್ಥಿತಿ. ಇದರ ನಡುವೆ ಬೆಲೆ ಏರಿಕೆಯ ಹೊಡೆತ. 2023ರ ಬಳಿಕ ಬೆಲೆ ಏರಿಕೆಯ ಬಿಸಿಯನ್ನು ತಗ್ಗಿಸಲು ಕಾಂಗ್ರೆಸ್ ತಂದ ಗ್ಯಾರಂಟಿಗಳು ಆ ಹೊಡೆತಕ್ಕೆ ಉಪಶಮನ ನೀಡಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ನಮ್ಮ ಕಾಂಗ್ರೆಸ್ ಸರಕಾರ 2 ವರ್ಷಗಳನ್ನು ಪೂರೈಸಿರುವುದರಲ್ಲಿ ಸಾರ್ವಜನಿಕರ ಹಾಗೂ ಕಾರ್ಯಕರ್ತರ ದೊಡ್ಡ ಪಾತ್ರವಿದೆ.

ಗೃಹ ಜ್ಯೋತಿ ಯೋಜನೆ ಪ್ರತಿ ಮನೆಗೆ 200 ಯುನಿಟ್ ಉಚಿತ ವಿದ್ಯುತ್ತಿನಂತೆ 1.63 ಕೋಟಿ ಸಂಪರ್ಕಗಳಿಗೆ ಈವರೆಗೆ ಸುಮಾರು 14,950 ಕೋಟಿ ಹಣವನ್ನು ವ್ಯಯಿಸಲಾಗಿದೆ. ಅನ್ನಭಾಗ್ಯ ಯೋಜನೆಯಲ್ಲಿ ಪ್ರತಿ ತಿಂಗಳು ತಲಾ 10 ಕೆ.ಜಿ ಅಕ್ಕಿಯನ್ನು ಸುಮಾರು 4 ಕೋಟಿ ಫಲಾನುಭವಿಗಳಿಗೆ ಈವರೆಗೆ 14,023 ಕೋಟಿ ಹಣವನ್ನು ವ್ಯಯಿಸಲಾಗಿದೆ. ಗೃಹ ಲಕ್ಷ್ಮಿ ಯೋಜನೆಯಡಿ ಮನೆ ಯಜಮಾನಿಗೆ ಪ್ರತಿ ತಿಂಗಳು 2000ದಂತೆ ಸುಮಾರು 1.27 ಕೋಟಿ ಫಲಾನುಭವಿಗಳಿಗೆ ಈವರೆಗೆ 42,530 ಕೋಟಿ ಹಣವನ್ನು ವ್ಯಯಿಸಲಾಗಿದೆ. ಶಕ್ತಿ ಯೋಜನೆಯಲ್ಲಿ ಸಾರಿಗೆ ಸಂಸ್ಥೆ ಬಸ್ಸುಗಳಲ್ಲಿ ಉಚಿತ ಪ್ರಯಾಣವನ್ನು ಈವರೆಗೆ 455 ಕೋಟಿ ಉಚಿತ ಟಿಕೆಟ್ ಅನ್ನು ಮಹಿಳೆಯರು ಪಡೆದಿದ್ದಾರೆ. ಇದರ ವೆಚ್ಚ 11,403 ಕೋಟಿ ರು.ಗಳು ಈವರೆಗೆ ವ್ಯಯಿಸಲಾಗಿದೆ. ಅಂತಿಮವಾಗಿ ಯುವನಿಧಿ ಯೋಜನೆಯಲ್ಲಿ ನಿರುದ್ಯೋಗಿ ಪದವೀಧರರು/ಡಿಪ್ಲೊಮೊ ಪದವೀಧರರಿಗೆ 1.65 ಲಕ್ಷ ನೋಂದಾಯಿತರಿಗೆ ತಲಾ 3000/1500 ರು.ಗಳಂತೆ ಈವರೆಗೆ 327 ಕೋಟಿ ಹಣವನ್ನು ವ್ಯಯಿಸಲಾಗಿದೆ.

ಈ ಎಲ್ಲ ಯೋಜನೆಗಳನ್ನು ಬಿಜೆಪಿ ಕೂಡ ಕಾಪಿ ಮಾಡಿ ಮಹಾರಾಷ್ಟ್ರ ಹಾಗೂ ದೆಹಲಿ ಚುನಾವಣೆಗೆ ಬಳಸಿತ್ತು. ಇಂತಹ ಶ್ರೇಷ್ಠ ಯೋಜನೆಗಳನ್ನು ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧ್ಯಕ್ಷ ಫಿಲೆಮನ್ ಯಾಂಗ್ ಶ್ಲಾಘಿಸಿದ್ದರು. ಈಗ ಜನರು ಹಿಂದಿನ ದಿನಗಳನ್ನು ಯೋಚಿಸಲು ಕೂಡ ಆತಂಕಪಡುತ್ತಾರೆ. ಬೆಲೆ ಏರಿಕೆಯ ಆ ದಿನಗಳಲ್ಲಿ ಪಟ್ಟ ಕಷ್ಟಗಳು ಹಾಗೂ ಕೈಗೆ ನೇರವಾಗಿ ಹಣ ಸಿಗುವ ಈ ದಿನಗಳಲ್ಲಿ ಪಡುತ್ತಿರುವ ಸಂಭ್ರಮದಿಂದಾಗಿ, ಒಂದೇ ಒಂದು ಮತದಿಂದ ಎಷ್ಟು ಬದಲಾವಣೆಯಾಗಿದೆ ಎಂಬುದು ಪ್ರತಿ ವ್ಯಕ್ತಿಗೂ ಮನವರಿಕೆಯಾಗಿದೆ.

ರಾಜ್ಯದ ಅಭಿವೃದ್ಧಿಗೆ ಪುಷ್ಟಿ: ಒಂದು ಕಡೆ ಅಭಿವೃದ್ಧಿಯ ಮಹಾ ಪರ್ವ ನಡೆಯುತ್ತಿದ್ದರೆ, ಮತ್ತೊಂದು ಕಡೆ ಪ್ರತಿಪಕ್ಷಗಳ ಅಪಪ್ರಚಾರದ ಪರ್ವವೂ ಜೋರಾಗಿಯೇ ನಡೆದಿದೆ. ಖಾಲಿ ಖಜಾನೆ ಎಂಬುದರಿಂದ ಆರಂಭವಾಗಿ, ಕೋಟ್ಯಂತರ ರುಪಾಯಿ ಭ್ರಷ್ಟಾಚಾರ ಎನ್ನುವವರೆಗೆ ಆರೋಪಗಳು ನಡೆಯುತ್ತಲೇ ಇವೆ. ಸರಕಾರದ ಹಣ ನೇರವಾಗಿ ಜನರ ಕೈಗೆ ಹೋಗುವಂತೆ ಮಾಡಿರುವ ಈ ಹೊಸ ವ್ಯವಸ್ಥೆಯನ್ನು ಹೊಗಳಲು ಸಾಧ್ಯವಾಗದೇ ರಾಜಕೀಯ ಕೆಸರೆರಚಾಟ ಮಾಡುವುದು ಸಾಮಾನ್ಯ ಸಂಗತಿ. ಗ್ಯಾರಂಟಿಗಳಿಂದಾಗಿ ಅಭಿವೃದ್ಧಿಯ ಪರ್ವಕ್ಕೆ ಯಾವುದೇ ತೊಡಕು ಉಂಟಾಗಿಲ್ಲ ಎಂಬುದು ಮುಚ್ಚಿಡಲಾಗದ ಸತ್ಯ.

→ 4

ವಿಶ್ವವಾಣಿ

ವಿಶ್ವಾಸವೇ ವಿಶ್ವ

ವಿಶ್ವವಾಣಿ ಗ್ಲೋಬಲ್ ಫೋರಂ ಅರ್ಪಿಸುವ

ಭಾರತ ಹಾಗೂ ಜಾರ್ಜಿಯಾ ವಿಶೇಷ ನಿಯೋಗದ ಸಮ್ಮುಖದಲ್ಲಿ

ಕರ್ನಾಟಕ ಹಾಗೂ ಜಾರ್ಜಿಯಾ
ಸಾಂಸ್ಕೃತಿಕ ಸಮ್ಮಿಲನ ಹಾಗೂ ಕನ್ನಡಿಗರ ಜಾಗತಿಕ ಸಮಾವೇಶ

ಕರ್ನಾಟಕದ ಅಪರೂಪದ ಸಾಧಕರಿಗೆ

ಪ್ರಶಸ್ತಿ ಪ್ರದಾನ ಕಾರ್ಯಕ್ರಮ

ಜಾರ್ಜಿಯಾ ದೇಶದ ರಾಜಧಾನಿ

ಟಿಬಿಲಿಸಿಯಲ್ಲಿ

ಸೋಮವಾರ, 19 ಮೇ 2025 | ಸಂಜೆ 4.30 ಗಂಟೆಗೆ

ಪುಲ್‌ಮ್ಯಾನ್ ಟಿಬಿಲಿಸಿ ಆಕ್ಸಿಸ್ ಟವರ್
ಟಿಬಿಲಿಸಿ, ಜಾರ್ಜಿಯಾ

ದಿವ್ಯ ಸಾನ್ನಿಧ್ಯ

ಪರಮಪೂಜ್ಯ
ಶ್ರೀ ಪ್ರಭು ನೀಲಕಂಠ ಮಹಾ ಸ್ವಾಮೀಜಿ
ಬೈಲಹೊಂಗಲ ಮುಕುಟ ಮೂರು ಸಾವಿರಮಠ

ಮುಖ್ಯ ಅತಿಥಿ

ಶ್ರೀ ಇರಾಕ್ಲಿ ಮೆಜುರ್ನಿಶ್ವಿಲಿ
ಜಾರ್ಜಿಯಾ ಸಂಸದರು ಮತ್ತು
ಸಂಸತ್ ಆರ್ಥಿಕ ಸಮಿತಿಯ ಉಪಾಧ್ಯಕ್ಷರು

ಗೌರವ ಉಪಸ್ಥಿತಿ

ಶ್ರೀ ನಿಕೊಲೊಜ್ ತ್ಸುಲುಕಿಡ್ಜೆ
ಜಾರ್ಜಿಯಾದ ಪ್ರಸಿದ್ಧ ನಟ

ಗೌರವ ಉಪಸ್ಥಿತಿ

ಶ್ರೀ ದರ್ಪಣ್ ಪ್ರಶೇರ್
ಕಲ್ಚರಲ್ ಡೈವರ್ಸಿಟಿ ಆಫ್ ಪೀಸ್‌ಫುಲ್ ಫ್ಯೂಚರ್
(ಎನ್‌ಜಿಒ-ಸಿಡಿಪಿಎಫ್) ಸಂಘಟನೆ ಸ್ಥಾಪಕ ಅಧ್ಯಕ್ಷ,
ಪ್ರವಾಸಿ ಭಾರತೀಯ ಸಮ್ಮಾನ್ ಪ್ರಶಸ್ತಿ ಪುರಸ್ಕೃತರು

ಗೌರವ ಸಮ್ಮಾನ

ಶ್ರೀ ಜಿಯೋರ್ಜಿ ಕೆಕೆಲಿಡ್ಜೆ
ಜಾರ್ಜಿಯಾದ ಪ್ರಸಿದ್ಧ ಲೇಖಕ, ಜಾರ್ಜಿಯಾದಲ್ಲಿ
ಅತಿ ಹೆಚ್ಚು ಮಾರಾಟ ಕಂಡ ಹಲವು ಕೃತಿಗಳ ಕರ್ತೃ

ಅಧ್ಯಕ್ಷತೆ

ಶ್ರೀ ವಿಶ್ವೇಶ್ವರ ಭಟ್
ಪ್ರಧಾನ ಸಂಪಾದಕರು
ವಿಶ್ವವಾಣಿ ಸಮೂಹ

ಇದು ಕನ್ನಡ ಪತ್ರಿಕೋದ್ಯಮದಲ್ಲೇ ಹೊಸ ದಾಖಲೆ

ವಿಶ್ವವಾಣಿ ಪತ್ರಿಕೆಯ 'ಗ್ಲೋಬಲ್ ಅಚೀವರ್ಸ್ ಅವಾರ್ಡ್' ವಿಶ್ವವಾಣಿ ಗ್ಲೋಬಲ್ ಫೋರಂ ಆಶ್ರಯದಲ್ಲಿ ವಿದೇಶಿ ನೆಲದಲ್ಲಿ ಆಯಾ ದೇಶದ ನಿಯೋಗದ ಸಹಭಾಗಿತ್ವದೊಂದಿಗೆ ನಡೆಯುವ ವಿಶಿಷ್ಟ ಕಾರ್ಯಕ್ರಮ. ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಪರೂಪದ ಸಾಧಕರನ್ನು ಗುರುತಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು, ಎರಡೂ ದೇಶಗಳ ಮೈತ್ರಿ, ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗೂ ಸಂಸ್ಕೃತಿ ಪರಿಚಯ ಈ ಕಾರ್ಯಕ್ರಮದ ಆಶಯ. ಈ ವಿನೂತನ ಕಾರ್ಯಕ್ರಮ ಈಗಾಗಲೇ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷ್ಯಾ, ಮಾರಿಷಸ್, ಮಾಲ್ಡೀವ್ಸ್, ಜಪಾನ್, ಕತಾರ್ ಹಾಗೂ ರಷ್ಯಾ ದೇಶಗಳಲ್ಲಿ ಯಶಸ್ವಿಯಾಗಿ ನಡೆದಿದೆ. ಇದೀಗ ಜಾರ್ಜಿಯಾದ ಟಿಬಿಲಿಸಿಯಲ್ಲಿ ಒಂಬತ್ತನೇ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಕಾರ್ಯಕ್ರಮ ನಡೆಯುತ್ತಿದೆ.

ತುಮಕೂರಿನಲ್ಲಿ ಬೃಹತ್ ತಿರಂಗಾ ಯಾತ್ರೆ | ಮಠಾಧೀಶರು, ಸಚಿವರು ಸೇರಿ ಸಹಸ್ರಾರು ಜನ ಭಾಗಿ

ಭಾರತದ ತಕ್ಕ ಉತ್ತರ ವಿಶ್ವವೇ ನೋಡಿದೆ

ತುಮಕೂರು: ದೇಶದ ರಕ್ಷಣೆಗಾಗಿ ನಮ್ಮೆಲ್ಲರ ನಡೆ ಎಂಬ ಧ್ಯೇಯವಾಕ್ಯದೊಂದಿಗೆ ಬೃಹತ್ ತಿರಂಗಾ ಯಾತ್ರೆಯನ್ನು ನಡೆಸಲಾಯಿತು.

ನಗರದ ಎಸ್‌ಐಟಿ ಕಾಲೇಜು ಮುಂಭಾಗದಿಂದ ಹೊರಟ ತಿರಂಗಾ ಯಾತ್ರೆಗೆ ವಿವಿಧ ಮಠಾಧೀಶರಾದ ಶ್ರೀವೀರೇಶಾನಂದ ಸರಸ್ವತಿ ಸ್ವಾಮೀಜಿ, ಡಾ. ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಶ್ರೀವೀರ ಭದ್ರ ಶಿವಾಚಾರ್ಯ ಸ್ವಾಮೀಜಿ, ಕೇಂದ್ರ ಸಚಿವ ವಿ. ಸೋಮಣ್ಣ, ರಾಜ್ಯಸಭಾ ಸದಸ್ಯ ಜಗ್ಗೇಶ್, ಶಾಸಕ ರಾದ ಜ್ಯೋತಿಗಣೇಶ್, ಬಿ. ಸುರೇಶ್‌ಗೌಡ ಅವರು ಚಾಲನೆ ನೀಡಿದರು.

ನಂತರ ಮಾತನಾಡಿದ ಕೇಂದ್ರ ರೈಲ್ವೇ ರಾಜ್ಯ ಖಾತೆ ಸಚಿವ ವಿ. ಸೋಮಣ್ಣ ಮಾತನಾಡಿ, ಇದೊಂದು ದೇಶದ ಸಾರ್ವಭೌಮತೆಗೆ ಹಿಡಿದ ಕೈಗನ್ನಡಿ. ಈ ಕೈಗನಡಿಯಲ್ಲಿ ದೇಶದ ಇತಿಹಾಸದ ಅನೇಕ ಘಟನಾ ವಳಿಗಳನ್ನು ಭಾರತೀಯರು ಓದಿ ಅರ್ಥ ಮಾಡಿ ಕೊಂಡಿದ್ದೇವೆ ಎಂದರು. ರಾಮಕೃಷ್ಣ ಆಶ್ರಮದ ಶ್ರೀವೀರೇಶಾನಂದ ಸ್ವಾಮೀಜಿ ಮಾತನಾಡಿ, ಜಗತ್ತಿನಲ್ಲಿ ಭಯೋತ್ಪಾದನೆ ವಿರುದ್ಧ ಯಾವ ರೀತಿ ನಡೆದುಕೊಳ್ಳಬೇಕು ಎಂಬುದಕ್ಕೆ ಜಗತ್ತಿನಲ್ಲೇ ಭಾರತ ಇಟ್ಟಿರುವ ಮೊದಲ ಹೆಜ್ಜೆ ಎಂದರು. ಹಿರೇಮಠಾಧ್ಯಕ್ಷ ರಾದ ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ ಮಾತನಾಡಿ, ಭಾರತ ಅಘೋಷಿತ ಯುದ್ಧವನ್ನು ಗೆದ್ದಿದೆ. ಇದು ನಮ್ಮ ದೇಶದ ಯುದ್ಧವಲ್ಲ, ಭಯೋತ್ಪಾದರ ಕುಕೃತ್ಯಕ್ಕೆ ಪ್ರತೀಕಾರ ಅಷ್ಟೇ. ಉಗ್ರರ ನೆಲೆಗಳನ್ನು ನಮ್ಮ ಯೋಧರು ಧ್ವಂಸ ಮಾಡಿದ್ದಾರೆ. ನಮ್ಮ ಸೈನಿಕರ ಧೈರ್ಯ, ಶೌರ್ಯವನ್ನು ಎಲ್ಲರೂ ಮೆಚ್ಚಲೇಬೇಕು ಎಂದರು.

ಎಸ್‌ಎಸ್‌ಐ ಕಾಲೇಜು ಮುಂಭಾಗದಿಂದ ಹೊರಟ ತಿರಂಗಯಾತ್ರೆಯು ಗಂಗೋತ್ರಿ ರಸ್ತೆ ಮೂಲಕ ಎಸ್‌ಎಸ್‌ಪುರಂ ನಮ್ಮ ಆಹಾರ ಮುಂಭಾಗದ ಮೂಲಕ ಸಾಗಿ ಭೈರವೇಶ್ವರ್ ಬ್ಯಾಂಕ್ ಮುಂಭಾದಲ್ಲಿ ಅಂತ್ಯಗೊಂಡಿತು. ಈ ತಿರಂಗ ಯಾತ್ರೆಯಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ. ವಿಜಯೇಂದ್ರ, ಮಾಜಿ ಸಚಿವರಾದ ಸೊಗಡು ಶಿವಣ್ಣ, ಬಿ.ಸಿ. ನಾಗೇಶ್, ಶಾಸಕರಾದ ಮಸಾಲ ಜಯರಾಮ್, ಜಿಲ್ಲಾ ಬಿಜೆಪಿ ಅಧ್ಯಕ್ಷ ರವಿಶಂಕರ್ ಹೆಬ್ಬಾಕ, ಡಾ. ಪರಮೇಶ್, ವಿದ್ಯಾವಾಹಿನಿ ಶಿಕ್ಷಣ ಸಂಸ್ಥೆಯ ಪ್ರದೀಪ್‌ಕುಮಾರ್, ಅಂಬಿಕಾ ಹುಲಿ ನಾಯ್ಕರ್, ದಿಲೀಪ್‌ಕುಮಾರ್, ರಾಮಲಿಂಗರೆಡ್ಡಿ, ಮಾಜಿ ಯೋಧ ನಾಗರಾಜು, ಮಾಜಿ ಸೈನಿಕರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ನಗರದ ಎಸ್‌ಐಟಿ ಕಾಲೇಜು ಮುಂಭಾಗದಿಂದ ಹೊರಟ ತಿರಂಗಾ ಯಾತ್ರೆಗೆ ವಿವಿಧ ಮಠಾಧೀಶರಾದ ಶ್ರೀವೀರೇಶಾನಂದ ಸರಸ್ವತಿ ಸ್ವಾಮೀಜಿ, ಡಾ.ಶಿವಾನಂದ ಶಿವಾಚಾರ್ಯ ಸ್ವಾಮೀಜಿ, ಶ್ರೀವೀರಭದ್ರ ಶಿವಾಚಾರ್ಯ ಸ್ವಾಮೀಜಿ, ಕೇಂದ್ರ ಸಚಿವ ವಿ. ಸೋಮಣ್ಣ, ರಾಜ್ಯಸಭಾ ಸದಸ್ಯ ಜಗ್ಗೇಶ್, ಶಾಸಕರಾದ ಜ್ಯೋತಿಗಣೇಶ್, ಬಿ. ಸುರೇಶ್‌ಗೌಡ ಅವರು ಚಾಲನೆ ನೀಡಿದರು.

> ಜಾತಿ, ಮತ, ಪಂಥ ಪಕ್ಕಕ್ಕಿಟ್ಟು ಭಾರತ ದೇಶ, ತಾಯಿ ಎಂಬ ನಿರ್ಣಯ ಕೈಗೊಳ್ಳಬೇಕು. ನಮ್ಮ ಮಧ್ಯೆದಲ್ಲಿ ದೇಶದ್ರೋಹಿಗಳಿರುತ್ತಾರೆ. ರಾಮನಿದ್ದ ಜಾಗದಲ್ಲಿ ರಾವಣ ಇರಲೇಬೇಕು. ಅಂತಹವರ ಬಗ್ಗೆ ಎಚ್ಚರಿಕೆ ವಹಿಸಬೇಕು. ಎದೆ ಕೊಟ್ಟು ನಿಂತು ದೇಶದೊಳಗೆ ಬುದ್ಧಿ ಕಲಿಸಬೇಕು. ಪಾಕಿಸ್ತಾನದಲ್ಲಿ ಉಗ್ರಗಾಮಿಗಳನ್ನು ತಯಾರು ಮಾಡುವ ನೆಲೆಗಳನ್ನು ಕೇವಲ 27 ಸೆಕೆಂಡ್‌ಗಳಲ್ಲಿ ನಮ್ಮ ಯೋಧರು ಧ್ವಂಸಗೊಳಿಸಿದ್ದಾರೆ.
> -ಜಗ್ಗೇಶ್, ರಾಜ್ಯಸಭಾ ಸದಸ್ಯ

> ದೇಶದ ವ್ಯವಸ್ಥೆಯನ್ನು ಬುಡಮೇಲು ಮಾಡುವ ದುರಾಲೋಚನೆ ಇದ್ದಕ್ಕೆ ಸೈನಿಕರು ತಕ್ಕಪಾಠ ಕಲಿಸಲಿದ್ದಾರೆ. ಉಗ್ರರು ಮಾಡಿರುವ ಪಾಪವನ್ನು ಮುಚ್ಚಿಕೊಳ್ಳುವ ಕೆಲಸವನ್ನು ಪಾಕಿಸ್ತಾನದವರು ಮಾಡಿದ್ದಾರೆ. ಹಾಗಾಗಿ ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ನೀಡಿರುವ ತಕ್ಕ ಉತ್ತರವನ್ನು ಇಡೀ ವಿಶ್ವವೇ ನೋಡಿದೆ.
> -ವಿ.ಸೋಮಣ್ಣ, ಕೇಂದ್ರ ಸಚಿವ

ಪಾಕಿಸ್ತಾನ ಭಯೋತ್ಪಾದನೆಗೆ ಕುಮ್ಮಕ್ಕು ನಿಲ್ಲಿಸಬೇಕು

ಪಾಕಿಸ್ತಾನ ಭಯೋತ್ಪಾದನೆಗೆ ಕುಮ್ಮಕ್ಕು ನೀಡುವ ದುಷ್ಕೃತ್ಯ ನಿಲ್ಲಿಸಬೇಕು. ಇಲ್ಲದಿದ್ದರೆ ಭಾರತ ಪಾಕಿಸ್ತಾನ ವಿರುದ್ಧ ಯುದ್ಧ ಮಾಡಲು ಹಿಂದೆ-ಮುಂದೆ ನೋಡುವುದಿಲ್ಲ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಗುಡುಗಿದರು. ತಿರಂಗಾಯಾತ್ರೆಯಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಭಾರತದ ಸಿಂಧು ನದಿಯ ನೀರನ್ನು ಕೊಡಬೇಕು ಎಂದರೆ ಕಾಶ್ಮೀರದಲ್ಲಿ ನಡೆಸುತ್ತಿರುವ ಉಗ್ರಗಾಮಿ ಸಂಘಟನೆಗಳನ್ನು ಪಾಕಿಸ್ತಾನ ತಕ್ಷಣ ನಿಲ್ಲಿಸಬೇಕು. ಪಾಕ್‌ನ ಬೆದರಿಕೆಗೆ ದೇಶ ಜಗ್ಗುವುದಿಲ್ಲ, ನಮ್ಮ ವೀರ ಯೋಧರು ಬಗ್ಗುವುದಿಲ್ಲ. ಪಾಕ್‌ನ ಸೈನಿಕರನ್ನು ಮಟ್ಟ ಹಾಕುವ ಶಕ್ತಿ ನಮ್ಮ ದೇಶದ ವೀರ ಯೋಧರಿಗಿದೆ ಎಂದರು.

ಸಮಾಚಾರ ಸಣ್ಣದಲ್ಲ

ಚಿಕ್ಕಮಗಳೂರು ಜಿಲ್ಲೆಯ ಗೋಣಿಬೀಡು ಹೋಬಳಿಯ ಕಮ್ಮರಗೋಡು ಗ್ರಾಮಕ್ಕೆ ಭಾನುವಾರ ಬೆಳಗ್ಗೆ ಬಂದಿದ್ದ ಕಾಡಾನೆಯೊಂದು ಕೃಷಿಹೊಂಡಕ್ಕೆ ಇಳಿದು ಅರ್ಧ ಗಂಟೆಗೂ ಹೆಚ್ಚು ಕಾಲ ನೀರಿನಲ್ಲಿ ಚೆಲ್ಲಾಟ ಆಡಿದೆ.

ದಾವಣಗೆರೆ ಬಾಲಕನಿಗೆ ಪ್ರಧಾನಿ ಮೋದಿ ಮೆಚ್ಚುಗೆ

ದಾವಣಗೆರೆ: ಪರಿಸರಕ್ಕೆ ಸಂಬಂಧಿಸಿದ ಚಿತ್ರ ಕಳಿಸಿ ಕೊಟ್ಟಿದ್ದ ಹೊನ್ನಾಳಿಯ ವಿದ್ಯಾರ್ಥಿಯೊಬ್ಬನಿಗೆ ಪ್ರಧಾನಿ ನರೇಂದ್ರ ಮೋದಿಯವರು ಪ್ರಶಂಸನಾ ಪತ್ರ ಕಳಿಸಿಕೊಟ್ಟಿದ್ದಾರೆ.

ವಿದ್ಯಾರ್ಥಿ ಅಮೋಘ್ ಎಚ್.ಪಿ ಮೋದಿಯವರಿಗೆ ಇತ್ತೀಚೆಗೆ ಚಿತ್ರವನ್ನು ಕಳುಹಿಸಿಕೊಟ್ಟಿದ್ದ. ಬಾಲಕನ ಕಲಾ ಅಭಿರುಚಿಯನ್ನು ಗುರುತಿಸಿ, ಆತನ ವಿಳಾಸಕ್ಕೆ ಮೆಚ್ಚುಗೆಯ ಪತ್ರವನ್ನು ಪ್ರಧಾನಿ ಕಾರ್ಯಾಲಯ ಕಳುಹಿಸಿದೆ. ಮೋದಿ ಮೆಚ್ಚುಗೆಯಿಂದ ಬಾಲಕ ಹಾಗೂ ಆತನ ಪೋಷಕರು ಸಂತೋಷ ವ್ಯಕ್ತಪಡಿಸಿದ್ದಾರೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಅಮೋಘ್, ಪರಿಸರದ ಚಿತ್ರ ಬಿಡಿಸಲು ಶಿಕ್ಷಕರು ಹಾಗೂ ಪೋಷಕರು ಸಹಾಯ ಮಾಡಿದ್ದಾರೆ. ಅವರ ಬೆಂಬಲದಿಂದಲೇ ಚಿತ್ರ ಬಿಡಿಸಲು ಸಾಧ್ಯವಾಯಿತು ಎಂದು ಹೇಳಿದ್ದಾನೆ. ಅಮೋಘ್ ನಗರದ ಭರತ್ ಹಾಗೂ ಚಂದನ ಜಿ.ಪಿ ದಂಪತಿಯ ಪುತ್ರ. ಬಾಲಕನಿಗೆ ಚಿತ್ರಕಲೆಯಲ್ಲಿ ವಿಶೇಷ ಆಸಕ್ತಿ ಇದ್ದು, ಆತನ ಪ್ರತಿಭೆಗೆ ಶಿಕ್ಷಕರು ಹಾಗೂ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಯುವಕನ ಕೊಲೆ: ಆರೋಪಿ ವಶಕ್ಕೆ

ರಾಯಚೂರು: ನಗರದಲ್ಲಿ ಭಾನುವಾರ ಬೆಳ್ಳಂ ಬೆಳಗ್ಗೆ ನಡುರಸ್ತೆಯಲ್ಲೇ ನೆತ್ತರು ಹರಿದಿದೆ. ಚಾಕುವಿನಿಂದ ಇರಿದು ಯುವಕ ನೋರ್ವನನ್ನು ಬರ್ಬರವಾಗಿ ಕೊಲೆ ಮಾಡಲಾಗಿದ್ದು, ಜನರು ಬೆಚ್ಚಿಬಿದ್ದಿದ್ದಾರೆ. ನಗರದ ಡಾ. ಜಾಕೀರ್ ಹುಸೇನ್ ವೃತ್ತದಲ್ಲಿ ಯುವಕನ ಕೊಲೆ ನಡೆದಿದೆ. ಜಹೀರಾಬಾದ್‌ನ ಬಡಾವಣೆಯ ಸಾದಿಕ್ (27) ಹತ್ಯೆಯಾದ ಯುವಕ. ಘಟನೆ ಸಂಬಂಧ ಓರ್ವ ಆರೋಪಿಯನ್ನು ವಶಕ್ಕೆ ಪಡೆಯಲಾಗಿದ್ದು, ಮತ್ತೋರ್ವ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ಕರೀಂ ಬಂಧಿತ ನಾದ ಆರೋಪಿ. ಬೆಳಗ್ಗೆ ನಾಲ್ಕು ಗಂಟೆಗೆ ಇಡ್ಲಿ ತಿನ್ನಲು ಸಾದಿಕ್ ಮನೆಯಿಂದ ಹೊರಗೆ ಬಂದಿದ್ದ. ಈ ವೇಳೆ ದಾಳಿ ಮಾಡಿ ಕೊಲೆಗೈಯ್ಯಲಾಗಿದೆ. ಆರೋಪಿಗಳು ಸಾದಿಕ್ ದೇಹಕ್ಕೆ ಚಾಕುವಿನಿಂದ ಮನಬಂದಂತೆ ಇರಿದು ಕೊಲೆ ಮಾಡಿದ್ದಾರೆ. ರಕ್ತದ ಮಡುವಿನಲ್ಲಿ ಬಿದ್ದಿದ್ದ ಸಾದಿಕ್‌ನನ್ನು? ಆಸ್ಪತ್ರೆಗೆ ಸಾಗಿಸುತ್ತಿರುವಾಗ, ಮಾರ್ಗ ಮಧ್ಯೆ ಸಾವನ್ನಪ್ಪಿದ್ದಾನೆ ಎಂದು ತಿಳಿದು ಬಂದಿದೆ. ಸದ್ಯ ಹಳೇ ವೈಷಮ್ಯ ಹಿನ್ನೆಲೆಯಲ್ಲಿ ಹತ್ಯೆ ನಡೆದಿರುವ ಶಂಕೆ ಇದೆ ಎಂದು ಪೊಲೀಸ್ ಮೂಲಗಳಿಂದ ಮಾಹಿತಿ ಲಭ್ಯವಾಗಿದೆ.

ಆಗುಂಬೆ ಘಾಟಿಯಲ್ಲಿ ಸವಾರರು ಹೈರಾಣ



ಕಾರ್ಕಳ: ಆಗುಂಬೆ ಘಾಟಿ ತಿರುವು ರಸ್ತೆಗಳಲ್ಲಿ ಭಾನುವಾರ ವಿಪರೀತ ಟ್ರಾಫಿಕ್ ಜಾಮ್ ಸಂಭವಿಸಿತ್ತು. ಶಿವಮೊಗ್ಗ- ಉಡುಪಿ ಜಿಲ್ಲೆ ಪ್ರಮುಖ ಸಂಪರ್ಕ ಕೊಂಡಿಯಾಗಿರುವ ಆಗುಂಬೆ ಘಾಟಿಯಲ್ಲಿ ಭಾನುವಾರ ಬೆಳಗ್ಗೆ, ಮಧ್ಯಾಹ್ನ ವೇಳೆ ಹೆಚ್ಚಿನ ವಾಹನ ಸಂಚಾರವಿತ್ತು. ವಾರಾಂತ್ಯ ರಜೆ ದಿನವಾದ್ದರಿಂದ, ಹೊರ ಜಿಲ್ಲೆಗಳಿಂದ ಕರಾವಳಿ, ಮಲೆನಾಡಿಗೆ ಪ್ರವಾಸಕ್ಕೆ ಬಂದಿರುವ ಹಿನ್ನೆಲೆ ಮತ್ತು ಶುಭ ಸಮಾರಂಭಗಳು ಹೆಚ್ಚಿದ್ದ ಕಾರಣ ವಾಹನ ಸಂಚಾರ ಪ್ರಮಾಣ ಹೆಚ್ಚಿತ್ತು. ಅಲ್ಲದೆ ಕೆಲವು ತಿರುವುಗಳಲ್ಲಿ ಸರಕು ವಾಹನಗಳು ಕೆಟ್ಟು ನಿಂತಿರುವುದು ಟ್ರಾಫಿಕ್ ಜಾಮ್ ಸಂಭವಿಸಲು ಕಾರಣವಾಗಿತ್ತು. ವಾಹನಸವಾರರಿಗೆ ಸಮಯಕ್ಕೆ ಸರಿಯಾಗಿ ಪ್ರಯಾಣ ಮಾಡಲು ಸಾಧ್ಯವಾಗದೆ ಸಂಕಷ್ಟ ಅನುಭವಿಸಿದರು.ಅದರಲ್ಲಿಯೂ ಮಧ್ಯಾಹ್ನ ಅನಂತರ ಕಾರ್ಕಳ ಉಡುಪಿ-ಶಿವಮೊಗ್ಗ ಎರಡು ಕಡೆ ಸಂಚರಿಸುವ ವಾಹನಗಳು ನಿಧಾನಗತಿಯಲ್ಲಿಸಂಚರಿಸಿದವು.

{ ಬಿ.ವೈ.ರಾಘವೇಂದ್ರ } ಸಂಸದ

ಶತ್ರು ರಾಷ್ಟ್ರಗಳ ವಕ್ತಾರಂತೆ ಕಾಂಗ್ರೆಸ್ ನಾಯಕರು ಬಾಲಿಷ ಹೇಳಿಕೆ ನೀಡುತ್ತಿರುವುದು ಸರಿಯಲ್ಲ. ಅವರಿಗೆ ಜನ ತಕ್ಕ ಪಾಠ ಕಲಿಸಬೇಕು.ರಾಜ್ಯದ ಕಾಂಗ್ರೆಸ್ ನಾಯಕರಾದ ಸಿದ್ದರಾಮಯ್ಯ, ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್, ಮಲ್ಲಿಕಾರ್ಜುನ ಖರ್ಗೆ ಸೇರಿ ಹಲವರು ಬಾಲಿಷ ಹೇಳಿಕೆ ನೀಡುತ್ತಿದ್ದಾರೆ. ಅದು ಅವರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ.

ಧರ್ಮಸ್ಥಳ ಯುವತಿ ಪಂಜಾಬ್‌ನಲ್ಲಿ ನಿಗೂಢ ಸಾವು

ಉಜಿರೆ: ಧರ್ಮಸ್ಥಳ ಗ್ರಾಮದ ಬೊಳಿಯಾರು ನಿವಾಸಿ, ಪ್ರಸ್ತುತ ಲಾಯಿಲ ಗ್ರಾಮದ ಕಾಶಿಬೆಟ್ಟು ಎಂಬಲ್ಲಿ ವಾಸ್ತವ್ಯ ಇರುವ ಸಿವಿಲ್ ಗುತ್ತಿಗೆದಾರ ಸುರೇಂದ್ರ ಮತ್ತು ಸಿಂಧೂದೇವಿ ದಂಪತಿ ಪುತ್ರಿ ಆಕಾಂಕ್ಷ ಎಸ್. ನಾಯರ್ (22) ಮೇ 17ರಂದು ಪಂಜಾಬ್‌ನಲ್ಲಿ ನಿಗೂಢವಾಗಿ ಮೃತಪಟ್ಟಿದ್ದಾರೆ.

ಪಂಜಾಬ್‌ನ ಎಲ್‌ಪಿಯು ಪಗ್ವಾಡ ಕಾಲೇಜಿನಲ್ಲಿ ಉನ್ನತ ಶಿಕ್ಷಣ ಪಡೆದಿದ್ದ ಅವರು ಆರು ತಿಂಗಳಿನಿಂದ ದೆಹಲಿಯಲ್ಲಿ ಜೆಟ್ ಏರೋಸ್ಪೇಸ್ ಎಂಜಿನಿಯರ್ ಆಗಿ ಉದ್ಯೋಗದಲ್ಲಿದ್ದರು. ಮುಂದೆ ಉದ್ಯೋಗ ನಿಮಿತ್ತ ಜಪಾನ್‌ಗೆ ತೆರಳಲು ಸಿದ್ಧತೆ ಮಾಡಿಕೊಂಡಿದ್ದ ಅವರು, ಓದಿದ್ದ ಕಾಲೇಜಿನಿಂದ ಪ್ರಮಾಣಪತ್ರ ಪಡೆಯಲು ಶನಿವಾರ ತೆರಳಿದ್ದರು. ಮಿತ್ರನ ಜತೆ ಬೈಕ್‌ನಲ್ಲಿ ಕಾಲೇಜಿಗೆ ಹೋಗಿದ್ದ ಅವರು, ಪ್ರಮಾಣಪತ್ರ ಪಡೆದ ಬಳಿಕ ಕುಟುಂಬದ ಸದಸ್ಯರ ಜತೆ ಮಾತನಾಡಿದ್ದರು. ಕೆಲವೇ ಕ್ಷಣಗಳ ಬಳಿಕ ಆಕೆ ಕಾಲೇಜಿನ ಮೂರನೇ ಮಹಡಿಯಿಂದ ಕೆಳಗೆ ಬಿದ್ದು ಮೃತಪಟ್ಟಿರುವುದಾಗಿ ಮಾಹಿತಿ ಬಂದಿತ್ತು. ಈ ಸಂಬಂಧ ಪಂಜಾಬ್‌ನ ಜಲಂಧರ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ತನಿಖೆ ನಡೆಸಲಾಗುತ್ತಿದೆ. ಆಕೆಯ ಕುಟುಂಬದ ಸದಸ್ಯರೆಲ್ಲರೂ ಶನಿವಾರ ರಾತ್ರಿಯೇ ಪಂಜಾಬ್‌ಗೆ ತೆರಳಿದ್ದಾರೆ. ಸುರೇಂದ್ರ ಮತ್ತು ಸಿಂಧೂದೇವಿ ದಂಪತಿಗೆ ಪುತ್ರಿ ಆಕಾಂಕ್ಷ, ಮತ್ತೊಬ್ಬ ಪುತ್ರ ಇದ್ದು, ಅವರಿಗೆ ಇತ್ತೀಚೆಗೆ ಕೇರಳದಲ್ಲಿ ವಿವಾಹವಾಗಿತ್ತು.

ಮಳೆ: ಬೀದರ್‌ನಲ್ಲಿ ಜನಜೀವನ ಅಸ್ತವ್ಯಸ್ತ

ಬೀದರ್/ಕೋಲಾರ: ರಾಜ್ಯದಲ್ಲಿ ಮುಂಗಾರು ಪೂರ್ವ ಮಳೆ ಅಬ್ಬರ ಜೋರಾಗಿದೆ. ಬೆಂಗಳೂರು ಸೇರಿದಂತೆ ರಾಜ್ಯದ ಹಲವು ಜಿಲ್ಲೆಗಳಲ್ಲಿ ಮಳೆಯಾಗುತ್ತಿದೆ. ಭಾನುವಾರ ಬೀದರ್ ಜಿಲ್ಲೆಯ ಹಲವೆಡೆ ಭಾರೀ ಮಳೆ ಸುರಿದಿದೆ. ಮುಂದಿನ 4 ದಿನ ರಾಜ್ಯದ 23 ಜಿಲ್ಲೆಗಳಲ್ಲಿ ಭಾರೀ ಮಳೆಯ ಮುನ್ಸೂಚನೆಯನ್ನು ಹವಾಮಾನ ಇಲಾಖೆ ಕೊಟ್ಟಿದೆ.

ಬೀದರ್‌ನಲ್ಲಿ ಭಾನುವಾರ ಧಾರಾಕಾರ ಮಳೆಗೆ ಜನಜೀವನ ಸಂಪೂರ್ಣ ಅಸ್ತವ್ಯಸ್ತವಾಗಿದೆ. ಸತತವಾಗಿ 2 ಗಂಟೆಗಳ ಕಾಲ ಗುಡುಗು, ಸಿಡಿಲು, ಬಿರುಗಾಳಿ ಸಹಿತ ಭಾರೀ ಮಳೆಯಾಗಿದ್ದು, ಬೀದರ್, ಭಾಲ್ಕಿ, ಹುಮ್ನಾಬಾದ್, ಔರಾದ್‌ನಲ್ಲಿ ಜನ-ಜೀನವ ಅಸ್ತವ್ಯಸ್ತಗೊಂಡಿದೆ.

ಬೀದರ್ ಕೇಂದ್ರ ಬಸ್ ನಿಲ್ದಾಣ ಜಲಾವೃತವಾಗಿ ಕೆರೆಯಂತಾಗಿತ್ತು. ನೀರಲ್ಲಿ ರಸ್ತೆ ಕಾಣದೇ ವಾಹನ ಸವಾರರು ಪರದಾಟ ನಡೆಸಿದರು. ಬಿಸಿಲಿನ ಧಗೆಯಿಂದ ಕಂಗೆಟ್ಟಿದ್ದ ಬೀದರ್ ಜನರಿಗೆ ವರುಣ ತಂಪೆರೆದಿದ್ದಾನೆ. ಇನ್ನು ಕೋಲಾರ ಜಿಲ್ಲೆಯಲ್ಲೂ ಭಾನುವಾರ ಧಾರಾಕಾರ ಮಳೆ ಸುರಿದಿದೆ. ಕೋಲಾರ, ಮಾಲೂರು, ಬಂಗಾರಪೇಟೆಯಲ್ಲಿ ಸತತ ಒಂದು ಗಂಟೆಗೂ ಹೆಚ್ಚು ಕಾಲ ಮಳೆ ಸುರಿದಿದೆ. ವಾಹನ ಸವಾರರಿಗೆ ಅಡಚಣೆ ಉಂಟಾಯಿತು.

ನಾಲ್ವರು ಹಿರಿಯ ಅಧಿಕಾರಿಗಳ ವಿರುದ್ಧ ಸಂತ್ರಸ್ತೆ ದೂರು

ರೈಲ್ವೆ ಮಹಿಳಾ ಸಿಬ್ಬಂದಿಗೆ ಲೈಂಗಿಕ ಕಿರುಕುಳ

ಮೈಸೂರು: ಹಿರಿಯ ಅಧಿಕಾರಿಗಳು ಲೈಂಗಿಕ ಕಿರುಕುಳ ಕೊಟ್ಟಿದ್ದಾರೆ ಎಂದು ಆರೋಪಿಸಿ ರೈಲ್ವೆ ಇಲಾಖೆಯ ಮಹಿಳಾ ಸಿಬ್ಬಂದಿ ಮೈಸೂರಿನ ಅಶೋಕಪುರಂ ಪೊಲೀಸ್ ಠಾಣೆಯಲ್ಲಿ ದೂರು ದಾಖಲು ಮಾಡಿದ್ದಾರೆ. ಕೇಂದ್ರೀಯ ರೈಲ್ವೆ ವರ್ಕ್‌ಷಾಪ್ ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಮಹಿಳಾ ಸಿಬ್ಬಂದಿಗೆ ಎಸಿ ಮೆಕ್ಯಾನಿಕಲ್ ಶಾಪ್‌ನ ಸೀನಿಯರ್ ಸೆಕ್ಷನ್ ಎಂಜಿನಿಯರ್‌ಗಳಾದ ಜೆಡ್ ಥಾಮಸ್, ಗೀತೇಶ್ ಸಿಂಗ್, ಸುಜಿತ್ ಹಾಗೂ ಪ್ರತಿಭಾ ಚೌಹಾಣ್ ಎಂಬುವರು ಲೈಂಗಿಕ ಕಿರುಕುಳ ನೀಡಿದ್ದಾರೆಂದು ಎಂದು ಆರೋಪ ಮಾಡಲಾಗಿದೆ. ನಾಲ್ವರು ಹಿರಿಯ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಜರುಗಿಸಲು ದೂರು ಕೊಡಲಾಗಿದೆ.

ಕಿರುಕುಳ ಕೊಟ್ಟಿರುವ ನಾಲ್ವರ ಪೈಕಿ ಓರ್ವ ಅಧಿಕಾರಿಗ ಬಿಹಾರದಿಂದ ರೌಡಿಗಳನ್ನು ಕರೆಸಿ ಕೊಲೆ ಮಾಡುವ ಬೆದರಿಕೆ ಹಾಕಿದ್ದಾರೆ ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ. ಕೆಲಸ ಮಾಡುವ ವೇಳೆ ಜೆಡ್ ಥಾಮಸ್ ಲೈಂಗಿಕ ಚಿತ್ರ ಬಿಡಿಸಿ ತೋರಿಸುವುದು, ಕೈಯಲ್ಲಿ ಕೆಟ್ಟದಾಗಿ ಸನ್ನೆ ಮಾಡಿ ಮಾನಸಿಕವಾಗಿ ಹಿಂಸೆ ನೀಡಿದ್ದಾರೆ. ಈ ಬಗ್ಗೆ ಮಹಿಳಾ ಸಿಬ್ಬಂದಿ ಆಂತರಿಕ ಸಮಿತಿಗೆ ದೂರು ನೀಡಿದ್ದರೂ ಯಾವುದೇ ರೀತಿಯ ಪ್ರಯೋಜನವಾಗಿಲ್ಲ.

ಜೆಡ್ ಥಾಮಸ್ ಬೇರೆ ವಿಭಾಗಕ್ಕೆ ವರ್ಗಾವಣೆ ಆದನಂತರ ಗೀತೇಶ್ ಸಿಂಗ್ ಹಾಗೂ ಸುಜಿತ್ ಫೋಟೋ ಹಾಗೂ ವಿಡಿಯೊ ತೆಗೆದಿದ್ದಾರೆ. ಇದಕ್ಕೆ ಸೀನಿಯರ್ ಸೆಕ್ಷನ್ ಎಂಜಿನಿಯರ್ ಪ್ರತಿಭಾ ಚೌಹಾಣ್ ಬೆಂಬಲ ನೀಡಿದ್ದಾರೆ. ಮೂವರು ಸೇರಿ ಲೈಂಗಿಕ ಕಿರುಕುಳ ನೀಡುತ್ತಿದ್ದಾ. ಅಲ್ಲದೇ ನಾಲ್ವರು ಕೊಲೆ ಬೆದರಿಕೆ ಹಾಕಿದ್ದಾರೆಂದು ಸಂತ್ರಸ್ತ ಮಹಿಳೆ ದೂರಿನಲ್ಲಿ ಆರೋಪಿಸಿದ್ದಾರೆ.

ದಂಪತಿಗೆ ಬಹಿಷ್ಕಾರ: ಗ್ರಾಮಸ್ಥರಿಗೆ ತಾಕೀತು

ಕೊಪ್ಪಳ: 8 ವರ್ಷಗಳಿಂದ ಪರಸ್ಪರ ಪ್ರೀತಿಸಿ ಮದುವೆಯಾದ ಪರ್ವತ ಮಲ್ಲಯ್ಯ ಸಮುದಾಯದ ದಂಪತಿ ಸೇರಿ 16 ಕುಟುಂಬಗಳಿಗೆ ಅದೇ ಸಮುದಾಯ ಬಹಿಷ್ಕಾರ ಹಾಕಿದೆ.

ಕೊಪ್ಪಳ ತಾಲೂಕಿನ ಚಿಲಕಮುಖಿಯಲ್ಲಿ ಅಮಾನವೀಯ ಘಟನೆ ನಡೆದಿದ್ದು, ಗ್ರಾಮಕ್ಕೆ ತಹಸೀಲ್ದಾರ್ ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಬಹಿಷ್ಕಾರ ಹಾಕಿದವರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಮತ್ತೆ ಘಟನೆ ಮರುಕಳಿಸಿದರೇ ಕಾನೂನು ಕ್ರಮ ಜರುಗಿಸುವ ಎಚ್ಚರಿಕೆ ಕೊಟ್ಟಿದ್ದಾರೆ. ಅಲೆಮಾರಿ ಪರ್ವತ ಮಲ್ಲಯ್ಯ ಸಮುದಾಯದ ಹನುಮಂತಪ್ಪ ಅದೇ ಸಮಾಜದ ಮಂಜುಳಾ ಪರಸ್ಪರ ಪ್ರೀತಿಸಿ ಮದುವೆ ಆಗಿದ್ದರು. ಬಾಲ್ಯ ವಿವಾಹ ಆಗಿದ್ದ ಮಂಜುಳಾ ಪ್ರೀತಿಸಿದ ಹನುಮಂತನ ಜತೆ ಮದುವೆ ಆಗಿದ್ದರು. ಮದುವೆಗೆ ವಿರೋಧಿಸಿದ್ದ ಅದೇ ಸಮುದಾಯ ಊರಿಂದ ಬಹಿಷ್ಕಾರ ಹಾಕಿತ್ತು. 8 ವರ್ಷಗಳ ಕಾಲ ಆ ಜೋಡಿ ಊರು ತೊರೆದು ಯಲಬುರ್ಗಾದಲ್ಲಿ ಜೀವನ ನಡೆಸಿದ್ದರು. ಕಳೆದ 4 ತಿಂಗಳ ಹಿಂದೆ ಸ್ವಂತ ಊರಿಗೆ ಬಂದು ವಾಸವಾಗಿದ್ದಾರೆ. ಗ್ರಾಮಕ್ಕೆ ಬಂದು ನೆಲೆಸಿದ್ದ ದಂಪತಿಯನ್ನು ಯಾರೂ ಮಾತನಾಡಿಸದಂತೆ ಇತರರಿಗೆ ಆಜ್ಞೆ ಮಾಡಲಾಗಿತ್ತು. ಜತೆಗೆ ಇನ್ನು 16 ಕುಟುಂಬಗಳಿಗೆ ಬಹಿಷ್ಕಾರ ಹಾಕಲಾಗಿತ್ತು. ಇದರಿಂದ ಬೇಸತ್ತ ದಂಪತಿ ನ್ಯಾಯಕ್ಕಾಗಿ ಸುದ್ದಿಗಾರರ ಮುಂದೆ ಕಣ್ಣೀರು ಹಾಕಿದರು.

ಗ್ರಾಮಸ್ಥರಿಗೆ ಬದ್ಧಿವಾದ

ಮಾಧ್ಯಮಗಳಲ್ಲಿ ಈ ಬಗ್ಗೆ ಸುದ್ದಿ ಆದ ಬೆನ್ನಲ್ಲೇ ಚಿಲಕಮುಖಿ ಗ್ರಾಮದಕ್ಕೆ ಕೊಪ್ಪಳ ತಹಸೀಲ್ದಾರ್, ಪೊಲೀಸ್ ಅಧಿಕಾರಿಗಳು ಹಾಗೂ ಸಮಾಜ ಕಲ್ಯಾಣ ಇಲಾಖೆ ಅಧಿಕಾರಿಗಳು ಭೇಟಿ ಕೊಟ್ಟು ಗ್ರಾಮಸ್ಥರಿಗೆ ಬುದ್ಧಿ ಮಾತು ಹೇಳಿದ್ದಾರೆ. ಮತ್ತೆ ಘಟನೆ ಮರುಕಳಿಸಿದರೇ ಕಾನೂನು ಕ್ರಮ ಜರುಗಿಸುವ ಸೂಚನೆ ಕೊಟ್ಟಿದ್ದಾರೆ.

ಸೈನಿಕರ ರಕ್ಷೆಗೆ ಸುದರ್ಶನ ಯಾಗ

ಸೈನಿಕರ ಕ್ಷೇಮ, ದೇಶದ ಸುರಕ್ಷೆಗೆ ಪ್ರಾರ್ಥಿಸಿ ಉಡುಪಿ ಶ್ರೀ ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರ ಮಾರ್ಗದರ್ಶನದಲ್ಲಿ ಮುಚ್ಲುಕೋಡು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಸುದರ್ಶನ ಮಂತ್ರ ಯಾಗ ನಡೆಯಿತು.

ಉಡುಪಿ: ಸೈನಿಕರ ಕ್ಷೇಮ, ದೇಶದ ಸುರಕ್ಷೆಗೆ ಪ್ರಾರ್ಥಿಸಿ ಉಡುಪಿ ಶ್ರೀ ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರ ಮಾರ್ಗದರ್ಶನದಲ್ಲಿ ಮುಚ್ಲುಕೋಡು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಸುದರ್ಶನ ಮಂತ್ರ ಯಾಗ ನಡೆಯಿತು. ದೇಶದ ಗಡಿ ಭಾಗದಲ್ಲಿ ಶತ್ರುರಾಷ್ಟ್ರಗಳ ಸವಾಲುಗಳನ್ನೆದುರಿಸಿ ಯುದ್ಧ ಸನ್ನದ್ಧ ಸ್ಥಿತಿಯಲ್ಲಿ ದಿಟ್ಟತನದಿಂದ ದೇಶವನ್ನು ಕಾಯುತ್ತಾ ಸೈನಿಕರ ಯೋಗಕ್ಷೇಮ ಮತ್ತು ದೇಶದ ಸುರಕ್ಷೆ ಸಮೃದ್ಧಿಗಾಗಿ ಪ್ರಾರ್ಥಿಸಿ ಶ್ರೀ ಪೇಜಾವರ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರ ಸಂಕಲ್ಪನಾನುಸಾರ ಈ ಯಾಗ ಹಮ್ಮಿಕೊಳ್ಳಲಾಗಿತ್ತು. ಉಡುಪಿಯ ಪ್ರಾಚೀನ ಮುಚ್ಲುಕೋಡು ಶ್ರೀ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದಲ್ಲಿ ಸಂಜೆ ಮಹಾಸುದರ್ಶನ ಮಂತ್ರ ಯಾಗ, ವಿದ್ವಾನ್ ಯಾಗ ಹೋಮ ನೆರವೇರಿದವು. ಯಾಗದ ಪೂರ್ಣಾಹುತಿಯಲ್ಲಿ ಪಾಲ್ಗೊಂಡ ಶ್ರೀಗಳು ದೇವ ಸೇನಾಧಿಪತಿಯಾದ ಸುಬ್ರಹ್ಮಣ್ಯ ದೇವರ ಸನ್ನಿಧಿಯಲ್ಲಿ ನಡೆಸಿದ ಈ ಯಾಗದ ಪೂರ್ಣ ಶ್ರೇಯಸ್ಸು ದೇಶದ ಗಡಿಕಾಯುವ ಸೈನಿಕರ ಶ್ರೇಯಸ್ಸಿಗಾಗಿ ಮತ್ತು ದೇಶದ ಸುರಕ್ಷತೆಗಾಗಿ ಅರ್ಪಿಸೋಣ ಎಂದರು.

ಜಾತಿ ನೋಡಿ ಮತ ಚಲಾಯಿಸಬಾರದು

ರಾಮನಗರ: ಜನರು ಜಾತಿ ನೋಡಿ ಮತ ಹಾಕಬಾರದು. ತತ್ವ, ಸಿದ್ಧಾಂತ, ಬದ್ಧತೆ ಹಾಗೂ ಉತ್ತಮ ಆಡಳಿತ ನಡೆಸುವವರಿಗೆ ಅಧಿಕಾರ ಕೊಡಬೇಕು. ಆಗ ಮಾತ್ರ ಪ್ರಜಾಪ್ರಭುತ್ವ ಸೇರಿದಂತೆ ಇಡೀ ರಾಜಕೀಯ ವ್ಯವಸ್ಥೆ ಸರಿದಾರಿಯಲ್ಲಿರುತ್ತದೆ. ಜನರು ತಮ್ಮ ಮತ ಶಕ್ತಿಯನ್ನು ನಮಗೆ ನೀಡಿದರೆ ಕರ್ನಾಟಕದ ರಾಜಕೀಯದಲ್ಲಿ ಮೂರನೇ ಶಕ್ತಿಯನ್ನು ಕಟ್ಟುತ್ತೇವೆ' ಎಂದು ಮಾಜಿ ಸಚಿವ ಸಿ.ಎಂ. ಇಬ್ರಾಹಿಂ ಹೇಳಿದರು.

ನವ ಕರ್ನಾಟಕ ನಿರ್ಮಾಣ ಆಂದೋಲನ ಜಿಲ್ಲಾ ಸಮಿತಿಯು ನಗರದ ಡಾ. ಬಿ.ಆರ್. ಅಂಬೇಡ್ಕರ್ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ಜನರ ನಡುವೆ ಜನತಾ ಪ್ರಣಾಳಿಕೆ ಚರ್ಚೆ' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಜ್ಯದ ಜನ ನಮಗೆ ಐದು ವರ್ಷ ಅಧಿಕಾರ ಕೊಟ್ಟರೆ, ರಾಜಕಾರಣಿಗಳು ಅಕ್ರಮವಾಗಿ ಸಂಪಾದಿಸಿರುವ ಆಸ್ತಿ ಸರಕಾರಕ್ಕೆ ಸೇರಬೇಕೆಂಬ ಕಾನೂನು ತರುತ್ತೇವೆ' ಎಂದರು. ದೇಶದ ಚುನಾವಣಾ ವ್ಯವಸ್ಥೆಯಲ್ಲಿ ಬದಲಾವಣೆಯ ಅಗತ್ಯವಿದೆ. ಹೀಗಿರುವ ಎಲೆಕ್ಟ್ರಾನಿಕ್ ಮತದಾನದ ಮೂಲಕ ನಡೆಯುವ ಮತದಾನವನ್ನು ರದ್ದು ಮಾಡಿ, ಮತ್ತೆ ಬ್ಯಾಲೆಟ್ ಪೇಪರ್ ವ್ಯವಸ್ಥೆ ಜಾರಿಗೆ ತರಬೇಕು. ಬೇರೆ ಯಾವುದೇ ದೇಶಗಳಲ್ಲಿ ಇಲ್ಲದ ಇವಿಎಂ ವ್ಯವಸ್ಥೆ ನಮ್ಮಲ್ಲಿ ಮಾತ್ರ ಯಾಕೆ? ರಾಜಕೀಯ ಪಕ್ಷಗಳು ಈ ವಿಷಯದಲ್ಲಿ ದೃಢ ನಿಲುವು ತಳೆಯಬೇಕು ಎಂದರು.

ಪಂಚ ಗ್ಯಾರಂಟಿಗಳಿಂದ ರಾಜ್ಯದಲ್ಲಿ ಅಚ್ಛೇದಿನ್

← ಮೊದಲಪುಟದಿಂದ

ಈ ಎರಡು ವರ್ಷಗಳ ಅವಧಿಯಲ್ಲಿ ಜಿಎಸ್‌ಡಿಪಿ ಬೆಳವಣಿಗೆಯಲ್ಲಿ ಕರ್ನಾ ಟಕ 1ನೇ ಸ್ಥಾನಕ್ಕೇರಿದೆ. ದೇಶದ ಜಿಡಿಪಿ ಶೇ.8.2 ರಷ್ಟಿದ್ದರೆ, ರಾಜ್ಯದ ಜಿಡಿಪಿ ಶೇ.10.2 ಆಗಿದೆ. ತೆರಿಗೆ ಸಂಗ್ರಹ ಮತ್ತು ವಿದೇಶಿ ಬಂಡವಾಳ ಹೂಡಿಕೆಯಲ್ಲಿ ರಾಜ್ಯ 2ನೇ ಸ್ಥಾನಕ್ಕೆ ತಲುಪಿದೆ. 2024ರಲ್ಲಿ ಇಡೀ ದೇಶದಲ್ಲಿ ಕರ್ನಾಟಕ ಶೇ.63ರಷ್ಟು ಉದ್ಯೋಗಾವಕಾಶ ಹೊಂದಿದೆ. ಉದ್ಯೋಗ ಪಡೆಯಲು ಅರ್ಹರಾಗಿರುವ ಪದವೀಧರರು ಇರುವ ರಾಜ್ಯಗಳಲ್ಲಿ ನಮ್ಮ ರಾಜ್ಯಕ್ಕೆ 7ನೇ ಸ್ಥಾನವಿದೆ. 2024-29ರ ಕೈಗಾರಿಕಾ ನೀತಿಯಿಂದಾಗಿ 20 ಲಕ್ಷ ಉದ್ಯೋಗಗಳು ಸೃಷ್ಟಿಯಾಗಲಿವೆ. ಹೊಸ ನೀತಿಯಿಂದ 7.5 ಲಕ್ಷ ಕೋಟಿ ರು. ಹೂಡಿಕೆ ಆಕರ್ಷಣೆಯಾಗಲಿದೆ. ಕಳೆದೊಂದು ವರ್ಷದಲ್ಲಿ 48,000 ಕೋಟಿ ರು. ಹೂಡಿಕೆಗೆ ಅನುಮೋದನೆ ನೀಡಿದ್ದು, 34,115 ಕೋಟಿ ರು. ಮೊತ್ತದ ಬಂಡವಾಳ ಹೂಡಿಕೆಯ 14 ಉದ್ಯಮಗಳ ಆರಂಭಕ್ಕೆ ಒಪ್ಪಿಗೆ ನೀಡಲಾಗಿದೆ. ಇದರಿಂದ 13,308 ಜನರಿಗೆ ಉದ್ಯೋಗ ಸಿಕ್ಕಿದೆ.

ಇನ್ವೆಸ್ಟ್ ಕರ್ನಾಟಕ-2025 ಕಾರ್ಯಕ್ರಮದಲ್ಲಿ 10.27 ಲಕ್ಷ ಕೋಟಿ ರು. ಹೂಡಿಕೆ ತಂದಿದ್ದು, 6 ಲಕ್ಷ ಉದ್ಯೋಗ ಸೃಷ್ಟಿಯಾಗಲಿದೆ. ಹಿಂದಿನ ಬಿಜೆಪಿ ಅವಧಿಯಲ್ಲಿ 4.29 ಲಕ್ಷ ಕೋಟಿ ರು. ಹೂಡಿಕೆ ಹಾಗೂ 3.52 ಲಕ್ಷ ಉದ್ಯೋಗ ಸೃಷ್ಟಿಯ ಗುರಿ ಇತ್ತು. ಅದು ಕೂಡ ಐದು ವರ್ಷಗಳ ಗುರಿ. ಆದರೆ ಕಾಂಗ್ರೆಸ್ ಸರಕಾರ ಒಂದೇ ವರ್ಷದಲ್ಲಿ ಈ ಗುರಿಯನ್ನು ಹೊಂದಿ, ಹೂಡಿಕೆ ತಂದಾಗಿದೆ. ಬರಪೀಡಿತ ಜಿಲ್ಲೆಗಳಾದ ಹಾಸನ, ಚಿಕ್ಕಮಗಳೂರು, ತುಮಕೂರು, ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಮತ್ತು ರಾಮನಗರಕ್ಕೆ ನೀರು ಹರಿಸಲು 23,251 ಕೋಟಿ ರು. ವೆಚ್ಚದ ಎತ್ತಿನ ಹೊಳೆ ಯೋಜನೆಯ 1ನೇ ಹಂತ ಉದ್ಘಾಟನೆಯಾಗಿದೆ. ಕಲಬುರಗಿ, ಬೀದರ್ ಜಿಲ್ಲೆಗಳ ಕುಡಿಯುವ ನೀರಿಗೆ 7,200 ಕೋಟಿ ರು. ಯೋಜನೆಗೆ ಅನುಮೋದನೆ ದೊರೆತಿದೆ. ಉತ್ತರ ಕರ್ನಾಟಕದ ಅಭಿವೃದ್ಧಿಗಾಗಿ 3,740 ಕೋಟಿ ಅನುಮೋದನೆಯಾಗಿದೆ. ಅಭಿವೃದ್ಧಿ ಕಾಮಗಾರಿಗಳಿಗೆ ಬಜೆಟ್‌ನಲ್ಲಿ 1 ಲಕ್ಷ 35 ಸಾವಿರ ಕೋಟಿ ರೂ ಅನುದಾನ ಮೀಸಲಿಟ್ಟಿದ್ದೇವೆ. ಕರ್ನಾಟಕದ ಪ್ರಗತಿಗಾಗಿ ಕಾಮಗಾರಿಗಳನ್ನು ಜಾರಿ ಮಾಡಲಾಗಿದೆ. ಬಿಜೆಪಿ ಅವಧಿಯಲ್ಲಿ 4,618 ಕೆರೆಗಳಲ್ಲಾಗಿದ್ದ ಒತ್ತುವರಿಯನ್ನು ತೆರವು ಮಾಡಿ ಜಲಮೂಲಗಳನ್ನು ಸಂರಕ್ಷಿಸಲಾಗಿದೆ.

ಬ್ರ್ಯಾಂಡ್ ಬೆಂಗಳೂರಿಗೆ ಮುನ್ನುಡಿ: ಬ್ರ್ಯಾಂಡ್ ಬೆಂಗಳೂರು ನನ್ನ ಕನಸಿನ ಯೋಜನೆ ಮಾತ್ರವಲ್ಲ, ಇದು ಒಂದು ದೂರದೃಷ್ಟಿ. ನಗರದಲ್ಲಿ ನೆಮ್ಮದಿಯಿಂದ ಬದುಕಲು ಮಾಡಬೇಕಾದ ಬದಲಾವಣೆಯ ಸಮಗ್ರ ನೋಟವೇ ಈ ಯೋಜನೆ. ಕಳೆದೆರಡು ವರ್ಷಗಳಲ್ಲಿ ರಾಜಧಾನಿಯ ಮೂಲ ಸೌಕರ್ಯದಲ್ಲಿ ಸಾಕಷ್ಟು ಸುಧಾರಣೆಯಾಗಿದೆ.

ಬಿಬಿಎಂಪಿಗೆ ಹೊಸದಾಗಿ ಸೇರಿದ 110 ಗ್ರಾಮಗಳಿಗೆ ಹೆಚ್ಚುವರಿಯಾಗಿ 775 ಎಂಎಲ್‌ಡಿ ಕಾವೇರಿ ನೀರು ನೀಡುವ 5ನೇ ಹಂತದ ಯೋಜನೆಯಲ್ಲಿ 15 ಸಾವಿರ ಮನೆಗಳಿಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ದೇಶದಲ್ಲಿಯೇ ಮೊದಲ ಬಾರಿಗೆ ಸಂಚಾರಿ ಕಾವೇರಿ ಯೋಜನೆ ತಂದು ಶುದ್ಧ ಕುಡಿಯುವ ನೀರೊದಗಿಸಲಾಗಿದೆ. ಸರ್ಜಾಪುರ ಬಳಿ 1,000 ಎಕರೆ ಪ್ರದೇಶದಲ್ಲಿ ಸ್ವಿಫ್ಟ್ ನಗರ ನಿರ್ಮಾಣವಾಗುತ್ತಿದೆ. 40,000 ಕೋಟಿ ಹೂಡಿಕೆ ಆಕರ್ಷಿಸುವ ಹಾಗೂ 80,000 ಉದ್ಯೋಗ ಸೃಷ್ಟಿಸುವ ಕ್ವಿನ್ ನಗರವನ್ನು 5,800 ಎಕರೆ ಪ್ರದೇಶದಲ್ಲಿ ಅಭಿವೃದ್ಧಿಪಡಿಸಲಾಗುತ್ತಿದೆ.

ಕಾಂಗ್ರೆಸ್ ಸರಕಾರ ಇಷ್ಟೆಲ್ಲ ಅಭಿವೃದ್ಧಿ ಮಾಡುತ್ತಿದ್ದರೂ, ಕೇಂದ್ರ ಸರಕಾರದಿಂದ ಸರಿಯಾದ ಸಹಕಾರ ಸಿಗುತ್ತಿಲ್ಲ ಎಂಬುದು ಎಲ್ಲರಿಗೂ ತಿಳಿದ ಸಂಗತಿ. ಬರ ಪರಿಹಾರ, ತೆರಿಗೆ ಮರು ಹಂಚಿಕೆ, ನಬಾರ್ಡ್ ಸಾಲ ಕಡಿತ ಸೇರಿದಂತೆ ಅನೇಕ ರೀತಿಗಳಲ್ಲಿ ಕೇಂದ್ರ ಸರಕಾರ ಕರ್ನಾಟಕಕ್ಕೆ ನಿರಂತರವಾಗಿ ಅನ್ಯಾಯ ಮಾಡುತ್ತಲೇ ಇದೆ. ಬೆಂಗಳೂರಿನಲ್ಲಿ ಸುರಂಗ ರಸ್ತೆ, ಮೆಟ್ರೋ ಸಂಪರ್ಕ ವಿಸ್ತರಣೆ, ನೀರಾವರಿ ಯೋಜನೆಗಳಿಗೆ ವಿಶೇಷ ಅನುದಾನ ನೀಡುವಂತೆಯೂ ಖುದ್ದಾಗಿ ಕೇಂದ್ರ ಸರಕಾರಕ್ಕೆ ಮನವಿ ಮಾಡಿದ್ದೆ. ಈ ಯಾವುದೇ ಮನವಿಗಳನ್ನು ಕೇಂದ್ರ ಸರಕಾರ ಕಿವಿಗೆ ಹಾಕಿಕೊಳ್ಳಲೇ ಇಲ್ಲ.

ಹಾಗೆಂದು ಕಾಂಗ್ರೆಸ್ ಸರಕಾರವೇನೂ ಕೈ ಕಟ್ಟಿ ಕೂತಿಲ್ಲ. ಕಾಲಕಾಲಕ್ಕೆ ಆಗಬೇಕಾದ ಅಭಿವೃದ್ಧಿ ಯೋಜನೆಗಳಿಗೆ ಚುರುಕು ನೀಡುವ ಕೆಲಸವನ್ನು ನಮ್ಮ ಸರಕಾರ ಮಾಡುತ್ತಲೇ ಇದೆ. ಈ ಹಿಂದೆ ಇದ್ದ ಸರಕಾರಗಳು ಅಭಿವೃದ್ಧಿಯನ್ನು ಮಾಡಿರಬಹುದು. ಆದರೆ ನಮ್ಮ ಸರಕಾರ ಅಭಿವೃದ್ಧಿಯ ಪರಿಕಲ್ಪನೆಯನ್ನೇ ಬದಲಾಯಿಸಿದೆ.

ರಸ್ತೆ, ಸೇತುವೆ, ಶಾಲೆ, ಆಸ್ಪತ್ರೆ ನಿರ್ಮಿಸಿದರೆ ನಮ್ಮ ಕೆಲಸ ಮುಗಿಯಿತು ಎಂದು ಈ ಹಿಂದಿನ ಸರಕಾರಗಳು ಆಲೋಚಿಸು ತ್ತಿದ್ದವು. ಈಗ ಈ ಪ್ರಗತಿ ಕಾರ್ಯಗಳೊಂದಿಗೆ ಪ್ರತಿ ಕುಟುಂಬಗಳ ಆರ್ಥಿಕ ಪ್ರಗತಿಗೂ ನೇರವಾಗಿ ಸರಕಾರ ಕ್ರಮ ವಹಿಸಬೇಕು ಎಂಬ ಹೊಸ ದೃಷ್ಟಿಯನ್ನು ತರಲಾಗಿದೆ.

ಗ್ಯಾರಂಟಿಗಳೊಂದಿಗೆ ವಿಶಿಷ್ಟವಾದ ಅಭಿವೃದ್ಧಿಯ ಹೆಜ್ಜೆಗಳನ್ನೂ ನಾವು ಇಡುತ್ತಿದ್ದೇವೆ. ಮುಂದಿನ ವರ್ಷಗಳಲ್ಲಿ ಈ ಹೆಜ್ಜೆಗಳನ್ನು ಇನ್ನಷ್ಟು ವೇಗವಾಗಿ ಹಾಗೂ ಆಳವಾಗಿ ಇಡಲಿದ್ದೇವೆ. ಇದು ಜನರ ಭವಿಷ್ಯವನ್ನು ಗಟ್ಟಿಯಾಗಿ ಕಟ್ಟುವ ಹೆಜ್ಜೆಗಳು. ಇವೇ ಬದುಕಿನ ಆಧಾರಗಳು.

ಯುವಕನಿಗೆ ಹಲ್ಲೆ: ಉಪ ತಹಸೀಲ್ದಾರ್ ಅಮಾನತು

ಗದಗ: ನಗರದ ತಹಸೀಲ್ದಾರ್ ಕಚೇರಿಯಲ್ಲಿ ಶನಿವಾರ ರಾತ್ರಿ ಯುವಕನ ಮೇಲೆ ಹಲ್ಲೆ ನಡೆಸಿದ ಆರೋಪದಡಿ ಬೆಟಗೇರಿಯ ನಾಡ ಕಚೇರಿಯ ಉಪ ತಹಸೀಲ್ದಾರ್ ಡಿ.ಟಿ.ವಾಲ್ಮೀಕಿ ಅವರನ್ನು ಅಮಾನತುಗೊಳಿಸಿ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಆದೇಶಿಸಿದ್ದಾರೆ. ಉಪವಿಭಾಗಾಧಿಕಾರಿ ದಾಖಲೆಗಳೊಂದಿಗೆ ಕಚೇರಿಗೆ ಸಲ್ಲಿಸಿದ ಶಿಸ್ತು ಕ್ರಮದ ವರದಿಯ ಪರಿಶೀಲಿಸಿ, ಉಪ ತಹಸೀಲ್ದಾರ್ ಡಿ.ಟಿ.ವಾಲ್ಮೀಕಿ ಅವರು ಮೇ 17ರಂದು ತಹಸೀಲ್ದಾರ್ ಕಚೇರಿ ಆವರಣದಲ್ಲಿ ಯುವಕನೊಂದಿಗೆ ತಮ್ಮ ಸಹಚರರೊಡನೆ ಸೇರಿ ಹಲ್ಲೆ ನಡೆಸಿರುವುದು ಸಾಮಾಜಿಕ ಜಾಲತಾಣಗಳಲ್ಲಿ ಪ್ರಕಟಣೆಯಾಗಿರುವ ವರದಿಯಾಗಿದ್ದು, ಸಾರ್ವಜನಿಕರೊಂದಿಗೆ ಅನುಚಿತವಾಗಿ ವರ್ತನೆ ತೋರಿ, ಸರಕಾರಿ ಕರ್ತವ್ಯ ನಿರ್ವಹಿಸುವಲ್ಲಿ ತೀವ್ರ ಕರ್ತವ್ಯ ಲೋಪವೆಸಗಿರುವುದು ಕಂಡು ಬಂದಿದೆ.

ಈ ಹಿನ್ನೆಲೆಯಲ್ಲಿ ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು ಉಲ್ಲಂಘಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿರುವುದರಿಂದ ಅಧಿಕಾರಿ ಮೇಲೆ ಶಿಸ್ತು ಕ್ರಮ ಜರುಗಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ವಿಚಾರಣೆಯ ಕಾಯ್ದಿರಿಸಿ ಸರಕಾರಿ ಸೇವೆಯಿಂದ ಅಮಾನತುಗೊಳಿಸಿ ಜಿಲ್ಲಾಧಿಕಾರಿ ಸಿ.ಎನ್. ಶ್ರೀಧರ್ ಆದೇಶಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಸಚಿವ ಸ್ಥಾನ ಸಿಗುವ ಭರವಸೆ ಇದೆ

ಮೈಸೂರು: ಸಚಿವನಾಗಲು ನನಗೂ ಆಸೆ ಇದೆ. ನಾನು ಕೂಡ ಸಚಿವ ಸ್ಥಾನದ ಪ್ರಬಲ ಆಕಾಂಕ್ಷಿ ಎಂದು ಉಪ ಸಭಾಪತಿ ರುದ್ರಪ್ಪ ಲಮಾಣಿ ಹೇಳಿದರು. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಳೆದ

ಅವಧಿಯಲ್ಲೇ ನಾನು ಸಚಿವನಾಗ ಬೇಕಿತ್ತು. ಪ್ರತಿ ಚುನಾವಣೆಯಲ್ಲಿ ನಮ್ಮ ಸಮುದಾಯ ಕಾಂಗ್ರೆಸ್ ಬೆನ್ನಿಗೆ ನಿಂತಿದೆ. ಆ ಸಮುದಾಯದ ಪ್ರತಿನಿಧಿ ಯಾಗಿ ನಾನಿದ್ದೇನೆ. ಹೀಗಾಗಿ ಸಚಿವ ಸ್ಥಾನ ನನಗೆ ನೀಡುತ್ತಾರೆ ಎನ್ನುವ ಭರವಸೆ ಇದೆ ಎಂದರು. ಕಳೆದ ಸಂಪುಟದಲ್ಲಿ ಸಚಿವ ಸ್ಥಾನದ ಲಿಸ್ಟ್ ನಲ್ಲಿ ನನ್ನ ಹೆಸರಿತ್ತು. ಅಂತಿಮ ಕ್ಷಣದಲ್ಲಿ ಹೆಸರನ್ನು ಬದಲಿಸಲಾಯಿತು. ಪಕ್ಷದ ನಾಯಕರು ನನ್ನನ್ನು ಮನವೊಲಿಸಿ ಉಪಸಭಾಪತಿ ಸ್ಥಾನ ನೀಡಿದರು. ಮುಂದಿನ ಸಂಪುಟ ಪುನರ್‌ರಚನೆ ವೇಳೆ ನೀಡುವುದಾಗಿ ಭರವಸೆ ನೀಡಿದ್ದರು. ಹೀಗಾಗಿ ಸಚಿವ ಸ್ಥಾನ ನೀಡುವ ಭರವಸೆ ಇದೆ. ಯಾವಾಗ ಸಂಪುಟ ವಿಸ್ತರಣೆ ಆಗುತ್ತದೆಯೋ ಅಂದೇ ಸಚಿವ ಸ್ಥಾನ ನೀಡಲಿ ಎಂದು ಇಚ್ಛೆ ವ್ಯಕ್ತಪಡಿಸಿದರು.

ಬಾವಿಗೆ ಕಾರು ಉರುಳಿ ಮೂವರು ಸಾವು

ಚಿಕ್ಕಬಳ್ಳಾಪುರ: ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಬಾವಿಗೆ ಬಿದ್ದ ಪರಿಣಾಮ ಮೂವರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಆಂಧ್ರಪ್ರದೇಶ ಅಣ್ಣಮಯ್ಯ ಜಿಲ್ಲೆಯ ಕುರುವಪಲ್ಲಿ ಬಳಿ ಭಾನುವಾರ ಬೆಳಗಿನ ಜಾವ ನಡೆದಿದೆ. ಕಾರಿನಲ್ಲಿದ್ದ ಚಿಕ್ಕಬಳ್ಳಾಪುರದ ಚಿಂತಾಮಣಿ ತಾಲೂಕಿನ ಐವರ ಪೈಕಿ ಮೂವರು ಉಸಿರುಕಟ್ಟಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಕಾರಿನ ಗಾಜು ಹೊಡೆದು ಹೊರ ಬಂದ ಇಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮುತ್ತಕದಲ್ಲಿ ಲೊಕೇಶ್(34), ಚಾಂಡ್ರಹಳ್ಳಿ ಗ್ರಾಮದ ಶಿವಾ ನಂದ(44) ಹಾಗೂ ಕೋಲಾರ ಜಿಲ್ಲೆಯ ಸುಗಟೂರು ಗ್ರಾಮದ ಚಲಪತಿ(49) ಎನ್ನುವವರಾಗಿದ್ದಾರೆ. ಮುತ್ತಕದಲ್ಲಿ ಗ್ರಾಮದ ತಿಪ್ಪಾರೆಡ್ಡಿ ಹಾಗೂ ಚಾಂಡ್ರಹಳ್ಳಿ ಗ್ರಾಮದ ಸುನೀಲ್ ಗಾಜು ಹೊಡೆದ ಕಾರಿನಿಂದ ಹೊರಬಂದು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಮೂವರನ್ನು ಕಾಪಾಡಲು ಯತ್ನಿಸಿ ದರೂ ಸಾಧ್ಯವಾಗಿಲ್ಲ. ಐವರು ಚಿಂತಾಮಣಿಯಿಂದ ತಮಿಳುನಾಡಿನ ಹೊಸೂರಿಗೆ ಅಡುಗೆ ಕೆಲಸಕ್ಕೆ ಹೋಗಿ ಆಂಧ್ರದ ಪಿಲೇರಿಗೆ ತೆರಳುತ್ತಿದ್ದ ವೇಳೆ ಅವಘಡ ಸಂಭವಿಸಿದೆ. ಅತಿವೇಗ ಹಾಗೂ ಚಾಲಕನ ಅಜಾಗ ರೂಕ ಚಾಲನೆಯಿಂದ ದುರಂತ ನಡೆದಿದೆ ಎನ್ನಲಾಗಿದೆ. ಪಿಲೇರು ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಕ್ರೇನ್ ಮುಖಾಂತರ ಬಾವಿಯಲ್ಲಿದ್ದ ಕಾರನ್ನು ಮೇಲಕ್ಕೆ ಎತ್ತಲಾಗಿದೆ.

ವಿರಾಮ
ಪ್ರತಿ ಭಾನುವಾರ

ವಿಶ್ವವಾಣಿ ಕ್ಲಬ್ ಹೌಸ್
19.05.2025
ಸಂಜೆ: 06.55 ರಿಂದ 08.05 ರವರೆಗೆ
ಸೋಮವಾರದ ಅತಿಥಿ
ಶ್ರೀ ಸಚಿನ್ ನಾಯಕ್
ವಿಷಯ
ಪುನರ್ನವ

ಟ್ವೀಟೂ-ಖಾರಾ

ಕರ್ನಾಟಕ ಕಾಂಗ್ರೆಸ್

ಕದನ ವಿರಾಮ ಆಗಿದೆ ಎಂದು ಮೊದಲಿಗೆ ಹೇಳಿದ್ದೇ ಟ್ರಂಪ್ ಅವರು. ಈ ಹೇಳಿಕೆಯ ಎರಡು ಗಂಟೆಯ ಬಳಿಕ ಕದನ ವಿರಾಮ ಆಗಿರುವುದಾಗಿ ಪಾಕಿಸ್ತಾನವೂ ಹೇಳಿತು, ಭಾರತವೂ ಹೇಳಿತು. ಕದನ ವಿರಾಮ ತಾವೇ ಮಾಡಿಸಿದ್ದಾಗಿ ಟ್ರಂಪ್ ಅವರು ಘೋಷಣೆ ಮಾಡಿದರು. ಟ್ರಂಪ್ ಅವರು ಹೇಳಿದ್ದು ಸರಿಯಲ್ಲ ಎಂದು ಇಲ್ಲಿಯವರೆಗೂ ಪ್ರಧಾನಮಂತ್ರಿಗಳು ಸ್ಪಷ್ಟವಾಗಿ ಹೇಳಲಿಲ್ಲ. ನಮ್ಮ 56 ಇಂಚಿನ ಎದೆಯ ಪ್ರಧಾನಿಗಳು ಟ್ರಂಪ್ ಅವರ ಬಗ್ಗೆ, ಚೀನಾ ಬಗ್ಗೆ ಮಾತನಾಡಲು ಭಯಪಡುತ್ತಿರುವುದೇಕೆ?

ಸತ್ಯನಾರಾಯಣ ರಾವ್

ಕಾಂಗ್ರೆಸಿನ ರೋಗಕ್ಕೆ ಮದ್ದಿಲ್ಲ. ಕಾಂಗ್ರೆಸ್ ನೋರು. ಇಂಡಿಯಾ ದಲ್ಲೇ ಇದ್ದಾರೋ ಅಥವಾ ಪಾಕಿಸ್ತಾನದಲ್ಲಿ ಇದ್ದಾರೋ ಮೊದಲು ಖಾತ್ರಿ ಮಾಡಿಕೊಂಡು ಟ್ವೀಟ್ ಮಾಡಿ. ಏನೂ ಗೊತ್ತಿಲ್ಲ ಅಂದರೆ, ದಿನಪತ್ರಿಕೆ ಓದಿ, ಅದೂ ಗೊತ್ತಿಲ್ಲ ಅಂದರೆ ಟಿವಿ ನ್ಯೂಸ್ ನೋಡಿ, ಅದೂ ನೋಡಲು ಏನೋ ಅನಿಷ್ಟ ಖಾಯಿಲೆ ಅಂದರೆ, ಕೈನಲ್ಲಿ ಇರುವ ಮೊಬೈಲ್ ನೋಡಿ.

ಸರಕಾರದ ಪ್ರಸ್ತಾವನೆಗೆ ಒಪ್ಪದ ಆರ್ಥಿಕ ಇಲಾಖೆ। ವೈದ್ಯರಲ್ಲಿಯೇ ಭಿನ್ನಮತ ಸೃಷ್ಟಿಸುವ ಸಚಿವ ಸಂಪುಟ ನಿರ್ಧಾರಕ್ಕೆ ವಿರೋಧ

ವೈದ್ಯರ ನಿವೃತ್ತಿ ವಯಸ್ಸು ಏರಿಕೆಗೆ ಅರವತ್ತೈದು ವಿಘ್ನ!

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸು ತ್ತಿರುವ ಕಾಯಂ ಸೂಪರ್ ಸ್ಪೆಷಾಲಿಟಿ ವೈದ್ಯರುಗಳ ವಯೋನಿವೃತ್ತಿ ವಯಸ್ಸನ್ನು 60 ರಿಂದ 65 ವರ್ಷಕ್ಕೆ ಹೆಚ್ಚಳ ಸಂಬಂಧ ಹಲವು ವಿರೋಧಗಳು ವ್ಯಕ್ತವಾಗಿದೆ.



ಕಳೆದ ಶುಕ್ರವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿ ರುವ ಕಾಯಂ ಸೂಪರ್ ಸ್ಪೆಷಾಲಿಟಿ ವೈದ್ಯರುಗಳ ವಯೋನಿವೃತ್ತಿ ವಯ ಸ್ಸನ್ನು 60 ರಿಂದ 65 ವರ್ಷಕ್ಕೆ ಹೆಚ್ಚಿಸುವು ದಾಗಿ ಸರಕಾರ ತಿಳಿಸಿದೆ. ಆದರೆ, ಇದಕ್ಕೆ ಹಲವು ಸಚಿವರು ವಿರೋಧ ವ್ಯಕ್ತಪಡಿಸಿದ್ದಾರೆ. ಜತೆಗೆ ಎಲ್ಲಾ ವೈದ್ಯಕೀಯ ಕಾಲೇಜು ಬೋಧನಾ ವಿಭಾಗದಲ್ಲಿ ತಾರತಮ್ಯ ಹುಟ್ಟುಹಾಕುವಂತೆ ಮಾಡಿದೆ.

ವೈದ್ಯಕೀಯ ಶಿಕ್ಷಣ ಮತ್ತು ತರಬೇತಿ ಪಡೆದ ನಂತರ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಳಲ್ಲಿ ತಜ್ಞರಾಗಿ ಕರ್ತವ್ಯ ನಿರ್ವಹಿಸಲು ಅತ್ಯಂತ ಕಡಿಮೆ ಸೇವಾವಧಿ ಸಿಗುತ್ತದೆ. ಇದನ್ನು ವಿಸ್ತರಿಸಿದರೆ ಅನುಕೂಲವಾಗುತ್ತದೆ ಎನ್ನುವ ಉದ್ದೇಶದಿಂದ ರಾಜ್ಯ ಸರಕಾರ ನಿವೃತ್ತಿ 60 ವರ್ಷದಿಂದ 65 ವಯೋಮಿತಿ ಹೆಚ್ಚಳಕ್ಕೆ ಮುಂದಾಗಿದೆ. ಆದರೆ, ಮತ್ತೊಂದೆಡೆ, ತಾರತಮ್ಯ ಮಾಡದೆ ಎಲ್ಲಾ ವೈದ್ಯಕೀಯ ಕಾಲೇಜು ಬೋಧನಾ ವಿಭಾಗದ ನಿವೃತ್ತಿ ಹೆಚ್ಚಳದ ಕುರಿತು ಕೆಲ ವೈದ್ಯರು ಆಗ್ರಹಿಸಿದ್ದಾರೆ. ಕರ್ನಾಟಕ ವ್ಯಾಪ್ತಿಯ ಎಲ್ಲಾ ವೈದ್ಯಕೀಯ ಕಾಲೇಜು ಬೋಧನಾ ವಿಭಾಗದ ನಿವೃತ್ತಿ 60 ವರ್ಷದಿಂದ 65 ವರ್ಷಕ್ಕೆ ಹೆಚ್ಚಿಸಬೇಕೆಂದು ಸ್ವತಃ ಕೆಲ ಸಚಿವರೇ ಮುಖ್ಯಮಂತ್ರಿ ಬಳಿ ಮನವಿ ಮಾಡಿದ್ದರು. ಆದರೂ, ಕೆಲವೊಂದಷ್ಟು ಮಂದಿಗೆ ಮಾತ್ರ ವಯೋಮಿತಿ ಹೆಚ್ಚಿಸಿರುವ ನಿರ್ಧಾರ ದಿಂದ, ವೈದ್ಯಕೀಯ ಕಾಲೇಜುಗಳಲ್ಲಿಯೂ ನಿವೃತ್ತಿ ತಾರತಮ್ಯ ಉಲ್ಬಣಗೊಳ್ಳುವ ಸಾಧ್ಯತೆ ಇದೆ.

ಸಿಎಂ ಭೇಟಿಗೆ ಮುಂದಾದ ವೈದ್ಯರ ನಿಯೋಗ: ಸೂಪರ್ ಸ್ಪೆಷಾಲಿಟಿ ವೈದ್ಯರ ನಿವೃತ್ತಿ ವಯಸ್ಸು ಹೆಚ್ಚಳದ ರಾಜ್ಯ ಸರಕಾರದ ಆದೇಶ ಹೊರಡಿಸಿದ್ದು, ಇದಕ್ಕೆ ವಿರೋಧ ವ್ಯಕ್ತಪಡಿಸಿರುವ ವೈದ್ಯರ ನಿಯೋಗ ಶನಿವಾರ ಸಭೆ ನಡೆಸಿದೆ. ಸರಕಾರ ಹೊರಡಿಸಿರುವ ಆದೇಶದಲ್ಲಿ ಎಲ್ಲಾ ವೈದ್ಯರಿಗೂ ನಿವೃತ್ತಿ ವಯಸ್ಸು ಹೆಚ್ಚಳದ ಪ್ರಸ್ತಾವನೆಯನ್ನು ಸೇರಿಸಬೇಕು. ವೈದ್ಯರಲ್ಲಾಗುವ ತಾರತಮ್ಯವನ್ನು ತಪ್ಪಿಸಬೇಕು. ಸರಕಾರಿ ಆಸ್ಪತ್ರೆಗಳ ಏಳಿಗೆಗೆ ಸೂಪರ್ ಸ್ಪೆಷಾಲಿಟಿ ವೈದ್ಯರೊಂದಿಗೆ ಎಲ್ಲಾ ವೈದ್ಯರು ಶ್ರಮಿಸುತ್ತಿರುವುದನ್ನು ಪರಿಗಣಿಸಬೇಕು ಎಂದು ಆಗ್ರಹಿಸಿದ್ದಾರೆ.

ಹೋರಾಟ, ಕೋರ್ಟ್ ಕದ ತಟ್ಟಲಿರುವ ವೈದ್ಯರು: ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಾಯಂ ಸೂಪರ್ ಸ್ಪೆಷಾಲಿಟಿ ವೈದ್ಯರುಗಳ ವಯೋನಿವೃತ್ತಿ ವಯಸ್ಸನ್ನು 60 ರಿಂದ 65 ವರ್ಷಕ್ಕೆ ಹೆಚ್ಚಳಕ್ಕೆ ಕೆಲ ವೈದ್ಯರು ವಿರೋಧ ವ್ಯಕ್ತಪಡಿಸಿದ್ದು, ಹೋರಾಟದ ಎಚ್ಚರಿಕೆ ನೀಡಿರುವುದಲ್ಲದೆ ಕೋರ್ಟ್ ಮೆಟ್ಟಿರುವುದಾಗಿ ಸೂಚಿಸಿದ್ದಾರೆ. ಮುಂಬರುವ ಸಚಿವ ಸಂಪುಟದಲ್ಲಿ ಇತರೆ ವೈದ್ಯರ ನಿವೃತ್ತಿ ವಯಸ್ಸು 65ಕ್ಕೆ ಹೆಚ್ಚಳ ಮಾಡಬೇಕೆಂದು ವೈದ್ಯರ ನಿಯೋಗ ಒತ್ತಾಯಿಸಿದೆ.

ಆರ್ಥಿಕ ಇಲಾಖೆಯ ಆಕ್ಷೇಪಣೆಗಳೇನು?

- ಸೂಪರ್‌ಸ್ಪೆಷಾಲಿಟಿ ವೈದ್ಯರ ನಿವೃತ್ತಿ ವಯಸ್ಸು 65ಕ್ಕೆ ಏರಿಕೆಯ ಪ್ರಸ್ತಾವನೆ ಆಡಳಿತ ಇಲಾಖೆಯು ಪ್ರಸ್ತಾವಿತ ತಾರ್ಕಿಕತೆಯೊಂದಿಗೆ ಸಮರ್ಥಿಸಿಕೊಳ್ಳುವಲ್ಲಿ ಸಂಪೂರ್ಣವಾಗಿ ವಿಫಲ.
- ಇದೇ ರೀತಿಯ ಸ್ಥಾನದಲ್ಲಿರುವ ಇತರ ಸಂಸ್ಥೆಗಳು ಮತ್ತು ಸರಕಾರದ ಮೇಲೆ ಬೀರುವ ಪರಿಣಾಮಗಳನ್ನು ಗಣನೆಗೆ ತೆಗೆದುಕೊಂಡಿಲ್ಲ. ಇಂತಹ ಪ್ರಮುಖ ನೀತಿ ಬದಲಾವಣೆ ಆರ್ಥಿಕ ಪರಿಣಾಮಕ್ಕೆ ಕಾರಣವಾಗಲಿದೆ.
- ಎರಡನೇ ಹಂತದ ಆಡಳಿತಾತ್ಮಕ, ಮಾನವ ಸಂಪನ್ಮೂಲ ನಿರ್ವಹಣೆ ಮತ್ತು ಕಾನೂನು ಸವಾಲುಗಳಿಗೆ ಕಾರಣವಾಗಲಿದೆ. ಸಿಬ್ಬಂದಿ, ಆಡಳಿತ ಸುಧಾರಣೆ ಇಲಾಖೆಯ ಅಭಿಪ್ರಾಯ ಗಣನೆಗೆ ತೆಗೆದುಕೊಂಡಿಲ್ಲ.
- ಲಭ್ಯವಿರುವ ಫೀಢರ್ ಕೇಡರ್‌ಗಳ ಆಧಾರದ ಮೇಲೆ ಉದ್ಭವಿಸುವ ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಆಡಳಿತ ವ್ಯವಸ್ಥೆಯಲ್ಲಿ ಸಾಕಷ್ಟು ಸಿಬ್ಬಂದಿ ಲಭ್ಯವಿದೆ. ಪ್ರಸ್ತಾವಿತ ನಿವೃತ್ತಿ ವಯಸ್ಸು ಹೆಚ್ಚಳ ಅಗತ್ಯ ವಾಸ್ತವಿಕವಾಗಿ ತೆಗೆದುಹಾಕಲಿದೆ.

ವಿರೋಧಗಳೇನು?

- ಸರಕಾರದ ಆದೇಶದಂತೆ ಯಾವುದೇ ಆಡಳಿತಾತ್ಮಕ ಹುದ್ದೆಗಳಿಂದ ದೂರವಿಟ್ಟಿರುವುದು 60 ವಯೋ ನಿವೃತ್ತಿಯ ನಂತರ ವೈದ್ಯರು ಸೇವೆ ಸಲ್ಲಿಸಲು ಹಿಂಜರಿಕೆ.
- ಎಂಸಿಎಚ್ ಮತ್ತು ಡಿಎಂ ವೈದ್ಯಕೀಯ ಕೋರ್ಸ್ ಓದಿರುವವ ವೈದ್ಯರಿಗೆ ಮಾತ್ರ 65 ನಿವೃತ್ತಿ ಏರಿಕೆಯಿಂದ ಉಳಿದ ವೈದ್ಯರು ವಿರೋಧ.
- ಎಂಬಿಬಿಎಸ್ ಹಾಗೂ ಎಂ.ಡಿ ಸೇರಿದಂತೆ ಇತರೆ ವೈದ್ಯಕೀಯ ಕೋರ್ಸ್ ಓದಿರುವ ವೈದ್ಯರ ನಿವೃತ್ತಿ ವಯಸ್ಸು ಏರಿಕೆ ಮಾಡದಿರುವುದು ವೈದ್ಯರಲ್ಲಿ ಭಿನ್ನಮತ ಸೃಷ್ಟಿ.
- ವೈದ್ಯರ ನಿವೃತ್ತಿ ವಯಸ್ಸು 65 ಹೆಚ್ಚಳಕ್ಕೆ ಆರ್ಥಿಕ ಇಲಾಖೆ ವಿರೋಧದ ನಡುವೆಯೂ ಸಚಿವಸಂಪುಟ ನಿರ್ಣಯಕ್ಕೆ ಕೆಲ ವೈದ್ಯರ ವಿರೋಧ.
- ಇಂತಹ ಹುದ್ದೆಗಳನ್ನು ಒಪ್ಪಂದದ ಮೇಲೆ ಭರ್ತಿ ಮಾಡಬಹುದು. ಅರ್ಹವಲ್ಲದ ಪ್ರಸ್ತಾವನೆಯನ್ನು ಮುಂದುವರಿಸಬಾರದು ಎಂದು ಆಡಳಿತ ಇಲಾಖೆಗೆ ಹಣಕಾಸು ಇಲಾಖೆ ಸ್ಪಷ್ಟವಾಗಿ ಸಮ್ಮತಿಸುವುದಿಲ್ಲ.

ವಿಧಾನಸೌಧದ ಮುಂದೆ ಪವನ್ ಕಲ್ಯಾಣ್‌ಗೆ ಕುಮ್ಕಿ ಆನೆ ಹಸ್ತಾಂತರಿಸಲಿರುವ ಸಿಎಂ, ಡಿಸಿಎಂ

ಮೇ 21ರಂದು ಆಂಧ್ರಕ್ಕೆ ಕುಮ್ಕಿ ಆನೆಗಳ ಹಸ್ತಾಂತರ

ಬೆಂಗಳೂರು: ನೆರೆಯ ಆಂಧ್ರಪ್ರದೇಶಕ್ಕೆ ಮೇ.21ಕ್ಕೆ ಕುಮ್ಕಿ ಆನೆಗಳನ್ನು ಹಸ್ತಾಂತರಿಸಲಾಗುತ್ತಿದ್ದು, ಇದು ನೆರೆ ರಾಜ್ಯದೊಂದಿಗಿನ ಸೌಹಾರ್ದ ಸಂಬಂಧ ಹೆಚ್ಚಿಸುವುದರ ಜತೆಗೆ, ಕರ್ನಾಟಕ ಗಡಿ ಮತ್ತು ಆಂಧ್ರದ ಆನೆ-ಮಾನವ ಸಂಘರ್ಷಕ್ಕೆ ಪರಿಹಾರ ಒದಗಿಸಲಿದೆ ಎಂದು ಅರಣ್ಯ ಸಚಿವ ಈಶ್ವರ ಖಂಡ್ರೆ ತಿಳಿಸಿದ್ದಾರೆ.

ಈ ಕುರಿತ ಪ್ರಕಟಣೆಯಲ್ಲಿ ಅವರು, ಕಳೆದ ವರ್ಷ ಆಗಸ್ಟ್ 8 ರಂದು ಆಂಧ್ರಪ್ರದೇಶದ ಉಪ ಮುಖ್ಯಮಂತ್ರಿ ಹಾಗೂ ಅರಣ್ಯ ಸಚಿವ ಪವನ್ ಕಲ್ಯಾಣ್ ಅವರು ಬೆಂಗಳೂರಿಗೆ ಆಗಮಿಸಿ ತಮ್ಮನ್ನು ಭೇಟಿ ಮಾಡಿ ಆಂಧ್ರದಲ್ಲಿ ಹೆಚ್ಚುತ್ತಿರುವ ಪುಂಡಾನೆಗಳ ಸೆರೆಗೆ ಕುಮ್ಕಿ ಆನೆ ನೀಡುವಂತೆ, ಮತ್ತು ತಮ್ಮ ರಾಜ್ಯದ ಮಾವುತರು ಮತ್ತು ಅರಣ್ಯ ಸಿಬ್ಬಂದಿಗೆ ಆನೆ ಸೆರೆ ಕಾರ್ಯಾಚರಣೆಯ ತರಬೇತಿ ನೀಡು ವಂತೆ ಮನವಿ ಮಾಡಿದ್ದರು. ಸೆಪ್ಟೆಂಬರ್ 27 ರಂದು ತಮ್ಮ ನೇತೃತ್ವದ ನಿಯೋಗ ವಿಜಯ ವಾಡಕ್ಕೆ ಭೇಟಿ ನೀಡಿದ್ದ ವೇಳೆ ಈ ಸಂಬಂಧ ಎರಡೂ ರಾಜ್ಯಗಳ ನಡುವೆ ತಿಳಿವಳಿಕೆ ಒಪ್ಪಂ ದಕ್ಕೆ ಸಹಿ ಹಾಕಲಾಗಿತ್ತು. ಅದರ ಸಲುವಾಗಿ ಮೇ 21 ರಂದು ವಿಧಾನಸೌಧದ ಮುಂಭಾ ಗದ ಮೆಟ್ಟಿಲುಗಳ ಮೇಲೆ ನಡೆಯಲಿರುವ ವಿಧ್ಯುಕ್ತ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು, ಆಂಧ್ರ ಡಿಸಿಎಂ ಪವನ್ ಕಲ್ಯಾಣ್ ಅವರಿಗೆ ಪಳಗಿಸಿದ ಆನೆಗಳನ್ನು ಹಸ್ತಾಂತರ ಮಾಡಲಿದ್ದಾರೆ ಎಂದು ತಿಳಿಸಿದ್ದಾರೆ.

ಕರ್ನಾಟಕದ ಹೆಮ್ಮೆಯ ದಸರಾ ಮಹೋತ್ಸವದಲ್ಲಿ ಪಾಲ್ಗೊಂಡಿರುವ ಅಥವಾ ದಸರಾ ಮಹೋತ್ಸವಕ್ಕಾಗಿ ಈಗಾಗಲೇ ಗುರುತಿಸಲಾಗಿರುವ ಯಾವುದೇ ಕುಮ್ಕಿ ಆನೆಯನ್ನು ಆಂಧ್ರಪ್ರದೇಶಕ್ಕೆ ನೀಡಲಾಗು ತ್ತಿಲ್ಲ. ಆನೆ ಹಾಗೂ ಹುಲಿ ಸೆರೆ ಕಾರ್ಯಾ ಚರಣೆಗಾಗಿ ಪಳಗಿಸಿರುವ ಇನ್ನಿತರ ಕುಮ್ಕಿ ಆನೆಗಳನ್ನು ಹಸ್ತಾಂತರ ಮಾಡಲಾಗುತ್ತಿದೆ ಎಂದು ಖಂಡ್ರೆ ಸ್ಪಷ್ಟಪಡಿಸಿದ್ದಾರೆ.

- ಕರ್ನಾಟಕ ಗಡಿ ಮತ್ತು ಆಂಧ್ರದ ಆನೆ-ಮಾನವ ಸಂಘರ್ಷಕ್ಕೆ ಪರಿಹಾರಕ್ಕೆ ಕ್ರಮ
- ಪುಂಡಾನೆಗಳ ಸೆರೆಗೆ ಕುಮ್ಕಿ ಆನೆ ನೀಡುವಂತೆ ಮನವಿ ಮಾಡಿದ್ದ ಆಂಧ್ರ ಅರಣ್ಯ ಸಚಿವ ಪವನ್ ಕಲ್ಯಾಣ್
- ಮೇ 21 ರಂದು ವಿಧಾನಸೌಧದ ಮುಂಭಾಗದ ಮೆಟ್ಟಿಲುಗಳ ಮೇಲೆ ನಡೆಯಲಿರುವ ವಿಧ್ಯುಕ್ತ ಸಮಾರಂಭದಲ್ಲಿ ಹಸ್ತಾಂತರ

ಕರ್ನಾಟಕ- ಆಂಧ್ರಪ್ರದೇಶ, ತೆಲಂಗಾಣ ಹಾಗೂ ಕೇರಳ ರಾಜ್ಯಗಳ ನಡುವೆ ಆಗಿರುವ ಉತ್ತಮ ರೂಢಿಗಳ ವಿನಿಮಯ ಒಪ್ಪಂದದ ಭಾಗವಾಗಿ ಕುಮ್ಕಿ ಆನೆಗಳನ್ನು ಆಂಧ್ರಪ್ರದೇಶಕ್ಕೆ ಹಸ್ತಾಂತರಿಸಲಾಗುತ್ತಿದೆ. ಗಡಿ ಜಿಲ್ಲೆ ಕೋಲಾರ ವ್ಯಾಪ್ತಿಯಲ್ಲೂ ಆನೆ- ಮಾನವ ಸಂಘರ್ಷ ಹೆಚ್ಚುತ್ತಿದ್ದು, ನೆರೆಯ ಆಂಧ್ರಪ್ರದೇಶದಿಂದ ನಮ್ಮ ರಾಜ್ಯಕ್ಕೆ ಪುಂಡಾನೆಗಳು ಬಾರದಂತೆ ತಡೆಯಲು, ಮುಂದಿನ ದಿನಗಳಲ್ಲಿ ಆಂಧ್ರ ನಡೆಸಲಿರುವ ಆನೆ ಸೆರೆ ಕಾರ್ಯಾಚರಣೆ ನೆರವಾಗಲಿದೆ. ಈ ನಿಟ್ಟಿನಲ್ಲಿ ಕುಮ್ಕಿ ಆನೆಗಳ ಹಸ್ತಾಂತರದಿಂದ ರಾಜ್ಯಕ್ಕೂ ಪರೋಕ್ಷವಾಗಿ ಲಾಭವಾಗಲಿದೆ.

-ಈಶ್ವರ ಖಂಡ್ರೆ. ಅರಣ್ಯ ಸಚಿವ

ಪಾಕಿಸ್ತಾನದ ವಿರುದ್ಧದ ದಾಳಿಗೆ ನಮ್ಮ ಬೆಂಬಲವಿದೆ
ಟ್ರಂಪ್ ಹೇಳಿದಂತೆ ಬಿಜೆಪಿ ಸರಕಾರ ಏಕೆ ನಡೆದುಕೊಳ್ಳುತ್ತಿದೆ?

ಬಿಜೆಪಿಯಿಂದ ಸೇನೆಗೆ ಅಪಮಾನ

ಬೆಂಗಳೂರು: ಅಂತಾರಾಷ್ಟ್ರೀಯ ಮಟ್ಟದಲ್ಲಿ ಓಡಾಡುವ ಪ್ರಧಾನಿ ನರೇಂದ್ರ ಮೋದಿ ಅವರು ಮಣಿಪುರಕ್ಕೆ ಏಕೆ ಹೋಗಿಲ್ಲ ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಣಿಪುರಕ್ಕೆ ಮೋದಿಯವರು ಹೋಗಿಲ್ಲ, ಸಂತಾಪವನ್ನೂ ವ್ಯಕ್ತಪಡಿಸಿಲ್ಲ. ಇಮೇಜ್ ಡ್ಯಾಮೇಜ್ ಆಗುವ ಕಡೆ ಮೋದಿಯವರು ಹೋಗುವುದಿಲ್ಲ. ಕೇವಲ ಎನ್‌ಡಿಎ ಮುಖ್ಯಮಂತ್ರಿಗಳಿಗೆ ಬ್ರೀಫಿಂಗ್ ಮಾಡುವ ಮೋದಿ, ಪಂಜಾಬ್, ಜಮ್ಮು-ಕಾಶ್ಮೀರ, ಹಿಮಾಚಲ ಪ್ರದೇಶದ ಮುಖ್ಯಮಂತ್ರಿಗಳಿಗೆ ಯಾಕೆ ಮಾಹಿತಿ ಕೊಡುವುದಿಲ್ಲ ಎಂದು ಪ್ರಶ್ನಿಸಿದ್ದಾರೆ.

ಭಾರತ ಪಾಕಿಸ್ತಾನ ಸಂಘರ್ಷದಲ್ಲಿ ಕದನ ವಿರಾಮ ನಿಮ್ಮಿಂದ ಆಯ್ತಾ ಬಹಳ ಸಂತೋಷ. ಆದರೆ ಅದನ್ನು ಟ್ರಂಪ್ ನನ್ನಿಂದ ಆಗಿದೆ ಅಂತಾ ಹೇಳುತ್ತಾರೆ. ಅವರ ಹೇಳಿಕೆಗೂ ಬಿಜೆಪಿ ಹೇಳಿಕೆಗೂ ವ್ಯತ್ಯಾಸ ಏಕಿದೆ? ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಯಾವುದೇ ನಿರ್ಧಾರದಲ್ಲಿ ತಾವು ಕೇಂದ್ರ ಸರಕಾರದ ಜತೆಗಿದ್ದೇವೆ. ಆದರೆ, ಕದನ ವಿರಾಮದ ಘೋಷಣೆಯನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಯಾಕೆ ಮಾಡುತ್ತಾರೆ ಎಂದು ಪ್ರಶ್ನಿಸಿದರು.

ಪ್ರಧಾನಿ ಮೋದಿ ವಿರುದ್ಧ ಕಿಡಿ

ಮಧ್ಯಪ್ರದೇಶದ ಸಚಿವರು ಸೋಫಿಯಾ ಕುರೇಶಿಯವರ ಬಗ್ಗೆ ಮಾಡಿರುವ ಹೇಳಿಕೆಯನ್ನು ಉಲ್ಲೇಖಿಸಿ, ಆ ಸಚಿವರನ್ನು ಸಂಪುಟದಿಂದ ಏಕೆ ವಜಾಗೊಳಿಸಿಲ್ಲ? ವಿದೇಶಾಂಗ ನೀತಿಯ ಬಗ್ಗೆ ಅಮೆರಿಕದ ಮಾಜಿ ಅಧ್ಯಕ್ಷರು ಮಾತನಾಡುತ್ತಾರೆ, ಆದರೆ 100 ದೇಶಗಳನ್ನು ಸುತ್ತಿದ ಮೋದಿಯವರಿಂದ ಏನಾಯಿತು? ಟ್ರಂಪ್, ಮೇಕ್ ಇನ್ ಇಂಡಿಯಾ ಮತ್ತು ಆ್ಯಪಲ್‌ನಂತಹ ಯೋಜನೆಗಳಿಗೆ ತೆರಿಗೆ ಶೂನ್ಯ ಮಾಡಿದ್ದೀರಾ ಎಂದು ಕೇಳುತ್ತಾರೆ, ಆದರೆ ಇದಕ್ಕೆ ಯಾರೂ ಉತ್ತರ ಕೊಟ್ಟಿಲ್ಲ. ಪ್ರಧಾನಿ ಮೋದಿಯವರು ಈ ವಿಷಯಗಳಿಗೆ ಉತ್ತರ ಕೊಡಬೇಕು, ಆದರೆ ಅವರು ಎಲ್ಲಿದ್ದಾರೆ ಎಂದು ಸಚಿವ ಪ್ರಿಯಾಂಕ್ ಖರ್ಗೆ ಪ್ರಶ್ನಿಸಿದರು.

ಜಾರ್ಜಿಯಾದ ಟಿಬಿಲಿಸಿಯಲ್ಲಿ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಸಮಾರಂಭ ಇಂದು

ಬೆಂಗಳೂರು: ಕನ್ನಡ ಪತ್ರಿಕೋದ್ಯಮದಲ್ಲಿ ಮೊದಲ ಬಾರಿಗೆ ವಿಶ್ವವಾಣಿಯ ಗ್ಲೋಬಲ್ ಅಚೀವರ್ಸ್ ಅವಾರ್ಡ್ ಈ ಬಾರಿ ಜಾರ್ಜಿಯಾ ದಲ್ಲಿ ಆಯೋಜಿಸಲಾಗಿದ್ದು, ಸೋಮವಾರ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ನಡೆಯಲಿದೆ.

ವಿಶ್ವವಾಣಿ ಗ್ಲೋಬಲ್ ಫೋರಂ ಜಾರ್ಜಿಯಾದ ರಾಜಧಾನಿ ಟಿಬಿಲಿಸಿಯ ಪುಲ್‌ಮ್ಯಾನ್ ಟಿಬಿಲಿಸಿ ಆಕ್ಸಿಸ್ ಟವರ್‌ನಲ್ಲಿ ಕರ್ನಾಟಕದ ಅಪರೂಪದ ಸಾಧಕರಿಗೆ ವಿಶ್ವವಾಣಿ ಗ್ಲೋಬಲ್ ಅಚೀವರ್ಸ್ ಅವಾರ್ಡ್ ನೀಡಿ ಗೌರವಿಸಲಾಗುತ್ತಿದೆ. ಕಾರ್ಯಕ್ರಮದಲ್ಲಿ ಬೈಲಹೊಂಗಲ ಮುಕುಟ ಮೂರು ಸಾವಿರಮಠದ ಶ್ರೀ ನೀಲಕಂಠ ಮಹಾ ಸ್ವಾಮೀಜಿ, ಜಾರ್ಜಿಯಾ ಸಂಸದ ಇರಾಕ್ಲಿ ಮೆಜುರ್ನಿಶ್ವಿಲಿ, ಜಾರ್ಜಿಯಾದ ನಟ ನಿಕೊಲೊಜ್ ತುಲುಕಿಡ್ಜೆ, ಸಿಡಿಪಿಎಫ್ ಸಂಘಟನೆ ಸ್ಥಾಪಕ ಅಧ್ಯಕ್ಷ ದರ್ಪಣ್ ಪ್ರಶೇರ್, ಜಾರ್ಜಿಯಾದ ಲೇಖಕ ಜಿಯೋರ್ಜಿ ಕೆಕೆಲಿಡ್ಜೆ, ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಸೇರಿದಂತೆ ಅನೇಕರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಒಟ್ಟು 14 ಸಾಧಕರಿಗೆ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಕರ್ನಾಟಕದ ವಿವಿಧ ಕ್ಷೇತ್ರಗಳಲ್ಲಿ ಗಮನಾರ್ಹ ಸಾಧನೆ ಮಾಡಿದ ಅಪರೂಪದ ಸಾಧಕರನ್ನು ಗುರುತಿಸಿ, ಅಂತಾರಾಷ್ಟ್ರೀಯ ಮಟ್ಟದಲ್ಲಿ ಗೌರವಿಸುವುದು, ಎರಡೂ ದೇಶಗಳ ಮೈತ್ರಿ, ಪರಸ್ಪರ ಸಾಂಸ್ಕೃತಿಕ ವಿನಿಮಯ ಹಾಗೂ ಸಂಸ್ಕೃತಿ ಪರಿಚಯ ಈ ಕಾರ್ಯಕ್ರಮದ ಆಶಯ. ಕಳೆದ ವರ್ಷದಿಂದ ಕಾಂಬೋಡಿಯಾ, ವಿಯೆಟ್ನಾಂ, ಇಂಡೋನೇಷ್ಯಾ, ಮಾರಿಷಸ್, ಮಾಲ್ಡೀವ್ಸ್, ಜಪಾನ್, ಒಮಾನ್ ರಷ್ಯಾ ದೇಶಗಳಲ್ಲಿ ಕಾರ್ಯಕ್ರಮಗಳನ್ನು ಆಯೋ ಜಿಸಿ ಯಶಸ್ವಿಗೊಳಿಸಲಾಗಿದೆ. ಇಂಥ ವಿಶಿಷ್ಟ ಸಾಂಸ್ಕೃತಿಕ ಸಮ್ಮಿಲನ ಈ ಬಾರಿ ಜಾರ್ಜಿಯಾದ ಟಿಬಿಲಿಸಿಯಲ್ಲಿ ನಡೆಯಲಿದೆ.

ವಿಶ್ವವಾಣಿ
ಗ್ಲೋಬಲ್ ಫೋರಂ ಅರ್ಪಿಸುವ
ಗ್ಲೋಬಲ್ ಅಚೀವರ್ಸ್ ಅವಾರ್ಡ್
ಜಾರ್ಜಿಯಾ

ಪ್ರಶಸ್ತಿ ಪುರಸ್ಕೃತರು

ಮಂಜುನಾಥ್ ಮಕ್ಕಳಗೇರಿ, ಮಮತಾ, ರೇಖಾ ಭಟ್, ಬಿ.ಸಿ. ಜಯಪ್ರಸಾದ್, ಹನುಮೇಗೌಡ ಬಿ.ಆರ್., ಆತ್ಮ ಹಿರೇಮಠ್, ಸುಕುಮಾರ್ ಶೆಟ್ಟಿ, ಭಾವನಾ ಬೆಳೆಗೆರೆ, ಡಾ.ಗಂಗಾಧರ ಸಜ್ಜನ್, ಮಧುಕೇಶ್ವರ ಜನಕ ಹೆಗಡೆ, ಹನುಮಂತ ರಾವ್, ಯಜ್ಞನಾರಾಯಣ ಕಮ್ಮಾಜೆ, ಅನಿತಾ ರಾಘವೇಂದ್ರ ಹೆಗಡೆ ಹಾಗೂ ಪ್ರವೀಣ್ ಶೆಟ್ಟಿ.

ದಿನೇಶ್ ಗುಂಡೂರಾವ್ ಪ್ರಶ್ನಿಸಿ ಪೋಸ್ಟ್ ಮಾಡಿದ್ದ ಮಹಿಳೆ

ಮಾಜಿ ಕಾರ್ಪೊರೇಟರ್ ವಿರುದ್ಧ ಎಫ್‌ಐಆರ್

ಮಂಗಳೂರು: ಸುಹಾಸ್ ಶೆಟ್ಟಿ ಹತ್ಯೆ ಪ್ರಕರಣದಲ್ಲಿ ಘಟನಾ ಸ್ಥಳದಲ್ಲಿ ಕಾಣಿಸಿಕೊಂಡ ಬುರ್ಖಾಧಾರಿ ಮಹಿಳೆಯರನ್ನು ಯಾಕೆ ಬಂಧಿಸಿಲ್ಲ ಎಂದು ಪ್ರಶ್ನಿಸಿ ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರನ್ನು ಉದ್ದೇಶಿಸಿ ಸಾಮಾಜಿಕ ಜಾಲತಾಣಗಳಲ್ಲಿ ಪ್ರಶ್ನಿಸಿದ್ದ ಬಿಜೆಪಿ ಮಹಿಳಾ ಮೋರ್ಚಾ ರಾಜ್ಯ ಕಾರ್ಯದರ್ಶಿ, ಮಾಜಿ

ಕಾರ್ಪೊರೇಟರ್ ಶ್ವೇತಾ ಪೂಜಾರಿ ಮೇಲೆ ಎಫ್‌ಐಆರ್ ದಾಖಲಾಗಿದೆ.

ಶ್ವೇತಾ ಪೂಜಾರಿ ಮೇಲೆ ಎಫ್‌ಐಆರ್ ದಾಖಲಾಗಿದ್ದಕ್ಕೆ ವ್ಯಾಪಕ ಖಂಡನೆ ವ್ಯಕ್ತವಾಗಿದೆ. ಸುಹಾಸ್ ಶೆಟ್ಟಿ ಹತ್ಯೆಯ ಸಂದರ್ಭ ಹಂತಕರ ಜತೆ ಮಾತಾಡಿದ್ದ ಇಬ್ಬರು ಬುರ್ಖಾಧಾರಿ ಮಹಿಳೆಯರ ಬಗ್ಗೆ ವ್ಯಾಪಕ ಅನುಮಾನ ವ್ಯಕ್ತವಾಗಿತ್ತು. ಈ ವೇಳೆ ಶ್ವೇತಾ ಪೂಜಾರಿ ಅವರು ಫೇಸ್‌ಬುಕ್ ಪೋಸ್ಟ್‌ನಲ್ಲಿ ಬುರ್ಖಾಧಾರಿ ಮಹಿಳೆಯರನ್ನು ಯಾಕೆ ಬಂಧಿಸಿಲ್ಲ. ದಕ್ಷಿಣ ಕನ್ನಡ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಈ ಬಗ್ಗೆ ಯಾಕೆ ಮಾತಾಡುತ್ತಿಲ್ಲ? ಎಂಬರ್ಥದಲ್ಲಿ ಪೋಸ್ಟ್ ಮಾಡಿದ್ದರು. ಇದನ್ನೇ ಮುಂದಿಟ್ಟುಕೊಂಡು ಕಾಂಗ್ರೆಸ್ ಸದಸ್ಯೆಯೋರ್ವರು ಪೊಲೀಸರಿಗೆ ದೂರು ನೀಡಿದ್ದು, ದೂರು ದಾಖಲಾಗುತ್ತಿದ್ದಂತೆ ಪೊಲೀಸರು ಶ್ವೇತಾ ಪೂಜಾರಿ ಮೇಲೆ ಎಫ್‌ಐಆರ್ ದಾಖಲಿಸಿದ್ದಾರೆ.

ಪೊಲೀಸ್ ಆಯುಕ್ತರಿಗೆ ಪತ್ರ ಬರೆದ ಶಾಸಕ ಬೆಲ್ಲದ

ಹು-ಧಾ ಅವಳಿ ನಗರದಲ್ಲಿ ಅಪರಿಚಿತ ವ್ಯಕ್ತಿಗಳ ಓಡಾಟ

ಧಾರವಾಡ: ಹುಬ್ಬಳ್ಳಿ-ಧಾರವಾಡ ಅವಳಿನಗರಕ್ಕೆ ಪಾಕಿಸ್ತಾನ ಸೇರಿದಂತೆ ಬೇರೆ ದೇಶದ ಅನುಮಾನಾಸ್ಪದ ವ್ಯಕ್ತಿಗಳು ಕಾಲಿಟ್ಟಿದ್ದಾರಾ? ಎಂಬ ಪ್ರಶ್ನೆಯೊಂದು ಹುಟ್ಟಿಕೊಂಡಿದೆ. ಅಂತಹ ವ್ಯಕ್ತಿಗಳ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಅವರಿಗೆ ಶಾಸಕ ಅರವಿಂದ ಬೆಲ್ಲದ ಪತ್ರ ಬರೆದಿದ್ದಾರೆ.

ಪೊಲೀಸ್ ಆಯುಕ್ತರಿಗೆ ಪತ್ರ ಬರೆದಿರುವ ಶಾಸಕ ಅರವಿಂದ ಬೆಲ್ಲದ ಅವರು, ಹುಬ್ಬಳ್ಳಿ-ಧಾರವಾಡ ಅವಳಿ ನಗರದ ಕೆಲ ಪ್ರಾರ್ಥನಾ ಮಂದಿರಗಳಲ್ಲಿ ಅಪರಿಚಿತರ ಓಡಾಟ ಹೆಚ್ಚಾಗುತ್ತಿರುವುದು ಕಂಡು ಬಂದಿದೆ. ಅವರು ಸ್ಥಳೀಯರು ಅಲ್ಲ ಎಂಬ ಶಂಕೆ ಮೂಡುತ್ತಿದೆ. ಹೀಗೆ ಓಡಾಡುತ್ತಿರುವವರಲ್ಲಿ ಹೊಸ ಮುಖ, ಅಪರಿಚಿತ, ಅನುಮಾನಾಸ್ಪದ ವ್ಯಕ್ತಿಗಳೇ ಹೆಚ್ಚಾಗಿದ್ದಾರೆ. ಅವರು ಹೊರ ದೇಶದ ಪ್ರಜೆಗಳಂತೆ ಭಾಸವಾಗುತ್ತಾರೆ ಎಂದಿದ್ದಾರೆ.

ಇವರು ಅವಳಿನಗರದ ವಿವಿಧ ಕೊಳಚೆ ಪ್ರದೇಶ ಸೇರಿದಂತೆ (ಜನ್ನತ್ ನಗರ ಧಾರವಾಡ ಸೇರಿದಂತೆ) ಹಲವೆಡೆ ವಾಸವಾಗಿದ್ದಾರೆಂಬ ಮಾಹಿತಿಯೂ ಇದೆ. ಅದಕ್ಕಾಗಿ ಈ ಕುರಿತು ಪೊಲೀಸ್ ಇಲಾಖೆ ಕೂಡಲೇ ಕಾರ್ಯಪ್ರವೃತ್ತರಾಗಬೇಕು ಎಂದು ಹೇಳಿದ್ದಾರೆ. ಅವಳಿ ನಗರದಲ್ಲಿರುವ ಅಪರಿಚಿತ, ಹೊಸಮುಖದ ವ್ಯಕ್ತಿಗಳನ್ನು ವಿಚಾರಿಸಿ ಸೂಕ್ತ ಕ್ರಮ ಜರುಗಿಸಬೇಕು. ಇವರಿಂದ ಮಹಾನಗರದಲ್ಲಿ ಯಾವುದೇ ಅಹಿತಕರ ಘಟನೆ ಆಗದಂತೆ ತಡೆಯುವ ಕೆಲಸ ಮಾಡಬೇಕು ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಹೊಸಬರಿಗೆ ಅವಕಾಶ ಸಿಗುವ ಜತೆಗೆ ನಾಯಕತ್ವ ಬೆಳೆಯುತ್ತದೆ

ಸಚಿವ ಸಂಪುಟ ವಿಸ್ತರಣೆ ಒಳ್ಳೆಯದು: ಜಾರಕಿಹೊಳಿ

ಬೆಳಗಾವಿ: ಸಚಿವ ಸಂಪುಟ ವಿಸ್ತರಣೆಯಾದರೆ ಒಳ್ಳೆಯದು. ಹೊಸಬರಿಗೆ ಅವಕಾಶ ಸಿಗುವ ಜತೆಗೆ ನಾಯಕತ್ವ ಬೆಳೆಯುತ್ತದೆ,

ಈ ಕುರಿತು ಹೈಕಮಾಂಡ್ ಮಟ್ಟದಲ್ಲಿ ಚರ್ಚೆ ಯಾಗಬೇಕು ಎಂದು ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಡಿಸೆಂಬರ್ ವೇಳೆದ ಸಚಿವ ಸಂಪುಟ ವಿಸ್ತರಣೆ ವಿಚಾರ ಅದು ಇನ್ನೂ ದೂರ ವಿದೆ. ಹೈಕಮಾಂಡ್ ಮಟ್ಟದಲ್ಲಿ ಈ ಕುರಿತು ಚರ್ಚೆ ನಡೆಯಬೇಕು. ಹೊಸ ನಾಯಕತ್ವ ಬೆಳೆಯಲು ಇದು ಸಹಕಾರಿ ಯಾಗುತ್ತದೆ ಎಂದು ಪರೋಕ್ಷವಾಗಿ ಸಂಪುಟ ವಿಸ್ತರಣೆ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದರು. ಕಾಂಗ್ರೆಸ್ ಪಕ್ಷದ ಎರಡು ವರ್ಷಗಳ ಸಾಧನಾ ಸಮಾವೇಶಕ್ಕೆ ಬಿಜೆಪಿಯಿಂದ ಅಪಸ್ವರ ಕುರಿತು ಪ್ರತಿಕ್ರಿಯಿಸಿದ ಅವರು, ಕೇಂದ್ರ ಸರಕಾರದ ಹನ್ನೊಂದು ವರ್ಷದ ಸಾಧನೆ ಅವರು ಹೇಳಲಿ, ನಮ್ಮ ಸಾಧನೆ ನಾವು ಹೇಳುತ್ತೇವೆ. ಎರಡು ವರ್ಷದಲ್ಲಿ ನಮ್ಮ ಸರಕಾರ ಮಾಡಿರುವ ಅಭಿವೃದ್ಧಿ ಕಾರ್ಯಗಳ ಕುರಿತು ಜನರಿಗೆ ತಿಳಿಸುವ ಪ್ರಯತ್ನ ಮಾಡುತ್ತೇವೆ. ವಿರೋಧ ಮಾಡುವುದೇ ಬಿಜೆಪಿ ಕೆಲಸ ಎಂದರು.

ಗ್ಯಾರಂಟಿ ಯೋಜನೆ ಬಂದ್ ಆಗಲಿದೆ ಎಂದು ಮೊದಲ ದಿನದಿಂದಲೂ ಬಿಜೆಪಿ ನಾಯಕರು ಹೇಳುತ್ತಿದ್ದಾರೆ, ಕಳೆದ ಎರಡು ವರ್ಷಗಳಿಂದಲೂ ಗ್ಯಾರಂಟಿ ಯೋಜನೆ ಸಮರ್ಪಕ ವಾಗಿ ಜಾರಿಯಾಗಿವೆ ಎಂದು ಹೇಳಿದರು.

ರಾಜ್ಯದಲ್ಲಿ ಹುಟ್ಟಿದ್ರೂ, ಸತ್ತರೂ ಟ್ಯಾಕ್ಸ್: ವಿಪಕ್ಷ ನಾಯಕ ಆರ್.ಅಶೋಕ ಕಿಡಿ

ಕೈ ಬಿದ್ದು ಹೋಗುವ ನುಗ್ಗೆ ಮರ

ಚಿಕ್ಕಮಗಳೂರು: ಕಾಂಗ್ರೆಸ್ ಕೋಮಾ ಸ್ಟೇಜ್‌ಲ್ಲಿರೋ ಬೀಳೋ ನುಗ್ಗೆ ಮರ ಇದ್ದ ಹಾಗೆ. ಅವರಿಂದ ಪಾಠ ಕಲಿಯುವ ಅಗತ್ಯ ನನಗಿಲ್ಲ ಎಂದು ಪ್ರತಿಪಕ್ಷ ನಾಯಕ ಆರ್.ಅಶೋಕ ಲೇವಡಿ ಮಾಡಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ನನ್ನನ್ನ ಕಾಂಗ್ರೆಸ್ನವರು ನೇಮಿಸಿದ್ರೆ, ಅವರು ಹೇಳಿದ ಹಾಗೆ ರಾಜೀನಾಮೆ ಕೊಡಬಹುದಿತ್ತು. ನನ್ನನ್ನು ನೇಮಿಸಿರುವುದು ಬಿಜೆಪಿ, ಈ ದೇಶದಲ್ಲಿ ಎಲ್ಲಾ ರಾಜ್ಯದಲ್ಲಿರುವ ಪಾರ್ಟಿ ಬಿಜೆಪಿ. ಕಾಂಗ್ರೆಸ್‌ನವರು ಎಲ್ಲೋ ಎರಡು ಕಡೆ ಕ್ರಾಸ್ ಆಗಿ ಅಧಿಕಾರದಲ್ಲಿ ಇದ್ದಾರೆ. ಆ ಎರಡು ರಾಜ್ಯದಲ್ಲೂ ಯಾವಾಗ ಕಾಂಗ್ರೆಸ್ ಸರಕಾರ ಬಿದ್ದೋಗುತ್ತೋ ಗೊತ್ತಿಲ್ಲ ಎಂದು ಲೇವಡಿ ಮಾಡಿದರು.

ಕಾಂಗ್ರೆಸ್ ಸರಕಾರ ಬೀಳೋ ಹಂತದಲ್ಲಿರುವ ನುಗ್ಗೆ ಮರ ಇದ್ದ ಹಾಗೆ. ಕಾಂಗ್ರೆಸ್‌ನವರಿಂದ ಪಾಠ ಕಲಿಯುವ ಅಗತ್ಯ ನನಗಿಲ್ಲ. ನಮ್ಮದು ಇಡೀ ಪ್ರಪಂಚದಲ್ಲಿರುವ ನಂಬರ್ ಒನ್ ಪಾರ್ಟಿ. ಕೋಮಾ ಸ್ಥಿತಿಯಲ್ಲಿರುವ ಕಾಂಗ್ರೆಸ್ ಪಾರ್ಟಿಯಿಂದ ಬುದ್ಧಿವಾದ ಕಲಿಯುವ ಅವಶ್ಯಕತೆ ಇಲ್ಲ ಎಂದು ವಾಗ್ದಾಳಿ ನಡೆಸಿದರು.

ಬೆಲೆ ಏರಿಕೆ ಅನ್ನೋದು ಕಾಂಗ್ರೆಸ್ಸಿನ ದಿನ ನಿತ್ಯದ ಕಸುಬಾಗಿದೆ. ಸರಕಾರಿ ನೌಕರರಿಗೆ ಸರಿಯಾಗಿ ಸಂಬಳ ಆಗುತ್ತಿಲ್ಲ. ಮೋದಿ ಜನೌಷಧಿ ತಂದು ಬಡವರಿಗೆ ಸಹಾಯ ಮಾಡಿದ್ರು. ಆದರೆ, ಈಗ ಅದಕ್ಕೆ ಎಳ್ಳು ನೀರು ಬಿಟ್ರು. ಮೂರನೇ ಬಾರಿ ಬಿಯರ್ ದರ ಏರಿಸಿದ್ದಾರೆ. ಸಿದ್ದರಾಮಯ್ಯ ನೋಡಿದ್ರೆ ಗಾಂಧಿ ಶ್ಲೋಕ ಹೇಳ್ತಾರೆ ಎಂದರು.

ದೇಶ ಯುದ್ಧದ ಸಂದರ್ಭ ಎದುರಿಸುತ್ತಿದೆ. ಈ ವೇಳೆ ಸಮಾವೇಶ ಬೇಕೆ? ಕಾಂಗ್ರೆಸ್ ಗೆ ಭವಿಷ್ಯ ಇಲ್ಲ. ಜನರಿಂದ ಛೀಮಾರಿ ಹಾಕಿಸಿಕೊಳ್ಳುತ್ತಿದೆ. ಸಾಧನಾ ಸಮಾವೇಶ ಮುಗಿದ ಬಳಿಕ ಸರಕಾರ ಉಳಿಯುವುದು ಅನುಮಾನ. ಗ್ರೇಟರ್ ಬೆಂಗಳೂರು ಅಲ್ಲ, ಕ್ವಾರ್ಟರ್ ಬೆಂಗಳೂರು ಆಗಿದೆ. ಮಳೆಯಿಂದ ಇಡೀ ನಗರ ಮುಳುಗಿದೆ. ರಸ್ತೆ ಗುಂಡಿಗಳ ನಗರವಾಗಿದೆ. ಕಸಗಳ ರಾಶಿಯ ನಗರವಾಗಿದೆ.

ಆರ್.ಅಶೋಕ, ಪ್ರತಿಪಕ್ಷ ನಾಯಕ

ಸ್ನೇಹಿತನನ್ನು ಕೊಂದು ಮೃತದೇಹ ಕಾಡಿನಲ್ಲಿ ಬಿಸಾಡಿ ಬಂದಿದ್ದ ಕಿಲ್ಲರ್ ಲೇಡಿ

ಕುಶಾಲನಗರ ಸಂಪತ್ ಕೊಲೆ ಕೇಸ್: ಮೂವರ ಬಂಧನ

ಮಡಿಕೇರಿ: ನಾಪತ್ತೆಯಾಗಿದ್ದ ಕೊಡಗಿನ ಸೋಮವಾರಪೇಟೆಯ ನಿವಾಸಿ ಸಂಪತ್ ನಾಯರ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರನ್ನು ಕುಶಾಲನಗರ ಪೊಲೀಸರು ಬಂಧಿಸಿದ್ದಾರೆ.

ಸೋಮವಾರಪೇಟೆ ತಾಲೂಕಿನ ಹಾನಗಲ್ ಗ್ರಾಮದ ಬಿ.ಎಂ ಕಿರಣ್ (44), ಆತನ ಪತ್ನಿ ಸಂಗೀತಾ (35) ಹಾಗೂ ಚೌಡ್ಲು ಗ್ರಾಮದ ಪಿ.ಎಂ ಗಣಪತಿ (43) ಬಂಧಿತ ಆರೋಪಿಗಳಾಗಿದ್ದಾರೆ. ಈ ಮೂವರೂ ಕೊಲೆಯಾದ ಸಂಪತ್ ಸ್ನೇಹಿತರೇ ಎಂಬುದು ಗಮನಾರ್ಹ.

ವೈಯಕ್ತಿಕ ದ್ವೇಷದಿಂದ ಕೊಲೆ ಮಾಡಲು ಆರೋಪಿ ಸಂಗೀತಾ ಸಂಚು ರೂಪಿಸಿದ್ದಳು. ಅದಕ್ಕಾಗಿ ಮೇ 9ರಂದು ಸಂಪತ್ ನಾಯರ್‌ನನ್ನು ಸೋಮವಾರಪೇಟೆಯ ಹಾನಗಲ್‌ನಲ್ಲಿರುವ ತನ್ನ ಮನೆಗೆ ಬರಲು ಹೇಳಿದ್ದಳು. ಸಾಲದ ಹಣ ವಾಪಸ್ ಕೊಡುತ್ತೇನೆ ಎಂದು ಕರೆಸಿಕೊಂಡಿದ್ದಳು. ಸಂಪತ್ ಮನೆಗೆ ಬಂದ ಮೇಲೆ ಸಂಗೀತಾಳ ಗಂಡ ಕಿರಣ್ ಹಾಗೂ ಸ್ನೇಹಿತ ಗಣಪತಿ ಮೂವರು ಸೇರಿ ದೊಣ್ಣೆಯಿಂದ ಹೊಡೆದು, ಕತ್ತಿಯಿಂದ ಇರಿದು ಕೊಲೆ ಮಾಡಿದ್ದಾರೆ. ಕೊಲೆಯನ್ನು ಮರೆಮಾಚಲು ಮೃತ ದೇಹವನ್ನ ಸಂಪತ್ ನಾಯರ್ ತಂದಿದ್ದ ಕಾರಿನಲ್ಲೇ ಹಾಕಿಕೊಂಡು ಸಕಲೇಶಪುರ ತಾಲೂಕು ಒಳಗೂರು ಅರಣ್ಯದಲ್ಲಿ ಬಿಸಾಡಿದ್ದಾರೆ. ಬಳಿಕ ಕಲ್ಲಳ್ಳಿ ಬಳಿ ಆತನ ಕಾರು ನಿಲ್ಲಿಸಿ ಬೇರೊಂದು ಕಾರಿನಲ್ಲಿ ಬೆಂಗಳೂರಿಗೆ ತೆರಳಿದ್ದರು. ಮೇ 16 ರಂದು ಪೊಲೀಸರಿಗೆ ದೊರೆತ ಖಚಿತ ಮಾಹಿತಿ ಮೇರೆಗೆ ಕಿರಣ್‌ನನ್ನು ಬೆಂಗಳೂರಿನಲ್ಲಿ ಬಂಧಿಸಲಾಯಿತು. ಇನ್ನೂ ಮೇ 17ರಂದು ಬೆಳ್ತಂಗಡಿಯ ಅಂಗಡಿಯಲ್ಲಿ ಮತ್ತೊಬ್ಬ ಆರೋಪಿ ಗಣಪತಿ ಹಾಗೂ ಮೇ 18ರಂದು ಆರೋಪಿ ಸಂಗೀತಾಳನ್ನು ಸೋಮವಾರ ಪೇಟೆಯಲ್ಲಿ ಬಂಧಿಸಲಾಯಿತು.

ಪೊಲೀಸರು ವಿಚಾರಣೆ ನಡೆಸಿದ ಬಳಿಕ ತಪ್ಪೊಪ್ಪಿಕೊಂಡು ಘಟನೆಯ ವಿವರಣೆ ನೀಡಿದ್ದಾರೆ. ಈ ಸಂಬಂಧ ಕೃತ್ಯಕ್ಕೆ ಬಳಸಲಾದ ದೊಣ್ಣೆ, ಕತ್ತಿ ಹಾಗೂ ಕಾರನ್ನು ಪೊಲೀಸರು ವಶಪಡಿಸಿಕೊಂಡಿದ್ದು, ಪ್ರಕರಣದ ತನಿಖೆ ಮುಂದುವರಿಸಲಾಗಿದೆ.

ಒಪಿಎಸ್ ಜಾರಿಗೆ ಬದ್ಧ: ಮಧು ಬಂಗಾರಪ್ಪ

ಶಿವಮೊಗ್ಗ: ಪ್ರಣಾಳಿಕೆಯಲ್ಲಿ ಭರವಸೆ ಕೊಟ್ಟಂತೆ ಸರಕಾರಿ ನೌಕರರಿಗೆ ಹಳೆಯ ಪಿಂಚಣಿ

ಯೋಜನೆ (ಒಪಿಎಸ್) ಜಾರಿಗೊಳಿಸಲು ರಾಜ್ಯ ಸರ್ಕಾರ ಬದ್ಧವಾಗಿದೆ. ಶೀಘ್ರ ಪ್ರಕ್ರಿಯೆ ಆರಂಭಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನೌಕರರ ಪರವಾಗಿ ಮನವಿ ಸಲ್ಲಿಸುವೆ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು. ಸರಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಕಳೆದ ವಿಧಾನಸಭಾ ಚುನಾವಣೆಗೆ ಮುನ್ನ ರೂಪಿಸಿದ್ದ ಕಾಂಗ್ರೆಸ್ ಪಕ್ಷದ ಪ್ರಣಾಳಿಕೆಯಲ್ಲಿ ಈಗಿನ ಹೊಸ ಪಿಂಚಣಿ ವ್ಯವಸ್ಥೆ (ಎನ್ ಪಿಎಸ್) ಬದಲಿಗೆ ಒಪಿಎಸ್ ಜಾರಿಗೊಳಿಸುವ ಭರವಸೆ ನೀಡಲಾಗಿತ್ತು. ಪ್ರಣಾಳಿಕೆಯಲ್ಲಿ ಘೋಷಿಸಿದ್ದ ಎಲ್ಲ ಕಾರ್ಯಕ್ರಮಗಳನ್ನು ಸರಕಾರ ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸುತ್ತಿದೆ. ಪ್ರಣಾಳಿಕೆ ಸಮಿತಿಯ ಉಪಾಧ್ಯಕ್ಷನಾಗಿದ್ದ ನನಗೂ ಒಪಿಎಸ್ ಜಾರಿ ವಿಚಾರದಲ್ಲಿ ಹೊಣೆಗಾರಿಕೆ ಇದೆ. ಮುಖ್ಯಮಂತ್ರಿ ಅವರಿಗೆ ನಿಮ್ಮ (ಸರಕಾರಿ ನೌಕರರ) ಪರವಾಗಿ ಮನವಿ ಮಾಡುವೆ ಎಂದರು.

ವಿಶ್ವವಾಣಿ

ಸಂಪಾದಕೀಯ

ಪಾಕಿಸ್ತಾನ ಎಂಬ ಊಸರವಳ್ಳಿ

ಸಮಯಕ್ಕೊಂದು ಸುಳ್ಳು' ಎಂಬ ಮಾತಿಗೆ ಪುಷ್ಟಿ ನೀಡುವಂತೆ ಪಾಕಿಸ್ತಾನ ನಡೆದುಕೊಳ್ಳುತ್ತಿದೆ. ಪಹಲ್ಗಾಮ್ ಮಾರಣಹೋಮದ ಹಿನ್ನೆಲೆಯಲ್ಲಿ ಪಾಕಿಸ್ತಾನದ ಮೇಲಿನ ಭಾರತದ ದಾಳಿಯ ಸಂಭಾವ್ಯತೆಯ ಕುರಿತು ಮಾತುಗಳಿನ್ನೂ ಕೇಳಿಬರುತ್ತಿದ್ದಾಗ, 'ಭಾರತವನ್ನು ಉಡಾಯಿಸಬಲ್ಲಂಥ ಮಾರಕ ಅಸ್ತ್ರಗಳು ನಮ್ಮಲ್ಲಿವೆ. ಅವನ್ನು ನಾವು ಇಟ್ಟುಕೊಂಡಿರುವುದು ಪ್ರದರ್ಶನಕ್ಕಲ್ಲ, ಪೂಜೆ ಮಾಡುವುದಕ್ಕಲ್ಲ' ಎಂಬರ್ಥದ ಉಡಾಫೆಯ ಮಾತುಗಳು ಪಾಕ್ ಸೇನಾಧಿಕಾರಿಯೊಬ್ಬರಿಂದ ಹೊಮ್ಮಿದ್ದುಂಟು. ಆದರೆ, 'ಆಪರೇಷನ್ ಸಿಂದೂರ' ಕಾರ್ಯಾಚರಣೆಯನ್ನು ಭಾರತ ಶುರುವಿಟ್ಟುಕೊಳ್ಳುತ್ತಿದ್ದಂತೆ ಪಾಕಿಸ್ತಾನ ತಡವರಿಸತೊಡಗಿತು ಮತ್ತು ಅದರ 'ಉತ್ತರ ಕುಮಾರನ ಪೌರುಷ' ಜಗತ್ತಿಗೇ ಗೊತ್ತಾಯಿತು. ನಂತರದಲ್ಲಿ, ಶುರುವಾಗಿದ್ದು ಪಾಕ್ ಪ್ರಧಾನಿ ಶಹಬಾಜ್ ಷರೀಫರ ಸುಳ್ಳಿನ ಕಂತೆ. 'ಭಾರತವು ಪಾಕಿಸ್ತಾನದ ವಾಯುನೆಲೆಗಳ ಮೇಲೆ ದಾಳಿಯನ್ನೇ ಮಾಡಿಲ್ಲ' ಎಂದೇ ಕಥೆ ಕಟ್ಟುತ್ತಿದ್ದ ಅವರು, ಈಗ ಕೊನೆಗೂ ಈ ದಾಳಿ ನಡೆದಿರುವುದನ್ನು ದೃಢೀಕರಿಸಿದ್ದಾರೆ; ಭಾರತದ ಸೇನಾಪಡೆಗಳಿಂದ ಆದ ದಾಳಿಗೆ ಪಾಕಿಸ್ತಾನದ ಪ್ರಮುಖ ವಾಯುನೆಲೆಗಳು ಹುಡಿಗಟ್ಟಲ್ಪಟ್ಟಿರುವುದನ್ನು ಒಪ್ಪಿಕೊಂಡಿದ್ದಾರೆ. ಇದು ಪಾಕಿಸ್ತಾನದ ಜನನಾಯಕರ ಮತ್ತು ಸೇನಾಧಿಕಾರಿಗಳ ಸಾರ್ವಕಾಲಿಕ ಹಾಗೂ ಸಹಜ ಜಾಯಮಾನ. ಇದನ್ನು ದಶಕಗಳಿಂದಲೂ ಅರಿತಿರುವ ಭಾರತವು, ಉಗ್ರವಾದವನ್ನು ಬೆನ್ನಿಗಿಟ್ಟುಕೊಂಡು ಪಾಕಿಸ್ತಾನ ಮೆರೆಯುತ್ತಾ ಬಂದಿರುವ ರಕ್ಕಸತನವನ್ನು ವಿವಿಧ ದೇಶಗಳಿಗೆ ಮನವರಿಕೆ ಮಾಡಿಕೊಡಲೆಂದು 7 ಸಂಸದರ ಸರ್ವಪಕ್ಷ ನಿಯೋಗವನ್ನು ಸಜ್ಜುಗೊಳಿಸಿರುವುದು ಶ್ಲಾಘನೀಯ ಸಂಗತಿ. ಅಮೆರಿಕ, ಬ್ರಿಟನ್, ದಕ್ಷಿಣ ಆಫ್ರಿಕಾ, ಕತಾರ್, ಯುಎಇ ಮುಂತಾದ ದೇಶಗಳಿಗೆ ಸದ್ಯದಲ್ಲೇ ಪ್ರವಾಸ ಕೈಗೊಳ್ಳಲಿರುವ ಈ ನಿಯೋಗವು ತನ್ನ ಪಾಲಿನ ಹೊಣೆಗಾರಿಕೆಯನ್ನು ಸಮರ್ಥವಾಗಿ ನಿರ್ವಹಿಸಲಿ ಎಂಬುದು ಸಹೃದಯಿ ದೇಶಪ್ರೇಮಿಗಳ ಆಶಯ. ಉಗ್ರವಾದದ ರಫ್ತನ್ನೇ ಉಸಿರಾಗಿಸಿಕೊಂಡಿರುವ ಪಾಕಿಸ್ತಾನಕ್ಕೆ ಜಾಗತಿಕ ಮಟ್ಟದಲ್ಲಿ ಪಾಠ ಕಲಿಸಲು ಇದಕ್ಕಿಂತ ಸೂಕ್ತ ಸಮಯ ಮತ್ತೊಂದು ಸಿಗಲಾರದು.

ಸೊಂಪಾದಕೀಯ

ಒನ್ ನೇಷನ್, ಒನ್ ಭಗವಾನ್!

ನಮ್ಮ ದೇಶದಲ್ಲಿ ಮುಕ್ಕೋಟಿ ದೇವರುಗಳನ್ನ ಜನ ನಂಬೋದು ನಿಜ. ಆ ಕಾರಣಕ್ಕೆ 'ದೇವನೊಬ್ಬ ನಾಮ ಹಲವು' ಅನ್ನೋ ಮಾತು ನಮ್ಮಲ್ಲಿ ಪ್ರತೀತಿಯಲ್ಲಿದೆ. ಆದರೆ ಇದನ್ನೇ ಬಂಡವಾಳ ಮಾಡಿಕೊಂಡು ದೇವರ ಹೆಸರಲ್ಲಿ ನಾಮ ಹಾಕುವ ದೇವಮಾನವರಿಗೇನೂ ಕಮ್ಮಿ ಇಲ್ಲ. ಇವರೆಲ್ಲಾ 'ಎ' ಸಿನಿಮಾದ ಉಪೇಂದ್ರ ಅವರಂತೆ 'ಐ ಆಮ್ ಗಾಡ್, ಗಾಡ್ ಈಸ್ ಗ್ರೇಟ್' ಅಂತ ಓಡಾಡಿಕೊಂಡು ಮುಗ್ಧ ಜನರನ್ನು ಯಾಮಾರಿಸುತ್ತಿದ್ದಾರೆ ಅನ್ನೋದು ಎಲ್ಲರಿಗೂ ಗೊತ್ತಿರೋ ಸಂಗತಿ. ಆದರೆ ಇಲ್ಲೊಬ್ಬ ಪುಣ್ಯಾತ್ಮ

ಇಂಥ ಸೋ ಕಾಲ್ಡ್ ದೇವಮಾನವನೊಬ್ಬನ ಪರ ವಹಿಸಿ ಕೋರ್ಟ್ ಅನ್ನೇ ಯಾಮಾರಿಸಲು ಹೊರಟ ವಿಷಯ ಇದು. ಈ ಮಹಾನುಭಾವ ಒಬ್ಬ ವಕೀಲ ಅನ್ನೋದು ಇನ್ನೂ ಇಂಟರೆಸ್ಟಿಂಗ್ ವಿಷಯ. ಈತನಿಗೆ ಅನುಕೂಲ್ ಚಂದ್ರ ಅನ್ನೋ ಮಹಾನ್ ದೇವಮಾನವ ಬಹಳ ಕ್ಲೋಸ್ ಅನ್ಸುತ್ತೆ. ಹಂಗಾಗಿ ಆತನ ಮೇಲಿನ ಭಕ್ತಿಯಲ್ಲಿ ಭಾವಪರವಶನಾಗಿ ಈತ ದೇವಸ್ಥಾನದ ಮೆಟ್ಟಿಲು ಬಿಟ್ಟು ಕೋರ್ಟ್ ಮೆಟ್ಟಿಲು ಹತ್ತಿ ತನ್ನ ವಾದವನ್ನು ಮುಂದಿಟ್ಟಿದ್ದಾನೆ. ಅದೇನಪ್ಪಾ ಅಂದ್ರೆ, ನಮ್ಮ ಭಾರತೀಯರು ಕೋಟ್ಯಂತರ ದೇವರುಗಳನ್ನು ನೋಡಿ ಕನ್ಫ್ಯೂಸ್ ಆಗಿದ್ದಾರಂತೆ. ಅದಕ್ಕೆ ಒಂದೇ ದೇವರನ್ನು ನಂಬಬೇಕು ಅನ್ನೋದು ಈ ವಕೀಲನ ವಾದ. ಹೀಗೆ ಥೇಟು ನಮ್ಮ ಮೋದಿ ಅವರ ಶೈಲಿಯಲ್ಲಿ 'ಒನ್ ನೇಶನ್, ಒನ್ ಭಗವಾನ್' ಅನ್ನೋ ವಾದವನ್ನು ಇಟ್ಟುಕೊಂಡು, ಜನರ ಗೊಂದಲವನ್ನು ನಿವಾರಿಸಲು ಈ ಅನುಕೂಲ ಚಂದ್ರ ಅನ್ನೋ ಮಹಾನುಭಾವನನ್ನು ಪ್ರಪಂಚದ ಏಕೈಕ ದೇವರು ಅಂತ ಆರಿಸಬೇಕು, ಎಲ್ಲರೂ ಅವನನ್ನೇ ಪೂಜೆ ಮಾಡಬೇಕು ಅಂತ ಕೋರ್ಟ್‌ನಲ್ಲಿ ವಾದ ಮಾಡಿದ್ದಾನೆ. 'ಯೇ ವಾದಾ ಹೈ ಮೇರಾ' ಅಂತ ವಾದ ಮಾಡಿದ ಈ ವಕೀಲನನ್ನು ನೋಡಿದ ನ್ಯಾಯಾಧೀಶರಿಗೆ ಪಿತ್ತ ನೆತ್ತಿಗೇರಿ, ಆ ಮನುಷ್ಯನನ್ನು 'ನೀನು ಪರಮಾತ್ಮ ಅಂತ ಹೇಳಿದ ತಕ್ಷಣ ಎಲ್ಲರೂ ಒಪ್ಪಿಕೊಳ್ಳಬೇಕಾ, ನೀನ್ಯಾವನಯ್ಯ ಜನರಿಗೆ ಇಂಥವರನ್ನೇ ಪೂಜೆ ಮಾಡಿ ಅಂತ ಹೇಳೋಕೆ?' ಅಂತ ಉಗಿದು, ಆತನ ಮಾತಿಗೆ ಲಕ್ಷ್ಯ ಕೊಡದೆ, ಬದಲಾಗಿ ಆತನಿಗೆ ಒಂದು ಲಕ್ಷ ದಂಡ ಕಕ್ಕಲು ಆದೇಶ ನೀಡಿದ್ದಾರೆ. ಇದು ಅನುಕೂಲ್ ಚಂದ್ರ ಅನ್ನೋ ಆ ದೇವಮಾನವನ 'ಅನುಕೂಲಸಿಂಧು ಆಟ' ಅನ್ನೋದು ಮೇಲ್ನೋಟಕ್ಕೆ ಎಲ್ಲರಿಗೂ ಗೊತ್ತಾಗುತ್ತದಾದರೂ, ಇಂಥ ವಿಷಯ ಇಟ್ಟುಕೊಂಡು ಕೋರ್ಟ್ ಮೆಟ್ಟಿಲೇರುವ ಮಹಾನುಭಾವ ವಕೀಲನಿಗೆ ಮಾತ್ರ ಮೆಟ್ಟಿ....ಲು ಏರೋಕೆ ಬಿಡಬಾರದಿತ್ತು ಅನ್ನೋದಷ್ಟೇ ಆಸ್ತಿಕರ ಅಭಿಪ್ರಾಯ.

ಸಂಪಾದಕರ ಸದ್ಯಶೋಧನೆ

ಇದು ಭಾಗ್ಯ.. ಇದು ಭಾಗ್ಯ!

ಕೆಲವರು ಅದೃಷ್ಟ ಮಾಡಿ ಹುಟ್ಟಿರುತ್ತಾರೆ. ಅದೃಷ್ಟವೇ ಅವರನ್ನು ಹುಡುಕಿಕೊಂಡು ಹೋಗಿ, ಮಲಗಿದ್ದವರನ್ನು ಎಬ್ಬಿಸಿ, ಕೈಹಿಡಿದು ತಂದು ಸಿಂಹಾಸನದ ಮೇಲೆ ಕುಳ್ಳಿರಿಸುತ್ತದೆ. ನೀವು ಗೆರಾಲ್ಡ್ ಫೋರ್ಡ್ ಹೆಸರನ್ನು ಕೇಳಿರಬಹುದು. ಇವರು ಅಮೆರಿಕದ 38ನೇ (1974ರಿಂದ 1977ರವರೆಗೆ) ಅಧ್ಯಕ್ಷರಾಗಿದ್ದರು. ಇವರು ಅದೆಂಥ ಅದೃಷ್ಟಶಾಲಿ ಎಂದರೆ, ಇವರು ಅಧ್ಯಕ್ಷರಾಗುವ ಮೊದಲು ಉಪಾಧ್ಯಕ್ಷರಾಗಿದ್ದರು. ಆ ಎರಡೂ ಹುದ್ದೆಗಳು, ಅಂದರೆ ಉಪಾಧ್ಯಕ್ಷ ಮತ್ತು ಅಧ್ಯಕ್ಷ ಹುದ್ದೆಗಳು ಇವರನ್ನು ಹುಡುಕಿಕೊಂಡು ಬಂದವು. ಇವರು ಚುನಾವಣೆಯನ್ನು ಸೆಣಸದೇ, ಜನರಿಂದ ಆಯ್ಕೆ ಆಗದೇ, ಅಮೆರಿಕದ ಉಪಾಧ್ಯಕ್ಷರೂ ಆದರು, ಆನಂತರ ಪುನಃ ಚುನಾವಣೆಗೆ ನಿಲ್ಲದೇ ಅಧ್ಯಕ್ಷರೂ ಆದರು. ಅಮೆರಿಕದ ಇತಿಹಾಸದಲ್ಲೇ, ಚುನಾವಣೆಗೆ ನಿಲ್ಲದೇ, ಜನರಿಂದ ಆಯ್ಕೆ ಆಗದೇ, ಉಪಾಧ್ಯಕ್ಷರಾದವರು, ಅಧ್ಯಕ್ಷರಾದವರೆಂದರೆ ಅವರೊಬ್ಬರೇ! ಅದ್ಯಾವ ಗಳಿಗೆಯಲ್ಲಿ ಅವರ ತಾಯಿ ಈ ಪುಣ್ಯಾತ್ಮನನ್ನು ಹೆತ್ತಳೋ ಏನೋ? ಅದೃಷ್ಟ ಅಂದರೆ ಇದು! ರಿಚರ್ಡ್ ನಿಕ್ಸನ್ ಅಧ್ಯಕ್ಷರಾಗಿದ್ದಾಗ, ಅವರಿಗೆ ಸ್ಪೈರೋ ಅಗ್ನೆವ್ ಎಂಬುವವರು ಉಪಾಧ್ಯಕ್ಷರಾದ್ದರು. 1973ರಲ್ಲಿ ಅಗ್ನೆವ್ ಅವರು ಮೇರಿಲ್ಯಾಂಡ್ ಗವರ್ನರ್ ಅವರಿಂದ 30,000 ಡಾಲರ್ ಲಂಚ ಸ್ವೀಕರಿಸಿದ ಆಪಾದನೆ ಕೇಳಿಬಂದಾಗ ಬೇರೆ ದಾರಿಯಿಲ್ಲದೇ ರಾಜೀನಾಮೆ ನೀಡುತ್ತಾರೆ. ಈ ಸಂದರ್ಭದಲ್ಲಿ ನಿಕ್ಸನ್, ಅಗ್ನೆವ್ ಅವರ ಉತ್ತರಾಧಿಕಾರಿಯಾಗಿ ಯಾರನ್ನು ಆಯ್ಕೆ ಮಾಡಬೇಕೆಂದು ಹಿರಿಯ ನಾಯಕರ ಜತೆ ಸಮಾಲೋಚಿಸಿದಾಗ, ಸರ್ವಸಮ್ಮತವಾಗಿ ಮೂಡಿಬಂದ ಹೆಸರೆಂದರೆ ಗೆರಾಲ್ಡ್ ಫೋರ್ಡ್ ಅವರದು. ಈ ವಿಷಯವನ್ನು ಫೋರ್ಡ್‌ಗೆ ತಿಳಿಸಿದಾಗ ಅವರು ಒಪ್ಪಿಗೆ ಸೂಚಿಸುತ್ತಾರೆ. ಆ ಸಂದರ್ಭದಲ್ಲಿ ಫೋರ್ಡ್, 'ನನ್ನ ಜೀವನದ ಆಸೆ ಈಡೇರಿತು. ನನ್ನ ರಾಜಕೀಯ ಜೀವನಕ್ಕೆ ಇದಕ್ಕಿಂತ ಉತ್ತಮ ಅಂತ್ಯ ಇಲ್ಲ' ಎಂಬ ಸಂತೃಪ್ತಿಯ ಮಾತುಗಳನ್ನು ತಮ್ಮ ಪತ್ನಿಗೆ ಹೇಳುತ್ತಾರೆ. 25ನೇ ತಿದ್ದುಪಡಿ ಮೂಲಕ ಫೋರ್ಡ್ ಅವರನ್ನು ಉಪಾಧ್ಯಕ್ಷರನ್ನಾಗಿ ಮಾಡಬಹುದು ಎಂಬ ಪ್ರಸ್ತಾವನೆಯನ್ನು ಸೆನೆಟ್ ಮುಂದಿಟ್ಟು, ಸದನದಲ್ಲಿ ಬಹುಮತ ಸದಸ್ಯರ ಒಪ್ಪಿಗೆ ಪಡೆದ ನಂತರ, ಅವರು ಉಪಾಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸುತ್ತಾರೆ. ಆ ಸಂದರ್ಭದಲ್ಲಿ ಅವರು ವರ್ಜಿನಿಯಾದಲ್ಲಿ ವಾಸಿಸುತ್ತಿರುತ್ತಾರೆ. ವಾಷಿಂಗ್ಟನ್‌ನಲ್ಲಿರುವ ಉಪಾಧ್ಯಕ್ಷರ ಮನೆಯನ್ನು ತಮಗೆ ಬೇಕಾದಂತೆ ಬದಲಿಸಲು ಸೂಚಿಸಿ, ಸರಕಾರಿ ಗೆಸ್ಟ್ ಹೌಸಿನಲ್ಲಿ ವಾಸಿಸುತ್ತಾರೆ. ಫೋರ್ಡ್ ಉಪಾಧ್ಯಕ್ಷರಾಗಿ ಅಧಿಕಾರ ಸ್ವೀಕರಿಸುತ್ತಿದ್ದಂತೆ, ವಾಟರ್‌ಗೇಟ್ ಹಗರಣ ಬಯಲಾಗಿ ಅಮೆರಿಕದ ರಾಜಕಾರಣದಲ್ಲಿ ದೊಡ್ಡ ಕೋಲಾಹಲವೇ ಉಂಟಾಗುತ್ತದೆ. ದಿನದಿಂದ ದಿನಕ್ಕೆ ಈ ಹಗರಣಕ್ಕೆ ಸಂಬಂಧಿಸಿದ ಹೊಸ ಹೊಸ ದಾಖಲೆಗಳು ಬಹಿರಂಗವಾಗಿ, ನಿಕ್ಸನ್ ಕುರ್ಚಿ ಅಲುಗಾಡಲು ಆರಂಭವಾಗುತ್ತದೆ. ಅಧ್ಯಕ್ಷ ಹುದ್ದೆ ಉಳಿಸಿಕೊಳ್ಳಲು ಬಹಳ ಕಸರತ್ತು ನಡೆಸಿದರೂ, ರಾಜೀನಾಮೆ ನೀಡುವುದು ಅನಿವಾರ್ಯ ಎಂಬುದು ನಿಕ್ಸನ್‌ಗೆ ಖಾತ್ರಿ ಆಗುತ್ತದೆ. ಈ ಸಂದರ್ಭದಲ್ಲಿ ಚೀಫ್ ಆಫ್ ಸ್ಟಾಫ್, ಫೋರ್ಡ್ ಅವರನ್ನು ಸಂಪರ್ಕಿಸಿ, 'ಅಧ್ಯಕ್ಷರು ರಾಜೀನಾಮೆ ನೀಡಬೇಕಾಗಬಹುದು, ಯಾವುದಕ್ಕೂ ನೀವು ಆ ಹುದ್ದೆಯನ್ನು ನಿಭಾಯಿಸುವುದಕ್ಕೆ ಸಿದ್ಧರಾಗಿರಿ' ಎಂದು ಸೂಚಿಸುತ್ತಾರೆ. ಅದಾಗಿ ಒಂದು ವಾರಕ್ಕೆ ನಿಕ್ಸನ್ ರಾಜೀನಾಮೆ ನೀಡುತ್ತಾರೆ. ಅದೇ ದಿನ ಫೋರ್ಡ್ ಅಧ್ಯಕ್ಷರಾಗಿ ಅಧಿಕಾರದ ಪ್ರಮಾಣ ಸ್ವೀಕರಿಸುತ್ತಾರೆ. ಉಪಾಧ್ಯಕ್ಷರಾದರೂ ತಮ್ಮ ಅಧಿಕೃತ ನಿವಾಸದಲ್ಲಿ ಒಂದೂ ದಿನ ಉಳಿಯದೇ, ಅಧ್ಯಕ್ಷರಾಗಿ ಫೋರ್ಡ್ ವೈಟ್ ಹೌಸಿಗೆ ಹೋಗುತ್ತಾರೆ. ಅಮೆರಿಕದ ಅಧ್ಯಕ್ಷರಾಗಲು ಎಲ್ಲರೂ ಎಷ್ಟೆಲ್ಲಾ ಕಸರತ್ತು ಮಾಡುತ್ತಾರೆ. ಆದರೆ ಫೋರ್ಡ್‌ಗೆ ಮಾತ್ರ ಎರಡೂ ಹುದ್ದೆ ಅನಾಯಾಸವಾಗಿ ಬಂದಿದ್ದು ಅದೃಷ್ಟದಲ್ಲಿ ಅದೃಷ್ಟ!

ಶುರುವಾಗಲಿದೆ ನಿಖಿಲ್ ಪಟ್ಟಾಭಿಷೇಕ ಯಾತ್ರೆ

ಮೂರ್ತಿಪೂಜೆ

ಆರ್.ಟಿ.ವಿಠ್ಠಲಮೂರ್ತಿ
vveditoped@gmail.com

ಮೊಮ್ಮಗ ನಿಖಿಲ್ ಕುಮಾರಸ್ವಾಮಿಯವರ ಪಟ್ಟಾಭಿಷೇಕ ಯಾತ್ರೆಗೆ ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡರು ಅಳೆದೂ-ಸುರಿದೂ ಗ್ರೀನ್ ಸಿಗ್ನಲ್ ತೋರಿಸಿದ್ದಾರಂತೆ. ಹಾಗೆಂಬ ವರ್ತಮಾನ ಪಕ್ಷದ ಹೆಡ್ಡಾಫೀಸಿನಿಂದ ಹೊರಬೀಳುತ್ತಿದ್ದಂತೆಯೇ ಜೆಡಿಎಸ್ ಪಾಳಯದಲ್ಲಿ ಸಂಚಲನ ಶುರುವಾಗಿದೆ. ಅಂದ ಹಾಗೆ ಲೋಕಸಭಾ ಚುನಾವಣೆಯಲ್ಲಿ ಗೆದ್ದು ಕುಮಾರಸ್ವಾಮಿ ದಿಲ್ಲಿಗೆ ಹೋದ ನಂತರ ಕರ್ನಾಟಕದಲ್ಲಿ ಪಕ್ಷದ ಅಧ್ಯಕ್ಷ ಸ್ಥಾನವನ್ನು ನಿಖಿಲ್ ಕುಮಾರಸ್ವಾಮಿಯವರಿಗೆ ನೀಡಬೇಕು ಎಂಬ ಲೆಕ್ಕಾಚಾರ ಪದ್ಮನಾಭ ನಗರದ ಗೌಡರ ನಿವಾಸದಲ್ಲಿ ಶುರುವಾಗಿತ್ತು. ಇದಕ್ಕೆ ಪೂರಕವಾಗಿ ಕುಮಾರಸ್ವಾಮಿಯವರು ಸಿದ್ದು ಸರಕಾರದ ವಿರುದ್ಧ ಅಗ್ರೆಸಿವ್ ಆಗಿ ದಾಳಿ ಪ್ರಾರಂಭಿಸಿದ್ದರು. ಈ ದಾಳಿ ರಾಜ್ಯದ ಗಮನ ಸೆಳೆಯುವ ಕಾಲಕ್ಕೆ ಸರಿಯಾಗಿ ನಿಖಿಲ್ ಪಟ್ಟಾಭಿಷೇಕ ಕಾರ್ಯ ಮುಗಿದರೆ, ಈ ಜಾಗದಲ್ಲಿ ಅವರು ಸೆಟ್ಲಾಗುವುದು ಸುಲಭ ಎಂಬುದು ಈ ದಾಳಿಯ ಹಿಂದಿನ ಲೆಕ್ಕಾಚಾರವಾಗಿತ್ತು.

ಆದರೆ ಕುಮಾರಸ್ವಾಮಿಯವರು ಒಂದು ಕಡೆಯಿಂದ ದಾಳಿ ಪ್ರಾರಂಭಿಸುತ್ತಿದ್ದಂತೆಯೇ ಇತ್ತ ಸಿಎಂ ಸಿದ್ದು ಮತ್ತು ಡಿಸಿಎಂ ಡಿಕೆಶಿ ತಿರುಗಿಬಿದ್ದು ಜೆಡಿಎಸ್ ಪಾಳಯವನ್ನೇ ಛಿದ್ರ ಮಾಡಲು ಹೊರಟರು. ಪರಿಣಾಮ? ಇನ್ನೇನು ಜೆಡಿಎಸ್‌ನ ಹನ್ನೆರಡೋ, ಹದಿಮೂರೋ ಶಾಸಕರು ಪಕ್ಷ ತೊರೆದು ಅಸೆಂಬ್ಲಿಯಲ್ಲಿ ಪ್ರತ್ಯೇಕವಾಗಿ ಕೂರಲು ಸಜ್ಜಾಗುತ್ತಿದ್ದಾರೆ ಎಂಬ ವರ್ತಮಾನ ಹರಡಿಕೊಂಡಿತು. ಇದಕ್ಕೆ ಸರಿಯಾಗಿ ನಿಖಿಲ್ ಪಟ್ಟಾಭಿಷೇಕದ ವಿಷಯದಲ್ಲಿ ಪಕ್ಷದ ಹಿರಿಯ ಶಾಸಕರಿಗೆ ಅಸಮಾಧಾನ ಶುರುವಾಗಿದೆ. ನಾವು ಕುಮಾರಣ್ಣನ ಹಿಂದೆ ನಿಲ್ಲುವುದು ಬೇರೆ, ನಿಖಿಲ್ ಕುಮಾರಸ್ವಾಮಿಯವರ ಹಿಂದೆ ನಿಲ್ಲುವುದು ಹೇಗೆ? ಅಂತ ಅವರು ಕಿರಿಕಿರಿ ಮಾಡಿಕೊಂಡಿದ್ದಾರೆ ಎಂಬಂಥ ಮಾತುಗಳು ಹರಿದಾಡತೊಡಗಿವೆ.

ಯಾವಾಗ ಇಂಥ ಕಲಸುಮೇಲೋಗರ ಶುರುವಾಯಿತೋ, ಆಗ ದೊಡ್ಡ ಗೌಡರು ಕುಮಾರಸ್ವಾಮಿಯವರಿಗೆ ಸಿಗ್ನಲ್ಲು ಕೊಟ್ಟು, ''ರಾಜ್ಯ ರಾಜಕಾರಣದ ಬಗ್ಗೆ ತಲೆ ಕೆಡಿಸಿಕೊಳ್ಳುವುದನ್ನು ಬಿಟ್ಟು ದಿಲ್ಲಿಯಲ್ಲಿ ಸೆಟ್ಲಾಗುವುದು ಒಳ್ಳೆಯದು. ಯಾಕೆಂದರೆ ಪ್ರಧಾನಿ ನರೇಂದ್ರ ಮೋದಿಯವರು ನಂಬಿಕೆ ಇಟ್ಟು ಕೇಂದ್ರ ಸಂಪುಟದಲ್ಲಿ ದೊಡ್ಡ ಖಾತೆ ಕೊಟ್ಟಿದ್ದಾರೆ. ಅ ಕಡೆ ಗಮನ ಕೊಟ್ಟು ಕೆಲಸ ಮಾಡಿದರೆ ಒಳ್ಳೆಯದು'' ಎಂದಿದ್ದಾರೆ.

ಹೀಗೆ ದೊಡ್ಡ ಗೌಡರು ಸಿಗ್ನಲ್ಲು ಕೊಟ್ಟ ನಂತರ ಕುಮಾರಣ್ಣ ಕರ್ನಾಟಕದ ಮೇಲೆ ಗಮನ ಕಡಿಮೆ ಮಾಡಿದ್ದಾರೆ. ಅದೇ ಕಾಲಕ್ಕೆ ನಿಖಿಲ್ ಪಟ್ಟಾಭಿಷೇಕ ಕಾರ್ಯವೂ ಮುಂದಕ್ಕೆ ಹೋಗಿದೆ. ಆದರೆ ಇದಾಗಿ ಆರೆಂಟು ತಿಂಗಳು ಕಳೆದ ಮೇಲೆ ಚಿತ್ರ ಬದಲಾಗಿದೆ. ಒಂದು ಕಡೆಯಿಂದ ದೊಡ್ಡ ಗೌಡರು ಮತ್ತು ಕುಮಾರಸ್ವಾಮಿಯವರಿಗೆ ನಿಖಿಲ್ ಪಟ್ಟಾಭಿಷೇಕದ ಮುಹೂರ್ತ ಹತ್ತಿರವಾಗಿದೆ ಅನ್ನಿಸುತ್ತಿದ್ದರೆ, ಮತ್ತೊಂದೆಡೆಯಿಂದ ಜೆಡಿಎಸ್‌ನ ಬಹುತೇಕ ಶಾಸಕರಿಗೆ, 'ಪಕ್ಷ ಕಟ್ಟುತ್ತಿರುವವರೇ ದೊಡ್ಡ ಗೌಡರು ಮತ್ತು ಕುಮಾರಸ್ವಾಮಿ. ಅದಕ್ಕೆ ಅಗತ್ಯವಾದ ಬಂಡವಾಳ ಹಾಕುವವರೂ ಅವರೇ. ಹೀಗಾಗಿ ನಿಖಿಲ್ ಕುಮಾರಸ್ವಾಮಿ ಪಕ್ಷಾಧ್ಯಕ್ಷರಾಗಿ ಬಂದು ಕೂತರೆ ತಪ್ಪೇನು?' ಅನ್ನಿಸತೊಡಗಿದೆ.

ಇದೇ ರೀತಿ, ಪಕ್ಷ ತೊರೆದು ಕೈ ಪಾಳಯ ಸೇರುವ ಲೆಕ್ಕಾಚಾರದಲ್ಲಿದ್ದ ಹಲವರಿಗೆ ಇದ್ದಕ್ಕಿದ್ದಂತೆ ಜ್ಞಾನೋದಯವಾಗಿದೆ. ಕಾರಣ? ಇವತ್ತು ಕಾಂಗ್ರೆಸ್ಸಿನಲ್ಲಿ ದಿನ ಕಳೆದಂತೆ ಸಿದ್ದರಾಮಯ್ಯ ಬಲಿಷ್ಠರಾಗುತ್ತಿರುವಾಗ ತಾವು ಕಾಂಗ್ರೆಸ್ಸಿಗೆ ಹೋದರೂ ಶಕ್ತಿ ಹೆಚ್ಚಾಗುವುದಿಲ್ಲ. ಹಾಗೆಯೇ ತಾವು ಪಕ್ಷ ತೊರೆದರೂ ಜೆಡಿಎಸ್ ಕಾರ್ಯಕರ್ತರ ಪಡೆ ತಪ್ಪಿಯೂ ತಮ್ಮ ಹಿಂದೆ ಬರುವುದಿಲ್ಲ. ಹೀಗಾಗಿ ಜೆಡಿಎಸ್ ತೊರೆಯುವುದು ಎಂದರೆ ರಾಜಕೀಯ ಭವಿಷ್ಯಕ್ಕೆ ಫಾಲಿಡಾಲ್ ಕೊಡುವುದೆಂದೇ ಅರ್ಥ ಎಂಬ ಲೆಕ್ಕಾಚಾರ. ಅರ್ಥಾತ್, ಈಗ ಸನ್ನಿವೇಶ ಕೂಡಿ-ಕಳೆದು ನಿಖಿಲ್ ಕುಮಾರಸ್ವಾಮಿ ಅವರ ಪಟ್ಟಾಭಿಷೇಕಕ್ಕೆ ಪ್ರಶಸ್ತವಾಗತೊಡಗಿದೆ.

ಹಾಗಂತ ಏಕಾಏಕಿ ತಲೆಯ ಮೇಲೆ ಕಿರೀಟ ಇಟ್ಟರೆ ನಿಖಿಲ್ ಕುಮಾರಸ್ವಾಮಿ ಅವರಿಗೂ ಅದರ ಭಾರ ಹೊರುವುದು ಕಷ್ಟ ಆಗಬಾರದಲ್ಲ? ಹಾಗಂತಲೇ ದೊಡ್ಡ ಗೌಡರು ಪಟ್ಟಾಭಿಷೇಕಕ್ಕೂ ಮುನ್ನ ಇಡೀ ರಾಜ್ಯದುದ್ದ ಪ್ರವಾಸ ಮಾಡುವಂತೆ ಮೊಮ್ಮಗನಿಗೆ ಸೂಚಿಸಿದ್ದಾರೆ. ಜೆಡಿಎಸ್ ಪಾಳಯದ ಪ್ರಕಾರ, ಜೂನ್ ತಿಂಗಳಲ್ಲಿ ನಿಖಿಲ್ ಕುಮಾರಸ್ವಾಮಿ ಅವರ ರಾಜ್ಯ ಪ್ರವಾಸ ಆರಂಭವಾಗಲಿದೆ. ಕುತೂಹಲದ ಸಂಗತಿ ಎಂದರೆ ನಿಖಿಲ್ ಅವರನ್ನು ಹೊತ್ತೊಯ್ಯುವ ರಥ ಮೊದಲು ಎಲ್ಲಿಂದ ಹೊರಡಬೇಕು. ರಾಜ್ಯದ ಯಾವ್ಯಾವ ಭಾಗಗಳಲ್ಲಿ ಸಂಚರಿಸಬೇಕು? ಅನ್ನುವುದರ ನೀಲನಕ್ಷೆ ದೊಡ್ಡ ಗೌಡರ ಕಣ್ಣಳತೆಯಲ್ಲೇ ಸಿದ್ಧವಾಗುತ್ತಿದೆ.

ಅಗರ್ವಾಲ್ ಅವರಿಗೇಕೆ ಕೋಪ?

ಈ ಮಧ್ಯೆ ರಾಜ್ಯ ಬಿಜೆಪಿಯ ಉಸ್ತುವಾರಿ ರಾಧಾಮೋಹನ ದಾಸ್ ಅಗರ್ವಾಲ್ ಅವರಿಗೆ ಮಿತಿಮೀರಿದ ಕೋಪ ಬಂದಿದೆ. ಕಾರಣ? ಭಾರತ-ಪಾಕಿಸ್ತಾನದ ನಡುವಣ 'ಮಿನಿ ವಾರ್' ನಂತರ ಸಿದ್ದರಾಮಯ್ಯ ಬ್ರಿಗೇಡ್‌ನ ಪ್ರಿಯಾಂಕ್ ಖರ್ಗೆ, ಸಂತೋಷ್ ಲಾಡ್ ಮತ್ತಿತರರು ಕೇಂದ್ರ ಸರಕಾರದ ವಿರುದ್ಧ ಮುಗಿಬಿದ್ದಿದ್ದಾರೆ. ಇಡೀ ಎಪಿಸೋಡಿನಲ್ಲಿ ಕೇಂದ್ರ ಸರಕಾರ ಹೇಗೆ ವಿಫಲವಾಗಿದೆ? ನಾಲ್ಕು ದಿನ ಯುದ್ಧ ನಡೆಸಿದ ನರೇಂದ್ರ ಮೋದಿ ಅವರಿಗಿಂತ, ಪಾಕಿಸ್ತಾನವನ್ನು ಹೋಳು ಮಾಡಿ 93 ಸಾವಿರ ಸೈನಿಕರನ್ನು ಸೆರೆ ಹಿಡಿಯುವಂತೆ ಮಾಡಿದ ಇಂದಿರಾ ಗಾಂಧಿ ಎಷ್ಟು ಗ್ರೇಟು ಎಂಬಲ್ಲಿಯ ತನಕ ಅವರು ಬಾರಿಸುತ್ತಿದ್ದರೆ ರಾಜ್ಯ ಬಿಜೆಪಿ ತಕ್ಕ ಉತ್ತರ ನೀಡುತ್ತಿಲ್ಲ ಎಂಬುದು ರಾಧಾಮೋಹನದಾಸ್ ಅಗರ್ವಾಲ್ ಅವರ ಸಿಟ್ಟು.

ಬಿಜೆಪಿ ಮೂಲಗಳ ಪ್ರಕಾರ, ಅಗರ್ವಾಲ್ ಅವರ ಆಕ್ರೋಶಕ್ಕೆ ಅಮಿತ್ ಶಾ ತೆಗೆದುಕೊಂಡ ಕ್ಲಾಸು ಕಾರಣ. ''ಅಲ್ರೀ ನಿಮ್ಮ ಉಸ್ತುವಾರಿಯಲ್ಲಿರುವ ಕರ್ನಾಟಕದ ಬಿಜೆಪಿ ಘಟಕ ಯಾಕೆ ನಿರುತ್ಸಾಹದಿಂದಿದೆ? ಅಲ್ಲಿರುವ ನಮ್ಮ ಸೋಷಿಯಲ್ ಮೀಡಿಯಾ ಘಟಕ ಎಲ್ಲಿ ನಾಪತ್ತೆಯಾಗಿದೆ? ಈ ಬಗ್ಗೆ ಅಲ್ಲಿಂದಲೇ ನನಗೆ ದೂರುಗಳು ಬರುತ್ತಿವೆ. ಹೀಗಾಗಿ ಅಲ್ಲಿಗೆ ಹೋಗಿ ಸರಿ ಮಾಡಿ ಬನ್ನಿ'' ಅಂತ ಅಮಿತ್ ಶಾ ಅವರು ಅಗರ್ವಾಲ್ ಅವರಿಗೆ ಕ್ಲಾಸು ತೆಗೆದುಕೊಂಡಿದ್ದಾರೆ.

ಹೀಗೆ ಅವರು ಕ್ಲಾಸು ತೆಗೆದುಕೊಂಡ ನಂತರ ತಿರಂಗಾ ಯಾತ್ರೆಗೆ ಅಂತ ಕರ್ನಾಟಕಕ್ಕೆ ಬಂದಿದ್ದ ಅಗರ್ವಾಲ್ ಗುರ್ರ್ ಅಂದಿದ್ದಾರೆ. ''ನೋಡ್ರೀ, ಮನಮೋಹನ್ ಸಿಂಗ್ ಪ್ರಧಾನಿಯಾಗಿದ್ದಾಗ ಪಾಕಿಸ್ತಾನ ಆಡಿದ ಆಟ ಎಷ್ಟು? ಭಯೋತ್ಪಾದಕರನ್ನು ಬಳಸಿ ಜನರನ್ನು ಕೊಲ್ಲಿಸಿದ ಘಟನೆಗಳೆಷ್ಟು? ಆ ಬಗ್ಗೆ ಮಾತನಾಡ್ರೀ'' ಎಂದು ಗುಡುಗಿದ್ದಾರೆ. ಅಷ್ಟೇ ಅಲ್ಲ, 1971ರಲ್ಲಿ ಪಾಕಿಸ್ತಾನದ ವಿರುದ್ಧ ಯುದ್ಧ ನಡೆಸಿದ ಇಂದಿರಾ ಗಾಂಧಿ ಗ್ರೇಟು ಅಂತ ಕಾಂಗ್ರೆಸ್‌ನವರು ಕೊಚ್ಚಿಕೊಳ್ಳುತ್ತಾರಲ್ಲ? ಹಾಗಿದ್ದರೆ ಸೆರೆ ಹಿಡಿದ 93 ಸಾವಿರ ಸೈನಿಕರನ್ನೇಕೆ ಬಿಡುಗಡೆ ಮಾಡಿದರು? ಯುದ್ಧ ನಡೆಸಿ ಗೆದ್ದರು ಅಂದ ಮೇಲೆ ಪಾಕ್ ಆಕ್ರಮಿತ ಕಾಶ್ಮೀರವನ್ನೇಕೆ ವಶಪಡಿಸಿಕೊಳ್ಳಲಿಲ್ಲ? ಎಂಬುದನ್ನೂ ಕೇಳಿ'' ಎಂದು ತಾಕೀತು ಮಾಡಿದ್ದಾರೆ.

ಯಾವಾಗ ರಾಧಾಮೋಹನದಾಸ್ ಅಗರ್ವಾಲ್ ಅವರು ಈ ರೀತಿ ತಾರಾಮಾರಾ ಬಡಿದು ಹೋದರೋ, ರಾಜ್ಯ ಬಿಜೆಪಿಯ ನಾಯಕರು ಭಾರಿ ಏರ್ ಸ್ಟ್ರೈಕಿಗೆ ಸಜ್ಜಾಗಿದ್ದಾರೆ. ಅಷ್ಟೇ ಅಲ್ಲ, ಕಳೆದ ಶುಕ್ರವಾರ ಕಾಂಗ್ರೆಸ್ ಶಾಸಕ ಕೊತ್ತೂರು ಮಂಜುನಾಥ್ ಅವರು ಯುದ್ಧದ ಬಗ್ಗೆ ಎಕ್ಸ್‌ಪರ್ಟ್ ಒಪೀನಿಯನ್ ಕೊಟ್ಟಿದ್ದೇ ತಡ, ರಮ್ಮಂತ ಏರ್‌ಸ್ಟ್ರೈಕು ಮಾಡಿ ತಮ್ಮ ಬತ್ತಳಿಕೆಯಲ್ಲಿದ್ದ ಬ್ರಹ್ಮೋಸ್ ಕ್ಷಿಪಣಿಗಳನ್ನು ಅವರ ಮೇಲೆ ಉದುರಿಸಿ ಸಮಾಧಾನ ಪಟ್ಟುಕೊಂಡಿದ್ದಾರೆ.

ಕುಮಾರಣ್ಣನಿಗೆ ರೆಡ್ಡಿಗಾರು ಟಾನಿಕ್

ಈ ಮಧ್ಯೆ ಕೇಂದ್ರ ಉಕ್ಕು ಮತ್ತು ಕೈಗಾರಿಕಾ ಸಚಿವ ಎಚ್.ಡಿ. ಕುಮಾರಸ್ವಾಮಿ ಖುಷಿಯಾಗಿದ್ದಾರೆ. ಅವರ ಖುಷಿಗೆ ಕರ್ನಾಟಕದ ಸಾರಿಗೆ ಸಚಿವರಾದ ರಾಮಲಿಂಗಾರೆಡ್ಡಿ ಅವರು ಕಾರಣ. ಯಾಕೆಂದರೆ ಕುಮಾರಸ್ವಾಮಿ ಅವರು ಕೇಂದ್ರ ಸಚಿವರಾಗಿ ಹತ್ತಿರತ್ತಿರ ಒಂದು ವರ್ಷ ಕಳೆಯುತ್ತಾ ಬಂದರೂ ಸಿಎಂ ಸಿದ್ದರಾಮಯ್ಯ ಸಂಪುಟದ ಪ್ರಮುಖ ಸಚಿವರ‍್ಯಾರೂ ಅವರ ಬಳಿ ಸುಳಿದಿರಲಿಲ್ಲ, ವೈಯಕ್ತಿಕ ನೆಲೆಯಲ್ಲಿ ಸಿಎಂ ಸಿದ್ದರಾಮಯ್ಯ ಮತ್ತು ತಮ್ಮ ನಡುವೆ ಸಂಘರ್ಷ ನಡೆಯುತ್ತಿರುವುದೇನೋ ಸರಿ, ಆದರೆ ರಾಜಕೀಯವನ್ನು ರಾಜಕೀಯ ಎಂದು ನೋಡಿ ರಾಜ್ಯದ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಚಿವರು ತಮ್ಮ ಬಳಿ ಪ್ರಪೋಸಲ್ಲು ತರಬಹುದಿತ್ತು ಎಂಬುದು ಕುಮಾರಸ್ವಾಮಿ ಯೋಚನೆ.

ಅಂದ ಹಾಗೆ ತೆಲಂಗಾಣದ ಮುಖ್ಯಮಂತ್ರಿ ರೇವಂತ ರೆಡ್ಡಿ, ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಅವರೆಲ್ಲ ಕುಮಾರಸ್ವಾಮಿಯವರನ್ನು ಭೇಟಿ ಮಾಡಿ ಪ್ರಪೋಸಲ್ಲುಗಳನ್ನು ಕೊಟ್ಟಿರುವುದಷ್ಟೇ ಅಲ್ಲ, ಪಾಸಿಟಿವ್ ರಿಸಲ್ಟನ್ನೂ ಪಡೆದುಕೊಂಡಿದ್ದಾರೆ. ಈ ಪೈಕಿ ರೇವಂತರೆಡ್ಡಿ ಅವರು ತಮ್ಮ ರಾಜ್ಯದ ಸಾರಿಗೆ ವ್ಯವಸ್ಥೆಯನ್ನು ಸುಧಾರಿಸಲು ಪ್ರಪೋಸಲ್ಲು ಕೊಟ್ಟರೆ, ನಾಯ್ಡುಗಾರು ತಮ್ಮ ರಾಜ್ಯದ ಕೈಗಾರಿಕೆಗಳಿಂದ ಹಿಡಿದು ಹಲವು ವಿಷಯಗಳ ಬಗ್ಗೆ ಕುಮಾರಸ್ವಾಮಿ ಅವರಿಗೆ ಪ್ರಪೋಸಲ್ಲುಗಳನ್ನು ಕೊಟ್ಟಿದ್ದಾರೆ. ಹೀಗಾಗಿ ಕರ್ನಾಟಕ ಸರಕಾರ ಕೂಡಾ ತಮ್ಮಿಂದ ಕೆಲಸ ಮಾಡಿಸಿಕೊಳ್ಳಲಿ ಎಂಬುದು ಕುಮಾರಸ್ವಾಮಿ ಇಚ್ಛೆ.

ಆದರೆ ಈ ವಿಷಯದಲ್ಲಿ ಕುಮಾರಸ್ವಾಮಿ ಬರೀ ಎದುರು ನೋಡಿದ್ದೇ ಬಂತು. ಇದ್ದುದರಲ್ಲಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಎರಡು ಬಾರಿ ಕುಮಾರಣ್ಣ ಅವರನ್ನು ಭೇಟಿ ಮಾಡಿ, ''ಕೇಂದ್ರದ ಮುಂದಿರುವ ನಮ್ಮ ಪೆಂಡಿಂಗ್ ಪ್ರಪೋಸಲ್ಲುಗಳ ಕಡೆ ನೋಡಿ. ಕರ್ನಾಟಕದಲ್ಲಿ ನಡೆಯುವ ಜಾಗತಿಕ ಬಂಡವಾಳ ಹೂಡಿಕೆದಾರರ ಸಮಾವೇಶಕ್ಕೆ ಬನ್ನಿ'' ಅಂತ ಆಹ್ವಾನಿಸಿದರೇ ಹೊರತು, ಯಾರೊಬ್ಬರೂ ಕಾಂಕ್ರೀಟ್ ಆಗಿ ಪ್ರಪೋಸಲ್ಲು ಕೊಟ್ಟಿಲ್ಲ ಎಂಬುದು ಕುಮಾರಣ್ಣನ ನೋವು.

ಇಂಥ ಟೈಮಿನಲ್ಲೇ ಕುಮಾರಸ್ವಾಮಿ ಅವರನ್ನು ದಿಲ್ಲಿಯ ಉದ್ಯೋಗ ಭವನದಲ್ಲಿ ಭೇಟಿ ಮಾಡಿದ ರಾಮಲಿಂಗಾರೆಡ್ಡಿ ಒಂದು ಪ್ರಪೋಸಲ್ಲು ಕೊಟ್ಟಿದ್ದಾರೆ. ದೇಶದ ವಿವಿಧ ರಾಜ್ಯಗಳಿಗೆ ಕೇಂದ್ರ ಸರಕಾರ ಕೊಡಲುದ್ದೇಶಿಸಿರುವ 14,500 ಇಲೆಕ್ಟ್ರಿಕಲ್ ಬಸ್ಸುಗಳ ಪೈಕಿ ಕರ್ನಾಟಕಕ್ಕೆ ಸಿಂಹಪಾಲು ಸಿಗಬೇಕು ಎಂಬುದು ಅವರ ಪ್ರಪೋಸಲ್ಲು. ಹೀಗೆ ಪ್ರಪೋಸಲ್ಲು ಕೊಡುವಾಗ ಮೂರು ಬೇಡಿಕೆಗಳನ್ನು ಮಂಡಿಸಿರುವ ರಾಮಲಿಂಗಾರೆಡ್ಡಿ, ''ಇವನ್ನು ಈಡೇರಿಸಿದರೆ ಇಲೆಕ್ಟ್ರಿಕ್ ಬಸ್ಸುಗಳನ್ನು ನಿರ್ವಹಿಸುವುದು ಸುಲಭ'' ಎಂದಿದ್ದಾರೆ. ಹೀಗೆ ಅವರು ತಮ್ಮನ್ನು ಭೇಟಿಯಾಗಿ ಪ್ರಪೋಸಲ್ಲು ಕೊಟ್ಟ ಬೆಳವಣಿಗೆಯಿಂದ ಕುಮಾರಸ್ವಾಮಿ ಎಷ್ಟು ಖುಷಿಯಾಗಿದ್ದಾರೆಂದರೆ, ಅದನ್ನು ಇಲಾಖೆಯ ಮಟ್ಟದಲ್ಲಿ ಮೂವ್ ಮಾಡಿರುವುದಷ್ಟೇ ಅಲ್ಲದೆ ಮೇಲಿಂದ ಮೇಲೆ ಅದರ ಬಗ್ಗೆ ವಿಚಾರಿಸುತ್ತಿದ್ದಾರಂತೆ. ಅಷ್ಟೇ ಅಲ್ಲ, ''ರಾಜಕೀಯಕ್ಕೂ ಅಭಿವೃದ್ಧಿಗೂ ಸಂಬಂಧ ಜೋಡಿಸದೆ ಇರುವುದನ್ನು ರೆಡ್ಡಿಗಾರು ಅವರಿಂದ ನೋಡಿ ಕಲಿಯಬೇಕು ಕಣ್ರೀ'' ಎನ್ನುತ್ತಿದ್ದಾರಂತೆ.

ದಿವಾಳಿಯ ಅಂಚಿನಲ್ಲಿ ಭಯೋತ್ಪಾದಕ ಪಾಕ್

ಭಯೋತ್ಪಾದನೆಯ ಸಂತಾನಗಳ ನೆಲವೇ ಪಾಕಿಸ್ತಾನ. ಅದು 'ನಾಗರಿಕ ರಾಷ್ಟ್ರ' ಎನಿಸಿಕೊಳ್ಳುವುದಕ್ಕೆ ನಾಲಾಯಕ್ ಎಂದು ಜಗತ್ತಿಗೆ ಎಂದೋ ಗೊತ್ತಾಗಿದೆ. ಪಾಕ್‌ನ ಭಯೋತ್ಪಾದಕ ಕೃತ್ಯಗಳಿಂದಾಗಿ ಜಾಗತಿಕ ಮಟ್ಟದಲ್ಲಿ ಆತಂಕ ಮೂಡಿದೆ. ಆದ್ದರಿಂದ ಅಂತಾರಾಷ್ಟ್ರೀಯ ಸಮುದಾಯವು ಆರ್ಥಿಕ ನೆರವು ಮತ್ತು ಸಾಲವನ್ನು ನಿಲ್ಲಿಸಿ ಪಾಕಿಸ್ತಾನದ ವಿರುದ್ಧ ಕಠಿಣಕ್ರಮ ಜರುಗಿಸಬೇಕು.

ನೆರೆಹೊರೆ

ಚೇರ್ಕಾಡಿ ಸಚ್ಚಿದಾನಂದ ಶೆಟ್ಟಿ
vveditoped@gmail.com

ಪಾಕಿಸ್ತಾನವು ಕಳೆದ 6 ದಶಕಗಳಲ್ಲಿ ಐಎಂಎಫ್‌ನಿಂದ 24 ಸಲ ಸಾಲ ಪಡೆದುಕೊಂಡಿದೆ. 2024ರಲ್ಲಿ ಪಾಕಿಸ್ತಾನದ ಬಾಹ್ಯಸಾಲದ ಪ್ರಮಾಣ 130 ಶತಕೋಟಿ ಡಾಲರ್‌ನಷ್ಟಿತ್ತು. ಪಾಕಿಸ್ತಾನಕ್ಕೆ ಚೀನಾ 2024ರವರೆಗೆ 2.42 ಲಕ್ಷ ಕೋಟಿ ರುಪಾಯಿಯಷ್ಟು ಸಾಲ ನೀಡಿದೆ. ತಮಾಷೆಯೆಂದರೆ, ಯಾವುದೇ ದೇಶದಿಂದ ಎಷ್ಟೇ ನೆರವು ಸಿಕ್ಕಿದರೂ, ಪಾಕಿಸ್ತಾನದಲ್ಲಿ ಒಂದಿನಿತೂ ಸುಧಾರಣೆಯಾಗಿಲ್ಲ. ಆದರೆ ಭಯೋತ್ಪಾದನೆಗೆ ಸರಕಾರದ ಪ್ರಾಯೋಜಕತ್ವ ಮುಂದುವರಿದೇ ಇದೆ, ಭಯೋತ್ಪಾದಕರ ಕಾರ್ಖಾನೆ ಎನಿಸಿಬಿಟ್ಟಿದೆ ಪಾಕಿಸ್ತಾನ.

ಪಾಕಿಸ್ತಾನವು ಭಯೋತ್ಪಾದನೆಯ ರಫ್ತು ರಾಷ್ಟ್ರ ಎಂಬ ಕಟುವಾಸ್ತವವು ಇಡೀ ಜಗತ್ತಿಗೆ ಗೊತ್ತಿರುವಾಗ, 'ಅಂತಾರಾಷ್ಟ್ರೀಯ ಹಣಕಾಸು ನಿಧಿ' (ಐಎಂಎಫ್) ಸೇರಿದಂತೆ ಇತರೆ ದೇಶಗಳು ಅದಕ್ಕೆ ಹಣಕಾಸಿನ ಬೆಂಬಲ ನೀಡುವುದನ್ನು ತಕ್ಷಣವೇ ನಿಲ್ಲಿಸಬೇಕಿತ್ತು. ಆದರೆ ಇದಕ್ಕೆ ತದ್ವಿರುದ್ಧವಾಗಿ, ಭಾರತ-ಪಾಕ್ ನಡುವಿನ ಉದ್ವಿಗ್ನ ಪರಿಸ್ಥಿತಿಯ ಸಂದರ್ಭದಲ್ಲೂ ಐಎಂಫ್ ಪಾಕಿಸ್ತಾನಕ್ಕೆ 1 ಶತಕೋಟಿ ಡಾಲರ್ ಸಾಲವನ್ನು ಮಂಜೂರು ಮಾಡಿದೆ. ಇದಲ್ಲದೆ, ಹವಾಮಾನ ಸಂಬಂಧಿ ಕಾರ್ಯಕ್ರಮಗಳಿಗಾಗಿ 1.4 ಶತಕೋಟಿ ಡಾಲರ್ ಹೊಸಸಾಲ ನೀಡುವುದಕ್ಕೂ ಐಎಂಫ್ ಅನುಮೋದಿಸಿದೆ ಮತ್ತು ಸುಮಾರು 7 ಶತಕೋಟಿ ಡಾಲರ್ ವಿಸ್ತರಿತ ಸಾಲಕ್ಕಾಗಿ ಕೋರಿದ ಪಾಕಿಸ್ತಾನದ ಮೇಲೆ ಎಂದಿನಂತೆ ಕೃಪೆ ತೋರಿ ಗಮನಹರಿಸಿದೆ. ಇದೀಗ ಪಾಕಿಸ್ತಾನಕ್ಕೆ ಷರತ್ತುಬದ್ಧ ಸಾಲ ನೀಡಲು ಸಮ್ಮತಿಸಿ, ಅದರ ಎರಡನೇ ಕಂತಿನ 1.023 ಶತಕೋಟಿ ಡಾಲರ್ (8735 ಕೋಟಿ ರು.) ಹಣ ನೀಡಿದೆ.

ಹಿಂದಿನ ಸಾಲವನ್ನು ತೀರಿಸಲಾಗದೆ ಪ್ರತಿಬಾರಿಯೂ ಹೊಸ ಸಾಲಕ್ಕೆ ಕೈಯೊಡ್ಡುತ್ತಿರುವ ಪಾಕಿಸ್ತಾನವು ದಿವಾಳಿಯಂಚಿನಲ್ಲಿದ್ದರೂ ಐಎಂಎಫ್‌ನ ಕದತಟ್ಟಿ ಸಾಲ ಮಂಜೂರುಮಾಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿದೆ. ಪಾಕ್‌ನ ಕುಮ್ಮಕ್ಕಿನಿಂದಲೇ ಭಯೋತ್ಪಾದಕ ಚಟುವಟಿಕೆಗಳು ನಡೆಯುತ್ತಿದ್ದರೂ, ಈ ಚಟುವಟಿಕೆಗಳಿಗೆ ಸಾಲದ ಹಣವನ್ನು ಅದು ವಿನಿಯೋಗಿಸುತ್ತಿರುವುದು ಗೊತ್ತಿದ್ದರೂ ಐಎಂಎಫ್ ಹೀಗೇಕೆ ನಡೆದುಕೊಳ್ಳುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ. ಇದರಿಂದಾಗಿ ವಿಚ್ಛಿದ್ರಕಾರಿ ಶಕ್ತಿಗಳಿಗೆ ಮಾನ್ಯತೆ ನೀಡಿದಂತಾಗಿದೆ. ಇದು ಕೇವಲ ಆರ್ಥಿಕ ನೆರವಿನ ವಿಷಯವಲ್ಲ; ಜಾಗತಿಕ ಭದ್ರತೆ ಮತ್ತು ಶಾಂತಿಯ ಮೇಲೆ ನೇರವಾಗಿ ಪರಿಣಾಮ ಬೀರುವ ಸಂಗತಿ.

ಪಾಕಿಸ್ತಾನಕ್ಕೆ ಹೊಸದಾಗಿ ಸಾಲ ಮಂಜೂರು ಮಾಡುವ ಮುನ್ನ, ಆ ಹಣ ದುರುಪಯೋಗವಾಗದಂತೆ ಐಎಂಎಫ್ ಷರತ್ತುಗಳನ್ನೂ ವಿಧಿಸಿದೆ; ಆದರೆ ಅವನ್ನು ಪಾಕಿಸ್ತಾನ ಪಾಲಿಸುತ್ತದೆಯೇ? ಕಳೆದ 6 ದಶಕಗಳಲ್ಲಿ ಪಾಕಿಸ್ತಾನವು ಐಎಂಎಫ್‌ನಿಂದ ಸುಮಾರು 24 ಬಾರಿ ಸಾವಿರಾರು ಕೋಟಿ ಡಾಲರ್ ಸಾಲ ಪಡೆದಿದೆ. ಇಷ್ಟಾಗಿಯೂ ಅದರ ಆರ್ಥಿಕ ಪರಿಸ್ಥಿತಿ ಸುಧಾರಿಸುವ ಬದಲು ಕ್ಷೀಣಿಸುತ್ತಲೇ ಇದೆ. ಯಾವಾಗಲೂ ಸಾಲವನ್ನು ತೀರಿಸಲಾಗದೆ, ಹೊಸಸಾಲದ ಮೊರೆಹೋಗಿ ಸಾಲದ ಸುಳಿಗೆ ಸಿಲುಕಿದ್ದರೂ ಪಾಕಿಸ್ತಾನವು ಈ ಸಾಲದ ಹಣವನ್ನು ಅಭಿವೃದ್ಧಿ ಕಾರ್ಯಗಳಿಗೆ ಬದಲಾಗಿ ಗಡಿಯಾಚೆಗಿನ ಭಯೋತ್ಪಾದನೆಗೆ ಬಳಸುತ್ತಿರುವುದು ಖೇದಕರ. ಭಯೋತ್ಪಾದನೆಯು ಇಡೀ ಜಗತ್ತಿಗೇ ಕಂಟಕವಾಗಿ ಪರಿಣಮಿಸಿರುವುದನ್ನು ಬಿಡಿಸಿ ಹೇಳಬೇಕಿಲ್ಲ. ಅಂಥ ಭಯೋತ್ಪಾದನೆಯ ಸಂತಾನಗಳ ನೆಲವೇ ಪಾಕಿಸ್ತಾನ. ಅದು 'ನಾಗರಿಕ ರಾಷ್ಟ್ರ' ಎನಿಸಿಕೊಳ್ಳುವುದಕ್ಕೆ ನಾಲಾಯಕ್ ಎಂದು ಜಗತ್ತಿಗೆ ಎಂದೋ ಗೊತ್ತಾಗಿದೆ. ಪಾಕಿಸ್ತಾನದ ಭಯೋತ್ಪಾದಕ ಕೃತ್ಯಗಳಿಂದಾಗಿ ಜಾಗತಿಕ ಮಟ್ಟದಲ್ಲಿ ಆತಂಕ ಮೂಡಿದೆ. ಆದ್ದರಿಂದ ಅಂತಾರಾಷ್ಟ್ರೀಯ ಸಮುದಾಯವು ಆರ್ಥಿಕ ನೆರವು ಮತ್ತು ಸಾಲವನ್ನು ನಿಲ್ಲಿಸಿ ಪಾಕಿಸ್ತಾನದ ವಿರುದ್ಧ ಕಠಿಣಕ್ರಮ ಜರುಗಿಸಬೇಕು. ಕಳೆದ 3 ದಶಕಗಳಿಂದ ಉಗ್ರವಾದವನ್ನು ಬೆಂಬಲಿಸುತ್ತಿರುವುದಾಗಿ ಪಾಕ್ ಬಹಿರಂಗವಾಗಿ ಒಪ್ಪಿಕೊಂಡಿದ್ದು, ವಿಶ್ವಸಂಸ್ಥೆ ಇದನ್ನು ಗಂಭೀರವಾಗಿ ಪರಿಗಣಿಸಿ ಪಾಕಿಸ್ತಾನವನ್ನು ಭಯೋತ್ಪಾದಕ ರಾಷ್ಟ್ರ ಎಂದು ಘೋಷಿಸಲು ಕ್ರಮ ಕೈಗೊಳ್ಳಬೇಕು.

ಪಾಕಿಸ್ತಾನವು ಆರ್ಥಿಕವಾಗಿ ಹೀನಾಯ ಸ್ಥಿತಿಯಲ್ಲಿರುವುದನ್ನು ಹಲವು ವರದಿಗಳೇ ತಿಳಿಸಿವೆ. 2024ರ ಇಂಥದೊಂದು ವರದಿಯಂತೆ, ಪಾಕಿಸ್ತಾನದ ಒಟ್ಟಾರೆ ಸಾಲದ ಪ್ರಮಾಣವು 256 ಬಿಲಿಯನ್ ಡಾಲರ್‌ಗೆ (ಅಂದರೆ 21.6 ಲಕ್ಷ ಕೋಟಿ ರುಪಾಯಿಗೆ) ತಲುಪಿದೆ. 2029ರ ಹೊತ್ತಿಗೆ ಪಾಕ್ 100 ಬಿಲಿಯನ್ ಡಾಲರ್ (8.4 ಲಕ್ಷ ಕೋಟಿ ರು.) ವಿದೇಶಿ ಸಾಲ ಮತ್ತು ಬಡ್ಡಿಯನ್ನು ಪಾವತಿಸಬೇಕಿದೆ. ತೈಲ, ಗ್ಯಾಸ್, ಆಮದು ಶುಲ್ಕ, ಸಂಬಳ, ಸಬ್ಸಿಡಿಯಂಥ ಸರಕಾರದ ದೈನಂದಿನ ವೆಚ್ಚಗಳು, ಒಟ್ಟಾರೆ ಹೇಳುವುದಾದರೆ ಸಂಪೂರ್ಣ ಆರ್ಥಿಕತೆಯೇ ಸಾಲದಿಂದಲೇ ನಿರ್ವಹಿಸಲ್ಪಡಬೇಕಾದ ಸ್ಥಿತಿ ಅಲ್ಲಿದೆ. ಪಾಕ್‌ನ ಬಡತನದ ಪ್ರಮಾಣ ಶೇ.40.5ಕ್ಕೆ, ಹಣದುಬ್ಬರ ಶೇ.38ಕ್ಕೆ, ನಿರುದ್ಯೋಗದ ಪ್ರಮಾಣ ಶೇ.9.7ಕ್ಕೆ ತಲುಪಿದೆ. ಶೇ. 82ರಷ್ಟು ಜನರಿಗೆ ಆಹಾರವನ್ನು ಕೊಡುವ ಶಕ್ತಿ ಆ ದೇಶಕ್ಕಿಲ್ಲ.

ಪಾಕಿಸ್ತಾನಕ್ಕೆ ದುಡ್ಡಿನ ಅಗತ್ಯ ಎದುರಾದಾಗಲೆಲ್ಲ ನೆರವಿಗೆ ಧಾವಿಸುತ್ತದೆ ಚೀನಾ; ಹೀಗಾಗಿ ಪಾಕ್ ದೊಡ್ಡ ಮಟ್ಟದಲ್ಲಿ ಚೀನಾದ ಋಣದಲ್ಲಿ ಬಿದ್ದಿದೆ. ಹಿಂದಿನ ಸಾಲದ ಮರುಪಾವತಿಯಲ್ಲಿ ವಿಫಲವಾದುದರ ಬಗ್ಗೆ ಚೀನಾಕ್ಕೆ ಈಗಾಗಲೇ ಪಾಕ್ ಮೇಲೆ ಅಸಮಾಧಾನವಿದೆ. ಚೀನಾದಿಂದ ಹೆಚ್ಚುವರಿ ಶಸ್ತ್ರಾಸ್ತ್ರಗಳು ಮತ್ತು ಸಾಲ ಸಿಗದೇ ಹೋದರೆ ಪಾಕಿಸ್ತಾನದ ಯಾವ ಕುತಂತ್ರವೂ ನಡೆಯುವುದಿಲ್ಲ. ಹಲವು ಸಣ್ಣ ಪುಟ್ಟ ರಾಷ್ಟ್ರಗಳನ್ನು ತನ್ನ ಸಾಲದ ಬಲೆಯಲ್ಲಿ ಸಿಲುಕಿಸಿ, ಅವುಗಳಿಗೆ ಭಾರಿ ಪ್ರಮಾಣದ ಬಡ್ಡಿ ವಿಧಿಸಿ ರಕ್ತಹೀರುವುದು ಚೀನಾದ ಪರಿಪಾಠ; ಇಂಥ ರಾಷ್ಟ್ರಗಳು ಸಾಲದ ಮರುಪಾವತಿಯಲ್ಲಿ ವಿಫಲವಾದರೆ, ಅಲ್ಲಿನ ದ್ವೀಪಗಳು, ವಿಮಾನ ನಿಲ್ದಾಣಗಳು ಅಥವಾ ಇತರ ಸ್ವತ್ತುಗಳನ್ನು ಚೀನಾ 'ಕಬ್ಜಾ' ಮಾಡಿಕೊಂಡು ಬಿಡುತ್ತದೆ. ಈ ವಾಸ್ತವ ಪಾಕಿಸ್ತಾನಕ್ಕೂ ಗೊತ್ತಿದ್ದರೂ, ಬೇರೆಡೆಗಿಂತ ಚೀನಾದಿಂದ ಸುಲಭವಾಗಿ ಸಾಲ ಸಿಗುವುದರಿಂದ ಅದರ ಎದುರೇ ಪಾಕ್ ಮಂಡಿಯೂರುತ್ತಿದೆ. 2024ರವರೆಗೆ ಪಾಕಿಸ್ತಾನಕ್ಕೆ 2,087 ಬಿಲಿಯನ್ ಡಾಲರ್ (ಅಂದರೆ ಸುಮಾರು 2.42 ಲಕ್ಷ ಕೋಟಿ ರು.) ಸಾಲವನ್ನು ಚೀನಾ ನೀಡಿರುವುದು ಈ ಮಾತಿಗೆ ಸಾಕ್ಷಿ.

ಐಎಂಎಫ್ ವತಿಯಿಂದ ಪಾಕಿಸ್ತಾನಕ್ಕೆ ನೀಡಲಾಗುತ್ತಿರುವ ಸಾಲವು ಭಯೋತ್ಪಾದನೆಯ ಚಟುವಟಿಕೆಗಳಿಗೆ ಬಳಕೆಯಾಗುತ್ತಿದೆ ಎಂಬ ಸಂಗತಿಯನ್ನು ಭಾರತವು ಈ ಬಾರಿಯೂ ಎಲ್ಲಾ ಸದಸ್ಯ ರಾಷ್ಟ್ರಗಳ ಗಮನಕ್ಕೆ ತಂದಿತ್ತು. ಆದರೆ, ಅಮೆರಿಕ ಮತ್ತು ಐಎಂಎಫ್‌ನ ಕೆಲವು ಸದಸ್ಯ ರಾಷ್ಟ್ರಗಳು ತಮ್ಮ ಸ್ವಹಿತಾಸಕ್ತಿಯ ಸಾಧನೆಗಾಗಿ ಪಾಕಿಸ್ತಾನಕ್ಕೆ ಸಾಲ ದೊರೆಯುವಲ್ಲಿ ಬೆಂಬಲ ನೀಡಿರುವುದು ದುರದೃಷ್ಟವೇ ಸರಿ. ಇದು ಜಾಗತಿಕ ಶಾಂತಿಗೆ ಧಕ್ಕೆ ತರುವಂಥ ನಡೆಯಾಗಿದೆ. ಅಂತಾರಾಷ್ಟ್ರೀಯ ಸಮುದಾಯವು ಪಾಕಿಸ್ತಾನದ ವಿರುದ್ಧ ಕಠಿಣಕ್ರಮ ಕೈಗೊಳ್ಳಬೇಕಾದ ಸಂದರ್ಭದಲ್ಲೂ ಇಂಥ ಬೆಂಬಲವೇ?! ಆದರೆ, ಈ ವಿಷಯಕ್ಕೆ ಸಂಬಂಧಿಸಿ ಭಾರತದ ನಿಲುವು ಸ್ಪಷ್ಟವಾಗಿದೆ; ಎಲ್ಲಿಯವರೆಗೆ ಪಾಕಿಸ್ತಾನವು ಉಗ್ರವಾದವನ್ನು ಪ್ರಾಯೋಜಿಸಿ ಒತ್ತಾಸೆಯಾಗಿ ನಿಂತಿರುತ್ತದೋ, ಅಲ್ಲಿಯವರೆಗೆ ಅದರ ಜತೆಗೆ ಯಾವುದೇ ಹಣಕಾಸಿನ ವ್ಯವಹಾರವಿರಲಿ, ಯಾವುದೇ ರೀತಿಯ ಮಾತುಕತೆಗೂ ಅವಕಾಶವಿಲ್ಲ ಎಂದು ಭಾರತ ಕಟ್ಟುನಿಟ್ಟಾಗಿ ಹೇಳಿದೆ. ಈ ತಿಂಗಳು ನಡೆಯಲಿರುವ ಐಎಂಎಫ್ ಮಂಡಳಿಯ ಮಹತ್ವದ ಸಭೆಯಲ್ಲಿ ಭಾರತವು ಭಯೋತ್ಪಾದನೆಯ ವಿಷಯವನ್ನು ಪ್ರಸ್ತಾಪಿಸಿ, ಪಾಕಿಸ್ತಾನಕ್ಕೆ ಹೊಸಸಾಲ ನೀಡುವುದನ್ನು ವಿರೋಧಿಸಲಿದೆ. ಇದು ಸಮಂಜಸವೂ ಅನಿವಾರ್ಯವೂ ಆಗಿದೆ.

ಆರ್ಥಿಕವಾಗಿ ದಿವಾಳಿಯಾಗುತ್ತಿರುವ ಸಂದರ್ಭದಲ್ಲೂ ಪಾಕಿಸ್ತಾನವು ಅಶಾಂತಿ ಮತ್ತು ಭಯೋತ್ಪಾದನೆಯ ಸೃಷ್ಟಿಗೆ ಯತ್ನಿಸುತ್ತಲೇ ಬಂದಿದ್ದು, ಭಾರತವು ಇದಕ್ಕೆ ಕಾಲಾನುಕಾಲಕ್ಕೆ ತಕ್ಕ ಪ್ರತ್ಯುತ್ತರವನ್ನು ನೀಡುತ್ತಲೇ ಬಂದಿದೆ. ಇಂಥ ಎಲ್ಲ ಸಂದರ್ಭಗಳಲ್ಲೂ ಪಾಕಿಸ್ತಾನದ ಮಾನ ಹರಾಜಾಗಿದ್ದುಂಟು. ಇಷ್ಟಾಗಿಯೂ ಅದು ತನ್ನ ಎಡಬಿಡಂಗಿತನವನ್ನು ಇನ್ನೂ ಬಿಡುತ್ತಿಲ್ಲ. ಈ ಧೋರಣೆಯೇ ಪಾಕಿಸ್ತಾನದ ವಿನಾಶಕ್ಕೆ ಮುನ್ನುಡಿಯಾಗಲಿದೆ, ನೋಡುತ್ತಿರಿ!

(ಲೇಖಕರು ವಿಜಯಾ ಬ್ಯಾಂಕ್‌ನ ನಿವೃತ್ತ ಮುಖ್ಯ ಪ್ರಬಂಧಕರು)

ಓದುಗರ ಓಣಿ

ಓದುಗರನ್ನು ಬಿಟ್ಟು ಇಲ್ಲಿ ಯಾರಿಗೂ ಪ್ರವೇಶವಿಲ್ಲ

ಕಾನೂನು ಕ್ರಮ ಅಗತ್ಯ

ರಾಜ್ಯದಲ್ಲಿನ ಮಿತಿಮೀರಿದ ಸಂಖ್ಯೆಯ ವಾಹನಗಳಿಂದ ನಿತ್ಯವೂ ಉಂಟಾಗುತ್ತಿರುವ ಮಾಲಿನ್ಯವನ್ನು ತಡೆಗಟ್ಟುವುದಕ್ಕೇ ನಮ್ಮಿಂದ ಇನ್ನೂ ಸಾಧ್ಯವಾಗುತ್ತಿಲ್ಲ, ಈ ಮಧ್ಯೆ ದ್ವಿಚಕ್ರ ವಾಹನಗಳನ್ನು ಬಳಸಿ ವೀಲಿಂಗ್ ಮಾಡುವವರ ಸಂಖ್ಯೆ ಹೆಚ್ಚುತ್ತಲೇ ಇದೆ. ಅದರಲ್ಲೂ 'ರೀಲ್ಸ್' ಮಾಡುವುದಕ್ಕಾಗಿ ವೀಲಿಂಗ್ ಮಾಡುವ ಶಾಲಾ ಮಕ್ಕಳ ಮತ್ತು ಯುವಕರ ಹುಚ್ಚಾಟವನ್ನು ನಿಯಂತ್ರಣಕ್ಕೆ ತರಲು ಸಾಧ್ಯವಾಗುತ್ತಿಲ್ಲ. ಇಂಥವರು ಬೈಕುಗಳಿಗೆ ಹೆಚ್ಚುವರಿ ಧ್ವನಿವರ್ಧಕಗಳನ್ನು ಅಳವಡಿಸಿಕೊಂಡು ಕರ್ಕಶ ಸದ್ದು ಮಾಡುವುದು ಕಾಣಬರುತ್ತದೆ. ಇಂಥ ಹುಚ್ಚಾಟಗಳಿಗೆ ಅಮಾಯಕರು ಬಲಿಯಾಗುತ್ತಿದ್ದಾರೆ, ಅಪಘಾತಗಳಿಗೆ ಈಡಾಗುತ್ತಿದ್ದಾರೆ. ವೀಲಿಂಗ್ ಮಾಡುವ ಸಾಕಷ್ಟು ಮಂದಿಯ ಬಳಿ ವಾಹನ ಚಾಲನಾ ಪರವಾನಗಿಯೂ ಇರುವುದಿಲ್ಲ. ವೀಲಿಂಗ್ ಕುರಿತಾಗಿ ಹೈಕೋರ್ಟ್ ಈಗಾಗಲೇ ಕಳವಳ ವ್ಯಕ್ತಪಡಿಸಿದ್ದು, ಇದು ಸದರಿ ಸಮಸ್ಯೆಯ ತೀವ್ರತೆಯನ್ನು ಒತ್ತಿಹೇಳುತ್ತದೆ. ಆದ್ದರಿಂದ, ವೀಲಿಂಗ್ ನಿಯಂತ್ರಣಕ್ಕೆ ಸರಕಾರವು ಕಠಿಣ ಕಾನೂನು ಜಾರಿಗೊಳಿಸಿ, ಜನರನ್ನು ಕಾಪಾಡುವತ್ತ ಗಮನ ಹರಿಸಬೇಕು.

- ಸುರೇಂದ್ರ ಪೈ, ಭಟ್ಕಳ

ಇದು ಹೆಮ್ಮೆಯ ಸಂಗತಿ

ಪ್ರಧಾನಿ ನರೇಂದ್ರ ಮೋದಿಯವರ 'ಆತ್ಮನಿರ್ಭರ ಭಾರತ' ಕನಸು ನನಸಾಗಿದೆ ಎಂಬುದಕ್ಕೆ ಇತ್ತೀಚೆಗಷ್ಟೇ ಮಹತ್ವದ ಸಾಕ್ಷಿ ಸಿಕ್ಕಿದೆ. 'ಆಪರೇಷನ್ ಸಿಂದೂರ' ಕಾರ್ಯಾಚರಣೆಯಲ್ಲಿ ಪರಾಕ್ರಮ ಮೆರೆದ 'ಬ್ರಹ್ಮೋಸ್' ಸೂಪರ್ ಸಾನಿಕ್ ಕ್ಷಿಪಣಿಯು ಜಾಗತಿಕ ಮಟ್ಟದಲ್ಲಿ ಗಮನ ಸೆಳೆದಿದೆ. ಇದರ ಖರೀದಿಗೆ ವಿಶ್ವದ ಹಲವು ರಾಷ್ಟ್ರಗಳು ಮುಂದಾಗಿವೆ ಎಂಬುದು ನಿಜಕ್ಕೂ ಭಾರತದ ಪಾಲಿಗೆ ಹೆಮ್ಮೆಯ ಮತ್ತು ಗೌರವದ ಸಂಗತಿ. ಈಜಿಪ್ಟ್, ಇಂಡೋನೇಷ್ಯಾ, ವಿಯೆಟ್ನಾಂ, ಮಲೇಷ್ಯಾ, ಚಿಲಿ, ಅರ್ಜೆಂಟೀನಾ, ಸಿಂಗಾಪುರ, ಸೌದಿ ಅರೇಬಿಯಾ, ಬ್ರೆಜಿಲ್, ಕತಾರ್ ಸೇರಿದಂತೆ 18 ರಾಷ್ಟ್ರಗಳು ಬ್ರಹ್ಮೋಸ್ ಖರೀದಿಗೆ ಬೇಡಿಕೆ ಸಲ್ಲಿಸಿರುವುದು, ಭಾರತವು ಹಿಂದೆಂದಿಗಿಂತಲೂ ಪ್ರಬಲವಾಗುತ್ತಿದೆ ಎಂಬುದರ ಸಂಕೇತವೂ ಹೌದು. ಇದು ಕೇವಲ ಪ್ರಾರಂಭವಷ್ಟೇ ಅಂದರೂ ತಪ್ಪಾಗಲಿಕ್ಕಿಲ್ಲ. ಭಾರತೀಯ ಸೇನಾಯೋಧರ ಕಾರ್ಯಕ್ಷಮತೆ, ದೇಶನಿಷ್ಠೆ ಇವುಗಳ ಪರಿಚಯ ಇಲ್ಲಿಯವರೆಗೆ ಸರಿಯಾಗಿ ಅನಾವರಣಗೊಂಡಿರಲಿಲ್ಲ. ಏನೋ ಒಂದು ರೀತಿಯ ಬಿಕ್ಕಟ್ಟು ಅವರನ್ನು ಕಟ್ಟಿಹಾಕಿತ್ತು. ಆದರೆ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯಿಂದಾಗಿ ನಮ್ಮ ಸೈನಿಕರ ಪರಿಣತಿ ಹಾಗೂ ಯುದ್ಧ ಪರಿಕರಗಳ ತಾಕತ್ತು ಒಂದಿಡೀ ವಿಶ್ವಕ್ಕೆ ಗೊತ್ತಾದಂತೆ ಆಯಿತು ಎನ್ನಲಡ್ಡಿಯಿಲ್ಲ.

- ಶಂಕರನಾರಾಯಣ ಭಟ್, ಮಾಡಗೇರಿ

ಪಾಕಿಸ್ತಾನಕ್ಕೆ ಪಾಠ

ಉಗ್ರರಿಗೆ ಕುಮ್ಮಕ್ಕು ನೀಡಿ ಪಹಲ್ಗಾಮ್ ಮಾರಣಹೋಮಕ್ಕೆ ಕಾರಣವಾದ ಪಾಕಿಸ್ತಾನಕ್ಕೆ ಭಾರತವು ಸರಿಯಾದ ಪಾಠವನ್ನೇ ಕಲಿಸಿದೆ. ತನ್ಮೂಲಕ, ಪಾಕಿಸ್ತಾನವು ನಮ್ಮ ವಿರುದ್ಧ ಇನ್ನೆಂದೂ ಇಂಥ ದುಸ್ಸಾಹಸಕ್ಕೆ ಕೈಹಾಕದಂತೆ ಮಾಡಿದೆ. ಯಾವ ಜಾತಿಭೇದ, ಪ್ರಾಂತ್ಯಭೇದ ಇಲ್ಲದಂತೆ ದೇಶದ ಎಲ್ಲ ಜನರೂ 'ಆಪರೇಷನ್ ಸಿಂದೂರ' ಕಾರ್ಯಾಚರಣೆಯನ್ನು ಮೆಚ್ಚಿಕೊಂಡಿದ್ದಾರೆ. ಆದರೆ ಕಾಂಗ್ರೆಸ್‌ನ ಕೆಲ ಶಾಸಕರು, ಸಚಿವರು ಈ ಕಾರ್ಯಾಚರಣೆಯ ಬಗ್ಗೆ ಅನುಮಾನ ವ್ಯಕ್ತಪಡಿಸುತ್ತಿರುವುದು ನಾಚಿಕೆಗೇಡಿನ ಸಂಗತಿ, ವಿಷಾದನೀಯ ಬೆಳವಣಿಗೆ. ಪಾಕಿಸ್ತಾನದ ಏಜೆಂಟರುಗಳ ರೀತಿಯಲ್ಲಿ ವರ್ತಿಸುತ್ತಿರುವ ಇವರುಗಳ ಮೇಲೆ ಪಕ್ಷವು ಕೂಡ ಯಾವುದೇ ರೀತಿಯ ಕ್ರಮವನ್ನು ಕೈಗೊಳ್ಳುತ್ತಿಲ್ಲ. ಇವರೆಲ್ಲಾ ಯಾರನ್ನು ಮೆಚ್ಚಿಸಲು ಹೀಗೆ ಹೇಳಿಕೆ ಕೊಡುತ್ತಿದ್ದಾರೋ ಆ ಭಗವಂತನೇ ಬಲ್ಲ.

- ಬೂಕನಕೆರೆ ವಿಜೇಂದ್ರ, ಮೈಸೂರು

ಶ್ರಮಜೀವಿ ಜಪಾನಿಗರು

ಸಂಪಾದಕರ ಸದ್ಯಶೋಧನೆ ವಿಭಾಗದಲ್ಲಿ (ಮೇ 14) ಕೆಲಸದ ವಿಷಯದಲ್ಲಿ ಜಪಾನಿಯರಿಗೆ ಇರುವ ಬದ್ಧತೆಯ ಕುರಿತು ಓದಿ ಒಂದು ಕಡೆ ಸಂತೋಷವಾದರೆ, ಮತ್ತೊಂದು ಕಡೆ ಖೇದವಾಯಿತು. ಜಪಾನಿಯರು ಮೂಲತಃ ಶ್ರಮಜೀವಿಗಳು, ಮೈಗಳ್ಳರಲ್ಲ ಹಾಗೂ ದಿನದಲ್ಲಿ 18 ಗಂಟೆ ದುಡಿಯಬೇಕೆಂದರೆ ತುಟಿಪಿಟಿಕ್ ಅನ್ನದೆ ದುಡಿಯುತ್ತಾರೆ ಎಂಬ ಮಾಹಿತಿಯನ್ನು ಓದಿ ನಮ್ಮ ದೇಶದ ಸ್ಥಿತಿಯ ಬಗ್ಗೆ ಆಲೋಚಿಸುವಂತಾಯಿತು. ನಮ್ಮ ದೇಶದಲ್ಲಿ ಉದ್ಯಮಿಯೊಬ್ಬರು ವಾರಕ್ಕೆ 70-80 ಗಂಟೆ ದುಡಿಯುವಂತೆ ಕರೆನೀಡಿದ್ದಕ್ಕೇ ಸಾಕಷ್ಟು ವಿರೋಧ ವ್ಯಕ್ತವಾಯಿತು, ಇನ್ನು ದಿನಕ್ಕೆ 18 ಗಂಟೆ ದುಡಿಯುವುದು ದೂರದ ಮಾತು. ಎಲ್ಲೋ ಕೆಲವೇ ಕೆಲವರು ಅದನ್ನು ಪಾಲಿಸುತ್ತಿರಬಹುದೇನೋ! ಜಪಾನಿನಲ್ಲಿರುವಂಥ ಶ್ರಮಜೀವಿಗಳು ನಮ್ಮಲ್ಲೂ ಇರುತ್ತಿದ್ದರೆ ನಮ್ಮ ದೇಶ ಹೇಗಿರುತ್ತಿತ್ತೋ? ಅಂದಹಾಗೆ, ಕಾರ್ಲ್‌ಮಾರ್ಕ್ಸ್ ಸಿದ್ಧಾಂತ ಹೊಂದಿದ ಕಾರ್ಮಿಕ ಸಂಘಟನೆಗಳು ಜಪಾನ್‌ನಲ್ಲಿಲ್ಲವೇ ಅಥವಾ ಅಲ್ಲಿಯ ನೌಕರ ವರ್ಗಕ್ಕೆ ಅಂಥ ಸಂಘಟನೆಗೆ ಸೇರುವ ಮನಸ್ಥಿತಿಯಿಲ್ಲವೇ? ಎಂಬುದು ಇಲ್ಲಿ ಕಾಡುವ ಪ್ರಶ್ನೆ.

- ದಾವಣಗೆರೆ ಮುಕುಂದ, ಬೆಂಗಳೂರು

ಬೇಂದ್ರೆ ಸಂಗೀತ

ವಿರಾಮ ಪುರವಣಿಯಲ್ಲಿ (ಮೇ 18) ಪ್ರಕಟವಾದ, ಎನ್.ಎಸ್.ಶ್ರೀಧರ ಮೂರ್ತಿಯವರ 'ಬೇಂದ್ರೆ ಸಂಗೀತ' ಕುರಿತಾದ ವಿಶ್ಲೇಷಣೆಯು ಪ್ರಬುದ್ಧವೂ ಪಾಂಡಿತ್ಯಭರಿತವೂ ಆಗಿತ್ತು. ಸಾಹಿತ್ಯ-ಸಂಗೀತ-ಅಧ್ಯಾತ್ಮದ ಅಭಿರುಚಿಯುಳ್ಳವರಿಗೆ ಮಾತ್ರವಲ್ಲದೆ ಸಾಮಾನ್ಯ ಓದುಗರನ್ನೂ ಸೆಳೆಯುವಂತೆ ಮೂಡಿಬಂದ ಈ ಲೇಖನ ಬೇಂದ್ರೆಯವರ ಬಹುಮುಖ ಪ್ರತಿಭೆಯನ್ನು ಮತ್ತಷ್ಟು ಅರಿಯುವುದಕ್ಕೆ ಪ್ರೇರಣೆ ನೀಡಿದೆ ಎನ್ನಬೇಕು. ಜತೆಗೆ ಇದು ಸಂಗೀತದ ಬಗ್ಗೆ ಒಲವುಳ್ಳವರಿಗೆ ಸಂಗ್ರಹಯೋಗ್ಯ ಬರಹವೂ ಆಗಿದೆ. ಇಂಥ ಲೇಖನಗಳು ಪತ್ರಿಕೆಯಲ್ಲಿ ಹೆಚ್ಚೆಚ್ಚು ಮೂಡಿಬರಲಿ.

- ಮಹೇಶ್ ಹೊಸಮನಿ, ಬೆಂಗಳೂರು

ಅಧಿಕಾರಿಗಳ ಭ್ರಷ್ಟತೆ

ಲೋಕಾಯುಕ್ತ ಪೊಲೀಸರು ರಾಜ್ಯದ ಏಳು ಮಂದಿ ಭ್ರಷ್ಟ ಅಧಿಕಾರಿಗಳ ನೆಲೆಗಳ ಮೇಲೆ ದಾಳಿಮಾಡಿ ಕೋಟ್ಯಂತರ ರುಪಾಯಿ ಮೌಲ್ಯದ ಆಸ್ತಿಯನ್ನು ವಶಪಡಿಸಿಕೊಂಡಿರುವ ಸುದ್ದಿ ವರದಿಯಾಗಿದೆ. ಈ ಭ್ರಷ್ಟರಲ್ಲಿ ಬಹುತೇಕರು ಆಯಕಟ್ಟಿನ ಸ್ಥಳಗಳನ್ನು ಅಮರಿಕೊಳ್ಳಲು ಪ್ರಭಾವಿ ರಾಜಕಾರಣಿಗಳಿಂದ ಶಿಫಾರಸು ಮಾಡಿಸಿ, ಪೋಸ್ಟ್ ಮಾಡಿಸಿಕೊಂಡಿರುತ್ತಾರೆ. ಭಯವೇ ಇಲ್ಲದೆ ವಾಮಮಾರ್ಗದಿಂದ ಕೋಟಿಗಟ್ಟಲೆ ಹಣ ಸಂಪಾದಿಸಿದ ಇಂಥ ಭ್ರಷ್ಟ ಅಧಿಕಾರಿಗಳಿಗೆ, 'ನಮಗೆ ಏನೇ ತೊಂದರೆಯಾದರೂ ರಾಜಕಾರಣಿಗಳ ಕೃಪೆಯಿಂದ ಬಿಡಿಸಿಕೊಳ್ಳಬಹುದು' ಎಂಬ ಧಾರ್ಷ್ಟ್ಯವಿರಬಹುದು. ಆದ್ದರಿಂದ ರಾಜಕಾರಣಿಗಳು ಈಗಲಾದರೂ ಇಂಥ ಗೋಮುಖವ್ಯಾಘ್ರಗಳ ವಿಷಯದಲ್ಲಿ ಎಚ್ಚರಿಕೆಯಿಂದಿರುವುದು ಒಳಿತು.

ದೊಡ್ಡ ಮಟ್ಟದಲ್ಲಿನ ಭ್ರಷ್ಟತೆ ಶ್ರೀಸಾಮಾನ್ಯರ ಮೇಲೆ ಹೆಚ್ಚಿನ ಪರಿಣಾಮ ಬೀರುವುದಿಲ್ಲ; ಆದರೆ ಕೆಳಹಂತದ ಆಡಳಿತದಲ್ಲಿನ ಭ್ರಷ್ಟಾಚಾರದಿಂದಾಗಿ ಜನರು ಬಸವಳಿದಿದ್ದಾರೆ. ಆದ್ದರಿಂದ ಲೋಕಾಯುಕ್ತದವರು ಭ್ರಷ್ಟ ತಿಮಿಂಗಿಲಗಳನ್ನು ಹಿಡಿಯುವುದರ ಜತೆಜತೆಗೆ, ಆಸ್ಪತ್ರೆಗಳು, ಗ್ರಾಮ ಪಂಚಾಯತಿ ಕಚೇರಿಗಳು, ಹೀಗೆ ಜನರ ನೇರಸಂಪರ್ಕ ಇರುವ ನೆಲೆಗಳಲ್ಲಿ ಠಿಕಾಣಿ ಹೂಡಿರುವ ಭ್ರಷ್ಟ ಅಧಿಕಾರಿಗಳನ್ನೂ ಬಲಿಹಾಕಬೇಕು.

- ಸತ್ಯಬೋಧ, ಬೆಂಗಳೂರು

ಭಟ್ಟರ್ ಸ್ಕಾಚ್

- **ಗುರುನಾರಾಯಣ ಪಟಪಲ್ಲಿ, (ಇಮೇಲ್ ಮೂಲಕ)**
ಭಟ್ರೇ, ಹೇಳೋನು ಮಾಡಲ್ಲ, ಮಾಡೋನು ಹೇಳಲ್ಲ, ತಿಂದವನು?
– **ತೇಗಲ್ಲ!**

- **ಎಸ್.ರಘು, (ಇಮೇಲ್ ಮೂಲಕ)**
ಭಟ್ರೇ, ಹಿಂದಿನವರು 'ಮನೆ ಕಟ್ಟಿ ನೋಡು, ಮದುವೆ ಮಾಡಿ ನೋಡು' ಎನ್ನುತ್ತಿದ್ದರು. ಈಗಿನವರು?
– **'ತಾಳಿ ಕಟ್ಟಿ ನೋಡು, ಮಕ್ಕಳ ಮಾಡಿ ನೋಡು'**

- **ವಿ.ಹೇಮಂತಕುಮಾರ, ಬೆಂಗಳೂರು**
ಭಟ್ರೇ, ಸಿನಿಮಾದಲ್ಲಿ ನೋವು-ನಲಿವುಗಳಿಗೆ ಹಾಡುಗಳನ್ನು ಹಾಡ್ತಾರೆ. ನಿಜ ಜೀವನದಲ್ಲಿ?
– **ಎಣ್ಣೆ ಅಂಗಡಿಗೆ ಹೋಗ್ತಾರೆ!**

- **ಉಜ್ಜನಿ ಜಲೇಂದ್ರ, ಮಲ್ಲುಂಗೆರೆ**
ಭಟ್ರೇ, ನಿಮ್ಮ ಮಾಜಿ ಪ್ರೇಯಸಿ ಈಗಲೂ ಸಂಪರ್ಕದಲ್ಲಿ ಇದ್ದಾರಾ?
– **ಪ್ರೇಯಸಿ ಯಾವತ್ತೂ ಮಾಜಿ ಆಗುವುದಿಲ್ಲ ಗೊತ್ತಿರಲಿ!**

- **ಸತೀಶ ಎಲ್.ವಿ., (ಇಮೇಲ್ ಮೂಲಕ)**
ಭಟ್ರೇ, ಕೆಲವರು ಕಿತ್ತೋಗುತ್ತೆ ಅಂತ ಗೊತ್ತಿದ್ರೂ ಎಳೆಯುವುದನ್ನು ಬಿಡುವುದಿಲ್ಲವಲ್ಲ?
– **ಕಿತ್ತೋಗಲಿ ಎಂಬುದೇ ಅವರ ಉದ್ದೇಶ ಆಗಿರುತ್ತದೆ!**

- **ಮಂಗಳಾ ಸಿದ್ದೇಶ, (ಇಮೇಲ್ ಮೂಲಕ)**
ಭಟ್ರೇ, ಹಲವು ವೇಷಧಾರಿಗಳನ್ನು ಏಕಕಾಲದಲ್ಲಿ ನೋಡಬೇಕು ಅಂದ್ರೆ ಎಲ್ಲಿಗೆ ಹೋಗಬೇಕು?
– **ಮುಖ್ಯಮಂತ್ರಿಗಳ ಮನೆಗೆ!**

- **ನಿಧಿ, ಚಾಮರಾಜಪೇಟೆ**
ಸರ್, ಕನ್ನಡ ಸಿನಿಮಾ ನಟರು ಇಂಗ್ಲಿಷಲ್ಲಿ ಮಾತಾಡ್ತಾರಲ್ಲ?
– **ಅದೇ ಕನ್ನಡ ಸಿನಿಮಾದಲ್ಲಿ ಮಾತಾಡಿದ್ರೆ ತಮ್ಮ ಇಂಗ್ಲಿಷ್ ಬಂಡವಾಳ ಪ್ರೇಕ್ಷಕರಿಗೆ ಗೊತ್ತಾಗುತ್ತೆ ಎಂಬ ಆತಂಕ!**

- **ಚಂದ್ರು, ಬಾಣಾವರ**
ಭಟ್ರೇ, ತಿನ್ನುವಾಗ ಹೊಟ್ಟೆಯ ಮೇಲೆಲ್ಲ ಕೆಡವಿಕೊಳ್ತಾರಲ್ಲ?
– **ಹೊಟ್ಟೆಗಾಗಿ ತಿನ್ನುವುದು ಎಂದು ತಪ್ಪಾಗಿ ತಿಳಿದುಕೊಂಡಿರಬಹುದಾ?!**

- **ವೇದಾ ಶೆಟ್ಟಿ, ಬೆಂಗಳೂರು**
ಭಟ್ರೇ, ಹೆಂಡತಿ ಜತೆ ಕಳೆಯಲು ನಿಮಗೆ ಸಮಯ ಸಿಗುತ್ತಾ?
– **ಊರಲ್ಲಿರುವವರ ಹೆಂಡತಿಯರಿಗೆಲ್ಲ 'ಭಟ್ಟರ್ ಸ್ಕಾಚ್'ನಲ್ಲಿ ಉತ್ತರ ಕೊಡ್ತಾ ಇದ್ರೆ ಎಲ್ಲಿ ಸಮಯ ಇರುತ್ತೆ ಹೇಳಮ್ಮ?!**

ಕಣ್ಣುಕಟ್ಟುವ ವಿದ್ಯೆಯೇ ಇಂದು ಕೆಲಸಕ್ಕೆ ಬಂದಿದೆ!

ವಿದೇಶವಾಸಿ
ಕಿರಣ್ ಉಪಾಧ್ಯಾಯ ಬಹ್ರೈನ್
dhyapaa@gmail.com

ಆಪರೇಷನ್ ಸಿಂದೂರ ಸ್ಥಗಿತಗೊಂಡಿದೆ. ಈಗ ಏನಿದ್ದರೂ ಆಪರೇಷನ್ ಸಿಂದೂರದ ಆಪರೇಷನ್ ನಡೆಯುತ್ತಿದೆ. ಒಂದಂತೂ ಸಾಬೀತಾಗಿದೆ, ಭಾರತದಲ್ಲಿ ಭೂಮಿ ಯುದ್ಧ ನಿಲ್ಲಬಹುದು, ಬಾಯಿ ಯುದ್ಧ ನಿಲ್ಲುವುದಿಲ್ಲ. ಅದರಲ್ಲೂ ರಾಜಕೀಯ ಪಕ್ಷದವರ ಬಾಯಿ ಯುದ್ಧ ಇನ್ನೂ ಎಪ್ಪತ್ತೈದು ವರ್ಷವಾದರೂ ನಿಲ್ಲಲಿಕ್ಕಿಲ್ಲ. ನಮ್ಮ ಜನಸಾಮಾನ್ಯರೂ ಕಮ್ಮಿಯೇನಿಲ್ಲ. ಯುದ್ಧ ಬಿಡಿ, ತನ್ನ ಇಡೀ ಜೀವಮಾನದಲ್ಲಿ ಒಮ್ಮೆಯಾದರೂ ಒಬ್ಬ ಯೋಧನನ್ನು ನೋಡದವನೂ, ಒಮ್ಮೆಯೂ ಯುದ್ಧ ವಿಮಾನವನ್ನು ಕಾಣದವನೂ ಮಿಸೈಲ್ ಬಗ್ಗೆ ಮಾತಾಡುತ್ತಾನೆ. ಇಂಥವರಿಗೆಲ್ಲ ತಾನು ಏನೇ ಮಾತಾಡಿದರೂ ತನ್ನ ತಲೆಯ ಮೇಲೆ ಮಿಸೈಲ್ ಬೀಳುವುದಿಲ್ಲ ಎಂಬುದಂತೂ ಖಾತ್ರಿಯಾಗಿರುತ್ತದೆ. ತನ್ನ ಜೀವಮಾನವಿಡೀ ಒಂದೇ ಕೆಲಸ ಮಾಡಿಕೊಂಡು ಬಂದಿದ್ದರೂ ಉದ್ಧಾರ ಆಗದೇ ಇದ್ದವನೂ ಯುದ್ಧದ ಬಗ್ಗೆ 'ಪುಗ್ಗಟ್ಟೆ ಪ್ರವಚನ' ಕೊಡುವ ದೇಶ ಏನಾದರೂ ಇದ್ದರೆ ಅದು ಭಾರತವೇ ಇರಬೇಕು. ಈ ವಿಷಯದಲ್ಲಿ ಮಾತ್ರ ಭಾರತ ಮತ್ತು ಪಾಕಿಸ್ತಾನ ಎರಡೂ ದೇಶಗಳು ಸಮಬಲರು ಎಂಬುದನ್ನು ಮೊನ್ನೆಯ ಕಾರ್ಯಾಚರಣೆ ಸಾಬೀತುಪಡಿಸಿದೆ.

ಕಳೆದ ವಾರದ ಅಂಕಣ ಓದಿ ಕೆಲವರು ಕರೆಮಾಡಿ 'ನಿಮ್ಮ ಪ್ರಕಾರ ಭಾರತ ಏನು ಮಾಡಬೇಕಿತ್ತು?' ಎಂದು ಕೇಳಿದ್ದರು. ನನ್ನ ಪ್ರಕಾರ, 'ಪಾಕಿಸ್ತಾನದ ಮಿಲಿಟರಿ ಕಾರ್ಯಾಚರಣೆಗಳ ಮಹಾನಿರ್ದೇಶಕರು ಕೇಳಿಕೊಂಡರು, ನಾವು ಕದನವಿರಾಮಕ್ಕೆ ಒಪ್ಪಿದೆವು' ಎಂದು ಹೇಳುವ ಬದಲು, 'ಪಾಕಿಸ್ತಾನದ ಡಿಜಿಎಮ್‌ಒ ಕಡೆಯಿಂದಲೇ, ನಾವು ಕದನವಿರಾಮ ಪ್ರಸ್ತಾಪಿಸಿದ್ದೇವೆ, ಭಾರತ ಒಪ್ಪಿದೆ ಎಂದು ಹೇಳಿಸಬೇಕಿತ್ತು' ಎಂದು ಪುಗ್ಗಟ್ಟೆ ಪ್ರವಚನ ಕೊಟ್ಟೆ. ನನ್ನ ತಲೆಯ ಮೇಲೂ ಮಿಸೈಲ್ ಬೀಳುವುದಿಲ್ಲ ಎಂಬ ಗ್ಯಾರಂಟಿ ನನಗೂ ಇತ್ತು! ಈ ತಮಾಷೆ, ಹಾಸ್ಯ, ಆರೋಪ, ಪ್ರತ್ಯಾರೋಪಗಳೆಲ್ಲ ಒಂದು ಕಡೆ ಇರಲಿ, ಆಪರೇಷನ್ ಸಿಂದೂರದಿಂದ ಭಾರತಕ್ಕೆ ದಕ್ಕಿದ್ದೇನು? ಮಿಕ್ಕಿದ್ದೇನು? ಕೆಲವು ವಿಷಯಗಳನ್ನು ಕಳೆದ ವಾರ ಬರೆದಿದ್ದರಿಂದ ಈಗ ಪುನಃ ಪ್ರಸ್ತಾಪಿಸುವುದಿಲ್ಲ. ಈ ಕಾರ್ಯಾಚರಣೆಯಲ್ಲಿ ಎಷ್ಟು ಜನ ಸತ್ತರು? ಎಷ್ಟು ವಿಮಾನ ಧರೆಗೆ ಉರುಳಿದವು? ಇಂಥ ಪ್ರಶ್ನೆಗಳಿಗೆ ಈಗಲೇ ಉತ್ತರಿಸುವುದು ಕಷ್ಟ. ಈ ಎಲ್ಲ ಹೊಯ್ದಾಟಗಳ ನಡುವೆ ಕೆಲವು ಅಂಶಗಳ ಕಡೆ ಗಮನ ಸೆಳೆಯಬೇಕು ಎಂದೆನಿಸಿತು.

ಒಂದು ಕಾಲವಿತ್ತು. ಭಾರತ ಎಂದರೆ, 'ಹಾವಾಡಿಗರ ದೇಶ', 'ಬಡವರ, ಭಿಕ್ಷುಕರ ದೇಶ' ಎಂಬ ಚಿತ್ರವನ್ನು ಜಗತ್ತಿಗೆ ತೋರಿಸಲಾಗುತ್ತಿತ್ತು. ಜತೆಗೆ, ಭಾರತದಲ್ಲಿ ನಡೆಯುವ ಹೋಮ, ಹವನ, ಮಾಟ, ಮೋಡಿ, ಯಂತ್ರ, ಮಂತ್ರ, ತಂತ್ರ, ಸಮ್ಮೋಹಿನಿ, ಕಣ್ಣುಕಟ್ಟುವ ವಿದ್ಯೆ ಇತ್ಯಾದಿಗಳೇ ಹೆಚ್ಚು ಪ್ರಚಾರ ಪಡೆಯುತ್ತಿದ್ದವು. ದಿನ ಕಳೆದಂತೆ ಹಾವಾಡಿಗರ ದೇಶ ಎನ್ನುವ ಹಣೆಪಟ್ಟಿಯನ್ನು ಭಾರತ ಕಳಚಿಕೊಂಡಿತು. ಮಾಟ, ಮಂತ್ರ, ಮೋಡಿ, ತಂತ್ರ, ಇತ್ಯಾದಿಗಳು ಕೂಡ ಗಣನೀಯ ಪ್ರಮಾಣದಲ್ಲಿ ಕಡಿಮೆಯಾಗಿರಬಹುದು. ಆದರೆ ಸಮ್ಮೋಹಿನಿ ಅಥವಾ ಕಣ್ಣುಕಟ್ಟುವ ವಿದ್ಯೆ ಎಷ್ಟು ಕಡಿಮೆಯಾಗಿದೆಯೋ ಗೊತ್ತಿಲ್ಲ, ಆದರೆ ಮೊನ್ನೆ ನಡೆದ ಆಪರೇಷನ್ ಸಿಂದೂರದಲ್ಲಿ ಕಣ್ಣುಕಟ್ಟುವ ವಿದ್ಯೆ ಮಹತ್ತರವಾದ ಪಾತ್ರವನ್ನು ವಹಿಸಿತ್ತು. ಏನಿದು? ಯುದ್ಧದಲ್ಲಿ ಕಣ್ಣುಕಟ್ಟುವ ವಿದ್ಯೆಯೇ ಎಂದು ಕೇಳಿದರೆ, ಹೌದು, ಇದೂ ಒಂದು ರೀತಿಯಲ್ಲಿ ಹಾಗೆಯೇ!

ಇಂದು ಭಾರತದಲ್ಲಿ ಅತಿ ಹೆಚ್ಚು ಬಳಕೆಯಲ್ಲಿರುವ ಪದ ಎಂದರೆ 'ಬ್ರಹ್ಮೋಸ್'. ಇದರ ಬಳಕೆ ವಿಶೇಷತೆಗಳ ಪೈಕಿ ಅತ್ಯಂತ ಮಹತ್ತರವಾದ ಒಂದು ಗುಣವೆಂದರೆ, ಇದರ ನಿಖರತೆ, ವೇಗ ಮತ್ತು ಕೊನೆಯ ಕ್ಷಣದವರೆಗೂ ವೈರಿಯ ಕಣ್ಣಿಗೆ ಕಾಣಿಸಿಕೊಳ್ಳದೇ ಇರುವುದು. ವಾಯು, ಭೂಮಿ ಮತ್ತು ಜಲ, ಮೂರೂ ಮಾರ್ಗಗಳಿಂದ ಹಾರಿಸಬಹುದಾದ ಸಾಮರ್ಥ್ಯವನ್ನು ಇದು ಹೊಂದಿದೆ. ಭೂಮಿಯಿಂದ ಕೇವಲ ಐದರಿಂದ ಹತ್ತು ಮೀಟರ್ ಮೇಲೆ ಹಾರಿದಾಗ ಇದು ಲೇಸರ್ ಕಣ್ಣಿಗೆ ಬೀಳುವ ಸಾಧ್ಯತೆ ಶೂನ್ಯ ಅಥವಾ ತೀರಾ ಕಡಿಮೆ ಎಂದೇ ಹೇಳಬಹುದು. ತನ್ನ ವೇಗದಿಂದಾಗಿ ಬ್ರಹ್ಮೋಸ್ ವೈರಿಯ ಕಣ್ಣಿಗೆ ಕಾಣುವಾಗ ಕೊನೆಯ ಹತ್ತರಿಂದ ಹನ್ನೆರಡು ಸೆಕೆಂಡ್ ಮಾತ್ರ ಉಳಿದಿರುತ್ತದೆ ಎಂಬ ವರದಿಯಿದೆ. ಅಷ್ಟು ಕಮ್ಮಿ ಸಮಯದಲ್ಲಿ ಅದನ್ನು ಹೊಡೆದು ಉರುಳಿಸುವುದು ಹಾಗಿರಲಿ, ತಮ್ಮನ್ನೇ ತಾವು ಬಚಾವು ಮಾಡಿಕೊಳ್ಳಲೂ ಸಾಧ್ಯವಿಲ್ಲ. ಮೊನ್ನೆಯ ಕಾರ್ಯಾಚರಣೆಯಲ್ಲಿ ಕೇವಲ ಇಪ್ಪತ್ಮೂರು ನಿಮಿಷದಲ್ಲಿ ಬ್ರಹ್ಮೋಸ್ ಪಾಕಿಸ್ತಾನಕ್ಕೆ ಸಾಕಷ್ಟು ಪೆಟ್ಟು ಕೊಟ್ಟಿದೆ. ನಿಜವಾಗಿ ಪಾಕಿಸ್ತಾನ ಕೈಕಾಲು ಬಿಟ್ಟಿದ್ದು ನಾಲ್ಕು ದಿನದ ಕಾರ್ಯಾಚರಣೆಯಲ್ಲಲ್ಲ, 23 ನಿಮಿಷದ ಬ್ರಹ್ಮೋಸ್ ದಾಳಿಯಲ್ಲಿ. ಬ್ರಹ್ಮೋಸ್ ಒಂದು ರೀತಿಯಲ್ಲಿ ವೈರಿಗಳ ಕಣ್ಣುಗಳನ್ನು ಕಟ್ಟಿಹಾಕುತ್ತದೆ. ಇದನ್ನು ಆಧುನಿಕ ಕಣ್ಣುಕಟ್ಟುವ ವಿದ್ಯೆ ಅಥವಾ ಶಸ್ತ್ರ ಎಂದು ಕರೆಯಬಹುದೇ? ನಮ್ಮ ಪುರಾತನ ಕಣ್ಣುಕಟ್ಟುವ ವಿದ್ಯೆಯೇ ನಮ್ಮ ಕೆಲಸಕ್ಕೆ ಬಂದಿತು ಎಂದು ಹೇಳಬಹುದೇ?!

ಆಪರೇಷನ್ ಸಿಂದೂರ ಕಾರ್ಯಾಚರಣೆಯಲ್ಲಿ ಸಾಕಷ್ಟು ಹೀರೋಗಳಿದ್ದಾರೆ. ಅವುಗಳಲ್ಲಿ ಬ್ರಹ್ಮೋಸ್ ಕೂಡ ಒಂದು. ಬ್ರಹ್ಮೋಸ್ ಸೂಪರ್ ಸಾನಿಕ್ ಕ್ರೂಸ್ ಮಿಸೈಲ್ ಭಾರತ ಮತ್ತು ರಷ್ಯಾ ಜಂಟಿಯಾಗಿ ತಯಾರಿಸುವ ಒಂದು ಪ್ರಮುಖ ಅಸ್ತ್ರ. ಭಾರತದ ಬ್ರಹ್ಮಪುತ್ರಾ ನದಿಯ ಬ್ರಹ್ಮ ಮತ್ತು ರಷ್ಯಾದ ಮೊಸ್ಕೊವಾ ನದಿಯ ಹೆಸರನ್ನು ಸೇರಿಸಿ ಇಟ್ಟ ಹೆಸರು, 'ಬ್ರಹ್ಮೋಸ್'. ಅದರಲ್ಲಿ ಭಾರತದ ಐವತ್ತೂವರೆ ಪ್ರತಿಶತ, ರಷ್ಯಾ ನಲವತ್ತೊಂಬತ್ತೂವರೆ ಪ್ರತಿಶತ ಸಹಭಾಗಿತ್ವ ಹೊಂದಿವೆ. ಆದರೆ, ಇತ್ತೀಚಿನ ಕೆಲವು ವರ್ಷಗಳಲ್ಲಿ ಬ್ರಹ್ಮೋಸ್‌ಗೆ ಬೇಕಾಗುವ ಬಿಡಿಭಾಗಗಳು ಮತ್ತು ಉಪಕರಣಗಳ ಪೈಕಿ ಎಂಬತ್ತರಿಂದ ಎಂಬತ್ತೈದು ಪ್ರತಿಶತ ಭಾರತದಲ್ಲಿಯೇ ತಯಾರಾಗುತ್ತದೆ. ಆದ್ದರಿಂದ, ನೂರಕ್ಕೆ ನೂರು ಅಲ್ಲದಿದ್ದರೂ ಇದನ್ನು ಭಾರತ ನಿರ್ಮಿತ ಕ್ಷಿಪಣಿ ಎಂದೇ ಪರಿಗಣಿಸಲಾಗುತ್ತದೆ. ಮೊನ್ನೆ ಬ್ರಹ್ಮೋಸ್ ಬಳಸಿ ನಡೆಸಿದ ಕಾರ್ಯಾಚರಣೆ ಕೇವಲ ಭಾರತೀಯರನ್ನಷ್ಟೇ ಅಲ್ಲ, ವಿಶ್ವದ ಹತ್ತು ಹಲವು ದೇಶದ ಸಮರಶಾಸ್ತ್ರಜ್ಞರು ಮೂಗಿನ ಮೇಲೆ ಬೆರಳಿಡುವಂತೆ ಮಾಡಿದೆ. ಬೆಳಕಿನ ವೇಗಕ್ಕೆ ಪೈಪೋಟಿ ಕೊಟ್ಟು, ವೇಗವಾಗಿ ಹೋಗಿ ಶತ್ರುಗಳನ್ನು ನಾಶ ಮಾಡುವ ಇಂಥ ಒಂದು ಅಸ್ತ್ರ ಯುದ್ಧಭೂಮಿಯಲ್ಲಿ ಯಾರಿಗೆ ಬೇಡ ಹೇಳಿ?

2022ರಲ್ಲಿ ಫಿಲಿಪ್ಪೈನ್ಸ್ ಭಾರತದಿಂದ ಸುಮಾರು 375 ಮಿಲಿಯನ್ ಡಾಲರ್ ಮೌಲ್ಯದ ಬ್ರಹ್ಮೋಸ್ ಅಸ್ತ್ರವನ್ನು ಖರೀದಿಸುವ ಒಪ್ಪಂದ ಮಾಡಿಕೊಂಡಿದ್ದು, ಎರಡು ಕಂತುಗಳ ಅಸ್ತ್ರವನ್ನು ಭಾರತ ಈಗಾಗಲೇ ವಿತರಿಸಿಯೂ ಆಗಿದೆ. ಇಂಡೋನೇಷಿಯಾ 450 ಮಿಲಿಯನ್, ವಿಯೆಟ್ನಾಮ್ 700 ಮಿಲಿಯನ್ ಡಾಲರ್ ಮೌಲ್ಯದ ಬ್ರಹ್ಮೋಸ್ ಖರೀದಿಸಲು ಮಾತುಕತೆ ನಡೆಸಿವೆ. ಇದರೊಂದಿಗೆ ಸಿಂಗಪೂರ್, ಥೈಲ್ಯಾಂಡ್, ಬ್ರೆಜಿಲ್, ವೆನಿಜುವೆಲಾ, ಈಜಿಪ್ಟ್, ಸೌದಿ ಅರೇಬಿಯಾ, ಕತಾರ್, ಒಮಾನ್ ಸೇರಿದಂತೆ ಒಟ್ಟು ಹದಿನೇಳು ರಾಷ್ಟ್ರಗಳು ಬ್ರಹ್ಮೋಸ್ ಖರೀದಿಸಲು ಉತ್ಸುಕವಾಗಿವೆ ಎಂಬ ವರದಿ ಇದೆ.

ಇರಲಿ, ಆಗಲೇ ಹೇಳಿದಂತೆ ಈ ಕಾರ್ಯಾಚರಣೆಯಿಂದ ಭಾರತಕ್ಕೆ ದಕ್ಕಿದ್ದೇನು ಎಂದು ಕೇಳಿದರೆ, ಭಾರತದ ಶಸ್ತ್ರಾಸ್ತ್ರಗಳನ್ನು ತಯಾರಿಸುವ ಸಂಸ್ಥೆಗಳ ಷೇರಿನ ದರದಲ್ಲಿ ಭಾರಿ ಏರಿಕೆಯಾಗಿದೆ. ಸಣ್ಣ ಲೆಕ್ಕಾಚಾರ ಹೇಳುವುದಾದರೆ, ಕಳೆದ ಒಂದು ವಾರದಲ್ಲಿ, ಯುದ್ಧ ವಿಮಾನ ಮತ್ತು ಡ್ರೋನ್ ತಯಾರಿಸುವ ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ಷೇರಿನಲ್ಲಿ ಏಳು ಪ್ರತಿಶತ ವೃದ್ಧಿಯಾಗಿದೆ. ರೆಡಾರ್ ತಯಾರಿಸುವ ಭಾರತ್ ಇಲೆಕ್ಟ್ರಾನಿಕ್ಸ್ ಸಂಸ್ಥೆಯ ಷೇರಿನಲ್ಲಿ ಸುಮಾರು ಹನ್ನೊಂದು ಪ್ರತಿಶತ, ಮಿಸೈಲ್ ತಯಾರಿಸುವ ಭಾರತ್ ಡೈನಮಿಕ್ಸ್ ಷೇರಿನಲ್ಲಿ ಸುಮಾರು ಇಪ್ಪತ್ತು ಪ್ರತಿಶತ ವೃದ್ಧಿಯಾಗಿದೆ. ಬಂದೂಕು ಮತ್ತು ಮದ್ದುಗುಂಡು ತಯಾರಿಸುವ ಭಾರತ್ ಫೋರ್ಜ್ ಸಂಸ್ಥೆಯ ಷೇರಿನಲ್ಲಿ ಶೇಕಡ ಹತ್ತು, ಟ್ಯಾಂಕರಗಳನ್ನು ತಯಾರಿಸುವ ಪಾರಸ್ ಡಿಫೆನ್ಸ್ ಸಂಸ್ಥೆಯ ಷೇರಿನಲ್ಲಿ ಶೇಕಡ ಏಳರಷ್ಟು ವೃದ್ಧಿಯಾಗಿದೆ.

ಇಲ್ಲಿ ಗಮನಿಸಬೇಕಾದ ವಿಷಯವೆಂದರೆ, ಇವೆಲ್ಲ ಶಸ್ತ್ರಾಸ್ತ್ರ ತಯಾರಿಸುವ 'ಭಾರತೀಯ ಮೂಲ'ದ ಸಂಸ್ಥೆಗಳು. ಕೆಲವು ವರ್ಷಗಳ ಹಿಂದೆ 'ಮೇಕ್ ಇನ್ ಇಂಡಿಯಾ' ಅಭಿಯಾನ ಆರಂಭವಾದಾಗ, ಈ ಅಭಿಯಾನವನ್ನು ಸಾಕಷ್ಟು ಜನ ಹೀಗಳೆದಿದ್ದರು. ಇದು ಭಾರತದಂಥ ದೇಶಕ್ಕೆ ಹಡಂಗವಾದದ್ದಲ್ಲ, ಇದು ನಮ್ಮ ದೇಶದಲ್ಲಿ ಯಶಸ್ವಿಯಾಗುವುದಿಲ್ಲವೆಂದು ಹೇಳಿದವರು ಈಗಲೂ ಬದುಕಿದ್ದಾರೆ. ಆದರೆ, ಅದಕ್ಕೆಲ್ಲ ಉತ್ತರ ಇಂದು ನಮಗೆ ದೊರಕುತ್ತಿದೆ. ಅಂಕಿ-ಅಂಶಗಳು ಅದನ್ನು ದೃಢಪಡಿಸುತ್ತವೆ. 2014ರ ವೇಳೆಗೆ ಭಾರತ ಸುಮಾರು ಆರುನೂರ ಎಂಬತ್ತು ಕೋಟಿ ರು. ಮೌಲ್ಯದ ಶಸ್ತ್ರಾಸ್ತ್ರಗಳನ್ನು, ಯುದ್ಧೋಪಕರಣಗಳನ್ನು ರಫ್ತು ಮಾಡುತ್ತಿತ್ತು. ಇಂದು ಇದು ಸುಮಾರು ಮೂವತ್ತೈದು ಪಟ್ಟು ಹೆಚ್ಚಾಗಿ, ಸುಮಾರು ಇಪ್ಪತ್ನಾಲ್ಕು ಸಾವಿರ ಕೋಟಿ ದಾಟಿದೆ. ಮುಂದಿನ ಐದು ವರ್ಷದಲ್ಲಿ ಇದನ್ನು ದ್ವಿಗುಣಗೊಳಿಸುವ ಇರಾದೆಯನ್ನು ಭಾರತ ಹೊಂದಿದೆ. ಹಾಗೆಯೇ, ಇನ್ನೂ ಎರಡೂವರೆ ದಶಕದ ನಂತರ, ಅಂದರೆ, ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕು ನೂರು ವರ್ಷವಾಗುವ ವೇಳೆಗೆ ವಿಶ್ವದಲ್ಲಿಯೇ ಅತಿ ಹೆಚ್ಚು ಶಸ್ತ್ರಾಸ್ತ್ರಗಳನ್ನು ರಫ್ತು ಮಾಡುವ ದೇಶವಾಗುವ ಕನಸನ್ನು ಭಾರತ ಕಾಣುತ್ತಿದೆ.

ಇದು ನಾವು ಎಣಿಸಿದಷ್ಟು ಸುಲಭದ ಕಾರ್ಯವಲ್ಲ. ಈ ಕಾಲಘಟ್ಟದಲ್ಲಿ ಯಾವ ರೀತಿಯ ಬದಲಾವಣೆಯೂ ಆಗಬಹುದು. ಆದರೆ, ಯಾವುದೇ ಒಂದು ದೇಶಕ್ಕೆ, ಅದರಲ್ಲೂ ಸೇನೆ, ಶಸ್ತ್ರಾಸ್ತ್ರ ಇತ್ಯಾದಿ ವಿಷಯಗಳನ್ನು ಲಕ್ಷ್ಯದಲ್ಲಿಟ್ಟುಕೊಂಡಾಗ ಗುರಿ ದೊಡ್ಡದಾಗಿಯೂ, ಸ್ಪಷ್ಟವಾಗಿಯೂ ಇರಬೇಕು. ಇದು ಕಷ್ಟವೇ ಇರಬಹುದು, ಆದರೆ ಅಸಾಧ್ಯವಲ್ಲ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳಬೇಕು. 'ಆಗದು ಎಂದು ಕೈಕಟ್ಟಿ ಕುಳಿತರೆ, ಸಾಗದು ಕೆಲಸವು ಮುಂದೆ...' ಅಲ್ಲವೇ?

ಈ ನಡುವೆ ಭಾರತದ ಡಿಆರ್‌ಡಿಒ ಸಂಸ್ಥೆ ಇನ್ನೊಂದು ಸಂತಸದ ಸುದ್ದಿ ನೀಡಿದೆ. ಕಳೆದ ಏಪ್ರಿಲ್ ತಿಂಗಳ 13ನೇ ತಾರೀಖಿನಂದು ಲೇಸರ್ ಬಳಸಿ ಡ್ರೋನ್‌ಗಳನ್ನು, ಯುದ್ಧವಿಮಾನಗಳನ್ನು ಆಕಾಶದಲ್ಲಿಯೇ ಸುಟ್ಟು ಭಸ್ಮ ಮಾಡುವ ತಂತ್ರಜ್ಞಾನವನ್ನು ಕಂಡುಹಿಡಿದಿದೆ. ಇದನ್ನು ಸಂಪೂರ್ಣವಾಗಿ ಭಾರತದಲ್ಲಿಯೇ ತಯಾರಿಸಲಾಗಿದೆ. ಇದರಿಂದಾಗಿ ಭಾರತ ಈ ಮೊದಲು ಇದೇ ತಂತ್ರಜ್ಞಾನವನ್ನು ಕಂಡುಹಿಡಿದ ಅಮೆರಿಕ, ರಷ್ಯಾ ಮತ್ತು ಚೀನಾದ ಜತೆ ಸೇರಿ, ನಾಲ್ಕನೆಯ ರಾಷ್ಟ್ರವಾಗಿ ನಿಂತಿದೆ. ಅಂದರೆ, ಮುಂದಿನ ದಿನಗಳಲ್ಲಿ ಭಾರತದ ಶಸ್ತ್ರಾಸ್ತ್ರಗಳ ಜತೆಗೆ, ಡ್ರೋನ್ ಮತ್ತು ಯುದ್ಧವಿಮಾನಗಳ ಪ್ರತಿರೋಧಕಗಳಿಗೂ ಹೆಚ್ಚಿನ ಬೇಡಿಕೆ ಬರಲಿದೆ.

ಇಂದು ಇಡೀ ಪ್ರಪಂಚವೇ ಅಮೆರಿಕ, ಚೀನಾದಂಥ ದೇಶವನ್ನು ಅತ್ಯಂತ ಬಲಶಾಲಿ ದೇಶ, ಸೂಪರ್‌ಪವರ್ ದೇಶ ಎಂದು ಹೇಳುತ್ತದೆ. ಅದರ ಜತೆಯಲ್ಲಿಯೇ ಅಮೆರಿಕದಲ್ಲಿ ತಯಾರಾದ ಯುದ್ಧವಿಮಾನಗಳು, ಚೀನಾದಲ್ಲಿ ತಯಾರಾದ ಶಸ್ತ್ರಾಸ್ತ್ರಗಳ ಗುಣಮಟ್ಟದ ಕುರಿತು ಅಪಸ್ವರವೂ ಕೇಳಿಬರುತ್ತಿದೆ. ಆದರೆ, ಚೀನಾಕ್ಕೆ ಸೂಪರ್ ಪವರ್ ಎಂಬ ಬಿರುದು ಅಥವಾ ಸ್ಥಾನ ಲಭಿಸಿದ್ದು ಹೇಗೆ? ಯುದ್ಧ ನೀತಿಯಲ್ಲಿ ಒಂದು ದೇಶ 'ಸಬಲ' ಎಂದು ಎನಿಸಿಕೊಳ್ಳಬೇಕಾದರೆ, ಸೇನಾಬಲ ಮತ್ತು ಶಸ್ತ್ರಾಸ್ತ್ರಗಳ ಬಲ ಎರಡರಲ್ಲಿಯೂ ಬಲಶಾಲಿಯಾಗಿರಬೇಕಾಗುತ್ತದೆ. ಆಗ ಮಾತ್ರ ಆ ದೇಶವನ್ನು ಸೂಪರ್ ಪವರ್ ದೇಶ ಎಂದು ಪರಿಗಣಿಸಲಾಗುತ್ತದೆ. ಒಂದು ದೇಶ ಸಬಲವಾಗಬೇಕಾದರೆ, ಅದು ಬೇರೆ ದೇಶದ ಮೇಲೆ ನಿರ್ಭರಿತವಾಗಿರಬಾರದು, ಬೇರೆ ದೇಶವನ್ನು ಅವಲಂಬಿಸಿರಬಾರದು. ಹೆಚ್ಚಿನ ಶಸ್ತ್ರಾಸ್ತ್ರಗಳು, ಯುದ್ಧದ ಉಪಕರಣಗಳು ಆ ದೇಶದಲ್ಲಿಯೇ ತಯಾರಾಗಬೇಕೇ ವಿನಾ ಬೇರೆ ದೇಶದದಲ್ಲಲ್ಲ. ಇಂದು ಅಮೆರಿಕವಾಗಲಿ, ಚೀನಾವಾಗಲಿ ಯುದ್ಧದ ಉಪಕರಣಗಳು ಅಥವಾ ಶಸ್ತ್ರಾಸ್ತ್ರಗಳ ವಿಷಯ ಬಂದಾಗ, ಒಂದೋ ಎರಡೋ ಪ್ರತಿಶತದಷ್ಟು ಬೇರೆ ದೇಶವನ್ನು ಅವಲಂಬಿಸಿರಬಹುದು, ಬಿಟ್ಟರೆ ಬಹುತೇಕ ಶಸ್ತ್ರಾಸ್ತ್ರಗಳು ಆಯಾ ದೇಶದಲ್ಲಿಯೇ ತಯಾರಾಗುತ್ತದೆ. ಭಾರತ ತನಗೆ ಬೇಕಾದ ಶಸ್ತ್ರಾಸ್ತ್ರಗಳ ಪೈಕಿ ಅರವತ್ತರಿಂದ ಅರವತ್ತೈದು ಪ್ರತಿಶತದಷ್ಟು ವಿದೇಶದಿಂದ ಆಮದು ಮಾಡಿಕೊಳ್ಳುತ್ತದೆ. ಈ ಆಮದಿನ ಸಂಖ್ಯೆ ಶೇಕಡ ಹತ್ತರ ಒಳಗೆ ಬಂದು ನಿಲ್ಲಬೇಕು. ಭಾರತ ತನಗೆ ಬೇಕಾದ ಶಸ್ತ್ರಾಸ್ತ್ರಗಳನ್ನು ತಯಾರಿಸಿಕೊಳ್ಳುವುದರ ಜತೆಗೆ ಇತರ ದೇಶಗಳಿಗೆ ರಫ್ತು ಮಾಡುವಂತೆಯೂ ಆಗಬೇಕು. ಅಂದರೆ ಮಾತ್ರ ವಿಶ್ವಗುರು ಆಗಲು ಸಾಧ್ಯ.

ಪ್ರತಿಸ್ಪಂದನ

ಎಚ್.ಆನಂದರಾಮ ಶಾಸ್ತ್ರೀ, ಬೆಂಗಳೂರು

ಅಮೆರಿಕ ಇನ್ನು ದೊಡ್ಡಣ್ಣ ಅಲ್ಲ!

ತನ್ನ ಮಧ್ಯಸ್ಥಿಕೆಯಿಂದಾಗಿಯೇ ಭಾರತ-ಪಾಕ್ ನಡುವೆ ಕದನವಿರಾಮ ಏರ್ಪಟ್ಟಿತೆಂದೂ, ಅಣ್ವಸ್ತ್ರ ಯುದ್ಧದಿಂದ ಲಕ್ಷಾಂತರ ಜೀವಹಾನಿಯಾಗುವುದು ತನ್ನ ಪ್ರಯತ್ನದಿಂದಲೇ ತಪ್ಪಿತೆಂದೂ ಅಪ್ಪಟ ಸುಳ್ಳುಗಳನ್ನು ಹೇಳುವ ಮೂಲಕ ಅಮೆರಿಕವು ಜಗತ್ತಿನೆದುರು ತನ್ನ ಘನತೆಯನ್ನು ತಾನೇ ಕುಗ್ಗಿಸಿಕೊಂಡಿದೆ. ಪಾಕ್ ಸೇನಾಧಿಕಾರಿಯು ಭಾರತದ ಸೇನಾಧಿಕಾರಿಯನ್ನು ಸಂಪರ್ಕಿಸಿ ಬೇಡಿಕೊಂಡಾಗ ಶಾಂತಿಪ್ರಿಯ ಭಾರತವು ಕದನವಿರಾಮಕ್ಕೆ ಸಮ್ಮತಿಸಿರುವುದು ಇಡೀ ಜಗತ್ತಿಗೆ ಗೊತ್ತಿದೆ. ಇನ್ನು, ಅಣ್ವಸ್ತ್ರ ಪ್ರಯೋಗದ ಬಗ್ಗೆ ಪಾಕಿಸ್ತಾನವು ಬರೀ ಪೊಳ್ಳು ಬೆದರಿಕೆಗಳನ್ನು ಒಡ್ಡುತ್ತಿದ್ದರೆ, ಭಾರತವು ಅಂಥ ಒಂದು ಪೊಳ್ಳು ಮಾತನ್ನೂ ಆಡಲಿಲ್ಲ. ಹೀಗಿರುವಾಗ, ಅಣ್ವಸ್ತ್ರ ಯುದ್ಧ ಆಗುತ್ತಿತ್ತು ಎಂಬ ಹೇಳಿಕೆಯೇ ಹಾಸ್ಯಾಸ್ಪದ. ಅಣ್ವಸ್ತ್ರ ಪ್ರಯೋಗವು ತನ್ನ ಸರ್ವನಾಶಕ್ಕೆ ಹೇತುವಾಗುತ್ತದೆ ಎಂಬುದು ಪಾಕಿಸ್ತಾನಕ್ಕೆ ಗೊತ್ತು ಮತ್ತು ಭಾರತಕ್ಕೆ ತನ್ನ ಜವಾಬ್ದಾರಿಯ ಸಂಪೂರ್ಣ ಅರಿವಿದೆ. ಹೀಗಿರುವಾಗ, ಅಮೆರಿಕ ಅಧ್ಯಕ್ಷ ಟ್ರಂಪ್ ಅವರ ಈ 'ಅಣುಬಾಂಬ್' ಪ್ರಯೋಗವು ನಿರೀಕ್ಷೆಯಂತೆಯೇ ಟುಸ್ ಆಯಿತು. ಯಾವ ದೇಶವೂ ಅವರ ಈ ಮಾತನ್ನು ನಂಬಲಿಲ್ಲ.

ಜಗತ್ತಿನ ಪ್ರಮುಖ ಆರ್ಥಿಕ ಶಕ್ತಿಯಾಗುವತ್ತ ಚೀನಾವು ದಾಪುಗಾಲಿಡುತ್ತಿರುವಾಗ ಮತ್ತು ಭಾರತವು ಈ ಪೈಪೋಟಿಯಲ್ಲಿ ತನ್ನ ವೇಗವನ್ನು ಹೆಚ್ಚಿಸಿಕೊಳ್ಳುತ್ತಿರುವಾಗ ಅಮೆರಿಕವು ಇನ್ನಾದರೂ ದೊಡ್ಡಣ್ಣನಂತೆ ವರ್ತಿಸುವುದನ್ನು ನಿಲ್ಲಿಸಬೇಕು. ಡಾಲರಿನ ಬದಲಿಗೆ ಜಪಾನಿನ ಯೆನ್, ಭಾರತದ ರುಪಾಯಿ ಮೊದಲಾದ ಕರೆನ್ಸಿಗಳು ವಿವಿಧ ದೇಶಗಳಲ್ಲಿ ವಿನಿಮಯಕ್ಕಾಗಿ ಬಳಕೆಯಾಗುವ ಸಾಧ್ಯತೆಯನ್ನು ಭವಿಷ್ಯದಲ್ಲಿ ಅಲ್ಲಗಳೆಯಲಾಗದು. ಈಗಾಗಲೇ ಟ್ರಂಪ್ ಅವರಿಗೆ ಈ ಕುರಿತು ಕಳವಳ ಉಂಟಾಗಿದ್ದು, ಜಗತ್ತಿಗೆ 'ತೆರಿಗೆ ಭೂತ'ವನ್ನು ಬಿಂಬಿಸುವ ಸಂದರ್ಭದಲ್ಲಿ ವಿದೇಶಿ ವಿನಿಮಯ ಕರೆನ್ಸಿಯ ಬಗ್ಗೆಯೂ ಬೆದರಿಕೆಯ ಹೇಳಿಕೆಗಳನ್ನು ಕೊಟ್ಟಿದ್ದಾರೆ.

ವಿಶ್ವದಲ್ಲಿ ತೀವ್ರವಾಗಿ ಬದಲಾಗುತ್ತಿರುವ ಆರ್ಥಿಕ-ಸಾಮಾಜಿಕ-ರಾಜಕೀಯ ಸ್ಥಿತಿಗತಿಗಳನ್ನು ಗಮನಿಸಿ ಅಮೆರಿಕವು ಇನ್ನಾದರೂ, ತಾನು ದೊಡ್ಡಣ್ಣ ಎಂಬ ಭ್ರಮೆಯಿಂದ ವರ್ತಿಸುವುದನ್ನು ಕೈಬಿಡಬೇಕು. ಸ್ವವೈಭವೀಕರಣದ ಎರಡು ಸುಳ್ಳು ಹೇಳಿಕೆಗಳಿಂದ ಜಾಗತಿಕ ಮಟ್ಟದಲ್ಲಿ ತನ್ನ ಘನತೆ ಕುಗ್ಗಿರುವುದನ್ನು ಟ್ರಂಪ್ ಅವರು ಒಂದು ಪಾಠವಾಗಿ ಸ್ವೀಕರಿಸಬೇಕು. ಭಾರತ-ಪಾಕ್ ಸಂಘರ್ಷದುದ್ದಕ್ಕೂ ಭಾರತವು ಕಾಯ್ದುಕೊಂಡಿರುವ ಸ್ಥಿರತೆಯನ್ನು, ಪ್ರದರ್ಶಿಸಿರುವ ಪರಾಕ್ರಮವನ್ನು, ನಿರ್ವಹಿಸಿರುವ ಜಾಗತಿಕ ಹೊಣೆಗಾರಿಕೆಯನ್ನು ಮತ್ತು ತೋರಿರುವ ಸಂಯಮವನ್ನು ಅಮೆರಿಕವು ಅರಿಯಬೇಕು ಮತ್ತು ಒಪ್ಪಿಕೊಳ್ಳಬೇಕು. ಮುಖ್ಯವಾಗಿ, ಭಾರತ-ಪಾಕ್ ವಿಷಯದಲ್ಲಿ ತಾನು ಹಸ್ತಕ್ಷೇಪ ಮಾಡುವ ದುಸ್ಸಾಹಸವನ್ನು ನಿಲ್ಲಿಸಬೇಕು.

(ಲೇಖಕರು ಸಾಹಿತಿ)

ವೀರಶೈವ ಲಿಂಗಾಯತರೇ, ಉಳಿವಿಗಾಗಿ ಎದ್ದೇಳಿ ಎಚ್ಚರಗೊಳ್ಳಿ!

ಬಸವ ಮಂಟಪ
ರವಿ ಹಂಜ್
vveditoped@gmail.com

ಬಸವಣ್ಣನ ಶರಣಪಡೆಯ ಪ್ರಮುಖ ಸಕಳೇಶ ಮಾದರಸನ ಮೊಮ್ಮಗನಾದ ಕೆರೆಯ ಪದ್ಮರಸನು ಹೊಯ್ಸಳರ ಮಂತ್ರಿಯಾಗಿ ದ್ವಾರಸಮುದ್ರದಲ್ಲಿ ನೆಲೆಸಿದ್ದನು. ವೀರಶೈವ ಮತ ಮತ್ತು ಸಿದ್ಧಾಂತದಲ್ಲಿ ಅಗಾಧ ಪಾಂಡಿತ್ಯವನ್ನು ಹೊಂದಿದ್ದ ಇವನು ವೀರಶೈವದರ್ಶನದ ಕುರಿತಾಗಿ 'ದೀಕ್ಷಾ ಬೋಧೆ' ಕೃತಿಯನ್ನು ರಚಿದ್ದಾನೆ. ಈ ಕೃತಿಯಲ್ಲಿ ವೀರಶೈವವು ಹೇಗೆ ವೇದಾಗಮೋಪನಿಷತ್ತುಗಳ ಆಧಾರವಾಗಿದೆ ಮತ್ತು ಹೇಗೆ ವಿಭಿನ್ನವಾಗಿಯೂ ಇದೆ ಎಂದು ವಿಸ್ತೃತವಾಗಿ ತಿಳಿಸಿರುವುದಲ್ಲದೆ ವೀರಶೈವ ವಿಧಿ ವಿಧಾನಗಳನ್ನು ದಾಖಲಿಸಿದ್ದಾನೆ. ಬಸವಣ್ಣನ ಕಾಲಕ್ಕಿಂತ ಕೇವಲ ಐವತ್ತು ವರ್ಷಗಳ ಅಂತರದಲ್ಲಿದ್ದ ಮತ್ತು ವಚನಕಾರನೋರ್ವನ ನೇರ ವಂಶಜನೂ ಆದ ಪದ್ಮರಸನು ಇಡೀ ಗ್ರಂಥದಲ್ಲಿ ಎಲ್ಲಿಯೂ ಬಸವಣ್ಣನನ್ನಾಗಲಿ, ವಚನಗಳನ್ನಾಗಲಿ ಉಲ್ಲೇಖಿಸಿಲ್ಲ. ಇಡೀ ಗ್ರಂಥದಲ್ಲಿ ಅನಾದಿಯಾಗಿದ್ದ ವೀರಶೈವ ಪರಂಪರೆಯ ಕುರಿತಾಗಿ ಬರೆದಿದ್ದಾನೆ. ಅಲ್ಲಿಗೆ ವೀರಶೈವ ಲಿಂಗವಂತ ಮತವು ಅಧಿಕೃತವಾಗಿ ಅನಾದಿಯಿಂದಲೂ ಇದ್ದು ಬಸವಣ್ಣನು ಅದರ ಅನುಯಾಯಿಯಾಗಿದ್ದನೆಂದು ತಿಳಿದುಬರುತ್ತದೆ.

ಅದೇ ರೀತಿ 1340ರ ಕಾಲಘಟ್ಟದ ಹೊಯ್ಸಳರ ಹರದನಹಳ್ಳಿ ಶಾಸನದಲ್ಲಿ ಮಹದೇಶ್ವರರನ್ನು ಒಳಗೊಂಡಂತೆ ಹಿರಿನಂಕಾಶ್ವೇರ, ಪಂದೇಶ್ವರ, ಸಿದ್ದೇಶ್ವರ, ಬ್ರಹ್ಮೇಶ್ವರ ಎಂಬುವವರಿಗೆ ಪ್ರಭು ಲಿಂಗಾರಾಧ್ಯರು ಲಿಂಗಧಾರಣೆಯನ್ನು ಮಾಡಿ ಐದು ಲಿಂಗಗಳಿಗೆ ಐದು ಮಠಗಳೆಂದು ಹೇಳಿ ಐವರನ್ನು ಮುಖ್ಯಸ್ಥರನ್ನಾಗಿ ನೇಮಿಸಿದರು ಎನ್ನುತ್ತದೆಯೇ ಹೊರತು ಬಸವ ಸ್ಥಾಪಿತ ಎಂದು ಹೇಳಿಲ್ಲ. ಶಾಸನದ ಪಾಠ ನಿಮಗಾಗಿ: ''ಕುಲಾಂತರಮಿಗೆ ಕೂಟಪಾಲುಗಳು ವಿಂಗಡಿಸಿ ಮುನ್ನೂರು ಮೂವತ್ತೈದು ಪಂಗಡ (ಗ)ಳನಾಗಮಾಡಿ ತತ್ತವರಿಗೆ ಆರಾಧಕರಾಗಿಯು ಕೋವಿನಕೆರೆ ಸಾಸಲರಾಯನೆಂಬುವಗೆ ಲಿಂಗಧಾರಣೆಯಂ ಮಾಡಿ ನಟಗಾರ ರಾಯಣನಾಯ್ಕನಿಗೆ ಮಲೆನಾಡಿಗೆ ಪಟ್ಟವಂ ಕಟ್ಟಿ ಕುಳವಂದಕೆ ವಂಬತ್ತು ಪ್ರಯಪಣದಂತೆ ಯಲ್ಲರೊಳು ಕಟ್ಟು ಕಾಣಿಕೆಗಳನು ಪಡೆದು ಪಡಿಪತ್ತಿ ದೇಶಕ್ಕೆ ಪ್ರಯಾಣಮಾಡಿ ಸತ್ವ ದಷ್ಟನಾದ ರಾಜನ ಮಗನಂ ಬದುಕಿಸಿ ವಾದದಲ್ಲಿ ಗೆಲದು ನಾಮವನು ತೆಗಿತಿ ಭಸ್ಮವಂ ಇಡಿಸಿ ಲಿಂಗಧಾರಣೆಯಂ ಮಾಡಿ ತುಳುವ ದೇಶಕ್ಕೆ ಬಂದು ತುಲಕಾಣ್ಯರಿಗೆ ಮಹಿಮೆಯಂ ತೋರಿ ಶತಪವಾಡಮ ಹನೀಯರೆಂದು ಬಿರುದಂ ಪಡೆದ ಶ್ರೀಮದ್ಯೋಸಲಾರೈ ವರಸ್ವಾಮಿ ಸನ್ನಿಧಾನ ಸಂಕಾಶೆ। ಸ್ವಸ್ತಿ ಸಮಸ್ತ ಭುವನಾಶ್ರಯ ಶ್ರೀ ಪೃಥ್ವಿವಲ್ಲಭಶ್ರೀಪ್ರತಾಪಚಕ್ರವರ್ತಿ ಹೊಯ್ಸಳ ವೀರಬಲ್ಲಾಳ ದೇವರು ಶ್ರೀವಿಜಯಾಭ್ಯುದಯ ಶಾಲಿವಾಹನಶಕ ವರ್ಷಂಗಳು 1246ನೆಯ ತಾರಣಸಂಬತ್ತರದ ಮಾಗ ಸುದ್ದ ತದಿಗೆಯಲು ದಕ್ಷಿಣದೇಶ ವಿಜಯಯಾತ್ರೆಯಲು ಬರಸಿಕೊಟ್ಟ ತಾಂಬ್ರಶಾಸನಕ್ರಮವೆಂತೆಂದೊಡೆ ॥ 1) ಹಿರಿ ಮಡಿವಾಳದ ಶಿವನಂಕಾರೇಶ್ವರರಿಗೆ ಚಂದ್ರಣಿಮಠದವರು 2) ಮಾದೇಶ್ವರರಿಗೆ ಕಂಚಿಕೆಲುಗಾಣ್ಯದ ಮಠ 3) ಸಂದೇಶ್ವರರಿಗೆ ಶ್ರೀವಾಣಿಜ್ಯ ಪುರಿಮಠ 4) ಸಿದ್ದೇಶ್ವರರಿಗೆ ಕೆಂಬಲ್ಲಮಠ 5) ಬ್ರಂಹ್ಮಶ್ವರರಿಗೆ ಮಹಲಿಂಗಿಮಠವೆಂತಲೂ ಈ ಪಂಚೈದು ಲಿಂಗಗಳಿಗೆ ಈ ಮಠಗಳೆಂದು ವಿಧಿಶಿ ತತ್ತದೇವಸ್ಥಾನಕೆ ಸೇರಿದ ತಂಮಡಿಗಳು ಶಿಷ್ಯರು ಬೇಡಗಂಪಣಗಳಿಗೆ ತತ್ತ್ವ ಮಠಾಧಿಪತಿಗಳೇ ಲಿಂಗಧಾರಣ ತೀರ್ಥ ಪ್ರಸಾದಗಳಂ ಕೊಟ್ಟು ಅವರಿಂ ಕಟ್ಟು ಕಾಣಿಕೆಗಳಂ ತೆಗೆದು ಆ ದೇವಾಲಯಂಗಳಲಿ ನಡೆಯುವ ಯಲ್ಲಾ ಕಾರ‍್ಯಗಳಂ ನಡೆಸತಕ್ಕುದೆಂದು ನೇಮಿಸಿರುತ್ತೇವೆ...'' ಎಂದಿದೆ.

ಒಟ್ಟಾರೆ ಇಳೆಯಗಲ ಮುಗಿಲಗಲ ಬಗೆದಷ್ಟೂ, ಮೊಗೆದಷ್ಟೂ ಐತಿಹಾಸಿಕ, ಭೌಗೋಳಿಕ, ಸಾಹಿತ್ಯಿಕ, ಮತ್ತು ಪುರಾತತ್ವ ಪುರಾವೆಗಳು ವೀರಶೈವ ಲಿಂಗಾಯತ ಒಂದೇ ಎಂದು ದೃಢೀಕರಿಸುತ್ತವೆ. ಭಾರತದ ಹರಪ್ಪಾ ಮೊಹೆಂಜೋದಾರೋ ಇತಿಹಾಸದಿಂದ ವರ್ತಮಾನದವರೆಗಿನ ಈ ಪುರಾವೆಗಳು ಕಣ್ಣಿಗೆ ಢಾಳಾಗಿ ರಾಚುತ್ತವೆ. ಹೀಗಿದ್ದಾಗ ಶೂನ್ಯದಿಂದ 'ಛೂಮಂತರ್' ಎಂದು ಆಧುನಿಕ ಧರ್ಮಭಂಜಕರು ಸೃಷ್ಟಿಸಿರುವ ಪ್ರತ್ಯೇಕ ಧರ್ಮ ಎಂದಿನಿಂದಲೂ ನಿಶ್ಶೂನ್ಯವೇ ಆಗಿದೆ. ಇದನ್ನು ಕೇವಲ ಜನರ ಗಮನಕ್ಕಾಗಿ ಕಾತರಿಸಿ, ''ನನ್ನನ್ನು ಗಮನಿಸಿ, ನನ್ನನ್ನು ಗಮನಿಸಿ'' ಎಂದು ಚೀತ್ಕರಿಸಿ ಪೂತ್ಕರಿಸಿ ಜಿಗಿಜಿಗಿದಾಡುವ Histrionic Personality Disorder (HBD) ಯಾನೆ ''ನಾಟಕೀಯ ವ್ಯಕ್ತಿತ್ವದ ಅಸ್ವಸ್ಥತೆ''ಯ ರೋಗಿಗಳಂತೆ ಸಮಾಜವು ಈ ಭಂಜಕರನ್ನು ಉಪೇಕ್ಷಿಸಿ ಮುಂದುವರಿಯಬೇಕಿದೆ. ಇವರ ಶಬ್ದಮಾಲಿನ್ಯದ ಅಪಾನವಾಯುವಿನ ಈ ಉಬ್ಬರಕ್ಕೆ ಮತ್ತೊಂದು ಕಾರಣ, ಇವರು ತಮಗೆ ಹಾಲುಳಿಸಕ್ಕರೆ (ಲ್ಯಾಕ್ಟೋಸ್) ತಾಳುಗೇಡಿತನವಿದ್ದರೂ ಬಸವಣ್ಣನನ್ನು ನಂದಿನಿ ಮಾಡಿಕೊಂಡು ಹಾಲು ಹಿಂಡಿ ಹಿಗ್ಗುತ್ತಿರುವುದು! ಹಾಗಾಗಿ ವೀರಶೈವ ಲಿಂಗಾಯತ ಸಮಾಜ ಈ ಮನೋವ್ಯಾಧಿಗರ ಹಾಲುಳಿಸಕ್ಕರೆ ತಾಳುಗೇಡಿತನಕ್ಕೆ, ರಂಗಜಂಗಮಕ್ಕೆ ಮತ್ತು ನಿತ್ಯಕಲ್ಯಾಣಕ್ಕೆ ಸೂಕ್ತವಾಗಿ ಬಸವಣ್ಣನು ನಂದಿಯೆಂಬ ಗಣನೇ ಹೊರತು ನಂದಿನಿಯಲ್ಲ ಎಂದು ಎತ್ತಿ ತೋರಿಸಿಕೊಡಬೇಕಿದೆ.

ಏಕೆಂದರೆ, ಇಡೀ ದೇಶದಲ್ಲಿ ಕರ್ನಾಟಕದ ಮತದಾರರು ಪ್ರಬುದ್ಧ ಮತದಾರರೆಂಬ ಖ್ಯಾತಿ ಇದೆ. ಕರ್ನಾಟಕದ ಪ್ರಬುದ್ಧ ಮತದಾರರು ಯಾವುದೇ ಮುಲಾಜಿಲ್ಲದೆ ಆರು ತಿಂಗಳ ಅವಧಿಯಲ್ಲೇ ವಿಧಾನಸಭೆಗೆ ಮತ್ತು ಲೋಕಸಭೆಗೆ ಬೇರೆ ಬೇರೆ ಪಕ್ಷಗಳನ್ನು ಚುನಾಯಿಸಿದ್ದಾರೆ. ಇಂಥ ಪ್ರಬುದ್ಧ ಮತದಾರರಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ವೀರಶೈವ ಮತದಾರರನ್ನು ವಿಭಜಿಸಲೆಂದೇ ಸೃಷ್ಟಿಯಾದದ್ದು 'ಲಿಂಗಾಯತ ಪ್ರತ್ಯೇಕ ಧರ್ಮ ಚಳವಳಿ ಉರ್ಫ್ ಅರಿವಳಿ!' ಇದಕ್ಕೆ ರಾಜಕೀಯ ಪಕ್ಷವೊಂದು ತನ್ನ ಅಡುಗೆಮನೆ ಸಂಶೋಧಕ ಬುದ್ಧಿಜೀವಿಗಳ ಸಹಯೋಗದಲ್ಲಿ ಯಶಸ್ವಿಯಾಗಿ ಗೊಂದಲ ಸೃಷ್ಟಿಸಿತು. ಎಡಪಂಥೀಯ ನಿವೃತ್ತ ನ್ಯಾಯಾಧೀಶರೊಟ್ಟಿಗೆ ಇನ್ನೊಂದಿಷ್ಟು ಅದೇ ಚಿಂತನೆಯ ಮತ್ತು ಅಖಂಡ ವೀರಶೈವ ಮತದ ತಲೆಬುಡ ಅರಿಯದ ಆದರೆ ಕೆಲವು ಸುಲಭ ವಚನಗಳನ್ನು ಕಮ್ಯುನಿಸ್ಟ್ ಚಿಂತನೆಗೆ ಹೋಲಿಸುವ 'ಜೀ ಹುಜೂರ್' ಸದಸ್ಯರ ಕಮಿಟಿ ಆಯೋಜಿಸಲಾಯಿತು. ಈ ಜೀ ಹುಜೂರ್ ಕಮಿಟಿ ತಕ್ಷಣವೇ ಆಯೋಜಕರು ಬಯಸಿದಂತೆ ವರದಿ ಗೀಚಿ ಕೇಂದ್ರಕ್ಕೆ ಕಳಿಸಿತ್ತು. ಅಂದ ಹಾಗೆ ಈ ಕಮಿಟಿಯ ಎಲ್ಲಾ ಸದಸ್ಯರೂ 'ಗಂಜಿ ಗಿರಾಕಿಗಳು' ಎಂದು ಸಾಮಾಜಿಕ ಮಾಧ್ಯಮದಲ್ಲಿ ಖ್ಯಾತಿ ಗಳಿಸಿದ್ದರು ಎಂಬುದು ಉಲ್ಲೇಖಾರ್ಹ.

ಇತ್ತ ನಿವೃತ್ತರಾಗಿ ಅಧಿಕಾರಕ್ಕಾಗಿ ತಹತಹಿಸುತ್ತಿದ್ದ ಐಎಎಸ್ ಅಧಿಕಾರಿಯನ್ನು ಸಾಮಾಜಿಕವಾಗಿ ಭಂಜಕ ಬಿತ್ತನೆ ರಂಗಕ್ಕೆ ಇಳಿಸಲಾಯಿತು. ಈ ನಿವೃತ್ತ ತಮ್ಮ ಗಾರ್ದಭಾನುಭವದ ಹಿನ್ನೆಲೆಯಲ್ಲಿ ಮೀಸಲಾತಿಯ ತುಪ್ಪವನ್ನು ಅಸಹಾಯಕ ಅಮಾಯಕರ ಮೂಗಿಗೆ ಹಚ್ಚಿ ಹುಚ್ಚೆಬ್ಬಿಸಿದರು. ಹುಚ್ಚು ಹೆಚ್ಚಾಗಿ ಈಗದು 'ಬಸವ ತಾಲಿಬಾನಿ' ಎಂದೇ ಖ್ಯಾತಿ ಗಳಿಸುತ್ತಿದೆ. ಹೀಗೆ ವೀರಶೈವ ಮತಬ್ಯಾಂಕ್ ಅನ್ನು ಒಡೆಯಲೆಂದೇ ಪ್ರಾಯೋಜಿತ ರಾಜಕೀಯ ಪಕ್ಷದ ಜನನಾಯಕರು ಜೀವದ್ರವ್ಯ ಹರಿಸಿದರು, ಹರಿಸುತ್ತಿದ್ದಾರೆ. ಹೀಗೆ 'ಸರ್ವ ಜನಾಂಗದ ಶಾಂತಿಯ ತೋಟ' ಎಂದು ಬಾಯಲ್ಲಿ ಪಠಿಸುವ ಗಂಜಿ ಗಿರಾಕಿಗಳಿಂದ ಬಸವ ತಾಲಿಬಾನಿಗಳ ಸೃಷ್ಟಿಯಾಯಿತು ಎಂಬುದು ಒತ್ತು ಹಾಕಿ ಗುರುತು ಮಾಡಿಕೊಳ್ಳಬೇಕಾದ ಅಂಶ!

ಈ ಪ್ರಾಯೋಜಿತ ರಾಜಕೀಯ ಪಕ್ಷವು ಅಧಿಕಾರದಲ್ಲಿದ್ದಾಗ ನಡೆಸಿದ್ದ ಜಾತಿಗಣತಿಯ ಪ್ರಮುಖ ಒಳ ಉದ್ದೇಶವೇ ತಾವು ಜೀವದ್ರವ ಹರಿಸಿ ಬೆಳೆಸಿದ 'ಲಿಂಗಾಯತ ಪ್ರತ್ಯೇಕ ಧರ್ಮ ಚಳವಳಿ ಉರ್ಫ್ ಅರಿವಳಿ' ಹೇಗೆ ಫಲಶೃತಿ ನೀಡಿದೆ ಎಂದು ಕಂಡುಕೊಳ್ಳುವುದಾಗಿತ್ತು. ಅದು ಭರ್ಜರಿ ಇಳುವರಿ ನೀಡಿ ಒಂದೂವರೆ ಕೋಟಿಯಷ್ಟಿದ್ದ ಅಖಂಡ ವೀರಶೈವ ಲಿಂಗಾಯತರ ಸಂಖ್ಯೆಯನ್ನು ಅರ್ಧಕ್ಕೆ ಇಳಿಸಿದೆ. ಇದಕ್ಕೆ ರಾಜ್ಯಾದ್ಯಂತ ಸಂಚರಿಸಿ ಶ್ರಮಿಸಿದವರಿಗೆ ತಕ್ಕನಾಗಿ ಪ್ರಶಸ್ತಿ, ಪ್ರಾಧಿಕಾರ, ಸರಕಾರಿ ಅನುದಾನಗಳ ಬೋನಸ್, ಇನ್‌ಕ್ರಿಮೆಂಟ್, ತುಟ್ಟಿಭತ್ಯೆ ಇತ್ಯಾದಿ ಸ್ಥಾವರಗಳನ್ನು ಕೊಡಲಾಗಿದೆ (ಏಕಸದಸ್ಯ ಆಯೋಗ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಹುದ್ದೆ, ಅನುಭವ ಮಂಟಪ ಸಮಿತಿ ಅಂಥ ಕೆಲವು ಉದಾಹರಣೆಗಳು). ಆದರೆ ಪ್ರತ್ಯೇಕ ಧರ್ಮದ ನಶೆಯ ಲಿಂಗವಂತ ಶ್ರೀಸಾಮಾನ್ಯ ಮಾತ್ರ

ನಿರ್ಲಿಂಗಿಯಾಗಿದ್ದಾನೆ. ಈ ಅಂಶಗಳನ್ನು ಅಖಂಡ ವೀರಶೈವ ಲಿಂಗವಂತ ಸಮಾಜ ಅರಿಯದಿದ್ದರೆ ಮುಂದೆ ಇನ್ನಷ್ಟು ವಿಚ್ಛಿದ್ರಗೊಂಡು ನೆಲೆಯಿಲ್ಲದ ಸಮಾಜವಾಗುವುದು ನಿಶ್ಚಿತ ಎಂದು ಈಗಾಗಲೇ ಪ್ರಕಟಿಸಿರುವ ಜಾತಿಗಣತಿಯಲ್ಲಿ ಸಾಬೀತಾಗಿದೆ ಎಂಬುದು ವಾಸ್ತವಿಕ ಸಂಗತಿ.

ಈ ಹುನ್ನಾರದ ಸಂಕಥನವನ್ನು ಸಂಶೋಧನ ನೆಲೆ, ಐತಿಹಾಸಿಕ ಪುರಾವೆ, ಪುರಾತತ್ವ ಸಾಕ್ಷಿ ಮತ್ತು ತಾರ್ಕಿಕ ವಿಶ್ಲೇಷಣೆಯಿಂದ ಕಾಠಿಣ್ಯ ನಿಷ್ಠುರವಾಗಿ ಸುಳ್ಳೆಂದು ಸಾಬೀತುಪಡಿಸಿ 'ಸತ್ಯಮೇವ ಜಯತೆ'ಯನ್ನು 'ವಿಶ್ವವಾಣಿ'ಯು ಎತ್ತಿ ಹಿಡಿದಿದೆ. 'ವಿಶ್ವವಾಣಿ'ಯ ಅಂಕಣದಷ್ಟು ತಾರ್ಕಿಕವಾಗಿ ಭಂಜಕರು ತಮ್ಮದು ಸತ್ಯವೆಂದು ಮೊತ್ತ ಮೊದಲ 'ಗೊರುಚ'ರಿಂದ ಕಟ್ಟಕಡೆಯ 'ಬಿಟ್ಟಂದಪ್ಪ'ನವರೆಗೆ ಇನ್ನೂ ಏಳು ಜನ್ಮದಲ್ಲಿ ಸಾಕ್ಷಿ ಪುರಾವೆ ಕೊಡಲು ಸಾಧ್ಯವಿಲ್ಲ ಎಂಬುದೂ ಅಷ್ಟೇ ಸ್ಫಟಿಕ-ಸದೃಶ ಸತ್ಯ. ಹಾಗಾಗಿ ಲಿಂಗಾಯತ ಪ್ರತ್ಯೇಕ ಧರ್ಮ ಮಾನ್ಯತೆ ಎಂಬ ಮೂಗಿನ ತುಪ್ಪಕ್ಕೆ ಕಾಯುತ್ತಿರುವವರಿಗೆ ಮೂಗಿನ ಗೊಣ್ಣೆ ನಾಲಿಗೆಯ ಮೇಲೆ ಸುರಿದೀತೇ ಹೊರತು ತುಪ್ಪವಂತೂ ಅಲ್ಲವೇ ಅಲ್ಲ.

ಹಾಗಾಗಿ ರೇಣುಕರೆನ್ನಿ ಬಸವನೆನ್ನಿ, ಪರಂಪರೆಯೆನ್ನಿ ಕ್ರಾಂತಿಯೆನ್ನಿ, ಸಂಸ್ಕೃತವೆನ್ನಿ ಕನ್ನಡವೆನ್ನಿ, ಆಚಾರವೆನ್ನಿ ವಿಚಾರವೆನ್ನಿ, ಸಂಸ್ಥಾಪಕನೆನ್ನಿ ಅನುಯಾಯಿಯೆನ್ನಿ ಒಟ್ಟಾರೆ ಲಿಂಗವಂತ ವೀರಶೈವರಾಗಿದ್ದೀರಿ. ಧಾರ್ಮಿಕವಾಗಿ ಅಷ್ಟಾವರಣ, ಪಂಚಾಚಾರ, ಷಟ್‌ಸ್ಥಲವನ್ನೇ ಆಚರಿಸುತ್ತೀರಿ. ಇದೇ ಅಂತಿಮ ತಾರ್ಕಿಕ, ಪಾರಂಪರಿಕ ಸತ್ಯ. ಒಪ್ಪಿದರೂ ಒಪ್ಪದಿದ್ದರೂ ಎಲ್ಲಾ ಭಿನ್ನಾಭಿಪ್ರಾಯ, ನಂಬಿಕೆಗಳನ್ನು ಆವರವರ ಮನೆಯ ದೇವರ ಕೋಣೆಗೆ ಸೀಮಿತಗೊಳಿಸಿ ಅಖಂಡ ವೀರಶೈವ ಲಿಂಗವಂತರಾಗಿರುವುದೇ ಅಂತಿಮ ಸತ್ಯ! ಯಾವ ಜಾಮದಾರ, ನಿಜಗುಣ, ಸಾಣೆಹಳ್ಳಿ, ಬೆಲ್ದಾಳ, ದರ್ಗಾ, ಕಲಬುರ್ಗಿ ಏನೇ ಹೇಳಿದರೂ ಅವರೆಲ್ಲರ ಅಭಿಪ್ರಾಯಗಳು ಕೇವಲ ಕೇವಲ ಕೇವಲ ಅವರ ರಾಜಕಾರಣ ನೆಲೆಯಿಂದ ತಮ್ಮ ನೆಲೆ ಕಂಡುಕೊಳ್ಳಲು ವ್ಯವಸ್ಥಿತವಾಗಿ ಸೃಜಿಸಿದ ಜನಾಂಗೀಯ ದ್ವೇಷದ ಸಂಕಥನಗಳು. ಚೀನಾದ ನರಮೇಧ ಸರ್ವಾಧಿಕಾರಿ ಮಾವೋನ ಪ್ರತಿಯೊಂದು ಸೂತ್ರಗಳೂ ಬೌದ್ಧ ಸೂತ್ರದಂತೆಯೇ ಇದ್ದರೂ ಅವುಗಳ ಅರ್ಥೈಸುವಿಕೆ ಮಾತ್ರ ವ್ಯತಿರಿಕ್ತವಾಗಿದ್ದ ರೀತಿಯಲ್ಲಿಯೇ ಈ ಅಧಮರ ವಚನಗಳ ವ್ಯಾಖ್ಯಾನವಾಗಿದೆ.

ಇಂಥವರನ್ನು ಮನಗಂಡೇ ಅರಿವಿನ ಮಾರಿತಂದೆಯು ಹೀಗೆ ಹೇಳಿದ್ದಾನೆ: 'ಖ್ಯಾತಿಲಾಭಕ್ಕೆ ಮಾಡುವಾತ ಭಕ್ತನಲ್ಲ. ಡಂಬಕಕ್ಕೆ ಡೊಂಬರಂತೆ ತಿರುಗುವವ ಜಂಗಮವಲ್ಲ. ತನು ತಲೆ ಬತ್ತಲೆಯಾಗಿ, ಮನ ತ್ರಿವಿಧ ಆಸೆ ಉಳ್ಳನ್ನಕ್ಕ ವಿರಕ್ತನಲ್ಲ. ಇಂತೀ ಗುಣವ ಸಂಪಾದಿಸುವನ್ನಕ್ಕ, ಎನಗೆ ಮುಕ್ತಿಯೆಂಬ ಬಟ್ಟೆಯಿಲ್ಲ. ನೀ ಸತ್ತೆ, ನಾ ಕೆಟ್ಟೆ, ಮನಸಂದಿತ್ತು ಮಾರೇಶ್ವರಾ. (ಸಮಗ್ರ ವಚನ ಸಂಪುಟ 8, ವಚನ ಸಂಖ್ಯೆ 942).

ಮೂಲತಃ ಆಚಾರ ಮತ್ತು ವಿಚಾರಗಳನ್ನು ಪಾಲಿಸಲಾಗದ ಸೋಮಾರಿಗಳು ವಚನಗಳನ್ನು ತಮ್ಮ ಮೂಗಿನ ನೇರಕ್ಕೆ ವ್ಯಾಖ್ಯಾನಿಸುವ ಕಾರಣ ಸಾಮಾನ್ಯರಿಗೆ ಭಂಜಕರ ಸಂಕಥನ ರುಚಿಸುತ್ತದೆ. ''ಆಯ್ದಕ್ಕಿ ಮಾರಯ್ಯನು, ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು, ಲಿಂಗಪೂಜೆಯಾದಡೂ ಮರೆಯಬೇಕು, ಜಂಗಮ ಮುಂದೆ ನಿಂದಿದ್ದಡೂ ಹಂಗ ಹರಿಯಬೇಕು. ಕಾಯಕವೆ ಕೈಲಾಸವಾದ ಕಾರಣ. ಅಮರೇಶ್ವರಲಿಂಗವಾಯಿತ್ತಾದಡೂ ಕಾಯಕದೊಳಗು' ಎಂದು ಹೇಳಿದ್ದಾನೆ. ಹಾಗಾಗಿ ಗುರುಲಿಂಗಜಂಗಮ ಬಿಟ್ಟು ಆರಾಮವಾಗಿ ಕೆಲಸ ಮಾಡಿಕೊಂಡು ಹೋಗಿ'' ಎಂದರೆ ಅದು ಯಾರಿಗೆ ತಾನೇ ರುಚಿಸದು?! 'ವೇದ, ಆಗಮ, ಉಪನಿಷತ್ತು, ತರ್ಕಗಳನ್ನು ಶರಣರು ತಿರಸ್ಕರಿಸಿದ್ದಾರೆ' ಎಂದರೆ ಆಸಕ್ತರೂ ಅವುಗಳನ್ನು 'ಓದುವುದು ತಪ್ಪಿತು' ಎಂದು ನಿರಾಳವಾಗುತ್ತಾರೆ.

ಪ್ರೊ.ಕಲಬುರ್ಗಿಯವರು, ''ಯಾವ ಧರ್ಮದಲ್ಲಿ ಕಡಿಮೆ ಪದಗಳಿರುತ್ತವೆಯೋ ಅದೇ ಜಗತ್ತಿನ ದೊಡ್ಡ ಧರ್ಮ. ಲಿಂಗಾಯತದಲ್ಲಿ ಗುರು, ಲಿಂಗ, ಜಂಗಮ, ಕಾಯಕ ಮತ್ತು ದಾಸೋಹ ಎಂಬ 5 ಪದಗಳಿವೆ. ಈ ಪದಗಳ ಆಧಾರದ ಮೇಲೆಯೇ 12ನೇ ಶತಮಾನದಲ್ಲಿ ಲಿಂಗಾಯತ ಧರ್ಮ ಉದಯವಾಗಿದೆ'' ಎಂದಿದ್ದಾರೆ. ಹಾಗಾಗಿ ನಮ್ಮದು ದೊಡ್ಡಧರ್ಮ ಎನ್ನುವ ಈ ನಾಟಕೀಯ ವ್ಯಕ್ತಿತ್ವದ ಅಸ್ವಸ್ಥರು ಪಂಚಾಚಾರ, ಅಷ್ಟಾವರಣ, ಷಟ್ಸ್ಥಲಗಳಲ್ಲಿ ಎಷ್ಟು ಪದಗಳಿವೆ. ಇವುಗಳಿಗನುಗುಣವಾಗಿ ಸಂಯೋಜನಗೊಂಡಿರುವ ವಚನಗಳೆಷ್ಟು ಸಾವಿರವಿವೆ ಎಂಬ ಕನಿಷ್ಠ ಅರಿವೂ ಇಲ್ಲದೆ ತಮ್ಮ ಸುಳ್ಳುಗಳನ್ನು ಸತ್ಯದ ನೆತ್ತಿಯ ಮೇಲೆ ಹೊಡೆದಂತೆ ಯಾವುದೇ ಅಳುಕಿಲ್ಲದೆ ಎಗ್ಗಿಲ್ಲದೇ ಕುಟ್ಟಿ ಕುಟ್ಟಿ ಹು(ಕೆ)ಚ್ಚಿನಿಂದ ಮಂಡಿಸುತ್ತಾರೆ. ಅಂದ ಹಾಗೆ, ಕಡಿಮೆ ಪದವಿದ್ದರೆ ದೊಡ್ಡ ಧರ್ಮ ಎನ್ನುವುದು ಯಾವ ಶಾಸ್ತ್ರ, ತರ್ಕ, ಸೂತ್ರದ ಪ್ರಮೇಯವಾಗಿದೆ?!

ಓರ್ವ ಅಧ್ಯಾತ್ಮಿ ತನ್ನ ಗುರುಗಳ ಬಳಿ ಹೋದನು. ಗುರುಗಳು, ''ನನ್ನಿಂದ ಏನನ್ನು ಕಲಿಯಲು ಬಯಸುತ್ತೀ'' ಎಂದರು. ಆಗ ಅಧ್ಯಾತ್ಮಿ ಉತ್ತರವಾಗಿ ತನ್ನ ಕೈಯಲ್ಲಿದ್ದ ಸೂಜಿಯೊಂದನ್ನು ಗುರುಗಳ ಕೈಯಲ್ಲಿದ್ದ ನೀರು ತುಂಬಿದ ಭಿಕ್ಷಾಪಾತ್ರೆಯಲ್ಲಿ ಹಾಕಿದನು. ಇದರ ಅರ್ಥ ತಮ್ಮ ಜ್ಞಾನದ ಆಳಕ್ಕಿಳಿಯುವ ಆಸೆ ಎಂದು ಅರ್ಥೈಸಿಕೊಂಡ ಗುರು ಅವನನ್ನು ಕೂಡಲೇ ಶಿಷ್ಯನಾಗಿ ಸ್ವೀಕರಿಸಿದನು. ಇಂಥ ಮೌನ, ಕನಿಷ್ಠ ಮಾತು, ಮಾಂತ್ರಿಕ ಉದ್ಘೋಷಗಳ ಆದರೆ ಅತ್ಯಂತ ಆಳದ ಅತೀಂದ್ರಿಯ ಜ್ಞಾನದ ಸಾವಿರಾರು ಕತೆಗಳು ಜಗತ್ತಿನಾದ್ಯಂತದ ಆಧ್ಯಾತ್ಮಿಕತೆಯಲ್ಲಿ ಕಾಣಬರುತ್ತವೆ. ಸಾಲುಗಳ ನಡುವಿನ ಅರ್ಥದ ಆಳವನ್ನು ಗ್ರಹಿಸದೆ ದಿವಂಗತ ಪ್ರೊಫೆಸರರು ಕಡಿಮೆ ಪದವಿರುವುದು ದೊಡ್ಡ ಧರ್ಮ ಎಂದಿದ್ದಾರೆ. ಅದನ್ನೇ ಈ ಭಂಜಕರು 'ಪುಟಕ್ಕೊಂದು ಅಂಕ' ಎಂದು ಬಗೆದು ನೂರಾರು ಪುಟಗಳ ಪ್ರತ್ಯೇಕ ಧರ್ಮ ಚಳವಳಿ ಪುಸ್ತಕಗಳನ್ನು ಪುಂಖಾನುಪುಂಖವಾಗಿ ಸತ್ಯ-ಮಿಥ್ಯ, ಇತಿಹಾಸ ಇತ್ಯಾದಿ ಎಂದು ತಲೆ ತಿಕ್ಕುತ್ತಿದ್ದಾರೆ.

ಇಂಥ ವ್ಯಾಖ್ಯಾನಗಳಿಂದ ಜನರಿಗೆ ಜನಪ್ರಿಯ ನಾಲ್ಕು ವಚನಗಳ ಇನ್‌ಸ್ಟಂಟ್ ನೂಡಲ್ಸ್ ಬಡಿಸಿ, ಖುದ್ದು ತಾವು ಭೂರಿಭೋಜನ ಮದ್ದು ಹಣ, ಅಧಿಕಾರ ಹೊಂದುತ್ತಿದ್ದಾರೆ. ಹಾಗಾಗಿಯೇ ಇವರೆಲ್ಲರೂ ಹೇಳುವುದು ಅರ್ಥೈಸುವುದು ಕೇವಲ ಶಿಶುವಿಹಾರದ ಕೆಲವು ಸುಲಭದ ವಚನಗಳನ್ನು ಮಾತ್ರ. ಅದಕ್ಕಿಂತ ಹೆಚ್ಚು ತಿಳಿಯಲು ಸಾಧನೆ ಮುಖ್ಯ. ಸಾಧಕರಲ್ಲದ ಈ ಸಮಯಸಾಧಕರು ಇನ್ನೇನು ತಾನೇ ಸಾಧಿಸಿಯಾರು? ಇದರಲ್ಲಿ ಆದಿನ ಈದಿನ ಎನ್ನುವ ವಸೂಲಿ ಪತ್ರಿಕೆಗಳ ಕಟ್ಟಡದ ಮಾಲೀಕನೂ, ದಿವಂಗತ ವಾರಣಾಸೆಪ್ಪನವರನೆಂಬ ರಾಜಕಾರಣಿಯಿಂದ ನೆಲೆ ಕಂಡುಕೊಂಡ ಮತ್ತು ಪ್ರೊ. ಕಲಬುರ್ಗಿಯಿಂದ ಭರಪೂರ ಡಿಟಿಪಿ ನೆಪದಲ್ಲಿ ಬಿಲ್ಲು ಮಾಡಿ ಲೂಟಿಸಿದ, ಥಾಯ್ಲೆಂಡ್ ತೊಡೆಗಳ ನಡುವೆ 'ಬಸವಾ ಬಸವಾ' ಎಂದ ಶೋಕಿವಾಲಾ ಕಂ ಚಳವಳಿ ಇತಿಹಾಸಜ್ಞನ ಇತ್ತೀಚಿನ ಪುಸ್ತಕ ಒಂದು ಉಲ್ಲೇಖನೀಯ ಪುರಾವೆ ಮಾತ್ರ.

ವೀರಶೈವ ಪಂಚಾಚಾರ್ಯರ ಕುರಿತಾಗಿ ಅಕ್ಕ ಮಹಾದೇವಿ 'ಲಿಂಗದಿಂದುದಯಿಸಿ ಅಂಗವಿಡಿದಿಪ್ಪ ಪುರಾತನರ...', ಎಡೆಯೂರು ಸಿದ್ಧಲಿಂಗೇಶ್ವರರು 'ರೇಣುಕನುದಯವಾಗದಿರ್ದಡೆ..', ನಾಗಲಾಂಬಿಕೆ 'ಲಿಂಗದಿಂದುದಯವಾದಾತ ರೇವಣಸಿದ್ಧಯ್ಯ', ಪ್ರಸಾದಿ ಭೋಗಣ್ಣನು 'ಶ್ರೀಪತಿ ಶಿವಲೆಂಕ ಪಂಡಿತಾರಾಧ್ಯ ಏಕಾಂತದರಾಮ ಇಂತೀ ಪ್ರಥಮದ ಆಚಾರ್ಯರು...', ಚೆನ್ನಬಸವಣ್ಣನು 'ರೇವಣಸಿದ್ಧಯ್ಯದೇವರು ಸಾಕ್ಷಿಯಾಗಿ..', ಎಂದು ಭಕ್ತಿಯಿಂದ ಸ್ಮರಿಸಿದ್ದಾರೆ. ಅಲ್ಲದೇ ಸೌರಾಷ್ಟ್ರ ಸೋಮೇಶ್ವರ, ಹಾವಿನಹಾಳ ಕಲ್ಲಯ್ಯ, ಮೆರೆಮಿಂಡ ದೇವ ವಚನಕಾರರು, ''ಏಕೋರಾಮಿತಂದೆ, ಪಂಡಿತಾರಾಧ್ಯ, ರೇವಣಸಿದ್ಧದೇವರು, ಸಿದ್ಧರಾಮೇಶ್ವರ ದೇವರು ಮತ್ತು ಮರುಳಸಿದ್ದೇಶ್ವರದೇವರು'' ಎಂದು ಎಲ್ಲಾ ಪಂಚಾಚಾರ್ಯರನ್ನು ಸ್ಮರಿಸಿದ್ದಾರೆ. 'ಕಲ್ಲಿನಲ್ಲಿ ಹುಟ್ಟಿದ್ದರೆ?' ಎಂದು ಪೌರಾಣಿಕ ಕಥೆಗಳ ಅರ್ಥವನ್ನೇ ಅರ್ಥಹೀನದಂತೆ ಜೋಕಿಸುವ ಇವರು ಈ ಎಲ್ಲಾ ವಚನಗಳಿಗೆ ಯಾವುದೇ ಉತ್ತರ ಕೊಡರು. ಇದೆಲ್ಲ ಕಲ್ಬುರ್ಗಿಯವರು ಹೇಳಿದಂತೆ ಪ್ರಕ್ಷಿಪ್ತ ಎಂದು 'ಕೈಗೆಟುಕದ ದ್ರಾಕ್ಷಿ ಹುಳಿ' ಎಂಬ ಸಿದ್ಧಾಂತಕ್ಕೆ ಅಂಟಿಕೊಳ್ಳುತ್ತಾರೆ. ಇಂಥ ವಚನಗಳು ಇವರ ಗಮನಕ್ಕೆ ಬರುವುದೂ ಇಲ್ಲ, ಅವರಿಗೆ ಅವು ಅರ್ಥವಾಗುವುದೂ ಇಲ್ಲ.

(ಲೇಖಕರು ಶಿಕಾಗೊ ನಿವಾಸಿ ಮತ್ತು ಸಾಹಿತಿ)

ಅಚ್ಚುಕಟ್ಟು ಪ್ರದೇಶ

RNI: KARKAN/2016/67914

VISHVAVANI, Edited & Published by : VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942, Printed at M/s Digantha Mudhrana Ltd. NT Road, Shivamogga - 577 201

Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.

ನಮ್ಮ ಆವೃತ್ತಿಗಳು:
ಬೆಂಗಳೂರು, ಹುಬ್ಬಳ್ಳಿ
ಮಂಗಳೂರು, ಬೆಳಗಾವಿ
ಕಲಬುರಗಿ, ದಾವಣಗೆರೆ
Vol:10, Issue:125

ಸಮಾಚಾರ ಸಣ್ಣದಲ್ಲ

ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನ

ಹೊಳಲ್ಕೆರೆ: ತಾಲೂಕಿನ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಬಿಸಿಎಂ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯ ಪ್ರವೇಶಕ್ಕೆ ಅರ್ಜಿ ಆಹ್ವಾನಿಸಲಾಗಿದೆ. 2025-26ನೇ ಸಾಲಿನಲ್ಲಿ ವಿದ್ಯಾರ್ಥಿ ನಿಲಯಗಳಿಗೆ ಹೊಸದಾಗಿ ಪ್ರವೇಶ ಬಯಸುವ ವಿದ್ಯಾರ್ಥಿಗಳು https://shp.karnataka.gov.in/bcwd ವೆಬ್ ಮೂಲಕ ಆನ್ ಲೈನ್ ನಲ್ಲಿ ಅರ್ಜಿಸಬೇಕು. ಆವಿನಹಟ್ಟಿ, ಚಿಕ್ಕಜಾ ಜೂರು, ಕಾಶೀಪುರ, ಎನ್.ಜಿ. ಹಳ್ಳಿ, ಉಪ್ಪರಿಗೇನ ಹಳ್ಳಿಯಲ್ಲಿರುವ ಬಾಲಕರ ವಿದ್ಯಾರ್ಥಿ ನಿಲಯಗಳು ಹಾಗೂ ಪಟ್ಟಣದ ಬಾಲಕರ ಹಾಗೂ ಬಾಲಕಿಯರ ವಿದ್ಯಾರ್ಥಿ ನಿಲಯಗಳಿಗೆ ಜೂನ್ ತಿಂಗಳ 16ರ ಒಳಗೆ ಅರ್ಜಿಸಲ್ಲಿಸಬಹುದಾಗಿದೆ. ಪ್ರವರ್ಗ 1, ಎಸ್ ಸಿ ಮತ್ತು ಎಸ್ ಟಿ ವಿದ್ಯಾರ್ಥಿಗಳಿಗೆ ರು.2.5 ಲಕ್ಷ, ಪ್ರವರ್ಗ 2ಎ, 2ಬಿ, 3ಎ, 3ಬಿ, ಇತರೆ ಹಿಂದುಳಿದ ವರ್ಗ ಹಾಗೂ ಸಾಮಾನ್ಯ ವಿದ್ಯಾರ್ಥಿಗಳಿಗೆ ರು.1 ಲಕ್ಷ ಆದಾಯ ಮಿತಿ ಇರುತ್ತದೆ. ಹೆಚ್ಚಿನ ಮಾಹಿತಿಗಾಗಿ ಬಿಸಿಎಂ ಕಚೇರಿ ದೂ.ಸಂ 08191200021 ಸಂಪರ್ಕಿಸಿ.

ಹಾಸ್ಟೆಲ್ ಪ್ರವೇಶಕ್ಕಾಗಿ ಅರ್ಜಿ ಆಹ್ವಾನ

ದಾವಣಗೆರೆ: 2025-26ನೇ ಸಾಲಿಗೆ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ವಿದ್ಯಾರ್ಥಿ ನಿಲಯಗಳ ಪ್ರವೇಶಕ್ಕೆ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ಪೂರ್ವ ಬಾಲಕ ಮತ್ತು ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೊಸದಾಗಿ ಪ್ರವೇಶ ಬಯಸುವ ಪ್ರವರ್ಗ-1, 2ಎ, 2ಬಿ, 3ಎ, 3ಬಿ, ಪ.ಜಾ, ಪ.ವರ್ಗ ಮತ್ತು ಇತರೆ ಜನಾಂಗದವರು ಅರ್ಜಿ ಸಲ್ಲಿಸಬಹುದು. ವೆಬ್ ಸೈಟ್ https://shp.karnataka.gov.in/bcwd ನಲ್ಲಿ ಅರ್ಜಿಯನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಜೂನ್ 16 ಕೊನೆಯದಿನ. ತಾಲೂಕುವಾರು ವಿದ್ಯಾರ್ಥಿನಿಲಯಗಳ ವಿವರ ಹಾಗೂ ವಿದ್ಯಾರ್ಥಿ ನಿಲಯದ ಪ್ರವೇಶಕ್ಕೆ ಇರಬೇಕಾದ ಅರ್ಹತೆ, ಸಲ್ಲಿಸಬೇಕಾದ ದಾಖಲೆಗಳ ವಿವರ ಮತ್ತು ಸರಕಾರದ ಆದೇಶಕ್ಕಾಗಿ ಇಲಾಖೆಯ ವೆಬ್‌ಸೈಟ್https://bcwd.karnataka.gov.in/ ನ್ನು ವೀಕ್ಷಿಸಬಹುದು. ಹೆಚ್ಚಿನ ಮಾಹಿತಿಗಾಗಿ ಮೊ.ಸಂ: 8050770004 ಮತ್ತು 8050770005 ನ್ನು ಸಂಪರ್ಕಿಸಲು ಇಲಾಖೆಯ ಅಧಿಕಾರಿ ತಿಳಿಸಿದ್ದಾರೆ.

ದೊಡ್ಡಬಾತಿ ಗ್ರಾಮದ ವೃದ್ಧ ಕಾಣೆ

ದಾವಣಗೆರೆ: ದೊಡ್ಡಬಾತಿ ಗ್ರಾಮದ ನಿವಾಸಿ ಜುಂಜಪ್ಪರ ಬಸಪ್ಪ ಬಿನ್ ಲೇ.ಗಿಡ್ಡಪ್ಪ (ಸು.80 ವರ್ಷ) ವ್ಯಕ್ತಿ ಕಾಣೆಯಾದ ಕುರಿತು ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕಾಣೆಯಾದ ಜುಂಜಪ್ಪರ ಬಸಪ್ಪ, ಸು.5 ಅಡಿ ಎತ್ತರ, ಕಪ್ಪು ಬಣ್ಣ, ತೆಳ್ಳನೆಯ ಮೈಕಟ್ಟು, ಬಲಗೈಯಲ್ಲಿ ಕೊಂಡಿ ಇರುವ ಬೆಳ್ಳಿ ಕಡಗ ಇರುತ್ತದೆ. ಬಿಳಿ ಗಡ್ಡ ಬಿಟ್ಟಿರುತ್ತಾರೆ. ಈ ಮೇಲ್ಕಂಡ ವ್ಯಕ್ತಿಯ ಕುರಿತು ಮಾಹಿತಿ ಕಂಡು ಬಂದಲ್ಲಿ ಗ್ರಾಮಾಂತರ ಪೊಲೀಸ್ ಠಾಣೆ ದೂರವಾಣಿ ಸಂಖ್ಯೆ 08192-253100, ಕಂಟ್ರೋಲ್ ರೂಂ 08192-262555, ಗ್ರಾಮಾಂತರ ಉಪ ವಿಭಾಗದ ಉಪಾಧೀಕ್ಷಕರ ಕಚೇರಿಯ 08192- 262550 ದೂರವಾಣಿಗೆ ಸಂಪಕಿಸಬಹುದು ಎಂದು ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿ ಪ್ರಕಟಣೆ ಯಲ್ಲಿ ತಿಳಿಸಿದ್ದಾರೆ.

ವೆಂಕಟರಮಣ ದೇವರ ರಥೋತ್ಸವ ಇಂದು

ಶಿವಮೊಗ್ಗ: ನಗರದ ಹೊಳೆಹೊನ್ನೂರು ರಸ್ತೆಯಲ್ಲಿರುವ ಪಿಳ್ಳಯ್ಯನಗಿರಿ ಶ್ರೀ ಲಕ್ಷ್ಮೀ ವೆಂಕಟರಮಣ ದೇವರ ಬ್ರಹ್ಮ ರಥೋತ್ಸವ ಇಂದು ನಡೆಯಲಿದೆ. ಮೇ 21ರವರೆಗೆ ಶ್ರೀ ಲಕ್ಷ್ಮೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ ವಿವಿಧ ಧಾರ್ಮಿಕ ಕೈಂಕರ್ಯಗಳು ನಡೆಯಲಿದ್ದು, ಮೇ 19ರ ಸೋಮವಾರದಂದು ಬೆಳಗ್ಗೆ 7.30ಕ್ಕೆ ನಿತ್ಯಸೇವೆ, ಯಾಗ ಶಾಲೆಯಲ್ಲಿ ರಥಾಂಗ ಹೋಮಾದಿಗಳು ಜರುಗಲಿದ್ದು 9ಗಂಟೆಯಿಂದ ಮಂಟಪೋತ್ಸವದ ನಂತರ ಅಭಿಜಿನ್ ಮಹೂರ್ತದಲ್ಲಿ 12ಗಂಟೆಗೆ ಶ್ರೀಯವರ ರಥಾರೋಹಣ ಮತ್ತು ರಥೋತ್ಸವ ನಡೆಯಲಿದೆ. ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಶ್ರೀನಿವಾಸ ಕಲ್ಯಾಣ ಹಾಗು ರಥೋತ್ಸವದಲ್ಲಿ ಪಾಲ್ಗೊಂಡು ಶ್ರೀಲಕ್ಷ್ಮೀ ವೆಂಕಟರಮಣ ದೇವರ ಕೃಪೆಗೆ ಪಾತ್ರರಾಗಬೇಕೆಂದು ಉಪವಿಭಾಗಾಧಿಕಾರಿಗಳು ಮತ್ತು ತಹಶಿಲ್ದಾರ್ ಮತ್ತು ಮುಜರಾಯಿ ಅಧಿಕಾರಿಗಳು ಅರ್ಚಕರು ಮತ್ತು ಗ್ರಾಮಸ್ಥರು ಸ್ವಾಗತ ಕೋರಿದ್ದಾರೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ವಿ.ಸೋಮಣ್ಣ } ಕೇಂದ್ರ ಸಚಿವ

ದೇಶದ ವ್ಯವಸ್ಥೆಯನ್ನು ಬುಡಮೇಲು ಮಾಡುವ ದುರಾಲೋಚನೆ ಇದ್ದ ಪಾಕಿಸ್ತಾನಕ್ಕೆ ನಮ್ಮ ಸೈನಿಕರು ತಕ್ಕಪಾಠ ಕಲಿಸಿದ್ದಾರೆ. ಉಗ್ರರು ಮಾಡಿರುವ ಪಾಪವನ್ನು ಮುಚ್ಚಿಕೊಳ್ಳುವ ಕೆಲಸವನ್ನು ಪಾಕಿಸ್ತಾನದವರು ಮಾಡಿದ್ದಾರೆ. ಹಾಗಾಗಿ ಪ್ರಧಾನಿ ಮೋದಿಯವರ ನಾಯಕತ್ವದಲ್ಲಿ ನೀಡಿರುವ ತಕ್ಕ ಶಾಸ್ತಿಯ ಉತ್ತರವನ್ನು ಇಡೀ ವಿಶ್ವವೇ ನೋಡಿದೆ.

ಶಿವಮೊಗ್ಗದಲ್ಲಿ ಸರಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟಕ್ಕೆ ಚಾಲನೆ

ಒಪಿಎಸ್ ಜಾರಿಗೆ ಸರಕಾರ ಬದ್ಧ: ಸಚಿವ

ಶಿವಮೊಗ್ಗ: ರಾಜ್ಯ ಸರಕಾರಿ ನೌಕರರ ಬಹುದಿನದ ಬೇಡಿಕೆಯಾದ ಹಳೆ ಪಿಂಚಣಿ ಯೋಜನೆ(ಒಪಿಎಸ್)ಯನ್ನು ಆದಷ್ಟು ಬೇಗ ಅನುಷ್ಠಾನಗೊಳಿಸುವ ನಿರ್ಧಾರವನ್ನು ಪ್ರಕಟಿಸಲು ಸರಕಾರ ಬದ್ದವಾಗಿದೆ ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಮಧು ಬಂಗಾರಪ್ಪ ತಿಳಿಸಿದರು.

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘ ಬೆಂಗಳೂರು ಹಾಗೂ ಜಿಲ್ಲಾ ಶಾಖೆ ಶಿವಮೊಗ್ಗ, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಇವರುಗಳ ಸಂಯುಕ್ತಾಶ್ರಯದಲ್ಲಿ ಭಾನುವಾರ ನಗರದ ನೆಹರು ಕ್ರೀಡಾಂಗಣ ಆಯೋಜಿಸಿದ್ದ ಕರ್ನಾಟಕ ರಾಜ್ಯ ಸರಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಉದ್ಘಾಟಿಸಿದ ಅವರು ಮಾತನಾಡಿದರು.

ಸರಕಾರದ ಕಾನೂನುಗಳು, ಯೋಜನೆಗಳು, ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸರಕಾರಿ ನೌಕರರಾದ ನೀವು ಆರೋಗ್ಯದಿಂದ, ಚೈತನ್ಯದಿಂದ ಇರಬೇಕು. ಇದಕ್ಕೆ ಇಂತಹ ಕ್ರೀಡಾಕೂಟ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳು ಸಹಕಾರಿಯಾಗಿವೆ.

ಗ್ಯಾರಂಟಿ ಯೋಜನೆಗಳ ಪ್ರಣಾಳಿಕೆಯಲ್ಲಿ ತಿಳಿಸಿದಂತೆ ರಾಜ್ಯ ಸರ್ಕಾರಿ ನೌಕರರ ಬೇಡಿಕೆಯಾದಂತಹ ಎನ್ ಪಿ ಎಸ್ ಬದಲು ಓಪಿಸ್ ನ್ನು ಶೀಘ್ರದಲ್ಲೇ ಮಾನ್ಯ ಮುಖ್ಯ ಮಂತ್ರಿಗಳು, ಉಪ ಮುಖ್ಯಮಂತ್ರಿಗಳು ಜಾರಿಗೊಳಿಸುವ ಬಗ್ಗೆ ನಿರ್ಧಾರ ಪ್ರಕಟಿಸುವರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಎಸ್.ಎನ್.ಚನ್ನಬಸಪ್ಪ, ಶಾಸಕ ಬೇಳೂರು ಗೋಪಾಲಕೃಷ್ಣ, ಆರಗ ಜ್ಞಾನೇಂದ್ರ, ಬಿ.ಕೆ.ಸಂಗಮೇಶ್, ವಿಧಾನ ಪರಿಷತ್ ಶಾಸಕರಾದ ಡಿ.ಎಸ್ ಅರುಣ್, ಭಾರತಿ ಶೆಟ್ಟಿ, ಬಲ್ಕೀಶ್ ಬಾನು ಮಾತನಾಡಿದರು.

ಕಾರ್ಯ ಕ್ರಮದಲ್ಲಿ ಕ್ರೀಡೆ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ರಾಷ್ಟ್ರಮಟ್ಟದಲ್ಲಿ ಶ್ರೇಷ್ಠ ಸಾಧನೆ ಮಾಡಿದ ರಾಜ್ಯ ಸರಕಾರಿ ನೌಕರರನ್ನು ಸನ್ಮಾನಿ ಸಲಾಯಿತು. ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಸ್.ರವಿಕುಮಾರ್, ಸೂಡಾ ಅಧ್ಯಕ್ಷ ಸುಂದರೇಶ್, ಕಾಡಾ ಅಧ್ಯಕ್ಷ ಡಾ.ಅಂಶುಮಂತ್, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರದ ಅಧ್ಯಕ್ಷ ಚಂದ್ರಭೂಪಾಲ್, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ, ಜಿ.ಪಂ.ಸಿಇಓ ಹೇಮಂತ್, ಎಸ್ ಪಿ ಮಿಥುನ್ ಕುಮಾರ್ ಪಾಲ್ಗೊಂಡಿದ್ದರು.

ನಗರದ ನೆಹರು ಕ್ರೀಡಾಂಗಣ ಆಯೋಜಿಸಿದ್ದ ಕರ್ನಾಟಕ ರಾಜ್ಯ ಸರಕಾರಿ ನೌಕರರ ರಾಜ್ಯ ಮಟ್ಟದ ಕ್ರೀಡಾ ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳ ಕಾರ್ಯಕ್ರಮವನ್ನು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಮಧು ಬಂಗಾರಪ್ಪ ಉದ್ಘಾಟಿಸಿದರು.

ಕ್ರೀಡೆಯಿಂದ ಉತ್ತಮ ಆರೋಗ್ಯ ಸಾಧ್ಯ

ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್.ಷಡಾಕ್ಷರಿ ಮಾತನಾಡಿ, ಸರಕಾರಿ ನೌಕರರು ಒತ್ತಡ ರಹಿತವಾಗಿ ಗುಣಮಟ್ಟದ ಸೇವೆ ಸಲ್ಲಿಸಬೇಕೆಂಬ ಉದ್ದೇಶದಿಂದ ರಾಜ್ಯ ಸರಕಾರಿ ನೌಕರರ ಸಂಘವು ಕ್ರೀಡಾ,ಸಾಂಸ್ಕೃತಿಕ ಚಟುವಟಿಕೆಗಳನ್ನು ಸಕ್ರಿಯವಾಗಿ ಮಾಡುತ್ತಾ ಬಂದಿದೆ. ಈ ಕ್ರೀಡಾಕೂಟಕ್ಕೆ ರು. 3 ಕೋಟಿ ಅನುದಾನವನ್ನು ಸರಕಾರ ನೀಡುವ ಭರವಸೆ ನೀಡಿದೆ. ಕ್ರೀಡೆಯಿಂದ ಉತ್ತಮ ಆರೋಗ್ಯ ಸಾಧ್ಯ ಎಂದರು.

ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ನೌಕರರ ಪರವಾಗಿ ಸುಮಾರು 24 ಆದೇಶ ಜಾರಿ ಮಾಡಿದ್ದರು, ನೌಕರರ ಭವನಕ್ಕೆ ಒತ್ತು ನೀಡಿದ್ದರು. ನೌಕರರು ಒತ್ತಡರಹಿತರಾಗಿ, ಉತ್ತಮ ಸೇವೆ ನೀಡಬೇಕು. ನಿಮ್ಮಲ್ಲೂ ಅನೇಕ ಪ್ರತಿಭೆ ಇದ್ದು ಅದು ಹೊರಹೊಮ್ಮಲು ಇದೊಂದು ಉತ್ತಮ ವೇದಿಕೆಯಾಗಿದೆ.

-ಬಿ.ವೈ.ರಾಘವೇಂದ್ರ, ಸಂಸದ

ಹೆದ್ದಾರಿ ತಡೆದು ರೈತರ ಪ್ರತಿಭಟನೆ

ಹರಿಹರ: ರಾಜ್ಯ ಸರಕಾರ ಕನಿಷ್ಠ ಬೆಂಬಲ ಬೆಲೆ ಕಾಯ್ದೆ ಜಾರಿ ಮಾಡಬೇಕೆಂದು ಆಗ್ರಹಿಸಿ, ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ (ಹುಚ್ಚವ್ವನಹಳ್ಳಿ ಮಂಜುನಾಥ್ ಬಣ) ಹರಿಹರ ತಾಲೂಕು ಘಟಕದಿಂದ ಗುತ್ತೂರು ಬಳಿ ಶಿವಮೊಗ್ಗ ಹೊಸಪೇಟೆ ರಾಜ್ಯ ಹೆದ್ದಾರಿ ತಡೆದು ಆಕ್ರೋಶ ವ್ಯಕ್ತಪಡಿಸಿದರು.

ರೈತ ಸಂಘ ದಿಂದ ಇತ್ತಿಚಿಗೆ ಪ್ರತಿಭಟನೆ ಮಾಡಿ ಕೂಡಲೇ ಕಾಯ್ದೆ ಮಾಡುವಂತೆ ಆಗ್ರಹಿಸಿ ಇಲ್ಲದಿದ್ದರೆ ರಸ್ತೆ ಮಾಡಲಾಗುವುದು ಎಂದು ಎಚ್ಚರಿಸಿದ್ದ ಹಿನ್ನಲೆಯಲ್ಲಿ ರೈತ ಸಂಘದ ಪದಾಧಿಕಾರಿಗಳು ಗುತ್ತೂರು ಬಳಿ ಜಮಾವಣೆಗೊಂಡು ರಸ್ತೆ ತಡೆ ಮಾಡಿ ಪ್ರತಿಭಟನೆ ಮಾಡಿದರು.

ರೈತ ಸಂಘದ ಪ್ರತಿಭಟನೆಯಿಂದ ರಾಜ್ಯ ಹೆದ್ದಾರಿಯಲ್ಲಿ ವಾಹನ ಸಂಚಾರ ಅಸ್ತವ್ಯಸ್ತವಾಗಿ ಕಿ.ಮಿ ಗಂಟಲೆ ವಾಹನಗಳು ರಸ್ತೆಯಲ್ಲೇ ನಿಲ್ಲಬೇಕಾಗಿಯಿತು, ವಿಷಯ ತಿಳಿದು ತಹಸೀಲ್ದಾರ್ ಕೆ.ಎಂ. ಗುರುಬಸವರಾಜ್ ಸ್ಥಳಕ್ಕೆ ಆಗಮಿಸಿದರು.

ಈ ವೇಳೆ ಮಾತನಾಡಿದ ತಾಲೂಕು ಅಧ್ಯಕ್ಷ ಜಿ.ಪ್ರಭುಗೌಡ, ಕೇಂದ್ರ ಸರಕಾರ ಪ್ರತಿ ಕ್ವಿಂಟಾಲ್ ಭತ್ತಕ್ಕೆ ರು.2320-00 ದರ ಕನಿಷ್ಠ ಬೆಂಬಲ ಬೆಲೆ ನಿಗಧಿ ಮಾಡಿದೆ. ಆದರೆ ಖರೀದಿದಾರರು, ದಲ್ಲಾಲರು, ಕಂಪನಿ ಖರೀದಿದಾರರು ಮನಸೋ ಇಚ್ಛೇ ಖರೀದಿ ಮಾಡಿ ರೈತರಿಗೆ ಅನ್ಯಾಯ ಮಾಡುತ್ತಿದ್ದಾರೆ ಎಂದು ಆರೋಪಿಸಿದರು.

ರಾಜ್ಯ ಸರಕಾರ ಮಧ್ಯ ಪ್ರವೇಶಿಸಿ ಪ್ರತಿ ಕ್ವಿಂಟಾಲ್ ಭತ್ತಕ್ಕೆ ಕೇರಳ ಮಾದರಿಯಲ್ಲಿ ರು.1200 ಪ್ರೋತ್ಸಾಹ ಧನ ನೀಡಬೇಕು. ಕೇಂದ್ರ ಕನಿಷ್ಟ ಬೆಂಬಲ ಬೆಲೆ ಮತ್ತು ರಾಜ್ಯ ಸರಕಾರದ ಪ್ರೋತ್ಸಾಹ ಧನ ಸೇರಿ ಪ್ರತಿ ಕ್ವಿಂಟಾಲ್ ಬೆಲೆ ಭತ್ತಕ್ಕೆ ರು.3500 ನೀಡಬೇಕೆಂದು ಆಗ್ರಹಿಸಿದರು.

ಈ ವೇಳೆ ರೈತ ಸಂಘಟನೆಯ ಗರಡಿಮನಿ ಬಸಣ್ಣ, ಪಾಮೇನಹಳ್ಳಿ ಮಾರುತಿ ರಾವ್, ಮಹೇಶ್ವರಪ್ಪ ದೊಗ್ಗಳ್ಳಿ, ರುದ್ರಗೌಡ ಪಾಳ್ಯ, ಹನುಮಂತಪ್ಪ ದಿಟೂರು, ಕುರುಬರಹಳ್ಳಿ ಜಗದೀಶ್, ವಾಸನ ವಸಂತಪ್ಪ, ಟಿ ನಿಜಗುಣ ಹಿಂಡಸಘಟ್ಟ, ಪ್ರಕಾಶ್, ಅಂಜಿನಪ್ಪ ಹಾಲಿವಾಣ ಸೇರಿದಂತೆ ಇತರೆ ರೈತ ಮುಖಂಡರಿದ್ದರು.

ರಾಜ್ಯ ಸರಕಾರ ಕನಿಷ್ಟ ಬೆಂಬಲ ಬೆಲೆಗೆ ಕಾಯ್ದೆ ಜಾರಿ ಮಾಡಬೇಕೆಂದು ಒತ್ತಾಯಿಸಿ ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆಯಿಂದ ಹರಿಹರದಲ್ಲಿ ರಸ್ತೆ ತಡೆ ಮಾಡಿ ಆಕ್ರೋಶ ವ್ಯಕ್ತ ಪಡಿಸಿದರು.

ಮಾವು-ಹಲಸು ಮೇಳ 24 ರಂದು

ಶಿವಮೊಗ್ಗ: ಜಿಲ್ಲಾ ಹಾಪ್‌ಕಾಮ್ಸ್ ವತಿಯಿಂದ ಮೇ 24 ಮತ್ತು 25 ರಂದು ಎರಡು ದಿನಗಳ ಕಾಲ ನಗರದಲ್ಲಿ ಮಾವು ಮತ್ತು ಹಲಸಿನ ಮೇಳ ಆಯೋಜಿಸಿದ್ದು, ಸುಮಾರು 10 ಬಗೆಯ ಮಾವಿನ ಹಣ್ಣು ಮತ್ತು ವಿಶೇಷ ಬಗೆಯ ಹಲಸಿನ ಹಣ್ಣುಗಳ ಪ್ರದರ್ಶನ ಮತ್ತು ಮಾರಾಟ ನಡೆಯಲಿದೆ ಎಂದು ಶಿವಮೊಗ್ಗ ಹಾಪ್ ಕಾಮ್ಸ್ ಅಧ್ಯಕ್ಷ ಆರ್. ವಿಜಯ್ ಕುಮಾರ್ ತಿಳಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಜಿಲ್ಲೆಯ ರೈತರು ಋತುಮಾನಕ್ಕನುಗುಣವಾಗಿ ಬೆಳೆಯುವ ತೋಟಗಾರಿಕೆ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ಮತ್ತು ದರ ಒದಗಿಸಿಕೊಡುವ ಉದ್ದೇಶದೊಂದಿಗೆ ಈ ಮೇಳವನ್ನು ವಿನೋಬನಗರ ಕೃಷಿ ತಪುನ್ನ ಮಾರುಕಟ್ಟೆ ಪ್ರಾಂಗಣ(ಎಪಿಎಂಸಿ) ದಲ್ಲಿ ಆಯೋಜಿಸಿದ್ದು, ಮೇ.24 ರಂದು ಬೆಳಗ್ಗೆ ಮೇಳಕ್ಕೆ ಜಿಲ್ಲಾ ಉಸ್ತುವಾರಿ ಸಚಿವ ಮಧು ಬಂಗಾರಪ್ಪ ಚಾಲನೆ ನೀಡಲಿದ್ದಾರೆ. ಅವರೊಂದಿಗೆ ಜಿಲ್ಲೆಯ ಜನಪ್ರತಿನಿಧಿಗಳು ಕೂಡ ಭಾಗವಹಿಸಲಿದ್ದಾರೆಂದು ತಿಳಿಸಿದರು.

ಹಣ್ಣುಗಳ ಪ್ರದರ್ಶನ ಮತ್ತು ಮಾರಾಟಕ್ಕೆ 20 ಮಳಿಗಗಳನ್ನು ತೆರೆಯಲಾಗುತ್ತಿದೆ. ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ ಸೇರಿದಂತೆ ವಿವಿಧ ಜಿಲ್ಲೆಯ ರೈತರು ತಾವು ಬೆಳೆದ ಮಾವಿನ ಹಣ್ಣುಗಳನ್ನು ಮಾರಾಟಕ್ಕೆ ತರಲಿದ್ದಾರೆ. ರಸಪೂರಿ, ಮಲಗೋಬ, ಸಿಂದೂಲ, ರತ್ನಗಿರಿ ಸೇರಿ ಹತ್ತು ತಳಿಯ ಮಾವಿನ ಹಣ್ಣುಗಳು ಈ ಮೇಳದಲ್ಲಿ ಪ್ರದರ್ಶನ ಮತ್ತು ಮಾರಾಟಕ್ಕೆ ಇರಲಿವೆ ಎಂದರು.

ತೋಟಗಾರಿಕಾ ಇಲಾಖೆ ಮಾರ್ಗದರ್ಶನ ಹಾಗೂ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳ ಸಹಯೋಗದೊಂದಿಗೆ ಜಿಲ್ಲಾ ಹಾಪ್ ಕಾಮ್ಸ್ ನಿಂದ ಈ ಮೇಳ ಆಯೋಜಿಸಲಾಗಿದೆ. ರೈತ ಬಾಂಧವರು ಮತ್ತು ಗ್ರಾಹಕ ಬಂಧುಗಳು ಇದರ ಪ್ರಯೋಜನ ಪಡೆದುಕೊಳ್ಳಬೇಕೆಂದು ಅವರು ಮನವಿ ಮಾಡಿದರು. ಗೋಷ್ಠಿಯಲ್ಲಿ ಶಿವಮೊಗ್ಗ ಹಾಪ್ ಕಾಮ್ಸ್ ಉಪಾಧ್ಯಕ್ಷ ನಾಗೇಶ್ ನಾಯ್ಕ್, ವ್ಯವಸ್ಥಾಪಕ ನಿರ್ದೇಶಕ ಅಕ್ಷಯ್, ನಿರ್ದೇಶಕರಾದ ಉಂಬ್ಲೇಬೈಲು ಮೋಹನ್, ಮುನಿಸ್ವಾಮಿ, ಮ್ಯಾನೇಜರ್ ಕಾಳರಾಜ್ ಇದ್ದರು.

ಜಿಲ್ಲೆಯ ರೈತರು ಋತುಮಾನಕ್ಕನುಗುಣವಾಗಿ ಬೆಳೆಯುವ ತೋಟಗಾರಿಕೆ ಬೆಳೆಗಳಿಗೆ ಉತ್ತಮ ಮಾರುಕಟ್ಟೆ ಮತ್ತು ದರ ಒದಗಿಸಿಕೊಡುವ ಉದ್ದೇಶದೊಂದಿಗೆ ಎರಡು ದಿನಗಳ ಕಾಲ ಶಿವಮೊಗ್ಗ ನಗರದಲ್ಲಿ ಮಾವು ಮತ್ತು ಹಲಸಿನ ಹಣ್ಣಿನ ಮೇಳ ಆಯೋಜಿಸಲಾಗಿದೆ. ತೋಟಗಾರಿಕಾ ಇಲಾಖೆ ಮಾರ್ಗದರ್ಶನ ಹಾಗೂ ರಾಜ್ಯ ಸಹಕಾರಿ ತೋಟಗಾರಿಕಾ ಮಾರಾಟ ಮಹಾ ಮಂಡಳ ಸಹಯೋಗ ಇದಕ್ಕಿದೆ. ರೈತರು ಮತ್ತು ಗ್ರಾಹಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು.

- ಆರ್. ವಿಜಯ ಕುಮಾರ್, ಹಾಪ್‌ಕಾಮ್ಸ್ ಅಧ್ಯಕ್ಷರು

ದಾವಣಗೆರೆ-ಚಿತ್ರದುರ್ಗ-ತುಮಕೂರು ಮಾರ್ಗ | ಕೇಂದ್ರ ರೈಲ್ವೆ ಸಚಿವ ಸೋಮಣ್ಣ

ನೇರ ರೈಲು 2027ರ ಡಿಸೆಂಬರ್‌ಗೆ ಪೂರ್ಣ

ಚಿತ್ರದುರ್ಗ: ದಾವಣಗೆರೆ-ಚಿತ್ರದುರ್ಗ- ತುಮಕೂರು ನೇರ ರೈಲ್ವೆ ಯೋಜನೆಯನ್ನು 2027ರ ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಿ, ಲೋಕಾರ್ಪಣೆಗೊಳಿಸಲಾಗುವುದು ಎಂದು ಕೇಂದ್ರ ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ದಾವಣಗೆರೆ-ಚಿತ್ರದುರ್ಗ-ತುಮಕೂರು ನೂತನ ರೈಲ್ವೆ ಮಾರ್ಗದ ಕಾಮಗಾರಿಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಕಳೆದ 20 ರಿಂದ 30 ವರ್ಷಗಳವರೆಗೆ ದೇಶದಲ್ಲಿ ನೆನೆಗುದಿಗೆ ಬಿದ್ದಿರುವ ಎಲ್ಲ 7.25 ಲಕ್ಷ ಯೋಜನೆಗಳಿದ್ದವು, ಈ ಯೋಜನೆಗಳನ್ನು ಕೈಗೆತ್ತಿಕೊಂಡು ಪೂರ್ಣಗೊಳಿಸುತ್ತಿದ್ದೇವೆ. 33 ಸಾವಿರ ಕೋಟಿ ರೂಪಾಯಿಗಳ ಯೋಜನೆಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಹೇಳಿದರು.

ದೇಶ ಅಭಿವೃದ್ಧಿಯಾಗಬೇಕಾದರೆ ದೇಶದ ಎಲ್ಲ ರಾಜ್ಯಗಳು ಅಭಿವೃದ್ಧಿಯಾಗಬೇಕು ಎಂಬುದು ಪ್ರಧಾನಿ ನರೇಂದ್ರ ಮೋದಿಯವರ ಆಶಯ. ರಾಯದುರ್ಗ-ತುಮಕೂರು ಯೋಜನೆಯು ಕೂಡ ಈಗಾಗಲೇ ಭೂಸ್ವಾಧೀನ ಪ್ರಕ್ರಿಯೆ ಮುಕ್ತಾಯವಾಗಿದ್ದು, ಟೆಂಡರ್ ಕರೆಯಲಾಗಿದ್ದು, ಇನ್ನೂ ಎರಡು ಕಡೆ ಶೀಘ್ರದಲ್ಲಿ ಕೆಲಸ ಪ್ರಾರಂಭವಾಗಲಿದೆ. ಅದೇ ರೀತಿ ತುಮಕೂರು-ಚಿತ್ರದು ರ್ಗ-ದಾವಣಗೆರೆ ನೇರ ರೈಲ್ವೆ ಯೋಜನೆಗೆ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ, ಶೀಘ್ರವಾಗಿ ಕಾಮಗಾರಿ ಅನುಷ್ಠಾನಗೊಳಿಸಲಾಗುವುದು. ಈ ರೈಲ್ವೆ ಮಾರ್ಗವನ್ನು 2027 ರ ಡಿಸೆಂಬರ್ ಅಂತ್ಯಕ್ಕೆ ಪೂರ್ಣಗೊಳಿಸಿ ಏಕಕಾಲಕ್ಕೆ ಲೋಕಾರ್ಪಣೆ ಮಾಡಲಾಗುವುದು ಎಂದರು.

ಹಿರಿಯೂರು-ಚಳ್ಳಕೆರೆ ರೈಲ್ವೆ ಮಾರ್ಗ : ಈಗಾಗಲೆ ದಾವಣಗೆರೆ-ಚಿತ್ರದುರ್ಗ-ತುಮಕೂರು ರೈಲ್ವೆ ಮಾರ್ಗದಡಿ ಹಿರಿಯೂರಲ್ಲಿ ರೈಲ್ವೆ ಮಾರ್ಗ ಸಾಗುತ್ತಿದೆ. ಈ ರೈಲ್ವೆ ಯೋಜನೆಗಳ ಜತೆಗೆ ಚಳ್ಳಕೆರೆಯಿಂದ ಹಿರಿಯೂರಿಗೆ ಹೊಸದಾಗಿ ರೈಲ್ವೆ ಸಂಪರ್ಕ ಕಲ್ಪಿಸಿ, ಹೊಸ ರೈಲ್ವೆ ಮಾರ್ಗ ಯೋಜನೆ ರೂಪಿಸಿ ಅನುಷ್ಠಾನಗೊಳಿಸಬೇಕು, ಇದರಿಂದಾಗಿ ಉತ್ತರ ಕರ್ನಾಟಕದಿಂದ ಬೆಂಗಳೂರು ಮಾರ್ಗಕ್ಕೆ ನೇರ ರೈಲ್ವೆ ಮಾರ್ಗ ಕಲ್ಪಿಸಿದಂತಾಗುತ್ತದೆ ಎಂಬುದಾಗಿ ಸಚಿವ ಡಿ. ಸುಧಾಕರ್ ಹಾಗೂ ಚಳ್ಳಕೆರೆ ಶಾಸಕ ಟಿ. ರಘುಮೂರ್ತಿ ಅವರು ಬೇಡಿಕೆ ಸಲ್ಲಿಸಿದ್ದು, ಈ ಕುರಿತು ಚರ್ಚಿಸಿ, ಸರ್ವೇ ಮಾಡಿಸಿ, ಸೂಕ್ತ ಕ್ರಮ ವಹಿಸಲಾಗುವುದು ಎಂದು ಸಚಿವ ವಿ. ಸೋಮಣ್ಣ ಭರವಸೆ ನೀಡಿದರು.

ಕೆಳ ಸೇತುವೆಗಳ ವರದಿ : ಚಿತ್ರದುರ್ಗ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಹಾಗೂ ಸಂಸದ ಗೋವಿಂದ ಕಾರಜೋಳ ನಗರದ ತುರುವನೂರು ರಸ್ತೆ ಹಾಗೂ ಮೆದೆಹಳ್ಳಿ ರಸ್ತೆಯ ರೈಲ್ವೆ ಕೆಳ ಸೇತುವೆಯ ಸಮಸ್ಯೆಯ ಬಗ್ಗೆ ಸಚಿವರಿಗೆ ಮಾಹಿತಿ ನೀಡಿ, ಜಿಲ್ಲೆಯಲ್ಲಿರುವ ಬಹಳಷ್ಟು ರೈಲ್ವೆ ಕೆಳ ಸೇತುವೆಗಳು ಅವೈಜ್ಞಾನಿಕವಾಗಿದ್ದು, ಇದರಿಂದ ಮಳೆಗಾಲದಲ್ಲಿ ತೀವ್ರ ತೊಂದರೆಯಾಗುತ್ತಿದೆ ಎಂದರು. ಈಗಾಗಲೆ ದಾವಣಗೆರೆ-ತುಮಕೂರು ನೇರ ರೈಲ್ವೆ ಮಾರ್ಗ ನಿರ್ಮಾಣವಾಗುತ್ತಿದ್ದು, ಈ ಮಾರ್ಗದ ಶಿರಾ ಬಳಿ ಅಥವಾ ರೈಲ್ವೆ ಇಲಾಖೆ ನಿರ್ಧರಿಸುವ ಯಾವುದೇ ಸ್ಥಳದಲ್ಲಿ ರೈಲ್ವೆ ಕಾರ್ಗೋ ಕಾರಿಡಾರ್ ಮಾಡುವಂತೆ ಸಿರಾ ಶಾಸಕ ಟಿ.ಬಿ. ಜಯಚಂದ್ರ ಅವರು ರೈಲ್ವೆ ಸಚಿವ ವಿ. ಸೋಮಣ್ಣ ಅವರಿಗೆ ಮನವಿ ಪತ್ರ ಸಲ್ಲಿಸಿದರು. ಇದಕ್ಕೆ ಸಚಿವ ಸೋಮಣ್ಣ ಪ್ರತಿಕ್ರಿಯಿಸಿ, ಈ ಕುರಿತು ರೈಲ್ವೆ ಅಧಿಕಾರಿಗಳೊಂದಿಗೆ ಚರ್ಚಿಸಿ ಕ್ರಮ ವಹಿಸಲಾಗುವುದು ಎಂದು ಭರವಸೆ ನೀಡಿದರು.

ಜಿಲ್ಲಾ ಉಸ್ತುವಾರಿ ಸಚಿವ ಡಿ.ಸುಧಾಕರ್, ಸಂಸದ ಗೋವಿಂದ ಎಂ. ಕಾರಜೋಳ, ಶಾಸಕರಾದ ಟಿ. ರಘುಮೂರ್ತಿ, ಡಾ.ಎಂ.ಚಂದ್ರಪ್ಪ, ಕೆ.ಸಿ.ವೀರೇಂದ್ರ ಪಪ್ಪಿ, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ರೈಲ್ವೆ ಇಲಾಖೆ ಮುಖ್ಯ ಆಡಳಿತಾಧಿಕಾರಿ ಅಜಯ್ ಶರ್ಮಾ, ವಿಭಾಗೀಯ ರೈಲ್ವೆ ವ್ಯವಸ್ಥಾಪಕ (ಡಿಜಿಎಂ) ಮುದಿತ್ ಮಿತ್ತಲ್, ಜಿ.ಪಂ ಸಿಇಒ ಎಸ್.ಜೆ. ಸೋಮಶೇಖರ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಂಜಿತ್ ಕುಮಾರ್ ಬಂಡಾರು,ಎಡಿಸಿ ಬಿ.ಟಿ. ಕುಮಾರಸ್ವಾಮಿ, ಎಸಿ ಮೆಹಬೂಬ್ ಜಿಲಾನಿ ಖುರೇಷಿ, ಭೂಸ್ವಾಧೀನಾಧಿಕಾರಿ ವೆಂಕಟೇಶ್ ಇದ್ದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಸಚಿವ ವಿ. ಸೋಮಣ್ಣ ಮಾತನಾಡಿದರು.

ಸಿಬಿಎಸ್‌ಇಯಲ್ಲಿ ಶೇ.100 ಫಲಿತಾಂಶ

ಹೊನ್ನಾಳಿ: ಪಟ್ಟಣದ ಹೊರವಲಯದ ಶ್ರೀ ಸಾಯಿ ಗುರುಕುಲ ಸಿಬಿಎಸ್‌ಇ ವಸತಿ ಶಾಲೆಯು ಸತತ 11 ವರ್ಷಗಳಿಂದಲೂ ಸಿಬಿಎಸ್‌ಇ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ 100% ಫಲಿತಾಂಶದ ಮೂಲಕ ಅತ್ಯುತ್ತಮ ಸಾಧನೆ ಮಾಡುತ್ತಾ ಬರುತ್ತಿದೆ ಎಂದು ಸಂಸ್ಥೆಯ ಕಾರ್ಯದರ್ಶಿ ಸೌಮ್ಯ ಪ್ರದೀಪ್‌ಗೌಡ ತಿಳಿಸಿದರು.

2024-25ನೇ ಸಾಲಿನಲ್ಲಿ 49 ವಿದ್ಯಾರ್ಥಿಗಳು ಸಿಬಿಎಸ್‌ಇ 10ನೇ ತರಗತಿಯ ಪರೀಕ್ಷೆಗೆ ಹಾಜರಾಗಿದ್ದು, ಅವರಲ್ಲಿ ಡಿಸ್ಟಿಂಕ್ಷನ್-5, ಪ್ರಥಮ ಶ್ರೇಣಿ-32, ದ್ವಿತೀಯ ಶ್ರೇಣಿ-12, ಪರೀಕ್ಷೆಗೆ ಹಾಜರಾದ ಎಲ್ಲ ವಿದ್ಯಾರ್ಥಿಗಳು ತೇರ್ಗಡೆಯಾಗಿ ಸಂಸ್ಥೆಗೆ 100% ಫಲಿತಾಂಶ ಬಂದಿದೆ ಎಂದು ಮಾಹಿತಿ ನೀಡಿದರು.

ಎಚ್.ಎಸ್.ತರುಣ್‌ಗೌಡ - 477- (95.4%), ಎನ್.ಎಸ್. ನಂದನ-460-(92%), ಅವನಿ ಆರ್. ನಾಡಿಗ್ - 448 (89.6%), ಎ.ಜಿ.ಪರಿಣಿತ - 435(87%), ಎಚ್.ಟಿ.ಮೈತ್ರಿ - 426 (85.2%) ಪಡೆದಿದ್ದಾರೆ.ಫಲಿತಾಂಶ ಪಡೆದು ಸಂಸ್ಥೆಗೆ ಹೆಸರು ತಂದ ವಿದ್ಯಾರ್ಥಿಗಳಿಗೆ ಸಂಸ್ಥೆಯ ಅಧ್ಯಕ್ಷ ಡಿ.ಜಿ. ಶಾಂತನಗೌಡ, ಪ್ರಾಂಶುಪಾಲರು, ಆಡಳಿತಾಧಿಕಾರಿಗಳು, ಶಿಕ್ಷಕ ವೃಂದದವರು ಅಭಿನಂದಿಸಿದ್ದಾರೆ.

ತರುಣ್‌ಗೌಡ 95.4% | ನಂದನ 92% | ಅವನಿ ಆರ್. 89.6% | ಎ.ಜಿ.ಪರಿಣಿತ 87% | ಎಚ್.ಟಿ.ಮೈತ್ರಿ 85.2%

ಪಠ್ಯೇತರ ಚಟುವಟಿಕೆ ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಗತ್ಯ

ಹಿರಿಯೂರು: ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಕೇವಲ ಪಠ್ಯ ಚಟುವಟಿಕೆಗಳ ಜತೆಗೆ ಪಠ್ಯೇತರ ಚಟುವಟಿಕೆಗಳು ಸಹ ಮುಖ್ಯ. ಆದ್ದರಿಂದ ಆ ಚಟುವಟಿಕೆಗಳಿಗೆ ಶಿಕ್ಷಣದಲ್ಲಿ ಹೆಚ್ಚಿನ ಆದ್ಯತೆಯನ್ನು ನೀಡಬೇಕಾಗಿದೆ. ಇದರಲ್ಲಿ ಕ್ರೀಡಾ ಚಟುವಟಿಕೆಗಳು ಹಾಗೂ ಸ್ಪರ್ಧೆಗಳು ಸಹ ಉಪಯುಕ್ತವಾದವುಗಳಾಗಿವೆ ಎಂಬುದಾಗಿ ವಾಣಿ ಸಕ್ಕರೆ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಪ್ರೊ.ಆರ್.ಮಹೇಶ್ ಹೇಳಿದರು.

ನಗರದ ಗಂಗಾ ಪದವಿ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಅಂತರ ಕಾಲೇಜುಗಳ ವಾಲಿಬಾಲ್ ಸ್ಪರ್ಧೆಯನ್ನು ಉದ್ಘಾಟಿಸಿ, ನಂತರ ಅವರು ಮಾತನಾಡಿದರು.

ಗಂಗಾ ಪದವಿ ಕಾಲೇಜಿನಲ್ಲಿ ಅಂತರ ಕಾಲೇಜು ವಾಲಿಬಾಲ್ ಸ್ಪರ್ಧೆಯನ್ನು ಹಮ್ಮಿಕೊಳ್ಳಲಾಗಿದ್ದು, ಇದು ವಿದ್ಯಾರ್ಥಿಗಳ ಉತ್ಸಾಹವನ್ನು ಇಮ್ಮಡಿಗೊಳಿಸಿದೆ. ಮೂರು ವರ್ಷಗಳ ಹಿಂದೆ ಆರಂಭವಾದ ಈ ಕಾಲೇಜು ಈ ರೀತಿಯ ಹಲವು ಸ್ಪರ್ಧೆ ಮತ್ತು ಕ್ರಿಯಾಶೀಲವಾದ ಕಾರ್ಯ ಚಟುವಟಿಕೆಗಳನ್ನು ಹಮ್ಮಿಕೊಳ್ಳುವ ಮೂಲಕ ವಿದ್ಯಾರ್ಥಿಗಳ ಭವಿಷ್ಯಕ್ಕೆ ದಾರಿದೀಪವಾಗಲಿ ಎಂಬುದಾಗಿ ಶುಭಹಾರೈಸಿದರು.

ಈ ಸ್ಪರ್ಧೆಯಲ್ಲಿ ವಾಣಿಸಕ್ಕರೆ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು, ವೇದಾವತಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಹಾಗೂ ಗಂಗಾ ಪದವಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಅದರಲ್ಲಿ ವೇದಾವತಿ ಪ್ರಥಮ ದರ್ಜೆ ಕಾಲೇಜಿನ ವಿದ್ಯಾರ್ಥಿಗಳು ಪ್ರಥಮ ಬಹುಮಾನವನ್ನು ಹಾಗೂ ವಾಣಿ ಸಕ್ಕರೆ ಪ್ರಥಮ ದರ್ಜೆ ವಿದ್ಯಾರ್ಥಿಗಳು ದ್ವಿತೀಯ ಬಹುಮಾನವನ್ನು ಗಳಿಸಿದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಗಂಗಾ ಸಮೂಹ ವಿದ್ಯಾಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕರಾದ ಪ್ರಶಾಂತ್ ಓಬಯ್ಯ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ವೇದಾವತಿ ಕಾಲೇಜಿನ ಅಣ್ಣಪ್ಪಸ್ವಾಮಿ ಹಾಗೂ ವಾಣಿ ಸಕ್ಕರೆ ಪ್ರಥಮ ದರ್ಜೆ ಕಾಲೇಜಿನ ಉಪನ್ಯಾಸಕರಾದ ಮಹಾಂತೇಶ್ ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲರು ಹಾಗೂ ಕಾಲೇಜಿನ ಎಲ್ಲಾ ಉಪನ್ಯಾಸಕರು ಉಪಸ್ಥಿತರಿದ್ದರು.

ನಗರದ ಗಂಗಾ ಪದವಿ ಕಾಲೇಜಿನಲ್ಲಿ ಏರ್ಪಡಿಸಲಾಗಿದ್ದ ಅಂತರ ಕಾಲೇಜುಗಳ ವಾಲಿಬಾಲ್ ಸ್ಪರ್ಧೆಯನ್ನು ಪ್ರೊ.ಆರ್.ಮಹೇಶ್ ಉದ್ಘಾಟಿಸಿದರು.

ಮಲೆನಾಡು ರೈತರ ಸಮಸ್ಯೆ ಬಗೆಹರಿಸಿ: ರೈತ ಸಂಘಟನೆ

ಶಿವಮೊಗ್ಗ: ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮದು ನುಡಿದಂತೆ ನಡೆದ ಸರಕಾರ ಎಂದು ಹೇಳುತ್ತಿದ್ದಾರೆ. ಆದರೆ ಮಲೆನಾಡಿನ ಜನರ ಸಮಸ್ಯೆ ಬಗೆಹರಿಸುವ ನಿಟ್ಟಿನಲ್ಲಿ ಕೊಟ್ಟ ಆಶ್ವಾಸನೆ, ಭರವಸೆ ಎರಡು ವರ್ಷವಾದರೂ ಈಡೇರಿಲ್ಲ. ಅವರು ನುಡಿದಂತೆ ನಡೆಯುವವರೆ ಆಗಿದ್ದರೆ ಮುಳುಗಡೆ ಸಂತ್ರಸ್ಥರ ಭೂಮಿ ಹಕ್ಕು ಸಮಸ್ಯೆ ಸೇರಿದಂತೆ ಮಲೆನಾಡಿನ ಜ್ವಲಂತ ಸಮಸ್ಯೆಗಳನ್ನು ಈಗಲಾದರೂ ಬಗೆಹರಿಸಲಿ ಎಂದು ಮಲೆನಾಡು ರೈತ ಹೋರಾಟ ಸಮಿತಿ ಅಧ್ಯಕ್ಷ ತೀ.ನಾ. ಶ್ರೀನಿವಾಸ್ ಸವಾಲು ಹಾಕಿದ್ದಾರೆ. ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ನಂತರ ಮಲೆನಾಡು ರೈತರ ಸಮಸ್ಯೆಯನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದೆ. ನುಡಿದಂತೆ ನಡೆದ ಸರಕಾರ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳುತ್ತಿದ್ದಾರೆ. ಆದರೆ ಮಲೆನಾಡಿನ ರೈತರ ಸಮಸ್ಯೆ ಬಗೆಹರಿಸುವ ವಿಚಾರದಲ್ಲಿ ಸಿಎಂ ನೇತೃತ್ವದ ಸರಕಾರ ನುಡಿದಂತೆ ನಡೆದಿಲ್ಲ ಎಂದು ಕಿಡಿಕಾರಿದರು.

ಶರಾವತಿ, ವರಾಹಿ, ತುಂಗಾ ಮತ್ತು ಭದ್ರಾ ಸೇರಿದಂತೆ ಮುಳುಗಡೆ ಸಂತ್ರಸ್ಥರ ಸಮಸ್ಯೆಗಳಿಗೆ ಶಾಶ್ವತವಾದ ಪರಿಹಾರ ಒದಗಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಮುಂದಾಗಬೇಕು, 1978 ರ ಹಿಂದೆ ಅರಣ್ಯ ಭೂಮಿ ಸಾಗುವಳಿ ಮಾಡಿದವರು ಕೈ ಬರಹದ ಪಹಣಿ, ಟಿಡಿ ಹೊಂದಿದವರಿಗೆ ಭೂಮಿ ಹಕ್ಕು ಕೊಡಬೇಕು, ಮಲೆನಾಡಿನ ಜ್ವಲಂತ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ನೀಡಬೇಕೆಂದು ಒತ್ತಾಯಿಸಿದರು. ನಗರಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಆಗಮಿಸುತ್ತಿರುವ ಸಂದರ್ಭದಲ್ಲಿ ಗಂಭೀರವಾಗಿ ಪರಿಗಣಿಸುವಂತೆ ಆಗ್ರಹಿಸಿದರು. ಗೋಷ್ಠಿಯಲ್ಲಿ ರೈತ ಮುಖಂಡರಾದ ಹರೀಶ್, ಸುರೇಶ್ ಹಾಗೂ ಶ್ರೀನಿವಾಸ್ ಇದ್ದರು.

ತುರ್ತು ಪರಿಸ್ಥಿತಿ ನಿರ್ವಹಣೆಗೆ ಮಾಕ್ ಡ್ರಿಲ್: ಡಿಸಿ

ದಾವಣಗೆರೆ: ವೈಮಾನಿಕ ದಾಳಿ ಎದುರಾದಾಗ ಸ್ಥಳೀಯ ಜನರು ಭಯಭೀತರಾಗದೇ ತುರ್ತು ಪರಿಸ್ಥಿತಿಯನ್ನು ಹೇಗೆ ಎದುರಿಸಬೇಕೆಂದು ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಅಣಕು ಪ್ರದರ್ಶನ - ಮಾಕ್ ಡ್ರಿಲ್ ಕೈಗೊಳ್ಳಲಾಯಿತು ಎಂದು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ.ಜಿ.ಎಂ ತಿಳಿಸಿದರು.

ನಗರದ ಪಾಲಿಕೆ ಆವರಣದಲ್ಲಿ ನಡೆದ ಅಣುಕು ಪ್ರದರ್ಶನದ ನಂತರ ಮಾತನಾಡಿದ ಅವರು, ತುರ್ತು ಪರಿಸ್ಥಿತಿ ಎದುರಿಸಲು ಜನರಿಗೆ ತಿಳಿಸುವ ಎಚ್ಚರಿಕೆ ಗಂಟೆಯೂ ಸರಿಯಾದ ಸಮಯಕ್ಕೆ ಶಬ್ದ ಮಾಡುವಂತೆ ಗಮನ ವಹಿಸಲಾಗುತ್ತದೆ. ಗಾಯಾಳುಗಳಾದ ಸಾರ್ವಜನಿಕರನ್ನು ಅಂಬ್ಯುಲೆನ್ಸ್ ಗೆ ವರ್ಗಾಯಿಸುವಾಗ ನಿಧಾನವಾಗಿ ತುಂಬಾ ಜಾಗರೂಕತೆಯಿಂದ ಸ್ಥಳಾಂತರಿಸಬೇಕು. ಯುದ್ದದಂತಹ ತುರ್ತು ಪರಿಸ್ಥಿತಿ ಸಂದರ್ಭದಲ್ಲಿ ಸರಕಾರ ಹೇಗೆ ಕೆಲಸ ನಿರ್ವಹಿಸುತ್ತದೆ ಎಂದು ಅವರು ತಿಳಿಸಿದರು.

ನಗರದಲ್ಲಿ ವೈಮಾನಿಕ ದಾಳಿಯಾದಾಗ ಅದಕ್ಕೆ ಇಲಾಖೆ ಅಧಿಕಾರಿಗಳು ಯಾವ ತರಹ ಕಾರ್ಯಾಚರಣೆ, ಪರಿಹಾರ ಕಂಡುಕೊಳ್ಳುತ್ತೇವೆ ಎನ್ನುವುದನ್ನು ತಿಳಿಸುವ ಅಣುಕು ಪ್ರದರ್ಶನ ಇದಾಗಿದೆ. ಬಾಂಬ್ ಬಿದ್ದಿದೆ ಎಂದು ಮಾಹಿತಿ ತಿಳಿದ ಕೂಡಲೇ ಬಾಂಬ್ ಸ್ಕ್ವಾಡ್ ತಕ್ಷಣ ಹೋಗಿ ಸ್ಥಳೀಯ ಪರಿಸ್ಥಿತಿ ಅರಿತು ಸ್ಫೋಟಗೊಳ್ಳದ ಬಾಂಬ್ ಗಳನ್ನು ನಿಷ್ಕ್ರಿಯಗೊಳಿಸಿದರು. ಪೊಲೀಸ್ ಅಗ್ನಿಶಾಮಕ ದಳ ಅಂಬುಲೆನ್ಸ್ ಸ್ವಯಂಸೇವಕರು ಬಂದು ಭಯಭೀತರಾದ ಜನರನ್ನು ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು. ಗಾಯಾಳುಗಳನ್ನು ಆಸ್ಪತ್ರೆಗೆ ಸ್ಥಳಾಂತರಗೊಳಿಸಲಾಯಿತು. ಪ್ರಥಮ ಚಿಕಿತ್ಸೆಯ ಕ್ಯಾಂಪ್ ಗಳನ್ನು ಪ್ರಾರಂಭಿ ಸಲಾಯಿತು. ಅವುಗಳ ಪರಿಸ್ಥಿತಿಗನುಗುಣವಾಗಿ ಕಾರ್ಯಗಳನ್ನು ನಿಭಾಯಿಸುವ ಬಗ್ಗೆ ಪ್ರಾತ್ಯಕ್ಷಿಕೆಯನ್ನು ಕೈಗೊಳ್ಳಲಾಯಿತು.

ಈ ರೀತಿಯ ಅವಘಡಗಳು ಸಂಭವಿಸಿದಲ್ಲಿ ಅದೆಷ್ಟೋ ಅಮಾಯಕರು ಸಾವಿಗೀಡಾಗಿರುತ್ತಾರೆ. ಇಂತಹ ಸನ್ನಿವೇಶದಲ್ಲಿ ತುರ್ತು ಚಿಕಿತ್ಸೆ ಒದಗಿಸುವ ಸಲುವಾಗಿ ಆಂಬುಲೆನ್ಸ್ ಸ್ಥಳಕ್ಕೆ ಧಾವಿಸಿ ವೈದ್ಯಕೀಯ ಚಿಕಿತ್ಸೆಗಾಗಿ ಏರ್ಪಾಡು ಮಾಡಬೇಕು. ಗಾಯಗೊಂಡಿದ್ದವರನ್ನೆಲ್ಲ ರಕ್ಷಿಸಿ ಹೆಚ್ಚಿನ ಚಿಕಿತ್ಸೆಗಾಗಿ ಸ್ಥಳಾಂತರಿಸುವ ಕಾರ್ಯ ಮಾಡಬೇಕು.

ಅನಿರೀಕ್ಷಿತ ಸ್ಫೋಟದಿಂದಾಗಿ ಮಹಾನಗರ ಪಾಲಿಕೆಯ ಕಟ್ಟಡಕ್ಕೆ ಬೆಂಕಿ ಹೊತ್ತಿಕೊಂಡಿದ್ದು, ಇದರಿಂದ ಸಾರ್ವಜನಿಕರನ್ನು ರಕ್ಷಿಸಲು ಅಗ್ನಿಶಾಮಕ ದಳ ಆಗಮಿಸಿದ್ದು ಆದಷ್ಟು ಬೇಗನೇ ಬೆಂಕಿಯನ್ನು ನಂದಿಸಲು ಕಾರ್ಯ ಪ್ರವೃತ್ತರಾಗಿ ಅತ್ಯಂತ ಚಾಕಚಕ್ಯತೆಯಿಂದ ಕರ್ತವ್ಯವನ್ನು ನಿರ್ವಹಿಸಬೇಕು.

ಅಗ್ನಿಶಾಮಕ ದಳದ ಈ ರಕ್ಷಣಾ ಕಾರ್ಯಕ್ಕೆ ಗೃಹರಕ್ಷಕ ದಳ, ಎನ್.ಸಿ.ಸಿ ಮತ್ತು ಸೌಟ್ ಗೈಡ್ಸ್ ಸಂಸ್ಥೆಗಳ ಸ್ವಯಂ ಸೇವಕರು ಸಹ ಸಾಥ್ ನೀಡುತ್ತಿದ್ದು ಇವರ ಈ ತುರ್ತು ಸ್ಪಂದನಾ ಕಾರ್ಯಕ್ಕೆ ಎಲ್ಲರೂ ಜೋರಾದ ಚಪ್ಪಾಳೆಯೊಂದಿಗೆ ಅಭಿನಂದಿಸೋಣ ಎಂದರು.

ರಾಜ್ಯ ವಿಪತ್ತು ಸ್ಪಂದನಾ ಪಡೆ ಇದೀಗ ಘಟನಾ ಸ್ಥಳಕ್ಕೆ ಧಾವಿಸಿದ್ದು, ಈ ಕಟ್ಟಡದ ಅವಶೇಷಗಳಲ್ಲಿ ಸಿಲುಕಿಕೊಂಡಿರುವ ಸಾರ್ವಜನಿಕರನ್ನು ರಕ್ಷಿಸುವ ಸಲುವಾಗಿ ಗೋಡೆಯನ್ನು ಕೊರೆದು, ತುರ್ತಾಗಿ ಹೊಸ ಮಾರ್ಗವನ್ನು ಸೃಷ್ಟಿಸಬೇಕು. ಸಾಮಾನ್ಯ ಜನರು ತಲುಪಲು ಸಾಧ್ಯವಾಗದ ಕಡೆ ಬಂದು ನೆರವಾಗಿರುವುದು ರಾಜ್ಯ ವಿಪತ್ತು ಸ್ಪಂದನಾ ಪಡೆ. ತನ್ನ ವಿಶೇಷ ಕಾರ್ಯಕ್ಷಮತೆಯನ್ನು ಪ್ರದರ್ಶಿಸಿ ಸಂಕಷ್ಟದಲ್ಲಿದ್ದ ಸಾರ್ವಜನಿಕರ ರಕ್ಷಣೆ ಮಾಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದೆ.

ಜಿಪಂ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಸುರೇಶ್.ಬಿ.ಇಟ್ನಾಳ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್, ಅಪರ ಜಿಲ್ಲಾಧಿಕಾರಿ ಪಿ.ಎನ್ ಲೋಕೇಶ್, ಪಾಲಿಕೆ ಆಯುಕ್ತೆ ರೇಣುಕ ಇದ್ದರು

ನಗರದ ಪಾಲಿಕೆ ಆವರಣದಲ್ಲಿ ನಡೆದ ಅಣುಕು ಪ್ರದರ್ಶನ ನಡೆಯಿತು.

ನಾಲ್ಕು ತಿಂಗಳು ನಿರ್ಬಂಧ | ಜಲಸಾಹಸ ಕ್ರೀಡೆ ಸ್ಥಗಿತ

ಸೈಂಟ್ ಮೇರಿಸ್ ದ್ವೀಪಕ್ಕೆ ಪ್ರವಾಸಿಗರ ಪ್ರವೇಶ ನಿಷೇಧ

ಉಡುಪಿ: ಮುಂಗಾರು ಸಮೀಪಿಸುತ್ತಿರುವ ಹಿನ್ನೆಲೆಯಲ್ಲಿ ಮತ್ತು ಪ್ರವಾಸಿಗರ ಸುರಕ್ಷತೆಯ ಹಿನ್ನೆಲೆ ಉಡುಪಿ ಜಿಲ್ಲಾಡಳಿತವು ಮಲ್ಪೆಯ ಜನಪ್ರಿಯ ಪ್ರವಾಸಿ ತಾಣವಾದ ಸೈಂಟ್ ಮೇರಿಸ್ ದ್ವೀಪಕ್ಕೆ ಪ್ರವೇಶವನ್ನು ನಿಷೇಧಿಸಿದೆ.

ಈ ನಿಷೇಧವು ಮೇ 16 ರಿಂದ ಜಾರಿಗೆ ಬಂದಿದೆ. ನಾಲ್ಕು ತಿಂಗಳ ಕಾಲ ಈ ನಿರ್ಬಂಧವು ಜಾರಿಯಲ್ಲಿರುತ್ತದೆ. ಈ ಸಮಯದಲ್ಲಿ ಎಲ್ಲಾ ಜಲಸಾಹಸ ಕ್ರೀಡೆಗಳನ್ನು ಸಹ ಸ್ಥಗಿತಗೊಳಿಸಲಾಗುವುದು. ಸಮುದ್ರದ ಅಲೆಗಳು ತೀವ್ರಗೊಳ್ಳುತ್ತಿರುವುದರಿಂದ ಮತ್ತು ಗಾಳಿಯ ವೇಗ ಹೆಚ್ಚುತ್ತಿರುವುದರಿಂದ, ಪ್ರವಾಸೋದ್ಯಮ ಇಲಾಖೆಯು ಈ ಮುನ್ನೆಚ್ಚರಿಕಾ ಕ್ರಮವನ್ನು ತೆಗೆದುಕೊಂಡಿದೆ. ಈ ನಿಷೇಧವು ಸೆಪ್ಟೆಂಬರ್ 15 ರವರೆಗೆ ಜಾರಿಯಲ್ಲಿರುತ್ತದೆ.

ಬೇಸಿಗೆ ರಜೆ ಹಿನ್ನೆಲೆಯಲ್ಲಿ ಸಾವಿರಾರು ಪ್ರವಾಸಿಗರು ಮಲ್ಪೆ ಕಡಲತೀರಕ್ಕೆ ಭೇಟಿ ನೀಡುತ್ತಿರುವುದರಿಂದ ದ್ವೀಪಕ್ಕೆ ಪ್ರವಾಸಿ ಬೋಟ್ ಹಾಗೂ ಜಲಸಾಹಸ ಕ್ರೀಡೆಗೆ ಕೆಲವು ದಿನಗಳ ಮಟ್ಟಿಗೆ ಅವಕಾಶ ನೀಡಬೇಕೆಂಬ ಒತ್ತಾಯ ಕೇಳಿಬಂದಿದೆ. ಆದರೆ ಹಿಂದಿನ ವರ್ಷದಂತೆ ಪ್ರವಾಸಿಗರ ಸುರಕ್ಷತೆಗಾಗಿ ಮೇ 16 ರಿಂದ ಸೈಂಟ್ ಮೇರಿಸ್ ಪ್ರವೇಶ ನಿಷೇಧವು ಅವಶ್ಯಕವಾಗಿದೆ ಎಂದು ಜಿಲ್ಲಾಡಳಿತ ತಿಳಿಸಿದೆ. ಸಾಮಾನ್ಯವಾಗಿ ಮುಂಗಾರು ಅವಧಿಯಲ್ಲಿ ಪಶ್ಚಿಮ ಕರಾವಳಿಯಲ್ಲಿ ದೋಣಿ ವಿಹಾರ ಚಟುವಟಿಕೆಗಳನ್ನು ನಿಷೇಧಿಸಲಾಗುತ್ತದೆ. ದ್ವೀಪಕ್ಕೆ ಪ್ರವೇಶ ನಿಷೇಧವು ಹಾರ್ಬರ್ ಕ್ರಾಫ್ಟ್ ನಿಯಮಗಳಿಗೆ ಅನುಗುಣವಾಗಿದೆ. ಈ ಅವಧಿಯಲ್ಲಿ ಜಿಲ್ಲಾಡಳಿತಕ್ಕೆ ಸಹಕರಿಸುವಂತೆ ಪ್ರವಾಸಿಗರನ್ನು ವಿನಂತಿಸಲಾಗಿದೆ.

ಕಡಲತೀರದ ಉದ್ದಕ್ಕೂ ಬ್ಯಾರಿಕೇಡ್

ಮುಂಗಾರು ಮುನ್ಸೂಚನೆ ಮತ್ತು ಸಂಬಂಧಿತ ಸುರಕ್ಷತಾ ನಿಯಮಗಳ ಕಾರಣದಿಂದಾಗಿ ಜಲಸಾಹಸ ಕ್ರೀಡೆ ಚಟುವಟಿಕೆಗಳು ಮತ್ತು ಸೈಂಟ್ ಮೇರಿಸ್ ದ್ವೀಪಕ್ಕೆ ಪ್ರವೇಶವನ್ನು ಸ್ಥಗಿತಗೊಳಿಸಲಾಗಿದೆ. ಆದಾಗ್ಯೂ, ಪ್ರವಾಸಿಗರು ಇನ್ನೂ ಕಡಲತೀರಕ್ಕೆ ಭೇಟಿ ನೀಡಲು ಅನುಮತಿಸಲಾಗಿದೆ. ಜೂನ್ 1 ರಿಂದ, ಹೆಚ್ಚುವರಿ ಸುರಕ್ಷತಾ ಕ್ರಮವಾಗಿ ಕಡಲತೀರದ ಉದ್ದಕ್ಕೂ ಬ್ಯಾರಿಕೇಡ್‌ಗಳನ್ನು ಹಾಕಲಾಗುವುದು ಎಂದು ಪ್ರವಾಸೋದ್ಯಮ ಇಲಾಖೆಯ ಸಹಾಯಕ ನಿರ್ದೇಶಕ ಚಂದ್ರಶೇಖರ್ ತಿಳಿಸಿದ್ದಾರೆ.

ಅಭಿವೃದ್ಧಿ ಕಾಮಗಾರಿಗೆ ಶಾಸಕ ವೀರೇಂದ್ರ ಪಪ್ಪಿ ಚಾಲನೆ

20 ವರ್ಷದ 90 ಸಾವಿರ ಟನ್ ಘನತ್ಯಾಜ್ಯ ವಿಲೇವಾರಿ ಟೆಂಡರ್

ಚಿತ್ರದುರ್ಗ: ನಗರಸಭೆಯ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕ ನಿರ್ಮಾಣ ಹಾಗೂ ವಾರ್ಡ್ ನಂ. 35 ರಲ್ಲಿನ ವಿವಿಧ ಮೂಲಭೂತ ಸೌಕರ್ಯ ನಿರ್ಮಾಣದ ಕಾಮಗಾರಿಗಳಿಗೆ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಚಾಲನೆ ನೀಡಿದರು.

ನಗರಸಭೆಯ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದಲ್ಲಿ 3.22 ಕೋಟಿ ರು. ವೆಚ್ಚದಲ್ಲಿ ನಿರ್ಮಿಸುತ್ತಿರುವ ಒಣ ತ್ಯಾಜ್ಯ ಸಂಸ್ಕರಣಾ ಘಟಕದ ಒ.ಖ.ಈ ಕಾಮಗಾರಿಗೆ ಶಾಸಕ ವೀರೇಂದ್ರ ಪಪ್ಪಿ ಅವರು ಗುದ್ದಲಿ ಪೂಜೆ ನೆರವೇರಿಸಿದರು. ಒಣ ತ್ಯಾಜ್ಯ ವಸ್ತು ಸಂಸ್ಕರಣೆ ಘಟಕ ನಿರ್ಮಾಣವಾದ ನಂತರ, ಪ್ರತಿದಿನ ನಗರ ವ್ಯಾಪ್ತಿಯಲ್ಲಿ ಉತ್ಪತ್ತಿಯಾಗುವ ಒಣ ತ್ಯಾಜ್ಯದಲ್ಲಿ ಮರು ಬಳಕೆ ವಸ್ತುಗಳಾದ ಪ್ಲಾಸ್ಟಿಕ್ ಕವರ್, ನ್ಯೂಸ್ ಪೇಪರ್, ಪ್ಲಾಸ್ಟಿಕ್ ಬಾಟಲ್, ರಟ್ಟು ಕ್ಯಾನ್, ಲೋಹದ ವಸ್ತುಗಳು ಇತ್ಯಾದಿಗಳನ್ನು 20 ಹೆಚ್ಚು ವಿಧವಾಗಿ ಇಲ್ಲಿ ವಿಂಗಡಿಸಲಾಗುವುದು.

ಪ್ರಸ್ತುತ ಘನತ್ಯಾಜ್ಯ ವಸ್ತು ವಿಲೇವಾರಿ ಘಟಕದಲ್ಲಿ ಸುಮಾರು 20 ವರ್ಷಗಳಿಂದ ಶೇಖರಣೆಯಾಗಿರುವ ಅಂದಾಜು 90 ಸಾವಿರ ಟನ್ ಗಳಷ್ಟು ತ್ಯಾಜ್ಯವನ್ನು ಸಂಸ್ಕರಿಸಿ ವಿಲೇವಾರಿ ಮಾಡಲು ರು.755 ಲಕ್ಷಗಳಿಗೆ ಟೆಂಡರ್ ಕರೆದಿದ್ದು, ಅನುಮೋದನೆಯ ಹಂತದಲ್ಲಿರುತ್ತದೆ. ಅನುಮೋದನೆಯ ನಂತರ ಈಗಾಗಲೇ ಸಂಗ್ರಹವಾಗಿರುವ ಘನತ್ಯಾಜ್ಯ ಒಂದು ವರ್ಷದಲ್ಲಿ ವಿಲೇಗೊಳಿಸಲಾಗುವುದು. ಇದರಿಂದ ಈಗಾಗಲೇ ಸಂಗ್ರಹವಾಗಿರುವ ಸುಮಾರು 10 ಎಕರೆಯಷ್ಟು ಜಾಗ ಮರು ಉಪಯೋಗಕ್ಕೆ ಬಳಸಬಹುದಾಗಿದೆ. ಒಣ ತ್ಯಾಜ್ಯ ವಸ್ತು ವಿಲೇವಾರಿ ಘಟಕ ಪ್ರಾರಂಭವಾದ ನಂತರ ತ್ಯಾಜ್ಯವು ಶೇಖರಣೆಯಾಗದಂತೆ ಸಂಪೂರ್ಣವಾಗಿ ವಿಂಗಡಿಸಿ ಸಂಸ್ಕರಿಸಿ ಪರಿಸರ ಮಾಲಿನ್ಯವಾಗದಂತೆ ವಿಲೇವಾರಿ ಮಾಡಲಾಗುವುದು ಎಂದು ಸಹಾಯಕ ಕಾರ್ಯಪಾಲಕ ಅಭಿಯಂತರ (ಪರಿಸರ) ಜೆ. ಜಾಫರ್ ಸಾಬ್ ಇವರು ಶಾಸಕರಿಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಕಾರ್ಯಕ್ರಮದಲ್ಲಿ ಪೌರಾಯುಕ್ತೆ ಎಂ.ರೇಣುಕಾ, ನಗರಸಭೆ ಸದಸ್ಯ ಹೆಚ್.ಎನ್.ಮಂಜುನಾಥ, ಸಹಾಯಕ ಕಾರ್ಯಪಾಲಕ ಅಭಿಯಂತರರಾದ ರಾಜು, ನಗರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಸೈಯದ್ ನಸ್ರುಲ್ಲಾ, ನಗರಸಭೆ ಸದಸ್ಯರುಗಳಾದ ಎಸ್. ಭಾಸ್ಕರ್ ರವರು, ತಾರಕೇಶ್ವರಿ, ಗೋಪ್ಪೆ ಮಂಜುನಾಥ, ಮೊಹಮ್ಮದ್ ದಾವುದ್, ಎಸ್ ಜಯಪ್ಪ ಹಾಗೂ ನಾಮ ನಿರ್ದೇಶಿತ ಸದಸ್ಯ ಶಬ್ಬೀರ್ ಸೇರಿದಂತೆ ನಗರಸಭೆಯ ಸಿಬ್ಬಂದಿ ವರ್ಗದವರು ಹಾಗೂ ಸ್ಥಳೀಯ ಸಾರ್ವಜನಿಕರು ಹಾಜರಿದ್ದರು.

ನಗರಸಭೆಯ ವಿವಿಧ ಮೂಲಭೂತ ಸೌಕರ್ಯ ನಿರ್ಮಾಣದ ಕಾಮಗಾರಿಗಳಿಗೆ ಶಾಸಕ ಕೆ.ಸಿ. ವೀರೇಂದ್ರ ಪಪ್ಪಿ ಚಾಲನೆ ನೀಡಿದರು.

ಸುರಗಿರಿ ಸಂಸ್ಕಾರ ಶಿಬಿರ ಸಮಾರೋಪ

ಕಟೀಲು: ಬ್ರಾಹ್ಮಣ ಸಮಾಜ (ರಿ.) ಟ್ರಸ್ಟ್ ಮತ್ತು ಕಾರ್ಯಕಾರಿ ಹಾಗೂ ಶಿವಳ್ಳಿ ಸ್ಪಂದನ ಕಟೀಲು ವಲಯದ ಸಹಭಾಗಿತ್ವ ದಲ್ಲಿ ನಡೆದ 15 ದಿನಗಳ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭ ಸುರಗಿರಿ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯಿತು.

ಗುರು ರವೀಂದ್ರ ಭಟ್ ಅತ್ತೂರು ಮಾತಾಡಿ ನಮ್ಮ ಭಾರತ ದೇಶವು ಪ್ರತೀ 100 ಕಿ.ಮೀ. ಗಳಿಗೆ ತನ್ನ ಪ್ರಕೃತಿ ಮತ್ತು ಸಂಸ್ಕಾರವನ್ನು ಬದಲಿಸುತ್ತದೆ, ಇದೇ ನಮ್ಮ ವೈಶಿಷ್ಟ್ಯ ಮತ್ತು ಅದನ್ನು ನಾವು ಉಳಿಸಿಕೊಳ್ಳಬೇಕು. ಅದಕ್ಕಾಗಿ ಮಕ್ಕಳಿಗೆ ಸಂಸ್ಕಾರ ಕಲಿಸುವುದು ಆದ್ಯ ಕರ್ತವ್ಯ ಆಗಬೇಕು ಎಂದರು.

ಸಾಮಾಜಿಕ ಕಾರ್ಯಕರ್ತ ಪಾರ್ಥ ಸಾರಥಿ ಪಂಜ ಅವರು ಸಂಪನ್ಮೂಲ ವ್ಯಕ್ತಿಗಳಾಗಿ ಕಥಾ ಪುಂಜಗಳ ಮೂಲಕ ತಮ್ಮ ಪ್ರವಚನದಲ್ಲಿ ಮಕ್ಕಳ ಮನಸ್ಸನ್ನು ಗೆದ್ದರು.

ಅಧ್ಯಕ್ಷತೆ ಯನ್ನು ವಹಿಸಿದ ಜ್ಯೋತಿಷ್ಯ ರತ್ನ ವಿಶ್ವನಾಥ್ ಭಟ್, ಎಸ್ ಕೊಡಿ ಮಾತನಾಡಿ, ಜನರು ಸರಿಯಾದ ಮಾರ್ಗದಲ್ಲಿ ನಡೆಯಲು ಸಂಸ್ಕಾರ ಅಗತ್ಯ ಮತ್ತು ದಿನಚರಿ ಯಲ್ಲಿ ಸಂಧ್ಯಾವಂದನೆ, ಭಜನೆ ಹಾಗೂ ವಿವಿಧ ಸ್ತೋತ್ರ ಗಳ ಪಠಣ ಕಡ್ಡಾಯವಾಗಬೇಕು ಎಂದರು.

ವೇದ ಮೂರ್ತಿ ವಿದ್ವಾನ್ ಅಂಗಡಿಮಾರ್ ವಿಶ್ವೇಶ ಭಟ್ ಆಶೀರ್ವಚನ ನೀಡಿದರು. ಶಿಬಿರಾ ರ್ಥಿಗಳಿಗೆ ಛತ್ರಿಯನ್ನು ಕೊಡು ಶ್ರೀನಿವಾಸ್ ಭಟ್ ವಿತರಿಸಿದರು. ಭಗವತ್ ಗೀತೆ ಪುಸ್ತಕವನ್ನು ದೇವಿಕಾ ರಾವ್ ಪಡುಬಿದ್ರೆ ಮಕ್ಕಳಿಗೆ ವಿತರಿಸಿದರು. ಶಿ. ಶಿವಳ್ಳಿ ಸ್ಪಂದನ ಮಂಗಳೂರು ತಾಲೂಕು ಖಜಾಂಚಿ ರಘುರಾಮ್ ಭಟ್ ಉಪಸ್ಥಿತರಿದ್ದರು.

15 ದಿನಗಳ ಸಂಸ್ಕಾರ ಶಿಬಿರದ ಸಮಾರೋಪ ಸಮಾರಂಭ ಸುರಗಿರಿ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ನಡೆಯಿತು.

> ಭಾರತದಲ್ಲಿ ವೇದ, ಸಂಸ್ಕೃತಿ ಉಳಿದದ್ದು ಯಾವುದೇ ಸರಕಾರದ ಕ್ರಮಗಳಿಂದಲ್ಲ, ಬದಲಾಗಿ ಋಷಿ ಮುನಿಗಳ ಸಾಧನೆ ಮತ್ತು ಅದನ್ನು ಶ್ರದ್ಧೆ ಯಿಂದ ಕಲಿತು ಮುಂದಿನ ಜನಾಂಗಕ್ಕೆ ಕಲಿಸಿದ ಗುರುಗಳಿಂದ.
>
> -ಸುಬ್ರಮಣ್ಯ ಪ್ರಸಾದ್, ಧಾರ್ಮಿಕ ಪರಿಷತ್ ಸದಸ್ಯ

ಜಿಎಸ್‌ಟಿ: ಸೈಕಲ್ ಮ್ಯಾರಥಾನ್

ಮಂಗಳೂರು: ಸರಕು ಮತ್ತು ಸೇವೆಗಳ ತೆರಿಗೆ(ಜಿಎಸ್‌ಟಿ) ಜಾರಿಯ 8ನೇ ವಾರ್ಷಿಕೋತ್ಸವದ ಪೂರ್ವಭಾವಿಯಾಗಿ ಜಿಎಸ್‌ಟಿ ಮಂಗಳೂರು ಆಯುಕ್ತಾಲಯದ ಆಶ್ರಯದಲ್ಲಿ ರವಿವಾರ ನಗರದಲ್ಲಿ ಸೈಕಲ್ ಮ್ಯಾರಥಾನ್ ನಡೆಯಿತು.

ಅತ್ತಾವರದಲ್ಲಿರುವ ಕೇಂದ್ರ ಕಂದಾಯ ಕಟ್ಟಡದಿಂದ ಮ್ಯಾರಥಾನ್ ಮಂಗಳೂರಿನ ಕೇಂದ್ರ ತೆರಿಗೆ ಮತ್ತು ಸಿಜಿಎಸ್‌ಟಿ ಕಚೇರಿಯ ಸಹಾಯಕ ಆಯುಕ್ತ ಎಸ್. ಕೇಶವ ನಾರಾಯಣ ರೆಡ್ಡಿ ಸೈಕಲ್ ಮ್ಯಾರಥಾನ್‌ಗೆ ಚಾಲನೆ ನೀಡಿದರು.

ಮುಂಬರುವ ಜುಲೈ 1ರಂದು ಜಿಎಸ್ಟಿಯ 8 ವಾರ್ಷಿಕವನ್ನು ಆಚರಿಸಲಾಗುವುದು. ಇದಕ್ಕೆ ಪೂರ್ವಭಾವಿಯಾಗಿ ಭಾರತೀಯ ಆರ್ಥಿಕತೆಯ ಮೇಲೆ ಜಿಎಸ್‌ಟಿಯು ಸಕಾರಾತ್ಮಕ ಪರಿಣಾಮದ ಬಗ್ಗೆ ಮತ್ತು ಸೈಕ್ಲಿಂಗ್ ಮೂಲಕ ಫಿಟ್ನೆಸ್ ಮತ್ತು ಪರಿಸರ ಸುಸ್ಥಿರತೆ ಬಗ್ಗೆ ಅರಿವು ಮೂಡಿಸುವ ನಿಟ್ಟಿನಲ್ಲಿ ಈ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದರು.

2017 ರಂದು ಜಾರಿಗೆ ಬಂದಿರುವ ಜಿಎಸ್ಟಿ ವ್ಯವಸ್ಥೆಯು ವಿವಿಧ ಪರೋಕ್ಷ ತೆರಿಗೆಗಳನ್ನು ಒಂದೇ ತೆರಿಗೆಯಾಗಿ ಕ್ರೋಢೀಕರಿಸುವ ಮೂಲಕ ಭಾರತೀಯ ಆರ್ಥಿಕತೆಯಲ್ಲಿ ಕ್ರಾಂತಿಯನ್ನುಂಟು ಮಾಡಿದೆ.

ಸಿಜಿಎಸ್‌ಟಿಯ ಹೆಚ್ಚುವರಿ ವೈಭವ್ ಕಿರಣ್ ಪಗಾರೆ, ಸೈಕಲ್ ಕ್ಲಬ್ ಅಧ್ಯಕ್ಷ ಅನಿಲ್ ಶೇಟ್, ಸಿಜಿಎಸ್‌ಟಿ ಕಚೇರಿಯ ನಿವೃತ್ತ ಅಧಿಕಾರಿಗಳು, ಕಸ್ಟಮ್ಸ್ ಅಧಿಕಾರಿಗಳು, ಮಂಗಳೂರು ಸೈಕಲ್ ಕ್ಲಬ್‌ನ ಸದಸ್ಯರು, ಕೈಗರಿಕಾ ಸಂಸ್ಥೆಗಳ ಪ್ರತಿನಿಧಿಗಳು ಸೈಕಲ್ ಮ್ಯಾರಥಾನ್‌ನಲ್ಲಿ ಭಾಗವಹಿಸಿದ್ದರು.

ನಗರದಲ್ಲಿ ಜಿಎಸ್‌ಟಿ ಮಂಗಳೂರು ಆಯುಕ್ತಾಲಯದ ಆಶ್ರಯದಲ್ಲಿ ಸೈಕಲ್ ಮ್ಯಾರಥಾನ್ ನಡೆಯಿತು.

ಪೊಲೀಸರಿಗೆ ಕುಕ್ಕುಂದೂರು ಫ್ರೆಂಡ್ಸ್ ವತಿಯಿಂದ ಸನ್ಮಾನ

ಮುಖ್ಯಮಂತ್ರಿ ಚಿನ್ನದ ಪದಕ ಪುರಸ್ಕೃತ ಎಎನ್‌ಫ್ ಪೊಲೀಸ್ ಸಿಬ್ಬಂದಿಯನ್ನು ಕುಕ್ಕುಂದೂರು ಫ್ರೆಂಡ್ಸ್‌ವತಿಯಿಂದ ಸನ್ಮಾನಿಸಲಾಯಿತು.

ಉಡುಪಿ: 2024ನೇ ಸಾಲಿನ ಮುಖ್ಯಮಂತ್ರಿ ಚಿನ್ನದ ಪದಕ ಪುರಸ್ಕೃತ ಎಎನ್‌ಫ್ (ನಕ್ಸಲ್ ನಿಗ್ರಹ ಪಡೆ) ಸಿಬ್ಬಂದಿಯನ್ನು ಮೇ 18ರಂದು ಕುಕ್ಕುಂದೂರು ಮುಗೇರ ಕ್ರೀಡಾಂಗಣದಲ್ಲಿ ಕುಕ್ಕುಂದೂರು ಫ್ರೆಂಡ್ಸ್ (ರಿ.) ಕುಕ್ಕುಂದೂರು - ಮುಂಬೈ ವತಿಯಿಂದ ಸನ್ಮಾನಿಸಲಾಯಿತು.

ದಕ್ಷತೆ ಹಾಗೂ ಪ್ರಾಮಾಣಿಕತೆಯ ಸೇವೆಗಾಗಿ ಮುಖ್ಯಮಂತ್ರಿ ಚಿನ್ನದ ಪದಕ ಪುರಸ್ಕಾರ ಪಡೆದ ಬಸವರಾಜ್ ಬಿರಾಜ್ (ಪೊಲೀಸ್ ಸಬ್ ಇನ್ಸ್‌ಪೆಕ್ಟರ್) ಅಭಿಮಾನ್ ಬೋವಿ (ಪೊಲೀಸ್ ಹೆಡ್ ಕಾನ್ಸಟೇಬಲ್) ವಿಶಾಲ್ ಹೊಸಮನಿ(ಪೊಲೀಸ್ ಹೆಡ್ ಕಾನ್ಸಟೇಬಲ್) ಸೋಮಲಿಂಗ ಹೂಲಿ (ಪೊಲೀಸ್ ಹೆಡ್ ಕಾನ್ಸಟೇಬಲ್) ಹಾಗೂ ಮಂಜುನಾಥ್ ಹಳಬನವರ (ಪೊಲೀಸ್ ಹೆಡ್ ಕಾನ್ಸಟೇಬಲ್) ಅವರನ್ನು ಸನ್ಮಾನಿಸಲಾಯಿತು.

ಕುಕ್ಕುಂದೂರು ಫ್ರೆಂಡ್ಸ್ ಗೌರವಾಧ್ಯಕ್ಷ ತ್ರಿವಿಕ್ರಮ ಕಿಣಿ ಅಧ್ಯಕ್ಷತೆ ವಹಿಸಿದ್ದರು. ಗ್ರಾಮ ಪಂಚಾಯತ್ ಸದಸ್ಯ ಅನಿಲ್ ಪೂಜಾರಿ, ಅಮ್ಮಾ ಚಾರಿಟೇಬಲ್ ಟ್ರಸ್ಟ್ ಅಧ್ಯಕ್ಷ ಅವಿನಾಶ್ ಜಿ. ಶೆಟ್ಟಿ, ಸ್ಥಳೀಯರಾದ ಸುಂದರ, ಜಯಂತಿ ಶೆಟ್ಟಿ, ಹರೀಶ್ ಶೆಟ್ಟಿ, ಗಣೇಶ್ ನಾಯಕ್, ಕುಕ್ಕುಂದೂರು ಫ್ರೆಂಡ್ಸ್ ಅಧ್ಯಕ್ಷ ನಿವಾಸ ಕಿಣಿ, ಮುಗೇರ್ಕಲ ಪ್ರೀಮಿಯರ್ ಲೀಗ್ ನ ಪ್ರಕಾಶ್ ಅಚಾರ್ಯ ಉಪಸ್ಥಿತರಿದ್ದರು. ಗಣೇಶ್ ಪೈ ಪ್ರಾರ್ಥಿಸಿ, ಪ್ರಸನ್ನ ಕುಕ್ಕುಂದೂರು ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

ಸೈನಿಕರೇ ಭಾರತದ ಮಹಾಶಕ್ತಿ

ಬಸವಾಪಟ್ಟಣ ಸಮೀಪದ ಹರಲೀಪುರ ಗ್ರಾಮದಲ್ಲಿ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮವನ್ನುಮಧುಕುಮಾರ್ ಉದ್ಘಾಟಿಸಿದರು.

ಚನ್ನಗಿರಿ: ಮಾತೃ ಭೂಮಿಗೋಸ್ಕರ ವೈಯಕ್ತಿಕ ಜೀವನವನ್ನು ದೂರಮಾಡಿಕೊಂಡು ಗಡಿಯಲ್ಲಿ ಹಗಲು-ರಾತ್ರಿಯನ್ನದೇ ಜೀವದ ಭಯವಿಲ್ಲದೇ ಹೋರಾಟ ಮಾಡುತ್ತಿರುವ ನಮ್ಮ ಸೈನಿಕರೇ ಈ ರಾಷ್ಟ್ರದ ಮಹಾಶಕ್ತಿ ಎಂದು ಕನ್ನಡ ಸಾಹಿತ್ಯ ಪರಿಷತ್ತಿನ ತಾಲೂಕು ಘಟಕದ ತಾಲೂಕು ಅಧ್ಯಕ್ಷ ಎಲ್.ಜಿ.ಮಧುಕುಮಾರ್ ತಿಳಿಸಿದರು.

ಬಸವಾಪಟ್ಟಣ ಸಮೀಪದ ಹರಲೀಪುರ ಗ್ರಾಮದಲ್ಲಿ ಜನತಾ ಸರಕಾರಿ ಪ್ರಥಮ ದರ್ಜೆ ಕಾಲೇಜಿನ ವತಿಯಿಂದ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದಲ್ಲಿ ವಿಶೇಷ ಉಪನ್ಯಾಸ ನೀಡಿದರು.

ಯುವಶಕ್ತಿ ಸದುಪಯೋಗವಾಗಲು ಬೆಂಕಿಯನ್ನು ಬೆಳಕನ್ನಾಗಿ ಬದಲಾಯಿಸಿಕೊಳ್ಳುವ ಅಗತ್ಯವಿದೆ.ದೇಹ ಮತ್ತು ಮನಸ್ಸು ಬಲಿಷ್ಠವಾಗಿದ್ದರೆ ಸಾಧನೆ ಮಾಡಲು ಸಾಧ್ಯ. ಇಂದು ಭಾರತವನ್ನು ಯುವ ಜನಾಂಗದ ನಾಯಕ ಎಂದು ಕರೆಯುತ್ತಿದ್ದು,ಇಲ್ಲಿನ ಒಟ್ಟಾರೆ ಜನಸಂಖ್ಯೆಯಲ್ಲಿ ಶೇ.60ಕ್ಕೂ ಹೆಚ್ಚು ಯುವಕರಿದ್ದು ಬುದ್ದಿವಂತಿಕೆ, ಗ್ರಹಣ ಸಾಮರ್ಥ್ಯ, ದಿಟ್ಟತನ,ಸಾಹಸ ಪ್ರವೃತ್ತಿ ಇವುಗಳಿಂದ ಯುವಕರ ಮನಸ್ಸು ಫಲವತ್ತಾಗಿದೆ ಎಂದರು.

ಶರಾವತಿ ತಂಡದ ಶಿಬಿರಾರ್ಥಿಗಳಿಂದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆದವು. ಕೋಟೆಹಾಳ್ ಗ್ರಾ.ಪಂ.ಅಧ್ಯಕ್ಷೆ ಹೇಮಾಕ್ಷಿ ಹೆಚ್. ರವಿ ಅಧ್ಯಕ್ಷತೆ ವಹಿಸಿದ್ದರು.ಗ್ಯಾರಂಟಿ ಸಮಿತಿಯ ತಾಲೂಕು ಉಪಾಧ್ಯಕ್ಷ ಸತೀಶ್ ಪಟೇಲ್, ಗ್ರಾ.ಪಂ. ಸದಸ್ಯರಾದ ಗಂಗಾಧರಸ್ವಾಮಿ, ಶಿವಮೂರ್ತಿ, ಕಾಂಗ್ರೆಸ್ ಮುಖಂಡ ಹೆಚ್. ರವಿಕುಮಾರ್, ಹಾಸ್ಟೆಲ್ ಮೇಲ್ವಿಚಾರಕ ಮಂಜುನಾಥ್, ಎಸ್‌ಎಸ್‌ಎನ್ ಸದಸ್ಯೆ ಮಲ್ಲಮ್ಮ, ಶಿಬಿರಾಧಿಕಾರಿ ಯೋಗೇಂದ್ರ ಮತ್ತಿತರರು ಇದ್ದರು.

ಕಕ್ಕುಂಜೆಯ ದಾದಿಯರ ದಿನಾಚರಣೆ

ಉಡುಪಿ: ಧರ್ಮಪ್ರಾಂತ್ಯದ ಆರೋಗ್ಯ ಆಯೋಗದ ವತಿಯಿಂದ ಅಂತಾರಾಷ್ಟ್ರೀಯ ದಾದಿಯರ ದಿನಾಚರಣೆಯನ್ನು ಭಾನುವಾರ ಕಕ್ಕುಂಜೆಯ ಅನುಗ್ರಹ ಪಾಲಾನಾ ಕೇಂದ್ರದಲ್ಲಿ ಆಚರಿಸಲಾಯಿತು. ಕಾರ್ಯಕ್ರಮವನ್ನು ಉಡುಪಿ ಧರ್ಮಪ್ರಾಂತ್ಯದ ಧರ್ಮಾಧ್ಯಕ್ಷ ಡಾ. ಜೆರಾಲ್ಡ್ ಐಸಾಕ್ ಲೋಬೊ ಉದ್ಘಾಟಿಸಿದರು. ಮಣಿಪಾಲ ಕಾಲೇಜ್ ಆಫ್ ನರ್ಸಿಂಗ್ ಮಾಹೆ ಇದರ ಡೀನ್ ಡಾ. ಜುಡಿತ್ ನೊರೋನ್ಹಾ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದರು. ಈ ವರ್ಷದ ಅಂತಾರಾಷ್ಟ್ರೀಯ ದಾದಿಯರ ದಿನಾಚರಣೆಯ ಧ್ಯೇಯವಾದ ನಮ್ಮ ದಾದಿಯರು ನಮ್ಮ ಭವಿಷ್ಯ ವಿಷಯದ ಕುರಿತು ಮಾತನಾಡಿದ ಅವರು, ದಾದಿಯರನ್ನು ನೋಡಿಕೊಳ್ಳುವುದು ನಮ್ಮ ಆರ್ಥಿಕತೆಯನ್ನು ಬಲಪಡಿಸುತ್ತದೆ ಎಂದು ತಿಳಿಸಿದರು. ಇದೇ ಸಂದರ್ಭದಲ್ಲಿ ಉಡುಪಿ, ಕಾರ್ಕಳ, ಕುಂದಾಪುರ, ಕಲ್ಯಾಣಪುರ, ಶಿರ್ವ ಭಾಗದ ದಾದಿಯರನ್ನು ವೈದ್ಯರನ್ನು ಬಿಷಪ್ ಡಾ. ಜೆರಾಲ್ಡ್ ಐಸಾಕ್ ಲೋಬೊ ಸನ್ಮಾನಿಸಿ ಗೌರವಿಸಿದರು. ಕಾರ್ಯಕ್ರಮದಲ್ಲಿ ಉಡುಪಿ ಧರ್ಮಪ್ರಾಂತ್ಯದ ಚಾನ್ಸಲರ್ ಫಾದರ್ ಸ್ಟೀಫನ್ ಡಿಸೋಜಾ, ಫಾದರ್ ಚಾರ್ಲ್ಸ್ ಸಲ್ಡಾನಾ, ಆರೋಗ್ಯ ಆಯೋಗದ ನಿರ್ದೇಶಕ ಡಾ. ಉಪಸ್ಥಿತರಿದ್ದರು.

ನಿಂತಿದ್ದ ಕಾಲೇಜು ಬಸ್‌ಗೆ ಡಿಕ್ಕಿ

ಮಂಗಳೂರು: ನಿಂತಿದ್ದ ಕಾಲೇಜು ಬಸ್ಸಿಗೆ ಸಿಟಿ ಬಸ್ ಒಂದು ಹಿಂದಿನಿಂದ ಬಂದು ಡಿಕ್ಕಿ ಹೊಡೆದ ಘಟನೆ ಬಲ್ಮಠದಲ್ಲಿ ನಡೆದಿದೆ. ಖಾಸಗಿ ನರ್ಸಿಂಗ್ ಕಾಲೇಜಿನ ಬಸ್ಸನ್ನು ರಸ್ತೆ ಬದಿ ನಿಲ್ಲಿಸಿದ್ದು ವಿದ್ಯಾರ್ಥಿಗಳು ಬಸ್ ಏರುತ್ತಿದ್ದರು. ಈ ವೇಳೆ ಸ್ಟೇಟ್ ಬ್ಯಾಂಕ್ ಕಡೆಯಿಂದ ಕೊಣಾಜೆಗೆ ತೆರಳುತ್ತಿದ್ದ ಖಾಸಗಿ ಸರ್ವಿಸ್ ಬಸ್ ನೇರವಾಗಿ ಹಿಂದಿನಿಂದ ಬಂದು ನಿಂತಿದ್ದ ಕಾಲೇಜು ಬಸ್ಸಿನ ಹಿಂಭಾಗಕ್ಕೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಕಾಲೇಜು ಬಸ್ ಮುಂದಕ್ಕೆ ಚಲಿಸಿದ್ದು ಹಿಂಭಾಗದಲ್ಲಿ ಕುಳಿತಿದ್ದ ಐದಾರು ವಿದ್ಯಾರ್ಥಿಗಳಿಗೆ ಮತ್ತು ಖಾಸಗಿ ಬಸ್ಸಿನ ಮುಂಭಾಗದಲ್ಲಿದ್ದ ಕೆಲವು ಪ್ರಯಾಣಿಕರಿಗೆ ಗಾಯಗಳಾಗಿವೆ. ಒಟ್ಟು ಹತ್ತು ಮಂದಿ ಸಣ್ಣ ಪುಟ್ಟ ಗಾಯಕ್ಕೀಡಾಗಿದ್ದಾರೆಂದು ಪೊಲೀಸರು ತಿಳಿಸಿದ್ದಾರೆ. ಕದ್ರಿ ಸಂಚಾರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಖಾಸಗಿ ಬಸ್ಸಿನ ಚಾಲಕನ ನಿರ್ಲಕ್ಷದ ಚಾಲನೆಯಿಂದ ಅಪಘಾತ ಉಂಟಾಗಿದೆ. ಅಪಘಾತದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು ವಿಡಿಯೋ ಜಾಲತಾಣದಲ್ಲಿ ವೈರಲ್ ಆಗಿದೆ.

ಪರಿಶಿಷ್ಟ ಜಾತಿ ಸಮೀಕ್ಷೆ ಶೇ.95ರಷ್ಟು ಪ್ರಗತಿ

ಉಡುಪಿ: ಪರಿಶಿಷ್ಟ ಜಾತಿ ಒಳ ಮೀಸಲಾತಿ ವರ್ಗೀಕರಣ ಕುರಿತು ನ್ಯಾಯಮೂರ್ತಿ ಎಚ್. ಎನ್. ನಾಗಮೋಹನ್ ದಾಸ್ ಏಕ ಸದಸ್ಯ ವಿಚಾರಣಾ ಆಯೋಗದಿಂದ ಪರಿಶಿಷ್ಟ ಜಾತಿಗಳ ವಿವಿಧ ಅಂಶಗಳ ಬಗ್ಗೆ ದತ್ತಾಂಶ ಶೇಖರಿಸುವ ಸಲುವಾಗಿ ಈವರೆಗೆ 14,941 ಕುಟುಂಬಗಳ ಸಮೀಕ್ಷೆ ಮಾಡಲಾಗಿದ್ದು, ಶೇ 95. 75ರಷ್ಟು ಪ್ರಗತಿ ಸಾಧಿಸಿದೆ ಎಂದು ಜಿಲ್ಲಾಧಿಕಾರಿ ಕೆ. ವಿದ್ಯಾಕುಮಾರಿ ತಿಳಿಸಿದರು. ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, 2011ರ ಜನಗಣತಿ ವರದಿ ಪ್ರಕಾರ ಜಿಲ್ಲೆಯಲ್ಲಿ ಒಟ್ಟು 15,329 ಪರಿಶಿಷ್ಟ ಜಾತಿ ಕುಟುಂಬಗಳಿವೆ. ಮೇ 5ರಿಂದ ಸಮೀಕ್ಷೆ ಕಾರ್ಯ ಆರಂಭಿಸಿದ್ದು, ಒಟ್ಟು 112 ಗಣತಿದಾರರು ಸಮೀಕ್ಷೆ ಕಾರ್ಯ ಕೈಗೊಂಡಿದ್ದಾರೆ. ಅವರ ಮೇಲ್ವಿಚಾರಣೆಗೆ 112 ಮೇಲ್ವಿಚಾರಕರನ್ನು ನೇಮಕ ಮಾಡಲಾಗಿದೆ ಎಂದರು. ಮನೆ ಮನೆ ಭೇಟಿ ಸಮೀಕ್ಷೆಯ ಅವಧಿಯನ್ನು ಇದೇ 25ರ ವರೆಗೆ ವಿಸ್ತರಿಸಲಾಗಿದ್ದು, ಇದೇ 26 ರಿಂದ 28ರ ವರೆಗೆ ಸಮೀಕ್ಷಾ ಬ್ಲಾಕ್ ವ್ಯಾಪ್ತಿಯಲ್ಲಿ ವಿಶೇಷ ಶಿಬಿರ ನಡೆಯಲಿದೆ. ಇದೇ 19ರಿಂದ 28ರ ವರೆಗೆ ಆನ್‌ಲೈನ್ ಮೂಲಕ ಸ್ವಯಂ ಘೋಷಣೆ ನಡೆಯಲಿದೆ ಎಂದು ವಿವರಿಸಿದರು. ಪೋಡಿ ಆಂದೋಲನ: ಸರಕಾರಿ ಜಮೀನುಗಳ ಪೋಡಿ ಆಂದೋಲನ ಆರಂಭವಾಗಿದ್ದು ಅಕ್ರಮ ಸಕ್ರಮದಲ್ಲಿ ಜಾಗ ಮಂಜೂರಾದವರು ಪೋಡಿ ಮಾಡಿಸಿಕೊಳ್ಳಬೇಕು ಎಂದರು. ಜನರು ಬಳಕೆ ಮಾಡದ, ಕಾಡು ಬೆಳೆದಿರುವ ಹಾಗೂ ಸರ್ವೆಗೆ ಸಹಕಾರ ನೀಡದವರ ಇಂತಹ ಜಮೀನನ್ನು ಸರಕಾರ ವಶಕ್ಕೆ ತೆಗೆದುಕೊಳ್ಳುವ ಚಿಂತನೆ ಇದೆ ಎಂದು ಹೇಳಿದರು.

ಟರ್ಕಿ ಹಣ್ಣಿಗೆ ಪೆಟ್ರೋಲ್ ಸುರಿದು ಪ್ರತಿಭಟನೆ

ಶಿವಮೊಗ್ಗ: ಪ್ರಾಕೃತಿಕ ವಿಕೋಪದ ಸಂದರ್ಭದಲ್ಲಿ ಭಾರತದಿಂದ ಸಹಾಯಹಸ್ತ ಪಡೆದ ಟರ್ಕಿ ದೇಶವು ಆಪ್ತಮಿತ್ರನಂತೆ ನಟಿಸಿ, ಯುದ್ಧಕಾಲದಲ್ಲಿ ಪಾಕಿಸ್ತಾನಕ್ಕೆ ಬೆಂಬಲ ವ್ಯಕ್ತಪಡಿಸಿ ದ್ರೋಹ ಮಾಡಿದ್ದನ್ನು ಖಂಡಿಸಿ, ಮಹಾವೀರ ವೃತ್ತದಲ್ಲಿ ಶಾಂತವೇರಿ ಗೋಪಾಲಗೌಡ ಸಮಾಜವಾದ ಅಧ್ಯಯನ ಕೇಂದ್ರ, ಟ್ರಸ್ಟ್ ವತಿಯಿಂದ ಟರ್ಕಿ ದೇಶದಿಂದ ಆಮದಾದ ಸೇಬುಹಣ್ಣುಗಳಿಗೆ ಪೆಟ್ರೋಲ್ ಸುರಿದು ಸುಟ್ಟು ಪ್ರತಿಭಟನೆ ನಡೆಸಲಾಯಿತು. ಪೆಹಲ್ ಗಾಮ್‌ನಲ್ಲಿ ಪಾಕಿಸ್ತಾನ ಬೆಂಬಲಿತ ಉಗ್ರಗಾಮಿಗಳು ಧರ್ಮಾಧಾರಿತವಾಗಿ 26 ಅಮಾಯಕ ಪ್ರವಾಸಿಗರನ್ನು ಅವರ ಪತ್ನಿ ಹಾಗೂ ಮಕ್ಕಳ ಎದುರು ಹತ್ಯೆಗೈದಿದ್ದರು. ಈ ರಾಕ್ಷಸಿ ಕೃತ್ಯವನ್ನು ಖಂಡಿಸುವ ಬದಲು ಟರ್ಕಿ ದೇಶವು ಆಪರೇಷನ್ ಸಿಂಧೂರ್ ವೇಳೆಯಲ್ಲಿ ಪಾಕ್ ಸೇನೆಗೆ ನೂರಾರು ಡ್ರೋಣ್‌ಗಳನ್ನು ಮತ್ತು ಯುದ್ಧ ಸಾಮಾಗ್ರಿಗಳನ್ನು ನೀಡಿ ಕೈಜೋಡಿಸಿರುವುದು ಖಂಡನೀಯವಾಗಿದೆ. ಇದರಿಂದ ಭಾರತೀಯರು ಆಕ್ರೋಶಗೊಂಡಿದ್ದು, ಟರ್ಕಿ ಮತ್ತು ಅಜರ್ಬೈಜಾನ್ ದೇಶಗಳೊಂದಿಗೆ ಆಮದು, ರಫ್ತು, ಸಿನಿಮಾ ಚಿತ್ರೀಕರಣ, ಪ್ರವಾಸ ಎಲ್ಲವನ್ನೂ ನಿಷೇಧಿಸಿ ಅಭಿಯಾನ ಶುರುಮಾಡಿದ್ದು, ಇದನ್ನು ಬೆಂಬಲಿಸಿ, ಟ್ರಸ್ಟ್‌ವತಿಯಿಂದ ಟರ್ಕಿ ದೇಶದಿಂದ ಆಮದಾದ ಸೇಬು ಹಣ್ಣನ್ನು ಸಾಂಕೇತಿಕವಾಗಿ ಸುಡುವುದರ ಮೂಲಕ ಪ್ರತಿಭಟನೆ ನಡೆಸಿ, ಜಿಲ್ಲಾಧಿಕಾರಿಗಳ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ಕೌಶಲ ತರಬೇತಿಗೆ ಉತ್ತಮ ಭವಿಷ್ಯ

ಮಂಗಳೂರು: ಮಂಗಳೂರಿನ ಮಿಲಾಗ್ರಿಸ್ ಕಾಲೇಜಿನಲ್ಲಿ ಜೀವನ ಕೌಶಲ ಅಭಿವೃದ್ಧಿ ತರಬೇತಿ ಕೋರ್ಸ್‌ಗಳ ಸಮಾರೋಪ ಮತ್ತು ಪ್ರಮಾಣಪತ್ರ ವಿತರಣಾ ಸಮಾರಂಭ ನಡೆಯಿತು. ಈ ಸಂದರ್ಭದಲ್ಲಿ ಮಾತನಾಡಿದ ಮಿಲಾಗ್ರಿಸ್ ಶಿಕ್ಷಣ ಸಂಸ್ಥೆಗಳ ಕಾರ್ಯದರ್ಶಿ, ರೆ. ಫಾ. ಬೊನವೆಂಚರ್ ನಜರೆತ್, ಶಿಕ್ಷಕರು ಕೇವಲ ವೇತನಕ್ಕಾಗಿ ದುಡಿಯುತ್ತಿಲ್ಲ. ಅವರು ವಿದ್ಯಾರ್ಥಿಗಳ ಭವಿಷ್ಯದ ಕಟ್ಟಿಕೊಡುತ್ತಿದ್ದಾರೆ ಎಂದರು. ವಾಮಂಜೂರು ಸಹಾಯಕ ನಿರ್ದೇಶಕ ಫಾ. ಕೆನೆತ್ ಕ್ರಾಸ್ತಾ ಮಾತನಾಡಿ, ಕೌಶಲ ತರಬೇತಿಗಳು ವಿದ್ಯಾರ್ಥಿಗಳಿಗೆ ಪೂರಕ. ಅವರ ಆಸಕ್ತಿಯ ಕ್ಷೇತ್ರದಲ್ಲಿ ಅವರಿಗೆ ತರಬೇತಿ ನೀಡಲಾಗುತ್ತದೆ. ಕೌಶಲ್ಯಗಳು ಜೀವನವನ್ನು ಆನಂದಗೊಳಿಸುತ್ತದೆ ಮತ್ತು ಆರ್ಥಿಕವಾಗಿ ನೆರವಾಗುತ್ತದೆ. ಕೆಲವೊಮ್ಮೆ ಸಣ್ಣ ಪುಟ್ಟ ಕೆಲಸಗಳಿಗೆ ನಾವು ಕಲಿತ ಕೌಶಲ ತರಬೇತಿ ನೆರವಾಗುತ್ತದೆ ಎಂದರು. ಕಾರ್ಯಕ್ರಮದಲ್ಲಿ ನಿವೃತ್ತ ಶಿಕ್ಷಕಿ ಹಿಲ್ಡಾ ರಾಡ್ರಿಗಸ್ ಅವರಿಗೆ ಗುರುವಂದನ ಹಾಗೂ ವಿವಿಧ ವಿಭಾಗಗಳಲ್ಲಿ ತರಬೇತಿ ಪೂರ್ಣಗೊಳಿಸಿದ ವಿದ್ಯಾರ್ಥಿಗಳಿಗೆ ಪ್ರಮಾಣ ಪತ್ರವಿತರಿಸಲಾಯಿತು. ಕಾರ್ಯಕ್ರಮದಲ್ಲಿ ಕಾಲೇಜಿನ ಪ್ರಾಂಶುಪಾಲ, ಡಾ. ಮೈಕಲ್ ಎಲ್ ಸಂತುಮಾಯರ್, ಎಲಿಯಾಸ್ ಫೆರ್ನಾಂಡಿಸ್ ಮಾಲೀಕರು, ಫೋರ್ ವಿಂಡ್ಸ್, ಗೋಪಾಲಕೃಷ್ಣ ಡೆಲಂಪಾಡಿ, ಸಿಎ ಡೈಲನ್ ರೆಬೆಲ್ಲೊ, ಸೋಫಿಯಾ ಮೊಲ್ಲಿ ವಾಸ್, ರಾಜೀವ್ ಕೆ ಶೆನೊಯ್, ಫ್ಲಾನಿ ಡಿಸೋಜಾ, ಪ್ರೇಕ್ಷಾ ತೇಜ್, ಹರಿಣಾ ರಾವ್, ಆಕಾಶ್ ರಾವ್, ಪ್ರವೀಣ್ ಪಿಂಟೋ, ಜ್ಯೋತಿಕಾ ಶೆಟ್ಟಿ, ರೇಖಾ ಗೋಪಾಲ್, ಕಾರ್ತಿಕ್, ಉಪಸ್ಥಿತರಿದ್ದರು.

ಉದ್ಯೋಗದ ಹೆಸರಿನಲ್ಲಿ ಕಂಪನಿಗಳ ವಂಚನೆ

ಮಂಗಳೂರು: ವಿದೇಶಗಳಲ್ಲಿ ಉದ್ಯೋಗ ನೀಡುವ ಸೋಗಿನಲ್ಲಿ ಅನಧಿಕೃತವಾಗಿ ಸಂದರ್ಶನ ನಡೆಸಿ ಆಕಾಂಕ್ಷಿಗಳನ್ನು ವಂಚಿಸುವ ಎರಡು ಏಜೆನ್ಸಿಗಳು ಮಂಗಳೂರಿನಲ್ಲಿ ಪತ್ತೆಯಾಗಿವೆ. ಬೆಂಗಳೂರಿನ ಪ್ರೊಟೆಕ್ಟರ್ ಆಫ್ ಎಮಿಗ್ರಂಟ್ಸ್ (ಪಿಒಇ) ಅವನೀಶ್ ಶುಕ್ಲಾ ಮಂಗಳೂರಿಗೆ ಭೇಟಿ ನೀಡಿ, ವಿದೇಶಿ ಉದ್ಯೋಗ ನಿಯೋಜನೆಗಳಿಗಾಗಿ ಅನಧಿಕೃತ ಸಂದರ್ಶನಗಳನ್ನು ನಡೆಸುತ್ತಿರುವ ಪ್ರಕರಣವನ್ನು ಪತ್ತೆ ಹಚ್ಚಿದ್ದಾರೆ. ನಗರದ ಬೆಂದೂರ್ವೆಲ್ ನಲ್ಲಿ ನೇಮಕಾತಿ ನಡೆಯಲಿದ್ದು, ಸಂದರ್ಶನಗಳು ಮುಂದೂಡಲ್ಪಟ್ಟಿದ್ದವು. ತನಿಖೆಯ ಸಮಯದಲ್ಲಿ ಝುಡ್-ಝೋನ್ ಕನ್ಸಲ್ಟೆನ್ಸಿ ಎಂದು ಗುರುತಿಸಲಾದ ಸಂಸ್ಥೆಯು ವಲಸೆ ಕಾಯ್ದೆ, 1983ರ ಅಡಿಯಲ್ಲಿ ಅಗತ್ಯವಿರುವ ಕಡ್ಡಾಯ ಪರವಾನಗಿ ಪಡೆಯದೆ ಕಾರ್ಯನಿರ್ವಹಿಸುತ್ತಿದೆ ಎಂದು ತಿಳಿದುಬಂದಿದೆ. ವಿದೇಶಾಂಗ ಸಚಿವಾಲಯದ ಅನುಮತಿಯಿಲ್ಲದೆ ಈ ಸಂಸ್ಥೆಯು ವಿದೇಶಗಳಲ್ಲಿ ಉದ್ಯೋಗಗಳಿಗೆ ವ್ಯಕ್ತಿಗಳನ್ನು ನೇಮಿಸಿಕೊಳ್ಳಲು ಪ್ರಯತ್ನಿಸುತ್ತಿದೆ ಎಂದು ಪಿಒಇ ದೃಢಪಡಿಸಿದ್ದಾರೆ. ಕಳೆದ ಆರು ತಿಂಗಳಿನಿಂದ ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯವಾಗಿರುವ ಪಂಪ್‌ವೆಲ್ನ ಇನ್ನೊಂದು ಸಂಸ್ಥೆಯೂ ಇದೇ ರೀತಿಯ ಕಾನೂನುಬಾಹಿರ ಚಟುವಟಿಕೆಗಳಲ್ಲಿ ತೊಡಗಿದ್ದಾಗ ಸಿಕ್ಕಿಬಿದ್ದಿದೆ ಎಂದು ಶುಕ್ಲಾ ಬಹಿರಂಗಪಡಿಸಿದ್ದಾರೆ. ಆ ಸಂಸ್ಥೆ ಯುರೋಪ್, ಇಸ್ರೇಲ್, ಮಾರಿಷಸ್ ಮತ್ತು ಗಲ್ಫ್ ದೇಶಗಳಲ್ಲಿ ಉದ್ಯೋಗಗಳ ಜಾಹೀರಾತು ನೀಡುತ್ತಿತ್ತು ಎಂದು ಶುಕ್ಲಾ ಮಾಹಿತಿ ನೀಡಿದ್ದಾರೆ.

ಸಮಾಚಾರ ಸಣ್ಣದಲ್ಲ

ಪ್ರವಾಸಿಗರ ವಾಸ್ತವ್ಯ: ದಾಖಲೆ ಕಡ್ಡಾಯ

ಮಂಗಳೂರು: ಹೊರರಾಜ್ಯ, ಹೊರಜಿಲ್ಲೆ, ವಿದೇಶಗಳಿಂದ ಹೋಂ ಸ್ಟೇ, ಹೋಟೆಲ್/ರೆಸಾರ್ಟ್‌ಗಳಲ್ಲಿ ತಂಗಲು ಆಗಮಿಸುವ ಪ್ರವಾಸಿಗರ ಎಲ್ಲಾ ಪೂರಕ ದಾಖಲೆಗಳನ್ನು ಕಡ್ಡಾಯವಾಗಿ ಪರಿಶೀಲಿಸಿ ತಂಗಲು ಅವಕಾಶ ನೀಡಬಹುದೆಂದು ಹಾಗೂ ಸಂಶಯಾಸ್ಪದವಾಗಿ ಕಂಡು ಬಂದರೆ ಸ್ಥಳೀಯ ಪೊಲೀಸ್ ಠಾಣೆಗಳಿಗೆ ಮಾಹಿತಿ ನೀಡಬೇಕೆಂದು ಜಿಲ್ಲಾಧಿಕಾರಿಯವರ ಅಧ್ಯಕ್ಷತೆಯಲ್ಲಿ ನಡೆದ ಜಿಲ್ಲಾ ಬಿಕ್ಕಟ್ಟು ಗುಂಪು ಸಭೆಯಲ್ಲಿ ಸೂಚಿಸಲಾಗಿದೆ. ನಿಯಮ ಉಲ್ಲಂಘಿಸಿದಲ್ಲಿ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ ಎಂದು ಪ್ರವಾಸೋದ್ಯಮ ಇಲಾಖೆ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಿಶ್ವ ಪರಿಸರ ದಿನ ಪ್ರಬಂಧ ಸ್ಪರ್ಧೆ ಜೂ.2ಕ್ಕೆ

ದಾವಣಗೆರೆ: ವಿಶ್ವ ಪರಿಸರ ದಿನಾಚರಣೆ-2025 ರಂದು ಜಿಲ್ಲೆಯ ಎಲ್ಲಾ ಶಾಲೆಗಳಲ್ಲಿ ಆಚರಿಸುವ ಮೂಲಕ ಪರಿಸರ ದಿನಾಚರಣೆಯನ್ನು ಆಚರಿಸಲಾಗುವುದು. ಜೂನ್ 2 ರಂದು ಪ್ರಬಂಧ ಸ್ಪರ್ಧೆ ವಿಷಯ: ಪ್ಲಾಸ್ಟಿಕ್ ಮಾಲಿನ್ಯ ಕೊನೆಗೊಳಿಸುವ ವಿಧಾನಗಳು, 2. ಈ ವರ್ಷ ಪರಿಸರ ಸಂರಕ್ಷಣೆಗೆ ನನ್ನ ಕೊಡುಗೆ, ಹಸಿರು ಮನೆ ಪರಿಣಾಮ ಮತ್ತು ನಿಯಂತ್ರಣ ಕ್ರಮಗಳು, (ಇದರಲ್ಲಿ ಯಾವುದಾದರು ಒಂದು ವಿಷಯದ ಬಗ್ಗೆ ಪ್ರಬಂಧ ಬರೆಯುವುದು .ಹಾಗೂ ಶಾಲೆಗಳು ಮುಖ್ಯ ಶಿಕ್ಷಕರು ಪ್ರಬಂಧದ ಬಗ್ಗೆ ಮೊದಲೇ ಮಾಹಿತಿ ಹಾಗೂ ಸಮಯಾವಕಾಶ ನೀಡಿ ನಂತರ ಸ್ಪರ್ಧೆಯನ್ನು ನಡೆಸುವುದು) ಜೂನ್ 3 ರಂದು ಚಿತ್ರಕಲಾ ಸ್ಪರ್ಧೆ ವಿಷಯ: ಜೀವ ಸಂಕುಲದ ಉಳಿವಿಗೆ ಪರಿಸರ ಸಂರಕ್ಷಣೆ, ಹಾಗೂ ಚರ್ಚಾ ಸ್ಪರ್ಧೆವಿಷಯ: ಜಾಗತಿಕ ತಾಪಮಾನ ಮತ್ತು ಭೂಮಂಡಲದ ಸಂರಕ್ಷಣೆ, ಅರಣ್ಯ ಇಲಾಖೆಯ ಸಹಯೋಗದೊಂದಿಗೆ ಪ್ರತಿ ಶಾಲೆಯಲ್ಲಿ ಕನಿಷ್ಠ 20 ಸಸಿಗಳನ್ನು ನೆಡುವುದು, ಹಾಗೂ ಪ್ರತಿ ಗಿಡದ ಮುಂದೆ ವಿದ್ಯಾರ್ಥಿಯ ಹೆಸರಿನ ನಾಮಫಲಕ ನೆಡುವುದು. ಪ್ರತಿ ವಿದ್ಯಾರ್ಥಿಯ ಮನೆ ಮುಂದೆ ಸಸಿ ನಡುವಂತೆ ಜಾಗೃತಿ ಮೂಡಿಸಬೇಕು ಎಂದು ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಕೊಟ್ರೇಶ್.ಜಿ ತಿಳಿದಿದ್ದಾರೆ.

ಜಾತಿ ಸಮೀಕ್ಷೆಗೆ ಅವಧಿ ವಿಸ್ತರಣೆ

ದಾವಣಗೆರೆ: ಪರಿಶಿಷ್ಟ ಜಾತಿ ಒಳಮೀಸಲಾತಿ ಕುರಿತಂತೆ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನದಾಸ್ ಅಧ್ಯಕ್ಷತೆಯಲ್ಲಿ ಏಕ ವ್ಯಕ್ತಿ ವಿಚಾರಣಾ ಆಯೋಗವನ್ನು ರಚಿಸಲಾಗಿದ್ದು, ಪರಿಶಿಷ್ಟ ಜಾತಿಗಳ ವಿವಿಧ ಒಳಮೀಸಲಾತಿಯನ್ನು ವರ್ಗೀಕರಿಸಿ, ಉಪವರ್ಗೀಕರಣ ಕೈಗೊಳ್ಳಲು ಅವಶ್ಯವಿರುವ ದತ್ತಾಂಶವನ್ನು ಸಂಗ್ರಹಿಸಿ ಸಮೀಕ್ಷೆಯನ್ನು ಕೈಗೊಳ್ಳಲು ಉದ್ದೇಶಿಲಾಗಿದೆ. ಶಾಸಕರು, ಹಲವು ಸಂಘ ಸಂಸ್ಥೆಗಳು ಸಮೀಕ್ಷೆ ವೇಳೆ ಉದ್ಭವಿಸಿರುವ ಕೆಲವೊಂದು ಸಮಸ್ಯೆಗಳನ್ನು ಸರಿಪಡಿಸಲು ಸಮೀಕ್ಷಾ ದಿನಾಂಕವನ್ನು ವಿಸ್ತರಿಸಬೇಕೆಂದು ಕೋರಿರುವ ಹಿನ್ನೆಲೆಯಲ್ಲಿ ಸಮೀಕ್ಷಾ ಅವಧಿಯನ್ನು ವಿಸ್ತರಿಸಲಾಗಿದೆ. ಮನೆ-ಮನೆ ಭೇಟಿ ನೀಡಿ ಸಮೀಕ್ಷೆ ಮೇ.25 ರವರೆಗೆ ವಿಸ್ತರಿಸಲಾಗಿದೆ, ವಿಶೇಷ ಶಿಬಿರ 3 ದಿನಗಳ ಕಾಲ ಮೇ.26 ರಿಂದ 28 ರವರೆಗೆ ಮರು ನಿಗದಿಪಡಿಸಲಾಗಿದೆ, ಆನ್ ಲೈನ್ ಮೂಲಕ ಸ್ವಯಂ ಘೋಷಣೆಯನ್ನು ಮೇ.19 ರಿಂದ 28 ರವರೆಗೆ ನಿಗದಿಪಡಿಸಲಾಗಿದೆ. ಮೇ.26 ರಿಂದ 28 ರವರೆಗೆ ವಿಶೇಷ ಶಿಬಿರದಲ್ಲಿ ನಡೆಸಬೇಕಾದ ಸಮೀಕ್ಷೆಯಲ್ಲಿ ಗಣತಿದಾರರು ಘೋಷಿತ ಮತಗಟ್ಟೆಗಳಲ್ಲಿ ಉಪಸ್ಥಿತರಿದ್ದು, ಮನೆ-ಮನೆ ಕೋರಿರುವ ಹಿನ್ನಲೆಯಲ್ಲಿ ಸಮೀಕ್ಷಾ ಅವಧಿಯನ್ನು ವಿಸ್ತರಿಸಲಾಗಿದೆ. ಸುಸೂತ್ರವಾಗಿ ಸಮೀಕ್ಷೆ ನಡೆಸುವಂತೆ ಏಕಸದಸ್ಯ ಆಯೋಗದ ಕಾರ್ಯದರ್ಶಿ ತಿಳಿಸಿದ್ದಾರೆ.

ವೇತನ ಹೆಚ್ಚಳ: ಸಿಎಂಗೆ ಅಭಿನಂದನೆ

ಶಿವಮೊಗ್ಗ: ಅತಿಥಿ ಶಿಕ್ಷಕರ ಮತ್ತು ಉಪನ್ಯಾಸಕರ ವೇತನವನ್ನು ಹೆಚ್ಚಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ, ಡಿ. ಕೆ. ಶಿವಕುಮಾರ್ ಅವರಿಗೆ ಅಭಿನಂದನೆ ಸಲ್ಲಿಸುತ್ತೇವೆ ಎಂದು ಕೆಪಿಸಿಸಿ ಸದಸ್ಯ ವೈ.ಹೆಚ್.ನಾಗರಾಜ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ ಅವರು ಸರಕಾರ ಅತಿಥಿ ಶಿಕ್ಷಕರ ವೇತನವನ್ನು ಎರಡು ಸಾವಿರ ರು.ಗಳಿಗೆ ಹೆಚ್ಚಿಸಿದೆ. ಇದರಿಂದ ಶಿಕ್ಷಕರಿಗೆ ಅನುಕೂಲವಾಗಲಿದೆ. ಹಾಗೆಯೇ ಗ್ಯಾರಂಟಿ ಯೋಜನೆಗಳು ಕೂಡ ತಲುಪುತ್ತಿವೆ. ಇದಕ್ಕಾಗಿ ಸರಕಾರಕ್ಕೆ ಕೃತಜ್ಞತೆಗಳು ಸಲ್ಲಿಸುತ್ತೇನೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಶಿವಮೊಗ್ಗಕ್ಕೆ ಸರಕಾರಿ ನೌಕರರ ರಾಜ್ಯಮಟ್ಟದ ಕ್ರೀಡಾಕೂಟ ಉದ್ಘಾಟನೆಗೆ ಆಗಮಿಸುತ್ತಿದ್ದು, ಈ ಕ್ರೀಡಾಕೂಟ ಯಶಸ್ವಿಯಾಗಲಿ. ಹಾಗೆಯೇ ಮುಖ್ಯಮಂತ್ರಿಗಳು ಶಿವಮೊಗ್ಗದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಲಿ ಎಂದು ಮನವಿ ಮಾಡಿದ್ದಾರೆ.

{ಸಿ.ಎಂ.ಇಬ್ರಾಹಿಂ} ಮಾಜಿ ಸಚಿವ

ಪೆಹಲ್ಗಾಮ್ ನಲ್ಲಿ 26 ಜನರನ್ನು ಕೊಂದರಲ್ಲ, ಅವರನ್ನು ಇಂದಿಗೂ ಹಿಡಿದಿಲ್ಲ. ಅವರು ಹೆಸರು ಕೂಡ ಗೊತ್ತಾಗಲಿಲ್ಲ. ಆದರೆ ಟ್ರಂಪ್ ಹೇಳಿದ ಎಂದು ಮೋದಿ ಯುದ್ಧ ನಿಲ್ಲಿಸಿಬಿಟ್ಟರು, ಟ್ರಂಪ್ ನಮ್ಮ ಚಿಕ್ಕಪ್ಪನಾ, ಮಾವನಾ ?ಇಂದಿರಾಗಾಂಧಿ ಬಾಂಗ್ಲಾದೇಶವನ್ನು 48 ಗಂಟೆಯಲ್ಲಿ ಸದೆ ಬಡಿದಿದ್ದರು. ನಮ್ಮ ಸೈನಿಕರಿಗೆ ಅಂತಹ ಶಕ್ತಿ ಇದೆ.

ಸಮಾಚಾರ ಸಣ್ಣದಲ್ಲ

ಇಂದಿನಿಂದ ಜೈಶಂಕರ್ 3 ದೇಶಗಳಿಗೆ ಪ್ರವಾಸ



ದೆಹಲಿ: ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಅವರು ಸೋಮವಾರದಿಂದ ಮೂರು ರಾಷ್ಟ್ರಗಳ ಪ್ರವಾಸಕ್ಕೆ ತೆರಳುತ್ತಿದ್ದಾರೆ. ನೆದರ್‌ಲೆಂಡ್, ಡೆನ್ಮಾರ್ಕ್ ಮತ್ತು ಜರ್ಮನಿಗೆ ಜೈಶಂಕರ್ ಭೇಟಿ ನೀಡಲಿದ್ದಾರೆ. ಮೂವರೂ ದೇಶಗಳ ಪ್ರವಾಸ ಕಾಲದಲ್ಲಿ ಜೈಶಂಕರ್, ಆಯಾ ದೇಶದ ವಿದೇಶಾಂಗ ಸಚಿವರ ಜತೆ ದ್ವಿಪಕ್ಷೀಯ ಸಭೆ ನಡೆಸಲಿದ್ದಾರೆ. ಭಾರತದ ಜತೆ ಮೂರೂ ದೇಶಗಳ ಸಂಬಂಧ ವೃದ್ಧಿಗೆ ಯತ್ನಿಸಲಿದ್ದಾರೆ. ಮುಖ್ಯವಾಗಿ ಭಯೋತ್ಪಾದಕ ರಾಷ್ಟ್ರ ಪಾಕ್ ವಿರುದ್ಧ ಭಾರತ ಮೇ 7ರಿಂದ 10ರವರೆಗೆ ಕೈಗೊಂಡ ಆಪರೇಷನ್ ಸಿಂದೂರ ಕುರಿತೂ ಮಾಹಿತಿ ಹಂಚಿಕೊಳ್ಳಲಿದ್ದಾರೆ ಎಂದು ತಿಳಿದುಬಂದಿದೆ.

ಆಕಾಶ್ ಆನಂದ್ ಮತ್ತೆ ಬಿಎಸ್‌ಪಿ ಸಂಯೋಜಕ

ಲಖನೌ: ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಮುಖ್ಯಸ್ಥೆ ಮಾಯಾವತಿ ಅವರು ಸೋದರಳಿಯ ಆಕಾಶ್ ಆನಂದ್ ಅವರನ್ನು ಪಕ್ಷದ ಮುಖ್ಯ ರಾಷ್ಟ್ರೀಯ ಸಂಯೋಜಕರನ್ನಾಗಿ ನೇಮಿಸಿ ಭಾನುವಾರ ಆದೇಶ ಹೊರಡಿಸಿದ್ದಾರೆ. ಮೂಲಗಳ ಪ್ರಕಾರ, ಮುಂಬರುವ ಚುನಾವಣೆಯಲ್ಲಿ ಆಕಾಶ್ ಆನಂದ್ ಪಕ್ಷದ ಪ್ರಚಾರ ಜವಾಬ್ದಾರಿ ವಹಿಸಿಕೊಳ್ಳಲಿದ್ದಾರೆ. ಪ್ರಸ್ತುತ, ಬಿಎಸ್‌ಪಿಯಲ್ಲಿ ಮೂವರು ರಾಷ್ಟ್ರೀಯ ಸಂಯೋಜಕರಿದ್ದಾರೆ. ರಾಜ್ಯಸಭಾ ಸದಸ್ಯ ರಾಮ್ಜಿ ಗೌತಮ್, ರಣಧೀರ್ ಬೇನಿವಾಲ್ ಮತ್ತು ರಾಜಾರಾಂ ರಾಷ್ಟ್ರೀಯ ಸಂಯೋಜಕರಾಗಿದ್ದಾರೆ. ಮುಖ್ಯ ರಾಷ್ಟ್ರೀಯ ಸಂಯೋಜಕರಾಗಿ ಆಕಾಶ್ ಆನಂದ್ ತಂಡದ ನೇತೃತ್ವ ವಹಿಸಲಿದ್ದಾರೆ. ಆಕಾಶ್ ಆನಂದ್ ರಾಜಕೀಯ ಜವಾಬ್ದಾರಿ ಹೆಚ್ಚಿಸುವ ನಿರ್ಧಾರವನ್ನು ಪಕ್ಷದಲ್ಲಿ ಹೊಸ ಚೈತನ್ಯ ತುಂಬುವ ನಿರ್ಧಾರವೆಂದು ಪರಿಗಣಿಸಲಾಗುತ್ತಿದೆ.

ವಿವಿ ಸಹ ಪ್ರಾಧ್ಯಾಪಕ ಅಲಿಖಾನ್ ಬಂಧನ

ಸೋನಿಪತ್: ಪಾಕಿಸ್ತಾನ ವಿರುದ್ಧದ ಆಪರೇಷನ್ ಸಿಂದೂರ್ ಸೇನಾ ಕಾರ್ಯಾಚರಣೆ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸುತ್ತಿದ್ದ ಕರ್ನಲ್ ಸೋಫಿಯಾ ಖುರೇಷಿ ಮತ್ತು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ ಅಶೋಕ ವಿಶ್ವವಿದ್ಯಾಲಯದ ಅಸೋಸಿಯೇಟ್ ಪ್ರೊಫೆಸರ್(ಸಹ ಪ್ರಾಧ್ಯಾಪಕ) ಅಲಿ ಖಾನ್ ಮಹಮೂದಾಬಾದ್ ಎಂಬವರನ್ನು ಸೋನಿಪತ್ ಪೊಲೀಸರು ಭಾನುವಾರ ಬಂಧಿಸಿದ್ದಾರೆ. 'ಸೋಫಿಯಾ ಮತ್ತು ವ್ಯೋಮಿಕಾ ಅವರ ಮಾಧ್ಯಮ ಸಂವಾದ ಬೂಟಾಟಿಕೆ' ಎಂದು ಅಲಿಖಾನ್ ಟೀಕಿಸಿದ್ದರು. ಸಾಕ್ಷಿದಾರರಾಗಿ ಜಥೇಡಿ ಗ್ರಾಮದ ಸರಪಂಚರ ಹೇಳಿಕೆ ದಾಖಲಿಸಿಕೊಂಡ ನಂತರ ಅಲಿಖಾನ್ ಬಂಧಿಸಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ. ಇನ್ನೊಂದೆಡೆ ಹರಿಯಾಣ ರಾಜ್ಯ ಮಹಿಳಾ ಆಯೋಗ ಕೂಡಾ ಮಹಿಳಾ ಸೇನಾಧಿಕಾರಿಗಳ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಕ್ಕಾಗಿ ಅಲಿಖಾನ್‌ಗೆ ನೋಟಿಸ್ ನೀಡಿದೆ.

ಪಾಕ್ ಶೆಲ್ ದಾಳಿಗೆ ಅವಳಿ ಮಕ್ಕಳ ಸಾವು

ಪೂಂಚ್: ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ 12 ವರ್ಷದ ಅವಳಿ ಮಕ್ಕಳಾದ ಉರ್ಬಾ ಫಾತಿಮಾ ಮತ್ತು ಝೈನ್ ಅಲಿ ಒಟ್ಟಿಗೆ ಜನಿಸಿದ್ದರು. ಆದರೆ ದುರ್ವಿಧಿ ಎಂದರೆ ಮೇ 7ರ ಬೆಳಿಗ್ಗೆ ಒಟ್ಟಿಗೆ ಸಾವನ್ನಪ್ಪಿದರು. ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದ ವೇಳೆ ನಾಲ್ವರ ಕುಟುಂಬ ಶೆಲ್ ದಾಳಿಯಿಂದ ತಪ್ಪಿಸಿಕೊಳ್ಳಲು ಮತ್ತು ಸುರಕ್ಷಿತ ಸ್ಥಳಕ್ಕೆ ತೆರಳಲು ಪ್ರಯತ್ನಿಸುತ್ತಿದ್ದಾಗ ಪಾಕಿಸ್ತಾನಿ ಪಡೆಗಳು ಹಾರಿಸಿದ ಶೆಲ್ ಅವರ ಮೇಲೆ ಬಿದ್ದು ಇಬ್ಬರು ಸಾವನ್ನಪ್ಪಿದರು. ಅವರ ಪೋಷಕರು ಸಹ ಶೆಲ್ ದಾಳಿಯಲ್ಲಿ ಗಾಯಗೊಂಡು ಸದ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂಬ ಮಾಹಿತಿ ತಡವಾಗಿ ಲಭ್ಯವಾಗಿದೆ.

VISHWAVANI TV SPECIAL
ಯುಟ್ಯೂಬ್ ಚಾನೆಲ್ ಸಬ್‌ಸ್ಕ್ರೈಬ್ ಆಗಿ

{ ಜಾವೇದ್ ಅಖ್ತರ್ } ಬಾಲಿವುಡ್ ಚಿತ್ರಕತೆಗಾರ

ನನ್ನ ರಾಜಕೀಯ ನಿಲುವು ಒಪ್ಪದ ಕೆಲವರು ಪಾಕ್ ಹೋಗುವಂತೆ ಹೇಳುತ್ತಾರೆ. ಆದರೆ ಪಾಕ್‌ಗೆ ಹೋಗುವ ಬದಲು ನರಕಕ್ಕೆ ಹೋಗಲು ಇಚ್ಛಿಸುವೆ. ಏಕೆಂದರೆ ಪಾಕ್‌ಗಿಂತ ನರಕವೇ ಉತ್ತಮವಾಗಿರುತ್ತದೆ. ನರಕ-ಪಾಕ್ ನಡುವೆ ಆಯ್ಕೆ ಮಾಡಬೇಕಾದ ಸ್ಥಿತಿ ಬಂದರೆ ನಾನು ನರಕವನ್ನೇ ಆಯ್ಕೆ ಮಾಡಿಕೊಳ್ಳುವೆ. ಪಾಕ್ ಈಗಾದರೂ ಕಾಶ್ಮೀರವನ್ನು ನೆಮ್ಮದಿಯಾಗಿರಲು ಬಿಡಬೇಕು.

ಶತ್ರು ದೇಶ ಪಾಕಿಸ್ತಾನಕ್ಕೆ ಸೇನೆಯ ಮಾಹಿತಿ | ಹರಿಯಾಣದ ನುಹ್‌ನಲ್ಲಿ ಯುವಕ ಬಂಧನ | ಎರಡು ದಿನದಲ್ಲಿ ಒಟ್ಟು 7 ಬೇಹುಗಾರರ ಸೆರೆ

ಪಾಕ್‌ಗೆ ಬೇಹು: ಹೆಚ್ಚುತ್ತಿದೆ ದೇಶದ್ರೋಹಿ ಸಂತತಿ

ದೆಹಲಿ: ಗಡಿಯಾಚೆಗಿನ ಭಯೋತ್ಪಾದನೆ ಮೂಲಕ ನೆರೆಯ ಶತ್ರುದೇಶ ಪಾಕಿಸ್ತಾನದ ಕಳೆದ ಏಳೂವರೆ ದಶಕಗಳಿಂದಲೂ ಭಾರತಕ್ಕೆ ದೊಡ್ಡ ತಲೆನೋವಾಗಿದೆ. ಪಾಕ್‌ನ ಗಡಿಗೆ ಹೊಂದಿಕೊಂಡಂತಿರುವ ಜಮ್ಮು-ಕಾಶ್ಮೀರ, ರಾಜಸ್ಥಾನ, ಪಂಜಾಬ್, ಗುಜರಾತ್‌ನ ಗಡಿ ಸಮೀಪದ ಸ್ಥಳಗಳಲ್ಲಿ ನಿರಂತರವಾಗಿ ಕೀಟಲೆ, ಒಳನುಸುಳುವಿಕೆ, ಭಯೋತ್ಪಾದನೆ, ಮಾದಕದ್ರವ್ಯಗಳ ಸಾಗಣೆ, ಅಪ್ರಚೋದಿತ ಶೆಲ್ ದಾಳಿ ಎಂದು ಒಂದಲ್ಲಾ ಒಂದು ರೀತಿಯಲ್ಲಿ ಪೀಡನೆ ನಡೆಸುತ್ತಲೇ ಇದೆ.

ಅಲ್ಲದೇ, ಭಾರತದ ಪ್ರಜೆಗಳನ್ನೇ ಬಳಸಿಕೊಂಡು ಭಾರತದ ವಿರುದ್ಧವೇ ಬೇಹುಗಾರಿಕೆ ನಡೆಸುವುದನ್ನೂ ಮುಂದುವರಿಸಿದೆ. ಕೆಲವೆಡೆ ಭಾರತೀಯ ಸೇನಾಪಡೆ ಸಿಬ್ಬಂದಿಗಳನ್ನೂ 'ಸಾಮಾಜಿಕ ಜಾಲತಾಣ' ಮೂಲಕ ಮೋಸದ ಬಲೆಗೆ ಕೆಡವಿಕೊಂಡು ಬೆದರಿಸಿ, ಬ್ಲ್ಯಾಕ್ ಮೇಲ್ ಮಾಡಿ ತನಗೆ ಬೇಕಾದ ಮಾಹಿತಿಗಳನ್ನು ತರಿಸಿಕೊಳ್ಳುವ ಕಳ್ಳಾಟವನ್ನೂ ನಡೆಸುತ್ತಿದೆ.

ಇಂತಹುದೇ ಪ್ರಯತ್ನದಲ್ಲಿರುವ ಪಾಕಿಸ್ತಾನದ ಜತೆ ನಂಟು ಹೊಂದಿರುವ ಹಲವಾರು ನಾಗರಿಕರು ಒಬ್ಬೊಬ್ಬರಾಗಿ ಈಗ ಸೆರೆ ಸಿಕ್ಕಲಾರಂಭಿಸಿದ್ದಾರೆ. ಶನಿವಾರ ಒಂದೇ ದಿನ ಹರಿಯಾಣ, ಪಂಜಾಬ್‌ನಲ್ಲಿ ಪಾಕ್ ಪರ ಬೇಹುಗಾರಿಕೆ ಮಾಡುತ್ತಿದ್ದ ಒಟ್ಟು 6 ಮಂದಿಯನ್ನು ಬಂಧಿಸಲಾಗಿದೆ. ಭಾನುವಾರವೂ ಆ ಬಂಧನ ಕಾರ್ಯಾಚರಣೆ ಮುಂದುವರಿದಿದ್ದು, ಹರಿಯಾಣದ ನುಹ್ ಜಿಲ್ಲೆಯ 25 ವರ್ಷದ ಯುವಕನೊಬ್ಬ ಬೇಹುಗಾರಿಕೆ ಆರೋಪದಡಿ ಸಿಕ್ಕಿಬಿದ್ದಿದ್ದಾನೆ. ಇನ್ನೊಂದೆಡೆ, ಒಡಿಶಾದ ಪುರಿಯಲ್ಲಿ ಯೂಟ್ಯೂಬರ್ ಯುವತಿಯೊಬ್ಬಳು ಶನಿವಾರ ಬಂಧನಕ್ಕೊಳಗಾದ ಹರಿಯಾಣದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ಜತೆಗೆ ನಂಟು ಹೊಂದಿರುವುದು ಪತ್ತೆಯಾಗಿದ್ದು, ಒಡಿಶಾ ಪೊಲೀಸರು ಆಕೆಯ ಮನೆಗೇ ತೆರಳಿ ವಿಚಾರಣೆ ನಡೆಸಿದ್ದಾರೆ. ಆಕೆ ಕೆಲ ಸಮಯಕ್ಕೂ ಮೊದಲು ಪಾಕಿಸ್ತಾನದಲ್ಲಿ ಕರ್ತಾರ್ ಪುರಕ್ಕೆ ಬೇಟಿ ನೀಢಿರುವುದು ತಿಳಿದುಬಂದಿದೆ. ಆಕೆಯನ್ನು ಸದ್ಯ ಬಂಧಿಸಿಲ್ಲ. ಆದರೆ, ತನಿಖೆ ಮುಂದುವರಿದಿದೆ ಎಂದು ಪುರಿಯ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ತಿಳಿಸಿದ್ದಾರೆ.

ಹರಿಯಾಣದ ನುಹ್ ಜಿಲ್ಲೆಯ ಯುವಕ ಸೆರೆ

ನುಹ್: ಹರಿಯಾಣದ ನುಹ್ ಜಿಲ್ಲೆಯ ಅರ್ಮಾನ್(26) ಎಂಬ ಯುವಕನನ್ನು ಪಾಕಿಸ್ತಾನ ಪರ ಭಾರತದಲ್ಲಿ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದಡಿ ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ದೆಹಲಿಯಲ್ಲಿರುವ ಪಾಕಿಸ್ತಾನ ಹೈಕಮಿಷನ್‌ನಲ್ಲಿ ನಿಯೋಜಿಸಲಾದ ಉದ್ಯೋಗಿಯ ಮೂಲಕ ಭಾರತೀಯ ಸೇನೆ ಮತ್ತು ಪಾಕಿಸ್ತಾನದೊಂದಿಗೆ ಇತರ ಮಿಲಿಟರಿ ಚಟುವಟಿಕೆಗಳಿಗೆ ಸಂಬಂಧಿಸಿದ ಮಾಹಿತಿಗಳನ್ನು ವಾಟ್ಸಾಪ್ ಮತ್ತು ಸೋಷಿಯಲ್ ಮೀಡಿಯಾ ಮೂಲಕ ದೀರ್ಘಕಾಲದವರೆಗೆ ಹಂಚಿಕೊಂಡಿದ್ದಕ್ಕಾಗಿ ಆರೋಪಿ ಅರ್ಮಾನ್‌ನನ್ನು ಶನಿವಾರ ಸಂಜೆ ಬಂಧಿಸಲಾಗಿದೆ ಎಂದು ನುಹ್ ಪೊಲೀಸರು ತಿಳಿಸಿದ್ದಾರೆ. ಸ್ಥಳೀಯ ನ್ಯಾಯಾಲಯ ಅರ್ಮಾನ್‌ನನ್ನು 6 ದಿನಗಳ ಪೊಲೀಸ್ ಕಸ್ಟಡಿಗೆ ಕಳುಹಿಸಿದೆ. ಕೇಂದ್ರದ ತನಿಖಾ ಸಂಸ್ಥೆಗಳು ನೀಡಿದ ಸುಳಿವು ಆಧರಿಸಿ ಅರ್ಮಾನ್‌ನನ್ನು ಬಂಧಿಸಲಾಗಿದೆ. ಮೊಬೈಲ್ ಫೋನ್ ವಶಪಡಿಸಿಕೊಳ್ಳಲಾಗಿದ. ಮೊಬೈಲ್‌ನಲ್ಲಿ ಪಾಕ್ ಫೋನ್ ಸಂಖ್ಯೆಗಳೊಂದಿಗೆ ಹಂಚಿಕೊಳ್ಳಲಾದ ಸಂಭಾಷಣೆಗಳು, ಫೋಟೊ ಮತ್ತು ವಿಡಿಯೊಗಳು ಪತ್ತೆಯಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ. ಬಿಎನ್‌ಎಸ್ ಮತ್ತು ಅಧಿಕೃತ ರಹಸ್ಯ ಕಾಯ್ದೆ-1923ರಡಿ ಆರೋಪಿ ವಿರುದ್ಧ ಪ್ರಕರಣ ದಾಖಲಿಸಲಾಗಿದೆ ಎಂದು ಹಿರಿಯ ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಜ್ಯೋತಿ ಜತೆ ಒಡಿಶಾ ಯುಟ್ಯೂಬರ್ ನಂಟು

ದೆಹಲಿ: ಪಾಕಿಸ್ತಾನದ ಗುಪ್ತಚರ ಸಂಸ್ಥೆ 'ಐಎಸ್ಐ'ಗೆ ಭಾರತದ ಸೇನಾ ಚಟುವಟಿಕೆಗಳ ಕುರಿತು ವರ್ಷಗಳಿಂದ ಮಾಹಿತಿ ನೀಡುತ್ತಿದ್ದ ಆರೋಪದಲ್ಲಿ ಬಂಧಿತರಾದ ಒಡಿಶಾ ಪುರಿ ಮೂಲದ ಯೂಟ್ಯೂಬರ್ ಮತ್ತು ಹರಿಯಾಣದ ಯೂಟ್ಯೂಬರ್ ಜ್ಯೋತಿ ಮಲ್ಹೋತ್ರಾ ನಂಟು ಕುರಿತು ಪೊಲೀಸರು ತನಿಖೆ ತೀವ್ರಗೊಳಿಸಿದ್ದಾರೆ.

- ಪಾಕ್ ಕರ್ತಾರ್ ಪುರಕ್ಕೆ ಪುರಿಯ ಯೂಟ್ಯೂಬರ್ ಭೇಟಿ
- ಪುರಿಗೆ ತೆರಳಿ ಯೂಟ್ಯೂಬರ್ ಭೇಟಿ ಮಾಡಿದ್ದ ಜ್ಯೋತಿ

'ಟ್ರಾವೆಲ್ ವಿತ್ ಜೋ' ಎಂಬ ಯೂಟ್ಯೂಬ್ ಚಾನೆಲ್ ನಡೆಸುತ್ತಿರುವ ಜ್ಯೋತಿ ಮಲ್ಹೋತ್ರಾ 2024ರ ಸೆಪ್ಟೆಂಬರ್‌ನಲ್ಲಿ ಒಡಿಶಾ ರಾಜ್ಯದ ಪುರಿ ಕ್ಷೇತ್ರಕ್ಕೆ ಭೇಟಿ ನೀಡಿದ್ದಾಗ ಸ್ಥಳೀಯ ಯೂಟ್ಯೂಬರ್ ಯುವತಿಯನ್ನು ಭೇಟಿಯಾಗಿರುವ ಬಗ್ಗೆ ಪೊಲೀಸರ ತನಿಖೆ ವೇಳೆ ತಿಳಿದುಬಂದಿದೆ. ಪುರಿ ನಗರದ ಯೂಟ್ಯೂಬರ್ ಯುವತಿ ಇತ್ತೀಚೆಗೆ ಪಾಕಿಸ್ತಾನದ ಕರ್ತಾರ್‌ಪುರ ಸಾಹಿಬ್ ಗುರುದ್ವಾರಕ್ಕೆ ಪ್ರಯಾಣ ಬೆಳೆಸಿದ್ದಳು ಎಂದು ಪುರಿ ಎಸ್‌ಪಿ ವಿನಿತ್ ಅಗರವಾಲ್ ಭಾನುವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಪುರಿ ನಗರದ ಯುವತಿ ಜ್ಯೋತಿ ಮಲ್ಹೋತ್ರಾ ಜತೆಗೇನಾದರೂ ಗುಪ್ತಚರ ಮಾಹಿತಿಗಳನ್ನು ಹಂಚಿಕೊಂಡಿದ್ದಾರೆಯೇ? ಎಂಬ ಪ್ರಶ್ನೆಗೆ ಉತ್ತರಿಸಿದ ಅಗರವಾಲ್, ಹರಿಯಾಣ ಪೊಲೀಸರು ಈ ಬಗ್ಗೆ ತನಿಖೆ ನಡೆಸುತ್ತಿದ್ದಾರೆ. ಅವರಿಗೆ ಒಡಿಶಾ ಪೊಲೀಸ್ ಅಗತ್ಯ ಸಹಕಾರ ನೀಡುತ್ತಿದೆ ಎಂದರು. ಮಲ್ಹೋತ್ರಾ ಪುರಿಗೆ ಭೇಟಿ ನೀಡಿದ ಉದ್ದೇಶವೇನು? ಆಕೆ ಎಲ್ಲಿ ಉಳಿದುಕೊಂಡಿದ್ದಳು? ಯಾರನ್ನು ಸಂಪರ್ಕಿಸಿದಳು ಎಂಬ ಮಾಹಿತಿಗಳನ್ನು ಕಲೆಹಾಕಲಾಗುತ್ತಿದೆ. ಒಡಿಶಾ ಪೊಲೀಸ್ ಇಲಾಖೆ ಕೇಂದ್ರದ ವಿವಿಧ ತನಿಖಾ ಸಂಸ್ಥೆಗಳ ಜತೆ ಮತ್ತು ಹರಿಯಾಣ ಪೊಲೀಸರೊಂದಿಗೆ ಸಂಪರ್ಕದಲ್ಲಿದೆ ಎಂದಿದ್ದಾರೆ.

ಪುರಿ ನಗರದ ಯೂಟ್ಯೂಬರ್‌ನ ಹೆಸರು, ಗುರುತು ಬಹಿರಂಗಪಡಿಸಲು ಒಡಿಶಾ ಪೊಲೀಸರು ಸದ್ಯ ನಿರಾಕರಿಸಿದ್ದಾರೆ. ಸಮಗ್ರ ಪರಿಶೀಲನೆಯ ನಂತರ ವಿವರ ಹಂಚಿಕೊಳ್ಳುತ್ತೇವೆ. ತನಿಖೆಗಾಗಿ ಪೊಲೀಸ್ ತಂಡ ಪುರಿಯ ಯುವತಿ ನಿವಾಸಕ್ಕೆ ಭೇಟಿ ನೀಡಿತ್ತು ಎಂದು ಸುದ್ದಿಗಾರರ ಪ್ರಶ್ನೆಗಳಿಗೆ ಎಸ್‌ಪಿ ಪ್ರತಿಕ್ರಿಯಿಸಿದರು.

ತಂದೆ ಸ್ಪಷ್ಟನೆ: ನನ್ನ ಮಗಳು ಯೂಟ್ಯೂಬರ್ ಆಗಿರುವುದರಿಂದ ಹರಿಯಾಣದ ಜ್ಯೋತಿ ಮಲ್ಹೋತ್ರಾ ಸಂಪರ್ಕ ಹೊಂದಿದ್ದಾಳೆ. ಅವರ ನಡುವೆ ಸ್ನೇಹವಿದೆ. ಹಾಗಾಗಿ, ಮಲ್ಹೋತ್ರಾ ಪುರಿಗೆ ಬಂದಾಗ ನನ್ನ ಮಗಳನ್ನು ಭೇಟಿ ಮಾಡಿದ್ದರು. ರಾಷ್ಟ್ರದ ಭದ್ರತೆಯ ವಿಷಯವಾಗಿರುವುದರಿಂದ ಸೂಕ್ತ ತನಿಖೆ ನಡೆಯಲಿ. ನಾವು ಪೊಲೀಸರೊಂದಿಗೆ ಸಹಕರಿಸುತ್ತೇವೆಂದು ಯೂಟ್ಯೂಬರ್ ತಂದೆ ಪ್ರತಿಕ್ರಿಯಿಸಿದ್ದಾರೆ.

ಜ್ಯೋತಿ ಜತೆ ಪುರಿಯ ಯೂಟ್ಯೂಬರ್ ಯುವತಿ.

ಯೂಟ್ಯೂಬರ್ ಜ್ಯೋತಿ

ಜ್ಯೋತಿ ಯೂಟ್ಯೂಬ್ ಚಾನೆಲ್‌ಗೆ 3.77 ಲಕ್ಷ ಚಂದಾದಾರರು ಮತ್ತು ಇನ್‌ಸ್ಟಾಗ್ರಾಮ್ ಖಾತೆಗೆ 1.33 ಲಕ್ಷ ಫಾಲೋವರ್ಸ್ ಇದ್ದಾರೆ. ಜ್ಯೋತಿ ದೆಹಲಿಯಲ್ಲಿರುವ ಪಾಕಿಸ್ತಾನ ಹೈಕಮಿಷನ್‌ನಲ್ಲಿನ ಒಬ್ಬ ಅಧಿಕಾರಿಯೊಂದಿಗೆ ಸಂಪರ್ಕ ಹೊಂದಿದ್ದರು ಎಂಬ ಮಾಹಿತಿಯೂ ಲಭ್ಯವಾಗಿದೆ. ಭಾರತದ ವಿರುದ್ಧ ಬೇಹುಗಾರಿಕೆ ನಡೆಸುತ್ತಿದ್ದ ಆರೋಪದ ಮೇರೆಗೆ ಆ ಪಾಕಿಸ್ತಾನಿ ಅಧಿಕಾರಿಯನ್ನು ಭಾರತ ಮೇ 13 ರಂದು ಹೊರಹಾಕಿದೆ.

ಶಾ ನೇತೃತ್ವ ತಿರಂಗಾ ಯಾತ್ರೆ

ಅಹಮದಾಬಾದ್: 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆಯನ್ನು ಯಶಸ್ವಿಗೊಳಿಸಿದ ಭಾರತೀಯ ಸಶಸ್ತ್ರ ಬಲ ಮತ್ತು ಮೂರೂ ಸೇನಾಪಡೆಗಳು ಯೋಧರಿಗೆ ವಂದನೆ ಸಲ್ಲಿಸಿ ಗೌರವಿಸುವ ಸಲುವಾಗಿ ಗುಜರಾತ್‌ನ ಅಹಮದಾಬಾದ್ ನಗರದಲ್ಲಿ ಭಾನುವಾರ ಕೇಂದ್ರ ಗೃಹ ಸಚಿವ ಅಮಿತ್ ಶಾ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಬೃಹತ್ ತಿರಂಗಾ ಯಾತ್ರೆಯಲ್ಲಿ ನಾಗರಿಕರು ಸಾವಿರಾರು ಸಂಖ್ಯೆಯಲ್ಲಿ ಭಾಗಿಯಾಗಿದ್ದರು.

ಮಕ್ಕಳು- ಮಹಿಳೆಯರು-ಹಿರಿಯ ನಾಗರಿಕರು ಸೇರಿದಂತೆ ಸಾವಿರಾರು ಜನರು ಕೈಗಳಲ್ಲಿ ತ್ರಿವರ್ಣ ಧ್ವಜ ಹಿಡಿದುಕೊಂಡು 'ಭಾರತ್ ಮಾತಾ ಕಿ ಜೈ', ಹಿಂದೂಸ್ಥಾನ್ ಜಿಂದಾಬಾದ್, 'ಭಾರತೀಯ ಸೇನಾಪಡೆಗಳಿಗೆ ಜಯವಾಗಲಿ' ಘೋಷಣೆಗಳನ್ನು ಮೊಳಗಿಸುತ್ತಾ ಕಿಮೀ ಉದ್ದದ ಯಾತ್ರೆಯಲ್ಲಿ ಸಾಗಿದರು. ಇದೇ ವೇಳೆ ಗಾಂಧಿ ನಗರದಲ್ಲಿ ಆಯೋಜಿಸಲಾಗಿದ್ದ ಸಾರ್ವಜನಿಕ ಸಭೆಯಲ್ಲಿ ಮಾತನಾಡಿದ ಅಮಿತ್ ಶಾ ಅವರು, ಗಡಿಯಾಚೆಗಿನ ಭಯೋತ್ಪಾದನೆಯನ್ನು ಮೂಲೋತ್ಪಾಟನೆ ಮಾಡುವ ಸಲುವಾಗಿ ನಮ್ಮ ಸೈನಿಕರು ನಡೆಸಿದ ಸೇನಾ ಕಾರ್ಯಾಚರಣೆ ಅತ್ಯದ್ಭುತವಾಗಿತ್ತು. ಅವರಿಗೆ ನಮ್ಮ ನಮನಗಳು ಎಂದು ಹೇಳಿದರು. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಕಾರವಾಗಿ ಭಾರತೀಯ ಸೇನಾಪಡೆಗಳು ಕೈಗೊಂಡ ಆಪರೇಷನ್ ಸಿಂದೂರ ಯಶಸ್ವಿಯಾದ ಹಿನ್ನೆಲೆ ಸೇನಾಪಡೆಗಳಿಗೆ ಕೃತಜ್ಞತೆ ಸಲ್ಲಿಸಲು ಬಿಜೆಪಿ ಮೇ 13ರಿಂದ 23ರವರೆಗೆ ದೇಶದ ವಿವಿಧೆಡೆ 'ತಿರಂಗಾ ಯಾತ್ರೆ' ಹಮ್ಮಿಕೊಂಡಿದೆ.

ಗುಲ್ಜಾರ್ ಹೌಸ್ ಕಟ್ಟಡದಲ್ಲಿ ಬೆಳಗ್ಗೆ 6ಕ್ಕೆ ಹೊತ್ತಿದ ಬೆಂಕಿ | 8 ಮಕ್ಕಳು, 9 ಪ್ರೌಢರ ಸಾವು, ಹಲವರಿಗೆ ಸುಟ್ಟಗಾಯ | 12 ಅಗ್ನಿಶಾಮಕ ದಳ ವಾಹನಗಳಿಂದ ಬೆಂಕಿ ಶಮನ

ಚಾರ್ಮಿನಾರ್ ಬಳಿ ಅಗ್ನಿ ದುರಂತಕ್ಕೆ 17 ಬಲಿ

ಹೈದರಾಬಾದ್: ತೆಲಂಗಾಣದ ರಾಜಧಾನಿ ಹೈದರಾಬಾದ್‌ನ ಹೃದಯಭಾಗದಲ್ಲಿರುವ ಐತಿಹಾಸಿಕ ಚಾರ್ಮಿನಾರ್ ಸಮೀಪದಲ್ಲೇ ಇರುವ 'ಗುಲ್ಜಾರ್ ಹೌಸ್' ಕಟ್ಟಡದಲ್ಲಿರುವ ಆಭರಣ ಅಂಗಡಿಯಲ್ಲಿ ಭಾನುವಾರ ಮುಂಜಾನೆ 6ರ ವೇಳೆ ಭೀಕರ ಅಗ್ನಿ ಅವಘಡ ಉಂಟಾಗಿದ್ದು, 8 ಮಕ್ಕಳು ಸೇರಿ 17 ಮಂದಿ ಸಜೀವ ದಹನವಾಗಿದ್ದಾರೆ. ಹಲವರು ಗಾಯಗೊಂಡಿದ್ದು, ಕೆಲವರ ಸ್ಥಿತಿ ಗಂಭೀರವಾಗಿದೆ.

ಭಾನುವಾರ ಬೆಳಗ್ಗೆ 6 ಗಂಟೆಗೆ ಬೆಂಕಿ ಕಾಣಿಸಿಕೊಂಡಿದೆ. ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಸಿಬ್ಬಂದಿಗೆ ತುರ್ತು ಕರೆ ಬಂದ ತಕ್ಷಣವೇ 12 ಅಗ್ನಿಶಾಮಕ ದಳ ವಾಹನಗಳು ಸ್ಥಳಕ್ಕೆ ಧಾವಿಸಿದವು. ಹಲವಾರು ಗಂಟೆಗಳ ಪ್ರಯತ್ನದ ನಂತರ ಬೆಂಕಿಯನ್ನು ನಿಯಂತ್ರಣಕ್ಕೆ ತರಲಾಗಿದೆ ಎಂದು ಅಗ್ನಿಶಾಮಕ ಅಧಿಕಾರಿಗಳು ತಿಳಿಸಿದ್ದಾರೆ. ಗಾಯಗೊಂಡವರಲ್ಲಿ ಮಕ್ಕಳ ಸಂಖ್ಯೆಯೇ ಹೆಚ್ಚಿದೆ. ಎಲ್ಲಾ ಗಾಯಾಳುಗಳನ್ನು ತಕ್ಷಣವೇ ಹತ್ತಿರದ ವಿವಿಧ ಆಸ್ಪತ್ರೆಗಳಿಗೆ ಕರೆದೊಯ್ದು ದಾಖಲಿಸಲಾಗಿದೆ. ಗಾಯಾಳುಗಳಲ್ಲಿ ಕೆಲವರ ಸ್ಥಿತಿ ಗಂಭೀರವಾಗಿದೆ ಎನ್ನಲಾಗಿದೆ.

ಸಿಎಂ ಆಘಾತ: ಮುಖ್ಯಮಂತ್ರಿ ಎ.ರೇವಂತ್ ರೆಡ್ಡಿ ಅಗ್ನಿಅವಘಡ ಸುದ್ದಿ ಕೇಳಿ ಆಘಾತಗೊಂಡಿದ್ದಾರೆ. 17 ಮಂದಿ ಸಾವಿಗೀಡಾಗಿರುವುದಕ್ಕೆ ದುಃಖ ವ್ಯಕ್ತಪಡಿಸಿದ್ದಾರೆ. ಮೃತರ ಕುಟುಂಬದವರಿಗೆ ಸರಕಾರ ಸಾಧ್ಯವಿರುವ ಎಲ್ಲಾ ನೆರವು ನೀಡುತ್ತದೆ ಎಂದು ಭರವಸೆ ನೀಡಿದ್ದಾರೆ.

ಕೇಂದ್ರ ಕಲ್ಲಿದ್ದಲು ಸಚಿವ ಮತ್ತು ಹೈದರಾಬಾದ್ ಸಂಸದ ಜಿ.ಕಿಶನ್ ರೆಡ್ಡಿ ಸ್ಥಳಕ್ಕೆ ಭೇಟಿ ನೀಡಿ ಪರಿಸ್ಥಿತಿ ಅವಲೋಕಿಸಿದರು. ಅಧಿಕಾರಿಗಳೊಂದಿಗೆ ಮಾತನಾಡಿ ಬೆಂಕಿ ಹೊತ್ತಲು ಕಾರಣವೇನು? ಎಂದು ಮಾಹಿತಿ ಪಡೆದರು. ಬೆಂಕಿಗೆ ಶಾರ್ಟ್ ಸರ್ಕಿಟ್ ಕಾರಣವಾಗಿರಬಹುದು ಎಂದು ಪ್ರಾಥಮಿಕ ತನಿಖೆಯಲ್ಲಿ ತಿಳಿದುಬಂದಿದೆ. ನಿಖರ ಕಾರಣ ಕಂಡುಹಿಡಿಯಲು ವಿವರ ತನಿಖೆ ನಡೆಯುತ್ತಿದೆ.

ಪ್ರಧಾನಿ ಆಘಾತ, ಪರಿಹಾರ ಘೋಷಣೆ

ಹೈದರಾಬಾದ್ ಬೆಂಕಿ ಅವಘಡದಲ್ಲಿ ಕುಟುಂಬ ಸದಸ್ಯರನ್ನು ಕಳೆದುಕೊಂಡವರಿಗಾಗಿ ಪ್ರಧಾನಿ ನರೇಂದ್ರ ಮೋದಿ ಕಂಬನಿ ಮಿಡಿದಿದ್ದಾರೆ. ಸಂತ್ರಸ್ತ ಪ್ರತಿ ಕುಟುಂಬಕ್ಕೆ ಪ್ರಧಾನ ಮಂತ್ರಿ ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯಿಂದ ತಲಾ 2 ಲಕ್ಷ ರು. ಮತ್ತು ಗಾಯಾಳುಗಳಿಗೆ 50,000 ರು. ಪರಿಹಾರ ನೀಡುವುದಾಗಿ ಘೋಷಿಸಿದ್ದಾರೆ. ಹೈದರಾಬಾದ್ ಬೆಂಕಿ ದುರಂತದಲ್ಲಿನ ಜೀವಹಾನಿಗೆ ತೀವ್ರ ದುಃಖಿತನಾಗಿದ್ದೇನೆ. ಪ್ರೀತಿಪಾತ್ರರನ್ನು ಕಳೆದುಕೊಂಡವರಿಗೆ ಸಂತಾಪ ಸೂಚಿಸುತ್ತೇನೆ. ಗಾಯಾಳುಗಳು ಶೀಘ್ರ ಚೇತರಿಸಿಕೊಳ್ಳಲಿ ಎಂದು 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ.

ಪೊಲೀಸ್ ಗುಂಡಿಗೆ ಒಬ್ಬ ಹತ, ಇಬ್ಬರ ಸೆರೆ

ಗೋ ಕಳ್ಳರಿಂದ ಎಚ್‌ಸಿ ಹತ್ಯೆ

ಜಾನ್‌ಪುರ: ಉತ್ತರ ಪ್ರದೇಶದ ಜಾನ್‌ಪುರ ಜಿಲ್ಲೆಯಲ್ಲಿ ಗೋವುಗಳ ಕಳ್ಳಸಾಗಣೆ ತಡೆಯಲು ಯತ್ನಿಸಿದ ಪೊಲೀಸರ ತಂಡದ ಮೇಲೆಯೇ ಗೋವು ಕಳ್ಳರು ದಾಳಿ ನಡೆಸಿದ್ದು, ಹೆಡ್ ಕಾನ್‌ಸ್ಟೆಬಲ್ ದುರ್ಗೇಶ್ ಕುಮಾರ್ ಸಿಂಗ್ (34) ಹತರಾಗಿದ್ದಾರೆ. ಆ ಬಳಿಕ ಗೋಕಳ್ಳಸಾಗಣೆದಾರರನ್ನು ಬೆನ್ನಟ್ಟಿದ ಪೊಲೀಸರು ಮತ್ತೊಂದು ತಂಡ ಗುಂಡು ಹಾರಿಸಿದಾಗ ಒಬ್ಬ ಗೋ ಕಳ್ಳಸಾಗಣೆದಾರ ಹತನಾಗಿದ್ದಾನೆ. ಮತ್ತಿಬ್ಬರು ಗಾಯಗೊಂಡು ಸೆರೆ ಸಿಕ್ಕಿದ್ದಾರೆ.

ಶನಿವಾರ ತಡರಾತ್ರಿ ಘಟನೆ ನಡೆದಿದೆ ಎಂದು ಪೊಲೀಸ್ ಅಧಿಕಾರಿಗಳು ಭಾನುವಾರ ಸುದ್ದಿಗಾರರಿಗೆ ತಿಳಿಸಿದ್ದಾರೆ. ಮುಖ್ಯರಸ್ತೆಗಳಲ್ಲಿ ರಾತ್ರಿ ವಾಹನ ತಪಾಸಣೆ ಮಾಡುತ್ತಿದ್ದಾಗ ವಾಹನದಲ್ಲಿ ಗೋವುಗಳನ್ನು ತುಂಬಿಕೊಂಡು ಹೋಗುತ್ತಿದ್ದ ಮೂವರು ಗೋ ಕಳ್ಳಸಾಗಣೆದಾರರು ಮತ್ತು ಸಹಚರರು ಪೊಲೀಸರ ಮೇಲೆಯೇ ಮಾರಣಾಂತಿಕ ದಾಳಿ ನಡೆಸಿದ್ದಾರೆ. ಗಂಭೀರವಾಗಿ ಗಾಯಗೊಂಡಿರುವ ಪೊಲೀಸ್ ಔಟ್‌ಪೋಸ್ಟ್ ಉಸ್ತುವಾರಿ ಪ್ರತಿಮಾ ಸಿಂಗ್ ವಾರಾಣಸಿಯ ಟ್ರಾಮಾ ಸೆಂಟರ್‌ನಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಆ ಬಳಿಕ ಶನಿವಾರ ರಾತ್ರಿ 11.50ಕ್ಕೆ ಅಜಂಗಢದಿಂದ ವಾರಾಣಸಿ ಕಡೆಗೆ ತೆರಳುತ್ತಿದ್ದ ಗೋವು ಕಳ್ಳಸಾಗಣೆದಾರರನ್ನು ಬೆನ್ನಟ್ಟಿದ ಪೊಲೀಸ್ ವಿಶೇಷ ಕಾರ್ಯಾಚರಣೆ ತಂಡ ಗುಂಡು ಹಾರಿಸಿದಾಗ ಜಾನ್‌ಪುರ ನಿವಾಸಿ ಸಲ್ಮಾನ್(24) ಹತನಾದ. ಮತ್ತಿಬ್ಬರು ಗೋ ಕಳ್ಳಸಾಗಾಣಿಕೆದಾರರ ಕಾಲಿಗೆ ಗುಂಡು ಹಾರಿಸಿ ಬಂಧಿಸಲಾಗಿದೆ. ಇತರೆ ಮೂವರು ಪರಾರಿಯಾಗಿದ್ದಾರೆ.

ಶಿಷ್ಟಾಚಾರ ಉಲ್ಲಂಘನೆ: ಸಿಜೆಐ ಬೇಸರ

ಮುಂಬೈ: ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕಗೊಂಡ ಬಳಿಕ ಮೊದಲ ಬಾರಿಗೆ ತಮ್ಮ ತವರು ರಾಜ್ಯ ಮಹಾರಾಷ್ಟ್ರಕ್ಕೆ ಭಾನುವಾರ ಭೇಟಿ ನೀಡಿದ್ದ ನ್ಯಾ. ಬಿ.ಆರ್.ಗವಾಯಿ ಅವರು ಶಿಷ್ಟಾಚಾರದ ಉಲ್ಲಂಘನೆಯ ಬಗ್ಗೆ ಬಹಿರಂಗವಾಗಿಯೇ ತೀವ್ರ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಮಹಾರಾಷ್ಟ್ರ ಮತ್ತು ಗೋವಾ ಬಾರ್ ಕೌನ್ಸಿಲ್ ಆಯೋಜಿಸಿದ್ದ ಅಭಿನಂದನಾ ಕಾರ್ಯಕ್ರಮದಲ್ಲಿ ಮಾತನಾಡಿದ ಗವಾಯಿ, ರಾಜ್ಯದ ಮುಖ್ಯ ಕಾರ್ಯದರ್ಶಿ, ಪೊಲೀಸ್ ಮಹಾನಿರ್ದೇಶಕರು ಅಥವಾ ನಗರ ಪೊಲೀಸ್ ಆಯುಕ್ತರು ತಮ್ಮನ್ನು ಸ್ವಾಗತಿಸಲು ಬರದಿರುವುದನ್ನು ಎತ್ತಿ ತೋರಿಸಿದರು. ಪ್ರಜಾಪ್ರಭುತ್ವದ ಮೂರು ಸ್ತಂಭಗಳು ಸಮಾನವಾಗಿದ್ದು, ಪರಸ್ಪರ ಗೌರವ ತೋರಿಸಬೇಕು ಮತ್ತು ಪರಸ್ಪರ ಗೌರವ ನೀಡಬೇಕು ಎಂದು ಒತ್ತಿ ಹೇಳಿದರು.

ಮಹಾರಾಷ್ಟ್ರದವರಾದ ಸಿಜೆಐ ಮೊದಲ ಬಾರಿಗೆ ಬಂದಾಗ ರಾಜ್ಯದ ಮುಖ್ಯ ಕಾರ್ಯದರ್ಶಿ, ಡಿಜಿಪಿ ಅಥವಾ ಮುಂಬೈ ಪೊಲೀಸ್ ಆಯುಕ್ತರು ಅಲ್ಲಿಗೆ ಬರಲು ಬಯಸದಿದ್ದರೆ, ಅದು ಸರಿಯೇ ಅಥವಾ ತಪ್ಪು ಎಂಬುದು ಅವರಿಗೆ ಬಿಟ್ಟಿದ್ದು ಎಂದು ಸಿಜೆಐ ಗವಾಯಿ ಬೇಸರ ವ್ಯಕ್ತಪಡಿಸಿದರು.

ಇದು ಗೌರವದ ಪ್ರಶ್ನೆಯಾಗಿದೆ. ಶಿಷ್ಟಾಚಾರವನ್ನು ಪಾಲಿಸುವಂತೆ ನಾನು ಅವರನ್ನು ಒತ್ತಾಯಿಸುತ್ತಿಲ್ಲ ಮತ್ತು ಇಂತಹ ಕ್ಷುಲ್ಲಕ ವಿಚಾರಗಳ ಬಗ್ಗೆ ಗಮನ ಸೆಳೆಯಬೇಕು ಎಂದು ಸಹ ನನಗೆ ಅನಿಸುತ್ತಿಲ್ಲ. ಆದರೆ ಜನರಿಗೆ ಈ ಬಗ್ಗೆ ತಿಳಿಸಬೇಕಾದ ಅಗತ್ಯವಿದೆ ಎಂದರು. ಒಂದು ಸಂಸ್ಥೆ ಅಥವಾ ಸಂಸ್ಥೆಯ ಮುಖ್ಯಸ್ಥರು ಮೊದಲ ಬಾರಿಗೆ ರಾಜ್ಯಕ್ಕೆ ಬಂದಾಗ, ವಿಶೇಷವಾಗಿ ಅವರು ಕೂಡ ಆ ರಾಜ್ಯಕ್ಕೆ ಸೇರಿದವರಾಗಿದ್ದರೆ, ಅವರು ನೀಡಿದ ಗೌರವ ಸರಿಯಾಗಿದೆಯೇ ಅಥವಾ ಇಲ್ಲವೇ ಎಂಬುದನ್ನು ಅವರೇ ಯೋಚಿಸಬೇಕು. ನನ್ನ ಸ್ಥಾನದಲ್ಲಿ ಬೇರೆ ಯಾರಾದರೂ ಇದ್ದರೆ 142ನೇ ವಿಧಿಯ ನಿಬಂಧನೆಗಳನ್ನು ಪರಿಗಣಿಸುತ್ತಿದ್ದರು ಎಂದು ಎಂದು ಗವಾಯಿ ಮಹಾರಾಷ್ಟ್ರ ಸರಕಾರದ ವಿರುದ್ಧ ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಭಾರತೀಯ ಸಂವಿಧಾನದ 142 ನೇ ವಿಧಿಯು ಸುಪ್ರೀಂಕೋರ್ಟ್‌ಗೆ ತನ್ನ ಮುಂದೆ ಬಾಕಿ ಇರುವ ಯಾವುದೇ ಪ್ರಕರಣ ಅಥವಾ ವಿಷಯದಲ್ಲಿ ಸಂಪೂರ್ಣ ನ್ಯಾಯ ಒದಗಿಸಲು ಅಗತ್ಯವೆಂದು ಪರಿಗಣಿಸಲಾದ ತೀರ್ಪುಗಳು ಅಥವಾ ಆದೇಶಗಳನ್ನು ಹೊರಡಿಸುವ ಅಧಿಕಾರವನ್ನು ನೀಡುತ್ತದೆ.

ಸ್ಫೋಟಗೊಳ್ಳದ 42 ಶೆಲ್‌ಗಳ ನಾಶ

ಶ್ರೀನಗರ: ಜಮ್ಮು ಮತ್ತು ಕಾಶ್ಮೀರದ ಪೂಂಚ್ ಜಿಲ್ಲೆಯ ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿ ಇರುವ ವಿವಿಧ ಗ್ರಾಮಗಳಲ್ಲಿ ಸ್ಫೋಟಗೊಳ್ಳದ 42 ಶೆಲ್‌ಗಳು ಪತ್ತೆಯಾಗಿದ್ದು, ಅವುಗಳನ್ನು ಭದ್ರತಾ ಸಿಬ್ಬಂದಿ ಭಾನುವಾರ ನಾಶಪಡಿಸಿದ್ದಾರೆ. ಶೆಲ್ ದಾಳಿ ನಡೆದಿದ್ದ ಪ್ರದೇಶಗಳಲ್ಲಿ ಸಹಜಸ್ಥಿತಿ ಮರುಸ್ಥಾಪಿಸಿ ಜನರಿಗೆ ವಾಸಯೋಗ್ಯವಾಗಿಸಲು ಭದ್ರತಾಪಡೆಗಳು ಮುಂದಾಗಿವೆ. ಈ ಹಿನ್ನೆಲೆಯಲ್ಲಿ ಗ್ರಾಮಗಳಲ್ಲಿ ಪರಿಶೀಲನೆ ನಡೆಸಿ, ಸ್ಫೋಟಗೊಳ್ಳದ ಶೆಲ್‌ಗಳನ್ನು ಪತ್ತೆಹಚ್ಚಿ ಅವುಗಳನ್ನು ನಾಶಪಡಿಸಲಾಗಿದೆ ಎಂದು ರಕ್ಷಣಾ ವಕ್ತಾರರು ತಿಳಿಸಿದ್ದಾರೆ.

ಬೆಂಗಳೂರು ಐಐಎಸ್‌ಸಿ ದಾಳಿ ಸಂಚುಕೋರ ಹತ

ಸಿಂಧ್: ಬೆಂಗಳೂರಿನಲ್ಲಿರುವ 'ಭಾರತೀಯ ವಿಜ್ಞಾನ ಸಂಸ್ಥೆ' (ಐಐಎಸ್‌ಸಿ) ಮೇಲೆ 2005ರಲ್ಲಿ ನಡೆದಿದ್ದ ಭಯೋತ್ಪಾದಕರ ದಾಳಿ ಕೃತ್ಯದ ಹಿಂದಿನ ಸಂಚುಕೋರ, ಭಾರತದ 3 ಪ್ರಮುಖ ಸ್ಥಳಗಳಲ್ಲಿ ನಡೆದ ದಾಳಿಯ ಮಾಸ್ಟರ್ ಮೈಂಡ್, ಲಷ್ಕರ್-ಎ-ತಯ್ಯಬಾ(ಎಲ್‌ಇಟಿ) ಉಗ್ರ ಸಂಘಟನೆಯ ಕಮಾಂಡರ್ ಸೈಫುಲ್ಲಾ ಖಾಲಿದ್ ಪಾಕಿಸ್ತಾನದ ಸಿಂಧ್ ಪ್ರಾಂತ್ಯದಲ್ಲಿ ಹತನಾಗಿದ್ದಾನೆ. ಅಪರಿಚಿತ ಬಂದೂಕುಧಾರಿಗಳು ಉಗ್ರನಿಗೆ ಭಾನುವಾರ ಬೆಳಗೆಗ ಗುಂಡಿಕ್ಕಿ ಕೊಂದಿದ್ದಾರೆ.

2006ರಲ್ಲಿ ನಾಗಪುರದ ಆರ್‌ಎಸ್‌ಎಸ್ ಪ್ರಧಾನ ಕಚೇರಿ ಮೇಲೆ ನಡೆದ ಉಗ್ರರ ದಾಳಿ ಕೃತ್ಯದಲ್ಲಿಯೂ ಸೈಫುಲ್ಲಾ ಖಾಲಿದ್‌ನ ಕೈವಾಡವಿದೆ. 2001ರಲ್ಲಿ ರಾಮಪುರದ ಸಿಆರ್‌ಪಿಎಫ್ ಕ್ಯಾಂಪ್ ಮೇಲಿನ ದಾಳಿಯ ಮಾಸ್ಟರ್ ಮೈಂಡ್ ಕೂಡಾ ಈತನೇ ಆಗಿದ್ದಾನೆ. ಉಗ್ರ ಖಾಲಿದ್ ಎಲ್‌ಇಟಿಯ ಭಯೋತ್ಪಾದಕ ಚಟುವಟಿಕೆಗಳಿಗೆ ಹಣಕಾಸಿನ ನೆರವು ನೀಡುತ್ತಿದ್ದ. ಈತ ನೇಪಾಳದ ಮೂಲಕ ಭಾರತಕ್ಕೆ ಉಗ್ರರನ್ನು ಕಳುಹಿಸುತ್ತಿದ್ದ. ಸೈಫುಲ್ಲಾ ತನ್ನ ಹೆಸರನ್ನು ವಿನೋದ್ ಕುಮಾರ್, ಮೊಹಮ್ಮದ್ ಸಲೀಂ, ಖಾಲಿದ್, ವನಿಯಾಲ್, ವಾಜಿದ್, ಸಲೀಂ ಭಾಯ್ ಎಂದು ಬದಲಿಸಿಕೊಳ್ಳುತ್ತಿದ್ದ ಎಂದು ತಿಳಿದುಬಂದಿದೆ. ನೇಪಾಳದಲ್ಲಿದ್ದಾಗ ವಿನೋದ್ ಕುಮಾರ್ ಎಂದು ಹೆಸರು ಬದಲಿಸಿಕೊಂಡು ಬಾನು ಎಂಬ ಮಹಿಳೆಯನ್ನು ಮದುವೆಯಾಗಿದ್ದ.

ಪಾಕ್‌ಗೆ ಐಎಂಎಫ್ 11 ಷರತ್ತು

ಇಸ್ಲಾಮಾಬಾದ್: ಆರ್ಥಿಕವಾಗಿ ಬಹಳ ಕಷ್ಟದ ಸ್ಥಿತಿಯಲ್ಲಿರುವ ಪಾಕಿಸ್ತಾನಕ್ಕೆ ಉಳಿಕೆ ಸಾಲದ ಹಣ ಬಿಡುಗಡೆ ಮಾಡಲು ಅಂತಾರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) 11 ಹೊಸ ಷರತ್ತು ವಿಧಿಸಿದೆ ಎಂದು ಮಾಧ್ಯಮ ವರದಿ ತಿಳಿಸಿದೆ. ಪಾಕ್‌ಗೆ ವಿಧಿಸಲಾದ ಹೊಸ ಷರತ್ತುಗಳಲ್ಲಿ 17.6 ಲಕ್ಷ ಕೋಟಿ ರು.ಗಳ ಹೊಸ ಬಜೆಟ್‌ಗೆ ಸಂಸತ್ತಿನ ಅನುಮೋದನೆ ಪಡೆಯಬೇಕು, ವಿದ್ಯುತ್ ಬಿಲ್‌ಗಳ ಮೇಲಿನ ಸಾಲ ಸೇವಾ ಸರ್‌ಚಾರ್ಜ್‌ನ ಹೆಚ್ಚಳ ಮಾಡಬೇಕು, 3 ವರ್ಷಕ್ಕೂ ಹೆಚ್ಚು ಹಳೆಯ(ಬಳಸಿದ) ಕಾರುಗಳ ಆಮದು ನಿರ್ಬಂಧ ತೆಗೆದುಹಾಕಬೇಕು ಎಂಬ ಷರತ್ತುಗಳನ್ನು ವಿಧಿಸಲಾಗಿದೆ. ಭಾರತ-ಪಾಕ್ ನಡುವಿನ ಗಡಿ ಉದ್ವಿಗ್ನತೆ ಮತ್ತಷ್ಟು ಹದಗೆಟ್ಟರೆ ಕಾರ್ಯಕ್ರಮದ ಹಣಕಾಸು, ಬಾಹ್ಯ ಮತ್ತು ಸುಧಾರಣಾ ಗುರಿಗಳಿಗೆ ಅಪಾಯಗಳನ್ನು ಹೆಚ್ಚಿಸಬಹುದು ಎಂದು ವರದಿಯಾಗಿದೆ.

ಷರತ್ತುಗಳು: ಆರ್ಥಿಕ ಪ್ರಗತಿಗೆ ಜಾಗತಿಕ ರಾಜಕೀಯ ಸ್ಥಿರತೆ ಬಹಳ ಮುಖ್ಯ. ಅದಕ್ಕಾಗಿ ಪ್ರಾದೇಶಿಕ ಬಿಕ್ಕಟ್ಟು, ನೆರೆ ದೇಶಗಳೊಂದಿಗೆ ಘರ್ಷಣೆ ತಪ್ಪಿಸಬೇಕು ಎಂಬುದೂ ಸೇರಿದಂತೆ 11 ಷರತ್ತುಗಳನ್ನು ಐಎಂಎಫ್ ವಿಧಿಸಿದೆ.

ತೆರಿಗೆ ವ್ಯಾಪ್ತಿ ಮತ್ತು ಆದಾಯ ಹೆಚ್ಚಿಸಲು ಕೃಷಿ ಕ್ಷೇತ್ರದ ಮೇಲೂ ಆದಾಯ ತೆರಿಗೆ ವಿಧಿಸಬೇಕು. ಸಮಗ್ರ ತೆರಿಗೆ ಸುಧಾರಣೆ ಜಾರಿಗೆ ತರಬೇಕು. ಸರಕಾರಕ್ಕೆ ಹೊರೆ ತಗ್ಗಿಸಲು ಇಂಧನ, ಕೃಷಿ ಕ್ಷೇತ್ರದಲ್ಲಿನ ಸಬ್ಸಿಡಿಗಳನ್ನು ಕಡಿಮೆ ಮಾಡಬೇಕು. ಸರಕಾರಿ ಸ್ವಾಮ್ಯದ ಉದ್ದಿಮೆಗಳ ಕಾರ್ಯಕ್ಷಮತೆ ಹೆಚ್ಚಿಸಲು ಹಲವು ಸುಧಾರಣೆಗಳನ್ನು ತರಬೇಕು. ಆಡಳಿತ ಮಟ್ಟದಲ್ಲಿ ಭ್ರಷ್ಟಾಚಾರ ತಡೆಗೆ ಕಾನೂನು ಚೌಕಟ್ಟು ಬಲಪಡಿಸಬೇಕು. ಬಜೆಟ್ ಕೊರತೆ ಆಗದಂತೆ ಕಟ್ಟುನಿಟ್ಟಿನ ಹಣಕಾಸು ಶಿಸ್ತು ಹೊಂದಿರಬೇಕು. ಸರಕಾರಿ ಸಾಲಗಳನ್ನು ಸರಿಯಾಗಿ ನಿಭಾಯಿಸಬೇಕು. ಹಣದುಬ್ಬರ ಗುರಿಗೆ ಬದ್ಧವಾಗಿ, ಆರ್ಥಿಕ ಸ್ಥಿರತೆ ಹೆಚ್ಚಿಸುವಂತಹ ಹಣಕಾಸು ನೀತಿ ರೂಪಿಸಿ ಸರಿಯಾಗಿ ಜಾರಿಗೊಳಿಸಬೇಕು. ಮಾರುಕಟ್ಟೆ ಪರಿಸ್ಥಿತಿಗೆ ಅನುಗುಣವಾಗಿ ಮತ್ತು ಬಾಹ್ಯ ಸ್ಪರ್ಧಾತ್ಮಕತೆ ಹೆಚ್ಚಿಸಲು ವಿನಿಮಯ ದರದಲ್ಲಿ ಸಡಿಲಿಕೆ ತರಬೇಕು. ಇಂಧನ ವಲಯದಲ್ಲಿ ನಷ್ಟ ತಗ್ಗಿಸಿ ಕ್ಷಮತೆ ಹೆಚ್ಚಿಸಲು ನಿರ್ವಹಣೆ ಸಮರ್ಪಕಗೊಳಿಸಬೇಕು. ಕ್ಷೇತ್ರದಲ್ಲಿ ಹೆಚ್ಚು ಹೂಡಿಕೆ ಆಗುವಂತೆ ಕ್ರಮ ಜರಗಿಸಬೇಕು. ದುರ್ಬಲ ವರ್ಗದವರಿಗೆ ಸಾಮಾಜಿಕ ಸುರಕ್ಷಾ ಯೋಜನೆಗಳನ್ನು ಸಮರ್ಪಕವಾಗಿ ಕೈಗೊಳ್ಳಬೇಕು. ದೇಶದ ಸಾಂಸ್ಥಿಕ ವ್ಯವಸ್ಥೆ ಬಲಪಡಿಸಲು ಮತ್ತು ಪಾರದರ್ಶಕತೆ ಹೆಚ್ಚಿಸಲು ಆಡಳಿತದಲ್ಲಿ ಸುಧಾರಣೆ ತರಬೇಕು.

ಸುಂಟರಗಾಳಿ ಆರ್ಭಟ: ಅಮೆರಿಕ 27 ಜೀವಬಲಿ

ವಾಷಿಂಗ್ಟನ್: ಅಮೆರಿಕ ದೇಶದ ಹಲವೆಡೆ ಭಾರೀ ಪ್ರಮಾಣದ ಸುಂಟರಗಾಳಿಯ ದಾಳಿಯಿಂದ ಮನೆಗಳು ಛಿದ್ರವಾಗಿವೆ, ವಾಹನಗಳು ಜಖಂಡಗೊಂಡಿವೆ. 27 ಜನರು ಸಾವಿಗೀಡಾಗಿದ್ದಾರೆ.

ಕೆಂಟುಕಿಯ ಆಗ್ನೇಯ ಭಾಗದಲ್ಲಿಯೇ ಸುಂಟರಗಾಳಿಗೆ ಒಂಬತ್ತು ಜನರು ಸಾವಿಗೀಡಾಗಿದ್ದಾರೆ. ಲಾರೆಲ್ ಕೌಂಟಿಯಲ್ಲಿ 17 ಸಾವು ಉಂಟಾಗಿದೆ. ಪುಲಾಸ್ಕಿ ಕೌಂಟಿಯಲ್ಲಿ ಒಬ್ಬರು ಸುಂಟರಗಾಳಿಗೆ ಬಲಿಯಾಗಿದ್ದಾರೆ. ಸಾವಿನ ಸಂಖ್ಯೆ ಇನ್ನೂ ಹೆಚ್ಚಾಗಬಹುದು ಎನ್ನಲಾಗಿದೆ. ಕೆಂಟುಕಿ ರಾಜ್ಯದಲ್ಲಿ ವಿನಾಶಕಾರಿ ಸುಂಟರಗಾಳಿ ಮನೆಗಳನ್ನು ಮೇಲೆತ್ತಿ ಬಳಿಕ ನೆಲಕ್ಕೆ ಬಡಿದು ಹಾನಿಗೊಳಿಸಿದೆ. ವಾಹನಗಳನ್ನು ಮೇಲೆತ್ತಿ ಗಿರಿಗಿಟ್ಟಲೆಯಂತೆ ತಿರುಗಿಸಿ ನೆಲಕ್ಕೆಸಿದಿದೆ. ಸಾವಿರಾರು ಜನರನ್ನು ಭೀಕರ ಸುಂಟರಗಾಳಿಯ ದಾಳಿ ನಿರಾಶ್ರಿರನ್ನಾಗಿಸಿದೆ. 5,000ಕ್ಕೂ ಹೆಚ್ಚು ಮನೆಗಳು ಹಾನಿಗೊಳಗಾಗಿವೆ. ಜನರು ಸುರಕ್ಷಿತ ಸ್ಥಳಗಳಿಗೆ ತೆರಳುವಂತೆ ಅಧಿಕಾರಿಗಳು ಮನವಿ ಮಾಡಿದ್ದಾರೆ. 12 ರಾಜ್ಯ ರಸ್ತೆಗಳು ಸುಂಟರಗಾಳಿಯಿಂದ ಹಾನಿಗೀಡಾಗಿದ್ದು, ರಸ್ತೆಗಳನ್ನು ಬಂದ್ ಮಾಡಲಾಗಿದೆ. ಮತ್ತೆ ಸಂಚಾರಕ್ಕೆ ರಸ್ತೆಗಳನ್ನು ಮುಕ್ತಗೊಳಿಸಲು ಹಲವು ದಿನಗಳೇ ಬೇಕಾಗಬಹುದು ಎನ್ನಲಾಗಿದೆ. ಹಲವು ಪ್ರದೇಶಗಳಲ್ಲಿ ಕರ್ಫ್ಯೂ ಜಾರಿಗೊಳಿಸಲಾಗಿದೆ. ಇದು ನಿಜವಾಗಿಯೂ ವಿನಾಶಕಾರಿ ಸುಂಟರಗಾಳಿ ಎಂದು ಕೆಂಟುಕಿ ನಿವಾಸಿ ಸ್ಪೆನ್ಸರ್ ಹೇಳಿದ್ದಾರೆ.

ಒಂದು ಅಂಕದ ಪ್ರಶ್ನೆಯ ಪೋಸ್ಟರ್

ಕನ್ನಡದಲ್ಲಿ ಸಾಕಷ್ಟು ಪ್ರಯೋಗಾತ್ಮಕ ಚಿತ್ರಗಳು ಮೂಡಿಬರುತ್ತಿವೆ. ಆ ಸಾಲಿಗೆ ಈಗ ಒಂದು ಅಂಕದ ಪ್ರಶ್ನೆ ಚಿತ್ರವೂ ಸೇರಲಿದೆ. ಬಡ್ಡಿಸ್, ರಾನಿ ಚಿತ್ರಗಳಲ್ಲಿ ನಟಿಸಿದ್ದ ಗಿರೀಶ್ ಹೆಗ್ಡೆ ಈ ಚಿತ್ರದ ನಾಯಕನಾಗಿ ಅಭಿನಯಿಸುತ್ತಿದ್ದಾರೆ. ಈ ಹಿಂದೆ ಲುಂಗಿ, ಸ್ಟ್ರಾಬೆರಿ ಚಿತ್ರಗಳನ್ನು ನಿರ್ದೇಶಿಸಿ ರುವ ಅರ್ಜುನ್ ಲೂಯಿಸ್ ಈ ಚಿತ್ರವನ್ನು ನಿರ್ದೇಶಿಸುತ್ತಿದ್ದಾರೆ. ನಮಸ್ಥೆ ಎಂಟರ್ ಟೇನರ್ಸ್ ಲಾಂಛನದಲ್ಲಿ ಕಾರ್ಲಿಸ್ ಡಿಕುನ್ಹಾ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ.ಇನ್ನೇನು ಚಿತ್ರೀಕರಣ ಆರಂಭಿಸಲಿರುವ ಒಂದು ಅಂಕದ ಪ್ರಶ್ನೆ ಹೊಸ ಪೋಸ್ಟರ್ ಬಿಡುಗಡೆಯಾಗಿದೆ. ಇದು ಕರಾವಳಿ ತೀರದಲ್ಲಿ ನಡೆಯುವ ಸ್ಟೋರಿಯಾಗಿದ್ದು ಕೋಳಿ ಅಂಕದ ಚಟಕ್ಕೆ ಬಿದ್ದ ಯುವಕನ ಕಥೆಯನ್ನು ಕಾಮಿಡಿ, ಲವ್ ಮತ್ತು ಮದರ್ ಸೆಂಟಿಮೆಂಟ್ ಅಂಶ ಗಳೊಂದಿಗೆ ಕಟ್ಟಿಕೊಡಲಾಗಿದೆ. ಮಂಗಳೂರು, ಉಡುಪಿ ಆಸುಪಾಸಿನಲ್ಲಿ ಚಿತ್ರದ ಚಿತ್ರೀಕರಣ ನಡೆಸಲಾಗುತ್ತಿದೆ. ಜೋಯೆಲ್ ಶಮನ್ ಡಿಸೋಜ ಛಾಯಾಗ್ರಹಣ ಹಾಗೂ ಪ್ರಸಾದ್ ಕೆ ಶೆಟ್ಟಿ ಸಂಗೀತ ನಿರ್ದೇಶನ ಈ ಚಿತ್ರಕ್ಕಿದೆ. ಎಲ್ಲರಿಗೂ ಹಿಡಸುವ ಕಥೆ ಇದಾಗಿದ್ದು ಗ್ರಾಮೀಣ ಭಾಗದ ಹಿನ್ನೆಲೆಯಲ್ಲಿ ಕಥೆ ಸಾಗಲಿದೆ. ಅದನ್ನು ಕಮರ್ಷಿಯಲ್ ಆಯಾಮದಲ್ಲಿ ಕಟ್ಟಿಕೊಡಲಾಗುತ್ತಿದೆ. ಎರಡು ಹಂತದಲ್ಲಿ ಚಿತ್ರೀಕರಣ ನಡೆಸಲು ಯೋಜನೆ ಹಾಕಿಕೊಂಡಿದ್ದೇವೆ ಎಂದು ನಿರ್ದೇಶಕ ಅರ್ಜುನ್ ಲೂಯಿಸ್ ಹೇಳಿದ್ದಾರೆ.

ಸರಿಗಮಪ ಗ್ರಾಂಡ್ ಫಿನಾಲೆ

ಸರಿಗಮಪ ರಿಯಾಲಿ ಶೋ ಗ್ರಾಂಡ್ ಫಿನಾಲೆ ಜೀ 5 ಒಟಿಟಿಯಲ್ಲಿ ನೇರ ಪ್ರಸಾರವಾಗಲಿದೆ. ಈ ಹಿಂದಿನ ಎಲ್ಲಾ ಸೀಸನ್ ಗಳಿಗಿಂತಲೂ ಈ ಸೀಸನ್ ವಿಶೇಷವಾಗಿ ಮೂಡಿಬರುತ್ತಿದ್ದು, ಇದು ಒಟಿಟಿ ಪ್ಲಾಟ್ ಫಾರ್ಮ್ ನಲ್ಲಿ ಹೊಸ ಇತಿಹಾಸ ಸೃಷ್ಟಿಸಲಿದೆ. ಕನ್ನಡ ಕಿರುತೆರೆ ಯಲ್ಲಿ ತನ್ನದೇ ಆದ ಛಾಪನ್ನು ಮೂಡಿಸಲಿದೆ. ಮಾತ್ರವಲ್ಲ ಈ ಬಾರಿ ಅತ್ಯುತಮ ಗಾಯಕರ ಆಯ್ಕೆಯಲ್ಲಿ ವೀಕ್ಷಕರೂ ಕೂಡ ಪಾಲ್ಗೊಳ್ಳಬಹುದಾಗಿದೆ. ಇದೇ 22ರ ವರೆಗೆ ಪ್ರೇಕ್ಷಕರು ನೆಚ್ಚಿನ ಗಾಯಕನಿಗೆ ಓಟ್ ಮಾಡಬಹುದಾಗಿದೆ. ವಿಜಯ ಪ್ರಕಾಶ್, ರಾಜೇಶ್ ಕೃಷ್ಣನ್ ಮತ್ತು ಅರ್ಜುನ್ ಜನ್ಯ ಫಿನಾಲೆಯಲ್ಲಿಯೂ ತೀರ್ಪುಗಾರರಾಗಿ ಇರಲಿದ್ದಾರೆ. ಡಿಜಿಟಲ್ ಪ್ಲಾಟ್ಫಾರ್ಮ್ ನಲ್ಲಿ ಇದೇ ಮೊದಲು ರಿಯಾಲಿಟಿ ಶೋ ನೇರ ಪ್ರಸಾರವಾಗುತ್ತಿದೆ. ಮುಂದಿನ ದಿನಗಳಲ್ಲಿ ಮತ್ತಷ್ಟು ಹೊಸ ಪ್ರಯೋಗ ಮಾಡುವ ಮೂಲಕ ಕಿರುತೆರೆ ಪ್ರಿಯರಿಗೆ ಮತ್ತಷ್ಟು ಮನರಂಜನೆ ನೀಡಲಾಗುವುದು ಎಂದು ಜೀ ಕನ್ನಡ ಬ್ಯುಸಿನೆಸ್ ಹೆಡ್ ದೀಪಕ್ ಶ್ರೀರಾಮುಲು ಹೇಳಿದ್ದಾರೆ. ಸರಿಗಮಪ ಗ್ರಾಂಡ್ ಫಿನಾಲೆ ಶುಕ್ರವಾರ ಪ್ರಸಾರವಾಗಲಿದೆ.

ಟೀಸರ್‌ನಲ್ಲಿ ಮನಗೆದ್ದ ಮಾಯಾವಿ

ಚಂದನವನದಲ್ಲಿ ಹೊಸಬರ ಹೊಸ ಪ್ರಯತ್ನಗಳು ಮುಂದುವರಿದಿವೆ. ಕೋಟೆ ನಾಡಿನ ರಘು ರಾಮ್ ಮಾಯಾವಿಯಾಗಿ ತೆರೆಗೆ ಬರಲು ಸಿದ್ಧವಾಗಿದ್ದಾರೆ. ಜತೆಗೆ ಇಷ್ಟ ಎಂಟರ್ ಟೇನರ್ ಬ್ಯಾನರ್ ನಲ್ಲಿ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ. ಜಿ.ಶಂಕರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದಾರೆ. ಸದ್ಯ ಈ ಚಿತ್ರದ ಟೀಸರ್ ಹಾಗೂ ಆವರಿಸು... ಹಾಡು ಬಿಡುಗಡೆಯಾಗಿದೆ. ಶಾಂತವೀರ ಸ್ವಾಮೀಜಿ ಹಾಗೂ ಈಶ್ವರಾ ನಂದಾಪುರಿ ಸ್ವಾಮಿ ಮಾಯಾವಿ ಚಿತ್ರದ ಟೀಸರ್ ಹಾಗೂ ಹಾಡನ್ನು ಬಿಡುಗಡೆ ಮಾಡಿ ದರು. ಮಾಯಾವಿ ಥ್ರಿಲ್ಲಿಂಗ್ ಸಿನಿಮಾ ಎಂಬುದು ಟೀಸರ್ ನಲ್ಲಿ ತಿಳಿಯುತ್ತದೆ. ಆವರಿಸುವ.. ಹಾಡಿಗೆ ಆನಂದ್ ಕಮ್ಮಸಾಗರ ಸಾಹಿತ್ಯ ಬರೆದಿದ್ದು, ಅಗಸ್ತ್ಯ ಸಂತೋಷ್ ಸಂಗೀತ ಸಂಯೋಜಿಸಿದ್ದಾರೆ. ವಿಜಯ ಪ್ರಕಾಶ್ ದನಿಯಲ್ಲಿ ಹಾಡು ಮಧುರವಾಗಿ ಮೂಡಿ ಬಂದಿದೆ. ನಿಶ್ಚಿತಾ ಶೆಟ್ಟಿ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ.

> ನಾನು ನಾಯಕನಾಗಿ ನಟಿಸುತ್ತಿರುವ ಸಿನಿಮಾವಿದು. ನಿರ್ದೇಶಕ ಶಂಕರ್ ಅದ್ಭುತವಾದ ಕಥೆ ಹೆಣೆದಿದ್ದಾರೆ. ಇದು ಎಲ್ಲರಿಗೂ ಕನೆಕ್ಟ್ ಆಗುವ ಸಿನಿಮಾವಾಗಿದ್ದು ಪ್ರೇಕ್ಷಕರನ್ನು ಸಿಟಿನ ತುದಿಯಲ್ಲಿ ಕೂರಿಸುತ್ತದೆ.
> -ರಘುರಾಮ್, ನಿರ್ಮಾಪಕ

> ನಾನು ಈ ಹಿಂದೆ ಕೆಲವು ನಿರ್ದೇಶಕರ ಬಳಿ ಕೆಲಸ ಮಾಡಿದ್ದೇನೆ. ನಿರ್ದೇಶಕನಾಗಿ ಇದು ಮೊದಲ ಚಿತ್ರ. ಕಥೆ ಕೇಳಿದ ಮಿತ್ರ ರಘುರಾಮ್ ಚಿತ್ರ ನಿರ್ಮಾಣಕ್ಕೆ ಮುಂದಾದರು. ಇದೊಂದು ಸಸ್ಪೆನ್ಸ್ ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರ. ಚಿತ್ರದುರ್ಗ, ಬೆಂಗಳೂರಿನಲ್ಲಿ ಚಿತ್ರೀಕರಣ ನಡೆದಿದ್ದು, ಶೂಟಿಂಗ್ ಕೂಡ ಮುಕ್ತಾಯವಾಗಿದೆ.ಸದ್ತ ಪೋಸ್ಟ್ ಪ್ರೊಡಕ್ಷನ್ ಕಾರ್ಯಗಳು ನಡೆಯುತ್ತಿದೆ.
> -ಜಿ.ಶಂಕರ್

ರೆಟ್ರೋ ಲುಕ್‌ನಲ್ಲಿ ಅಜಯ್ ರಾವ್

ಮಹಿಳೆಯರ ದೌರ್ಜನ್ಯದ ವಿರುದ್ಧ ಸಮರ ಸಾರಿ ಯುದ್ಧಕಾಂಡದಲ್ಲಿ ಅಬ್ಬರಿಸಿದ ಅಜಯ್ ರಾವ್ ಗೆಲುವು ಸಾಧಿಸಿದರು. ಈಗ ಅದೇ ಖುಷಿಯಲ್ಲಿ ರೆಟ್ರೋ ಲುಕ್‌ನಲ್ಲಿ ಮಿಂಚಲು ಸಿದ್ಧವಾಗಿದ್ದಾರೆ. ಹೌದು ನಿರ್ದೇಶಕ ಮಂಜು ಸ್ವರಾಜ್ ನಿರ್ದೇಶನದಲ್ಲಿ ಮೂಡಿ ಬರುತ್ತಿರುವ ಸರಳ ಸುಬ್ಬರಾಯ ಚಿತ್ರದಲ್ಲಿ ಅಜಯ್ ನಟಿಸುತ್ತಿದ್ದು ಹೊಸ ಅವತಾರದಲ್ಲಿ ಕಂಗೊಳಿಸಲಿದ್ದಾರೆ. ಸರಳ ಚಿತ್ರದ ನಾಯಕಿಯಾಗಿದ್ದು ಸುಬ್ಬರಾಯ ನಾಯಕನ ನಾಮವಾಗಿದೆ. ಹಾಗಾಗಿ ಇದು ರೊಮ್ಯಾಂಟಿಕ್ ಕಾಮಿಡಿ ಸಿನಿಮಾ ಎಂಬುದು ಟೈಟಲ್‌ನಲ್ಲಿಯೇ ಸ್ಪಷ್ಟವಾಗಿದೆ. ಜತೆಗೆ ಕೌಟುಂಬಿಕ ಸ್ಟೋರಿಯೂ ಅಡಕವಾಗಿದೆ. ಟಾಲಿವುಡ್ ಖ್ಯಾತಿಯ ಮಿಶಾ ನಾರಂಗ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಆ ಮೂಲಕ ಚಂದನವಕ್ಕೆ ಎಂಟ್ರಿ ಕೊಟ್ಟಿದ್ದಾರೆ. ಉಳಿದಂತೆ ದೊಡ್ಡ ತಾರಾ ಬಳಗವೇ ಚಿತ್ರದಲ್ಲಿದೆ. ಎಪ್ಪತ್ತರ ದಶಕದ ಕಥೆ ಸಿನಿಮಾದಲ್ಲಿದ್ದು ನೈಜತೆಯೆ ಜತೆಗೆ ಕಾಲ್ಪನಿಕ ಸ್ಟೋರಿಯೂ ಬೆರೆತಿದೆ. ಈಗಾಗಲೇ ಸಿನಿಮಾದ ಶೂಟಿಂಗ್ ಮುಕ್ತಾಯವಾಗಿದ್ದು, ಜುಲೈನಲ್ಲಿ ಚಿತ್ರ ತೆರೆಗೆ ಬರಲಿದೆ. ಹೈಬಜೆಟ್ ಸಿನಿಮಾ ಇದಾಗಿದ್ದು, ಲೋಹಿತ್ ಹೆಚ್ ನಂಜುಂಡಯ್ಯ ಚಿತ್ರ ನಿರ್ಮಾಣಕ್ಕೆ ಬಂಡವಾಳ ಹೂಡಿದ್ದಾರೆ.

ಜೂನ್‌ನಲ್ಲಿ ವೀರಮಲ್ಲು

ಟಾಲಿವುಡ್ ಪವರ್‌ಸ್ಟಾರ್ ಹಾಗೂ ಆಂಧ್ರ ಪ್ರದೇಶದ ಉಪಮುಖ್ಯಮಂತ್ರಿ ಪವನ್ ಕಲ್ಯಾಣ್ ತಮ್ಮ ಅಭಿಮಾನಿಗಳಿಗೆ ಹೊಸ ಉಡುಗೊರೆ ಕೊಟ್ಟಿದ್ದಾರೆ. ಡಿಸಿಎಂ ಸ್ಥಾನ ಕ್ಕೇರಿದ ಬಳಿಕ ಪವನ್ ರಾಜಕೀಯದಲ್ಲಿ ಬ್ಯುಸಿ ಯಾಗಿದ್ದರು. ಹೀಗಾಗಿ ಸಿನಿಮಾಗಳಿಂದ ಕೊಂಚ ಬ್ರೇಕ್ ಪಡೆದಿದ್ದರು. ಇದೀಗ ಪವನ್ ಕಲ್ಯಾಣ್ ನಟನೆಯ ಬಹುನಿರೀಕ್ಷಿತ ಹರಿ ಹರ ವೀರ ಮಲ್ಲು ಚಿತ್ರ ಬಿಡುಗಡೆಗೆ ಸಿದ್ಧವಾಗಿದ್ದು ಜೂನ್ 12 ರಂದು ಅದ್ದೂರಿಯಾಗಿ ತೆರೆಗೆ ಬರಲಿದೆ.



ಇದನ್ನು ಕೇಳಿ ಸಿನಿಪ್ರಿಯರು ಖುಷಿಯಾಗಿದ್ದಾರೆ. ಹರಿ ಹರ ವೀರ ಮಲ್ಲು ಸಿನಿಮಾದ ಹಾಡು ಗಳು ಬಿಡುಗಡೆಯಾಗಿದ್ದು ಸಿನಿಪ್ರಿಯರ ಮನ ಗೆದ್ದಿವೆ. ಅದ್ದೂರಿ ಬಜೆಟ್ ನಲ್ಲಿ ನಿರ್ಮಾಣ ವಾಗಿರುವ ಹರಿ ಹರ ವೀರ ಮಲ್ಲು ಪ್ಯಾನ್ ಇಂಡಿಯಾ ಸಿನಿಮಾವಾಗಿ ಬಿಡುಗಡೆಯಾಗಲಿದೆ. ಹರಿ ಹರ ವೀರ ಮಲ್ಲುವಾಗಿ ಪವನ್ ಕಲ್ಯಾಣ್ ಸಿನಿಮಾದಲ್ಲಿ ಅಬ್ಬರಿಸಿದ್ದಾರೆ. ಹದಿನೇಳನೇ ಶತಮಾನದಲ್ಲಿ ಮೊಘಲ್ ಸಾಮ್ರಾಜ್ಯದ ವಿರುದ್ಧ ಹೋರಾಡಿದ ನಾಯಕನಾಗಿ ಪವರ್ ಸ್ಟಾರ್ ಮಿಂಚಿದ್ದಾರೆ. ಬಾಬಿ ಡಿಯೋಲ್, ನಿಧಿ ಅಗರ್ವಾಲ್, ನರ್ಗಿಸ್ ಫಕ್ರಿ ಮತ್ತು ನೋರಾ ಫತೇಹಿ ಸೇರಿದಂತೆ ಹಲವರು ತಾರಾಬಳಗದಲ್ಲಿ ದ್ದಾರೆ. ಜ್ಯೋತಿ ಕೃಷ್ಣ ಮತ್ತು ಕ್ರಿಶ್ ಜಗರ್ಲಮುಡಿ ಈ ಚಿತ್ರವನ್ನು ನಿರ್ದೇಶನ ಮಾಡಿದ್ದಾರೆ. ಮೆಗಾ ಸೂರ್ಯ ಪ್ರೊಡಕ್ಷನ್ಸ್ ಬ್ಯಾನರ್‌ನಲ್ಲಿ ಎ. ದಯಾಕರ್ ರಾವ್ ಈ ಚಿತ್ರವನ್ನು ನಿರ್ಮಿಸಿದ್ದು, ಆಸ್ಕರ್ ಪ್ರಶಸ್ತಿ ವಿಜೇತ ಎಂ.ಎಂ.ಕೀರ ವಾಣಿ ಸಂಗೀತ ಸಂಯೋಜಿಸಿದ್ದಾರೆ. ಮನೋಜ್ ಪರಮಹಂಸ ಛಾಯಾಗ್ರಹಣ ಚಿತ್ರಕ್ಕಿದೆ.

ಹೃದಯಕ್ಕೂ ಬೇಕು ಆಹಾರ

ಹೃದಯದುಬ್ಬರವೇನು
ಹೊಟ್ಟೆಯುಬ್ಬರದಂತೆ
ಅದರಿಳಿತ ಕೊರಳ ನಾದದ ಸದ್ದಿನಿಂದ
ಅದೆ ನಗುವು ದುಗುಡಗಳು,
ಅದೆ ಹೊಗಳು ತೆಗಳುಗಳು
ಅದನಿಳಿಸೆ ಶಾಂತಿಯೆಲೋ - ಮಂಕುತಿಮ್ಮ॥

ಶುಭೋದಯಕ್ಕೊಂದು ಕಗ್ಗ



ರವೀ ಚಿಕ್ಕನಾಯಕನಹಳ್ಳಿ

ಹೊಟ್ಟೆಗೆ ಹಸಿವಾದಂತೆ ಹೃದಯಕ್ಕೂ ಹಸಿವಾಗುತ್ತದೆ. ಹೊಟ್ಟೆಗೆ ಹಸಿವುಂಟಾದಾಗ ನಮ್ಮ ಕೊರಳ ಮೂಲಕವೇ ಆಹಾರ ಪಡೆಯುವಂತೆಯೇ, ನಮ್ಮ ಹೃದಯದ ಹಸಿವಿಗೂ ಸಹ ಕೊರಳಿನ ಮೂಲಕವೇ ನಗು, ದುಃಖ, ದುಮ್ಮಾನ, ದುಗುಡ, ಹೊಗಳಿಕೆ, ತೆಗಳಿಕೆಗಳನ್ನು ಪಡೆಯಲೇಬೇಕು. ಇಲ್ಲದೆ ಹೋದರೆ ಹೃದಯಕ್ಕೆ ಆಹಾರವಿರದೆ ಅದು ಬರಡಾಗುತ್ತದೆ. ಹೀಗೆ ಬರಡಾದ ಹೃದಯಕ್ಕೆ ಶಾಂತಿಯೇ ಇರದು ಎಂಬ ಸೂತ್ರವನ್ನು ಈ ಮುಕ್ತಕದಲ್ಲಿ ಹೇಳಿದ್ದಾರೆ.

ನಮ್ಮ ದೇಹದಾಭಿವೃದ್ಧಿಗೆ ಹಾಗೂ ಈ ಜಗತ್ತಿನಲ್ಲಿ ಜೀವಿಸಲು ಹೇಗೆ ಆಹಾರವು ಅತ್ಯಗತ್ಯವೋ ಹಾಗೆಯೇ ನಮ್ಮಗಳ ಹೃದಯ ಮತ್ತು ಮನಸ್ಸುಗಳಿಗೆ ಕಣ್ಣಿಗೆ ಕಾಣದಂತಹ ಭಾವನೆಗಳೆಂಬ ಆಹಾರವೂ ಅತ್ಯಗತ್ಯವಾಗಿರುತ್ತದೆ. ಅವರವರ ಮನೋಭಾವಕ್ಕೆ ತಕ್ಕಂತೆ ಅವರವರ ಭಾವನೆಗಳೂ ಸಹ ಇರುತ್ತವೆ. ಆಹಾರದಲ್ಲಿ ಅದೆಷ್ಟು ವೈವಿಧ್ಯ ಇರುತ್ತದೆಯೋ ಅಷ್ಟಕ್ಕಿಂತ ಸಾವಿರಪಟ್ಟು ಭಾವಗಳಲ್ಲಿ ವೈವಿಧ್ಯ ಇರುತ್ತದೆ.

ಹೇಗೆ ಎಷ್ಟೋಬಾರಿ ನಾವು ನಮಗೆ ಜೀರ್ಣವಾಗದ, ಆರೋಗ್ಯಕ್ಕೆ ಹಿತವಲ್ಲದ ಆಹಾರವನ್ನು ನಾವುಗಳು ಸೇವಿಸು ವಂತೆಯೇ ಈ ಮನಸ್ಸು ಹಾಗೂ ಬುದ್ಧಿಗಳಿಗೆ ಶ್ರೇಯಸ್ಸು ತರದಂತಹ, ಮನಸ್ಸಿನ ಶಾಂತಿಗೆ ಹಾನಿಯುಂಟುಮಾಡುವ ವಿಚಾರಗಳ ಭಾವನೆಗಳೂ ಸಹ ನಮ್ಮ ಮನಸ್ಸಿನೊಳಕ್ಕೆ ನುಗ್ಗುತ್ತವೆ ಅಥವಾ ಬಂದು ಹೋಗುತ್ತದೆ, ತನ್ನ ಪರಿಣಾಮ ಬೀರಿ ಸ್ಥಾಯೀಯಾಗಿ ನಮ್ಮ ಮನಸ್ಸಿನಲ್ಲೇ ಉಳಿದು ಆಗಾಗ ಮೇಲೆದ್ದು ಪ್ರಕಟಗೊಳ್ಳುತ್ತಾ ಇರುತ್ತದೆ. ನಮ್ಮ ನಗು, ಆನಂದ, ಸಂತೋಷ, ಕೋಪ, ದ್ವೇಷ, ದುಗುಡ, ದುಮ್ಮಾನ, ಅಸೂಯೆಯಂತಾ ಭಾವಗಳೆಲ್ಲ ನಮ್ಮ ಕೊರಳಿಂದ ನಮ್ಮೊಳಗೇ ಇಳಿದು, ನಮ್ಮ ಕೊರಳೊಳಗಿಂದಲೇ ಹೊರ ಹೊಮ್ಮುತ್ತದೆ. ಹಾಗೆ ಬದು ಹೋಗುವ ಭಾವಗಳೇ ನಮ್ಮ ವ್ಯಕ್ತಿತ್ವವನ್ನು ರೂಪಿಸುತ್ತವೆ. ನಮ್ಮ ಭಾವನೆಗಳು ಹೇಗಿರುತ್ತವೆಯೋ ಹಾಗೆ ನಮ್ಮ ನಡವಳಿಕೆಯಿರುತ್ತದೆ.

ಕಾಲಕಾಲಕ್ಕೆ ಬದಲಾಗುವ ನಮ್ಮ ವಿಚಾರಗಳು ಮತ್ತು ತದನುಗುಣವಾಗಿ ಬದಲಾಗುವ ಭಾವನೆಗಳಿಂದ ನಮ್ಮ ವ್ಯಕ್ತಿತ್ವ ಬದಲಾಗುತ್ತಾ ಹೋಗುತ್ತದೆ. ಈ ವಿಚಾರಗಳೆಲ್ಲ ನಮ್ಮನ್ನು ಶಾಂತವಾಗಿರಲು ಬಿಡುವುದಿಲ್ಲ. ನಾವು ಮನಸ್ಸು ಬುದ್ಧಿಗಳಿಂದ ಶಾಂತ ಸ್ಥಿತಿಗೆ ತಲುಪಬೇಕಾದರೆ ಈ ರೀತಿ ನಮ್ಮನ್ನು ವಿಚಲಿತಗೊಳಿಸುವ ಭಾವನೆಗಳನ್ನು ಕಸ ಗುಡಿಸಿದಂತೆ ಮನದಿಂದ ಹೊರಹಾಕಬೇಕು ಮತ್ತು ಶುದ್ಧ ಮತ್ತು ಶಾಂತ ವಿಚಾರಗಳನ್ನು ಮಾತ್ರ ಒಳಬರಮಾಡಿಕೊಳ್ಳುವ ಪ್ರಯತ್ನ ಮಾಡಬೇಕು. ಆಗ ನಾವು ಶಾಂತರಾಗಬಹುದು. ಜಗತ್ತಿನಲ್ಲಿ ನಾವಿರುವಾಗ ಅದರಿಂದ ದೂರ ಸರಿಯಲು ಸಾಧ್ಯವಿಲ್ಲ. ಇಲ್ಲಿ ಇದ್ದೇ ಆ ರೀತಿಯ ಮನಃಶಾಂತಿಯನ್ನು ಪಡೆಯಲಾದರೆ ಅದೇ ದೊಡ್ಡ ಸಾಧನೆ. ಆ ಸಾಧನೆಯನ್ನು ಸಾಧಿಸು ವುದೇ ನಿಜವಾಗಿಯೂ ತನ್ನ ತಾ ಅರಿತಂತೆಯೇ ಹೌದು ಎಂದು ಇಲ್ಲಿ ಹೇಳಿದ್ದಾರೆ.

ಮನುಷ್ಯನ ಮನಸ್ಸಿಗೆ ನೋವು ತರುವಂಥಹುಗಳೇ ಈ ಅರಿಷಡ್ವರ್ಗಂಗಳು. ಅಂತಹುಗಳನ್ನು ದೂರವಿರಿಸಿ ಆ ಪರವಸ್ತುವಿನೊಂದಿಗೆ ಅಂತರ್ಗತವಾಗುವ ಮನಸ್ಸು ಬಂದರೆ ಅದೇ ನೈಜ ಸಂತೋಷ ಎಂಬುದನ್ನು ಈ ಮುಕ್ತಕ ವಿವರಿಸುತ್ತದೆ.

ಪದಬಂಧ

ಸಿ.ರವಿಶಂಕರ ಶಾಸ್ತ್ರಿ, ದಂಬೆ

■	1	■	2	3		■	4	■
5	6		■		■	7		8
	■	9					■	
10	11		■		■	12	13	
■		■	■	■	■	■		■
14		15	■	16	■	17		18
	■	19					■	
20	21		■		■	22	23	
■		■	24			■		■

ಎಡದಿಂದ ಬಲಕ್ಕೆ

2. ಅರದ ಮಧ್ಯೆ ಸಿಲುಕಿದ ರಾಕ್ಷಸ (3)
5. ಕೊಂಡಿಯಿಂದ ಚುಚ್ಚು (3)
7. ಜನರು ಒಪ್ಪಿಸಿದ ಕಾಣಿಕೆ (3)
9. ಕೆಲಸಕ್ಕೆ ಬಾರದ ಎಂದರ್ಥ (5)
10. ರಾತ್ರಿಯ ವಿರುದ್ಧ ಪದ (3)
12. ನೂಲುವ ಉಪಕರಣ ತಿರುಗಿ ಬಂದಿದೆ (3)
14. ರಾಜ ಕೊನೆಗೆ ಅನುಸ್ವಾರ ಹೊಂದಿದ್ದಾನೆ (3)
17. ಒಡೆಯ ಇನ್ನೊಂದು ಹೆಸರಿನಲ್ಲಿ (3)
19. ಕನಸಿನ ಮನೆಯನ್ನು ಹೀಗೆ ಹೇಳುವರು (5)
20. ಸುಲಭವಾಗಿ ಹಬ್ಬುವ ಗಾಳಿಸುದ್ದಿ (3)
22. ಜನರು ಸರಕಾರಕ್ಕೆ ಕಟ್ಟುವ ಸುಂಕ (3)
24. ಬಿಡದೆ ಬಂದ ಸೀಸೆಯ ಮುಚ್ಚಳ (3)

ಮೇಲಿಂದ ಕೆಳಕ್ಕೆ

1. ಮೂಟೆ ಅಥವಾ ಕಟ್ಟು (2)
3. ತಲೆಕೆಳಗಾಗಿ ನಿಂತು ನೇಮಕಮಾಡು (4)
4. ಅಜ್ಜನಿಗೆ ಮತ್ತೊಂದು ಹೆಸರು (2)
5. ಅಸ್ತವ್ಯಸ್ತಗೊಂಡ ಮೋಸ (3)
6. ಕೈಗೆ ಸಿಗು ಎನ್ನುವುದು ಚೆಲ್ಲಾಪಿಲ್ಲಿಯಾಗಿದೆ (3)
7. ಅಸಲಿಯಲ್ಲದ್ದು (3)
8. ದುಃಖದಿಂದ ಕೂಡಿದ ಎಂದರ್ಥ (3)
11. ಗರಬಡಿದಂತಿದೆ ಚರಂಡಿ (3)
13. ಆಟವಾಡಲು ಉಪಯೋಗ (3)
14. ಕೊರತೆ ಅಥವಾ ಇಲ್ಲದಿರುವಿಕೆ (3)
15. ಒಡನಾಡಿ ಅಥವಾ ಜೊತೆಗಾರ (3)
16. ಕಣ್ಣಿಗೆ ಕಾಣದ ಎಂದರ್ಥ (4)
17. ನೀರು ಜಿನುಗುವಿಕೆ (3)
18. ಕೆಳಗಿನಿಂದ ಬಂದಿರುವ ಮಿತ್ರ (3)
21. ಆನೆಯ ಕೋರೆ (2)
23. ಪುರದಲ್ಲಿ ದೊರೆತ ಶತ್ರು (2)

ಸರಿಯುತ್ತರಗಳು

ಎಡದಿಂದ ಬಲಕ್ಕೆ
2. ಅಸುರ 5. ಕುಟುಕು
7. ನಜರು 9. ನಿಷ್ಪ್ರಯೋಜಕ
10. ಹಗಲು 12. ಲಿಕತ
14. ಅರಸಂ 17. ಒಡೆಯ
19. ಗಾಳಿಗೋಪುರ
20. ವದಂತಿ 22. ತೆರಿಗೆ
24. ಬಿರಡೆ

ಮೇಲಿಂದ ಕೆಳಕ್ಕೆ
1. ಗಂಟು 3. ಸುಜಿಯೋನಿ
4. ಅಜ 5. ಕುಕಹ 6. ಕುನಿಲು
7. ನಕಲಿ 8. ರುದಿತ 11. ಗಟಾರ 13. ಕವಡೆ 14. ಅಭಾವ
15. ಸಂಗಾತಿ 16. ಅಗೋಚರ
17. ಒರತೆ 18. ಯಳೆಗೆ
21. ದಂತ 23. ರಿಪು

ಏಕಲವ್ಯನ ಶ್ರದ್ಧೆಗೆ ಒಲಿದ ಬಿಲ್ವಿದ್ಯೆ

ಒಂದೊಳ್ಳೆ ಮಾತು

ರೂಪಾ ಗುರುರಾಜ್
rgururaj628@gmail.com

ಒಂದೊಳ್ಳೆ ಮಾತು Vishwavani TV Special ಯೂಟ್ಯೂಬ್ ಚಾನೆಲ್‌ನಲ್ಲಿ

ಮಹಾಭಾರತದಲ್ಲಿ ಏಕಲವ್ಯನನ್ನು ನಿಷಾದ ರಾಜಕುಮಾರ ಅಂತ ಹೆಸರಿಸಿದ್ದಾರೆ. ಒಮ್ಮೆ ಏಕಲವ್ಯನು ಬಿಲ್ವಿದ್ಯೆಯನ್ನು ಕಲಿಯುವ ಹಂಬಲದಿಂದ ದ್ರೋಣಾಚಾರ್ಯರ ಬಳಿಗೆ ಬರುತ್ತಾನೆ. ಆದರೆ ತಮ್ಮ ಮೆಚ್ಚಿನ ಶಿಷ್ಯ ಅರ್ಜುನನನ್ನು ಜಗತ್ತಿನ ಶ್ರೇಷ್ಠ ಬಿಲ್ಲುಗಾರನನ್ನಾಗಿ ಮಾಡುವ ಪಣ ತೊಟ್ಟಿದ್ದ ದ್ರೋಣರು, ಕ್ಷತ್ರಿಯರಲ್ಲದವರಿಗೆ ಬಿಲ್ವಿದ್ಯೆ ಹೇಳಿಕೊಡಲು ಇಚ್ಛಿಸದೆ, ಏಕಲವ್ಯನನ್ನು ಶಿಷ್ಯನಾಗಿ ಸ್ವೀಕರಿಸಲು ನಿರಾಕರಿಸುತ್ತಾರೆ.

ನಿರಾಶನಾಗದ ಏಕಲವ್ಯನು, ದಿನವೂ ದೂರದಲ್ಲಿ ನಿಂತು ದ್ರೋಣಾಚಾರ್ಯರು ಕೌರವರಿಗೆ, ಪಾಂಡವರಿಗೆ ಹೇಳಿಕೊಡುತ್ತಿದ್ದ ವಿದ್ಯೆಯನ್ನು ಮನನ ಮಾಡಿಕೊಂಡು, ಕಾಡಿಗೆ ಮರಳಿ ದ್ರೋಣರ ಮಣ್ಣಿನ ಮೂರ್ತಿಯನ್ನು ಮಾಡಿ ಅವರನ್ನೇ ತನ್ನ ಮಾನಸ ಗುರುವೆಂದು ನಂಬಿ ಬಿಲ್ವಿದ್ಯೆಯನ್ನು ಸಾಧಿಸಿಕೊಳ್ಳುತ್ತಾನೆ.

ನಂತರ ತನ್ನ ಇಚ್ಛಾಶಕ್ತಿಯ ಬಲದಿಂದಲೇ ಏಕಲವ್ಯನು ಅರ್ಜುನನ ಸಮಾನವಾಗಿ ಕೌಶಲ್ಯವನ್ನು ಹೊಂದುತ್ತಾನೆ. ಒಮ್ಮೆ ದ್ರೋಣಾಚಾರ್ಯರು ತಮ್ಮ ಪ್ರಿಯ ಶಿಷ್ಯ ಅರ್ಜುನನೊಂದಿಗೆ ಕಾಡಿನ ವೀಕ್ಷಣೆಗೆ ಬಂದಿರುತ್ತಾರೆ. ಅದೇ ವೇಳೆ ದೂರದಲ್ಲಿ ನಾಯಿಯೊಂದು ಬೊಗಳುತ್ತ ಬರುತ್ತದೆ. ಶಬ್ದವೇದಿ ವಿದ್ಯೆಯಲ್ಲಿ ಪಾರಂಗತನಾಗಿದ್ದ ಅರ್ಜುನ ತಾನು ಬಾಣ ಪ್ರಯೋಗ ಮಾಡಿ ನಾಯಿಯ ಬೊಗಳುವಿಕೆಯನ್ನು ನಿಲ್ಲಿಸಲು ಯೋಚಿಸುತ್ತಾನೆ. ಆದರೆ ಅಷ್ಟರಲ್ಲಿ ಆ ನಾಯಿಯ ಬೊಗಳುವಿಕೆ ನಿಂತು ಹೋಗುತ್ತದೆ. ಮುಂದೆ ಸಾಗಿ ಪರೀಕ್ಷಿಸಿದಾಗ ಯಾರೋ ಶಬ್ದವೇದಿ ವಿದ್ಯೆಯಲ್ಲಿ ನಿಪುಣರಾದವರು ಮೊದಲೇ ಅದರ ಬಾಯಿಗೆ ಬಾಣಗಳನ್ನು ತುಂಬಿ ಬೊಗಳುವಿಕೆಯನ್ನು ನಿಲ್ಲಿಸಿರುತ್ತಾರೆ. ಇದರಿಂದ ಚಕಿತರಾದ ದ್ರೋಣಾಚಾರ್ಯರು ಮತ್ತು ಅರ್ಜುನ ಬಾಣ ಹೂಡಿದ ವ್ಯಕ್ತಿಯನ್ನು ಹುಡುಕಿಕೊಂಡು ಸಾಗಿದಾಗ ಏಕಲವ್ಯನನ್ನು ಸಂಧಿಸುತ್ತಾರೆ.

ಏಕಲವ್ಯ ಅಭ್ಯಾಸದಲ್ಲಿ ನಿರತನಾಗಿದ್ದಾಗ ನಾಯಿ ಬೊಗಳುತ್ತಾ ತನ್ನ ಏಕಾಗ್ರತೆಗೆ ಭಂಗ ತಂದಾಗ ಅದರ ಕಡೆ ನೋಡದೆ ಬಾಣಗಳನ್ನು ಬಿಟ್ಟು ಅದನ್ನು ಸುಮ್ಮನಾಗಿಸಿರುತ್ತಾನೆ. ಅರ್ಜುನ ದ್ರೋಣರು ಅವನನ್ನು ಹುಡುಕಿಕೊಂಡು ಬಂದಾಗ ದ್ರೋಣರನ್ನು ನೋಡಿ, ಅವರೇ ಅವನ ಮಾನಸ ಗುರುಗಳು ಎಂದು ಭಕ್ತಿಯಿಂದ ನಮಸ್ಕರಿಸುತ್ತಾನೆ.

ಇದರಿಂದ ದ್ರೋಣರಿಗೆ ಕಸಿಬಿಸಿಯಾಗುತ್ತದೆ. ಅಜ್ಜಿ ನನಗೆ ಕೊಟ್ಟ ಮಾತು ಉಳಿಸಿಕೊಳ್ಳದಂತಾಗುತ್ತದೆ ಎಂದು ಅವರಿಗೆ ಚಿಂತೆಯಾಗುತ್ತದೆ. ಇತ್ತ ಅರ್ಜುನನಿಗೆ ದ್ರೋಣರ ಮೇಲೆ ಅಸಹನೆ, ಕೋಪ ಉಕ್ಕುತ್ತದೆ. ಇದನ್ನು ಗಮನಿಸಿದ ದ್ರೋಣರು ಏಕಲವ್ಯನಿಗೆ ನಾನು ನಿನ್ನ ಮಾನಸ ಗುರು ಎಂದ ಮೇಲೆ ನೀನು ನನಗೆ ಗುರು ದಕ್ಷಿಣೆಯನ್ನು ನೀಡಬೇಕು ಎನ್ನುತ್ತಾರೆ. ಸಂತೋಷದಿಂದ ಏಕಲವ್ಯ ಒಪ್ಪಿಕೊಂಡಾಗ, ಅರ್ಜುನನನ್ನು ಸಂತೈಸಲು ಏಕಲವ್ಯನ ಹೆಬ್ಬೆಟ್ಟನ್ನೇ ಗುರುದಕ್ಷಿಣೆಯಾಗಿ ಕೇಳುತ್ತಾರೆ. ಒಂದು ಕ್ಷಣವು ಯೋಚಿಸದ ಈಗಲವ್ಯ ಅದನ್ನು ಕತ್ತರಿಸಿ ಅವರ ಮುಂದೆ ಗುರುದಕ್ಷಿಣೆಯಾಗಿ ಇಟ್ಟುಬಿಡುತ್ತಾನೆ.

ನಂತರದ ದಿನಗಳಲ್ಲಿ ಏಕಲವ್ಯ ಮತ್ತೆ ಬಾಣ ಪ್ರಯೋಗಿಸುವುದನ್ನು ಕಲಿತು ಸವ್ಯಸಾಚಿ ಎನಿಸಿಕೊಳ್ಳುತ್ತಾನೆ. ಕುರುಕ್ಷೇತ್ರ ಯುದ್ಧದ ಸಮಯದಲ್ಲಿ ಆತ ಕೌರವರ ಪಕ್ಷ ಸೇರಿ ಪಾಂಡವರೊಂದಿಗೆ ಹೋರಾಟ ಮಾಡುತ್ತಾ ಹತನಾಗುತ್ತಾನೆ. ಅದೇನೇ ಇರಲಿ ಗುರುಭಕ್ತಿಗೆ ಮಾತ್ರ ಅವನನ್ನು ಇಂದಿಗೂ ನೆನೆಯಲಾಗುತ್ತದೆ. ಅರ್ಜುನನಷ್ಟೇ ಬಿಲ್ವಿದ್ಯೆಯಲ್ಲಿ ಅವನೂ ಸಮರ್ಥ ಎನ್ನುವುದರಲ್ಲಿ ಎರಡು ಮಾತಿಲ್ಲ.

ಇಂತಹ ಗುರು ಶಿಷ್ಯ ಪರಂಪರೆಯ ಅನೇಕ ಕಥೆಗಳು ನಮ್ಮ ಪುರಾಣದಲ್ಲಿ ನಮಗೆ ನೋಡಲು ಸಿಗುತ್ತವೆ. ಕಲಿಯುವ ಆಸಕ್ತಿ ಮತ್ತು ಶ್ರದ್ಧೆ ಇದ್ದರೆ ಎಂತಹವರು ಕೂಡ ವಿದ್ಯೆಯನ್ನು ಕಲಿಯಬಹುದು ಅದರಲ್ಲಿ ಪರಿಣಿತಿ ಹೊಂದಬಹುದು ಎನ್ನುವುದಕ್ಕೆ ಏಕಲವ್ಯನ ಕಥೆ ಒಂದು ದೊಡ್ಡ ನಿದರ್ಶನ. ನಮ್ಮ ಮಕ್ಕಳಿಗೂ ಕೂಡ ಇಂತಹ ಕಥೆಗಳನ್ನು ಹೇಳುತ್ತಾ ಶಾಲೆಯಲ್ಲಿ ಅವರು ವಿದ್ಯಾಭ್ಯಾಸದ ಕಡೆ ಗಮನ ನೀಡುವಂತೆ, ಗುರುಗಳ ಬಗ್ಗೆ ಹಗುರವಾಗಿ ಮಾತನಾಡದಂತೆ ಬೆಳೆಸಬೇಕು. ತಂದೆ ತಾಯಿಗಳಾಗಿ ನಾವು ಈ ಪರಿಪಾಠವನ್ನು ಇರಿಸಿಕೊಂಡಾಗ ಮಕ್ಕಳು ಕೂಡ ನಮ್ಮನ್ನು ನೋಡಿ ಕಲಿಯುತ್ತಾರೆ. ಗುರುವಿನ ಗುಲಾಮನಾಗುವ ತನಕ ದೊರೆಯದಣ್ಣ ಮುಕುತಿ

ಕೊನೆಯಾಗುವ ಮೊದಲೇ ಪ್ರಾರಂಭಿಸು

ಮರಣ ಕಾಲದಲ್ಲಿ ಸ್ವಯಂ ಶಿಸ್ತು ಉಳ್ಳ ವ್ಯಕ್ತಿ ಕೃಷ್ಣನನ್ನು ತಿಳಿಯುವುದು ಹೇಗೆ ಎಂದು ಅರ್ಜುನ ತಿಳಿಯ ಬಯಸಿದ್ದಾನೆ. (8.2) ಅದಕ್ಕೆ ಕೃಷ್ಣ ಉತ್ತರಿಸುತ್ತಾನೆ - ದೇಹ ತ್ಯಾಗ ಮಾಡುವಾಗ ಯಾವ ವ್ಯಕ್ತಿ ಕೇವಲ ನನ್ನನ್ನು ಮಾತ್ರ ನೆನೆಸುತ್ತಾನೋ ಅಂತವನು ನನ್ನನ್ನು ಸೇರುತ್ತಾನೆ, ಇದು ಸಂಶಯಾತೀತವಾದ ಸತ್ಯವಾಗಿದೆ (8.5)

ಮರಣ ಕಾಲದಲ್ಲಿಯಾದರೂ ಅವನನ್ನು ನೆನೆಸಿದರೆ ಅವನನ್ನು ಪಡೆಯಲು ಸಾಧ್ಯ ಎಂಬುದು ಅವನ ನಿಶ್ಚಿತ ಭರವಸೆ. ಜೀವನ ದುದ್ದಕ್ಕೂ ಒಬ್ಬನು ಅಪರಾಧ ಮಾಡಿದರೆ, ದಾರಿ ತಪ್ಪಿದ ಮೂರ್ಖನಾಗಿದ್ದರೆ, ರಾಕ್ಷಸ ಮಾರ್ಗ ಹಿಡಿದಿದ್ದರೆ, ಆತ್ಮ ವಂಚಕನಾಗಿದ್ದರೆ, ಭ್ರಮಿತನಾಗಿದ್ದರೆ, ಸಂತೋಷ ಹಾಗೂ ಆಸೆ ಗಳನ್ನು ಬೆನ್ನುತ್ತಿದ್ದರೆ, ಕೊನೆಯಲ್ಲಿ ಪರಮಾತ್ಮನನ್ನು ನೆನೆದರೆ ಸಾಕು ಎಂಬ ಅರ್ಥವನ್ನು ಈ ಶ್ಲೋಕ ಕೊಡುತ್ತದೆ. ಕೃಷ್ಣ ತಕ್ಷಣ ಈ ವಿಚಾರವನ್ನು ದೂರ ಮಾಡಿ ಹೇಳುತ್ತಾನೆ-ಯಾರೇ ಆದರೂ ಕೊನೆಯ ಕ್ಷಣದಲ್ಲಿ ದೇಹ ಬಿಡುವಾಗ ಏನನ್ನು ಯೋಚಿಸುತ್ತಾರೋ ಅವರು ಅಲ್ಲಿಗೆ ಹೋಗುತ್ತಾರೆ ಯಾಕೆಂದರೆ ಅವರು ಜೀವಿತಕಾಲದಲ್ಲಿ ಅದಕ್ಕಾಗಿಯೇ ಪ್ರಯತ್ನಿಸುತ್ತಿರುತ್ತಾರೆ (8.6)

ಮೊದಲನೆಯದಾಗಿ ಯಾರೂ ಮರಣ ಕಾಲವನ್ನು ತಿಳಿದಿರಲು ಸಾಧ್ಯವಿಲ್ಲ. ಹಾಗೂ ಯಾರೂ ಅದರ ಬಗ್ಗೆ ಭರವಸೆ ಕೊಡಲು ಸಾಧ್ಯವಿಲ್ಲ. ಮರಣ ಕಾಲವು ಎಷ್ಟು ಅನಿಶ್ಚಿತವಾಗಿರುತ್ತದೆ ಎಂದರೆ ಅದನ್ನು ಅವಲಂಬಿಸಿ ಪರಮಾತ್ಮನನ್ನು ಸ್ಮರಿಸುವ ಯಾವುದೇ ಯೋಜನೆಯು ವಿಫಲವಾಗುತ್ತದೆ. ಎರಡನೆಯದಾಗಿ, ಸಾಮಾನ್ಯವಾದ ಪ್ರವೃತ್ತಿಯೆಂದರೆ ಬದಲಾವಣೆಯನ್ನು ವಿರೋಧಿಸುವುದು. ಜೀವಿಸುವ ಕೆಟ್ಟ ಮಾರ್ಗದಿಂದ ಯೋಗಿ ಮಾರ್ಗದ ಕಡೆಗೆ ಪರಿವರ್ತನೆ ಒಂದು ದೊಡ್ಡ ಜಿಗಿತವಾಗಿದೆ. ಅದಕ್ಕೆ ಕಾಲ ಮತ್ತು ಪ್ರಯತ್ನ ಬೇಕು. ಇದು ಕೇವಲ ಮರಣ ಕಾಲದಲ್ಲಿ ಆಗುವಂತಹದಲ್ಲ. ಯಾಕೆಂದರೆ ಆಸ್ತಿ ಮತ್ತು ಜನರೊಂದಿಗಿನ ನಂಟು ಒಂದು ಕ್ಷಣದಲ್ಲಿ

ನಿತ್ಯ ಜೀವನದಲ್ಲಿ ಭಗವದ್ಗೀತೆ



ಕೆ.ಶಿವಪ್ರಸಾದ್
ಹಿರಿಯ ಐಎಎಸ್ ಅಧಿಕಾರಿ

ಹೋಗುವಂತಹದ್ದಲ್ಲ. ಮೂರನೆಯದಾಗಿ, ವ್ಯಕ್ತಿ ವೃದ್ಧಾಪ್ಯ ತಲುಪಿದಾಗ ಅವನಲ್ಲಿ ಸ್ಪಷ್ಟತೆಗಿಂತ ಗೊಂದಲವೇ ಹೆಚ್ಚಾಗಿರುತ್ತದೆ. ಕೊನೆವರೆಗೆ ಕಾದರೂ ಪ್ರಯೋಜನವಿಲ್ಲ. ಇದರ ಅರ್ಥವೆಂದರೆ ಯಾರೇ ಆದರೂ ಪರಮಾತ್ಮನೆಡೆಗೆ ಸಾಗುವ ಪ್ರಯಾಣವನ್ನು ಜೀವನದಲ್ಲಿ ಮುಂಚೆಯೇ ಪ್ರಾರಂಭಿಸಬೇಕು. ಅನಿಶ್ಚಿತ ಅಂತ್ಯದವರೆಗೆ ಕಾಯಬಾರದು. ಜೀವನದ ನಂತರದ ಹಂತದಲ್ಲಿ ವಿಶ್ರಾಂತಿ ಪಡೆಯಲು ನಿವೃತ್ತಿ ಯೋಜನೆಯೊಂದಿಗೆ ಇಂದು ಕಠಿಣ ಶ್ರಮಪಡುವ ಬದಲು, ಜೀವನದ ಪ್ರತಿಯೊಂದು ಹಂತದಲ್ಲಿಯೂ ಶ್ರಮ ಜೀವನದ ಸಮತೋಲನ ಇಟ್ಟುಕೊಂಡಂತಿರುತ್ತದೆ.

ಅಂಕ ಪಟ್ಟಿ

	ಪಂದ್ಯ	ಗೆಲುವು	ಸೋಲು	ಅಂಕ
ಬೆಂಗಳೂರು	12	08	03	17
ಪಂಜಾಬ್	12	08	03	17
ಗುಜರಾತ್	11	08	03	16
ಮುಂಬೈ	12	07	05	14
ಡೆಲ್ಲಿ	11	06	04	13
ಕೋಲ್ಕತ್ತಾ	13	05	06	12
ಲಖನೌ	11	05	06	10
ಹೈದರಾಬಾದ್	11	03	07	07
ರಾಜಸ್ಥಾನ್	13	03	10	06
ಚೆನ್ನೈ	12	03	09	06

ಇಂದಿನ ಪಂದ್ಯ

7.30 PM

ಲಖನೌ ಸೂಪರ್ ಜೈಂಟ್ಸ್

VS

ಸನ್ ರೈಸರ್ಸ್ ಹೈದರಾಬಾದ್

ಏಕನಾ ಕ್ರಿಕೆಟ್ ಸ್ಟೇಡಿಯಂ, ಲಖನೌ

ಈ ಸಲ ಆರ್‌ಸಿಬಿಯ ಫೈನಲ್ ವೀಕ್ಷಿಸುವಾಸೆ

'ಈ ಐಪಿಎಲ್‌ನಲ್ಲಿ ಒಂದು ವೇಳೆ ಆರ್‌ಸಿಬಿ ತಂಡ ಫೈನಲ್‌ಗೆ ಪ್ರವೇಶ ಪಡೆದರೆ, ಸ್ಟೇಡಿಯಂಗೆ ಬಂದು ಖುದ್ದಾಗಿ ಆ ಪಂದ್ಯ ವೀಕ್ಷಣೆ ಮಾಡುವಾಸೆ ನನ್ನಲ್ಲಿದೆ. ಈ ಹಿಂದೆ ಆರ್‌ಸಿಬಿಯಲ್ಲಿದ್ದಾಗ ಐಪಿಎಲ್ ಕಪ್ ಗೆಲ್ಲಲು ನಾನೂ ಬಹಳಷ್ಟು ಯತ್ನಿಸಿದ್ದೆ. ವಿರಾಟ್ ಕೊಹ್ಲಿ ಐಪಿಎಲ್ ಟ್ರೋಫಿಯನ್ನು ಎತ್ತುವುದಕ್ಕಿಂತ ಹೆಚ್ಚಿನ ಸಂತೋಷ ನನಗೆ ಬೇರೊಂದಿಲ್ಲ. ವಿರಾಟ್ ನನ್ನ ಓರ್ವ ಸಹೋದರ, ತುಂಬಾ ಒಳ್ಳೆಯವರು ಮತ್ತು ಸ್ಪರ್ಧಾತ್ಮಕ ಮನೋಭಾವ ಉಳ್ಳವರು. ನನ್ನಂತೆಯೇ ಮತ್ತು ನಾನು ಮೆಚ್ಚುವ ಗುಣವನ್ನೊಂದಿರುವ ಕಾರಣ ವಿರಾಟ್ ಕೊಹ್ಲಿ ಬಗ್ಗೆ ನನ್ನಲ್ಲಿ ತುಂಬಾನೇ ಆತ್ಮೀಯತೆ.

ಎಬಿ ಡಿ ವಿಲಿಯರ್ಸ್, ಆರ್‌ಸಿಬಿ ಮಾಜಿ ಆಟಗಾರ



ಸ್ಕೋರ್ ಬೋರ್ಡ್

ಪಂಜಾಬ್ ಕಿಂಗ್ಸ್ 219/5 (20 ಓವರ್)

ಪಂಜಾಬ್ ಕಿಂಗ್ಸ್		ರನ್	ಎಸೆತ
ಪ್ರಿಯಾಂಶ್	ಕಾಟ್ ಹೆಟ್ಮೆಯರ್, ಬೌಲರ್ ದೇಶಪಾಂಡೆ	9	7
ಪ್ರಭ್‌ಸಿಮ್ರಾನ್	ಕಾಟ್ ಸ್ಯಾಮ್ಸನ್, ಬೌಲರ್ ದೇಶಪಾಂಡೆ	21	10
ಎಂ. ಓವನ್	ಕಾಟ್ ಸ್ಯಾಮ್ಸನ್, ಬೌಲರ್ ಮಫಕಾ	0	2
ಎನ್. ವಧೇರಾ	ಕಾಟ್ ಹೆಟ್ಮೆಯರ್, ಬೌಲರ್ ಮಧ್ವಲ್	70	37
ಶ್ರೇಯಸ್	ಕಾಟ್ ಜೈಸ್ವಾಲ್, ಬೌಲರ್ ಪರಾಗ್	30	25
ಶಶಾಂಕ್	ನಾಟೌಟ್	59	30
ಒಮರ್ಜಾಯ್	ನಾಟೌಟ್	21	9

ರಾಜಸ್ಥಾನ್ ರಾಯಲ್ಸ್	ಓವರ್	ರನ್	ವಿಕೆಟ್
ಫಾರೂಕಿ	3	39	0
ದೇಶಪಾಂಡೆ	4	37	2
ಕೆ. ಮಫಕಾ	3	32	1
ಪರಾಗ್	3	26	1
ವಿ. ಹಸರಂಗ	3	33	0
ಎ. ಮಧ್ವಲ್	4	48	1

ಪಂಜಾಬ್ ಕಿಂಗ್ಸ್	ಓವರ್	ರನ್	ವಿಕೆಟ್
ಅರ್ಷದೀಪ್	4	60	0
ಎಂ.ಜಾನ್ಸೆನ್	3	41	2
ಬಾರ್ಟ್ಲೆಟ್	1	12	0
ಎಚ್. ಬ್ರಾರ್	4	22	3
ಚಾಹಲ್	4	30	0
ಒಮರ್ಜೈ	4	44	2

ರಾಜಸ್ಥಾನ್ ರಾಯಲ್ಸ್ 209/7 (20 ಓವರ್)

ರಾಜಸ್ಥಾನ್ ರಾಯಲ್ಸ್		ರನ್	ಎಸೆತ
ಜೈಸ್ವಾಲ್	ಕಾಟ್ ಓವನ್, ಬೌಲರ್ ಬ್ರಾರ್	50	25
ಸೂರ್ಯವಂಶಿ	ಕಾಟ್: ಬಾರ್ಟ್ಲೆಟ್, ಬೌಲರ್ ಬ್ರಾರ್	40	15
ಸಂಜು. ಎಸ್	ಕಾಟ್ ಜಾನ್ಸೆನ್, ಬೌಲರ್ ಒಮರ್ಜೈ	20	16
ಆರ್. ಪರಾಗ್	ಬೌಲ್ಡ್ ಬ್ರಾರ್	13	11
ಧ್ರುವ್ ಜುರೆಲ್	ಕಾಟ್ ಓವನ್, ಬೌಲರ್ ಜಾನ್ಸೆನ್	53	31
ಹೆಟ್ಮೆಯರ್	ಕಾಟ್ ಬಾರ್ಟ್ಲೆಟ್, ಬೌಲರ್ ಒಮರ್ಜೈ	11	12
ಶುಭಂ ದುಬೆ	ನಾಟೌಟ್	7	7
ಹಸರಂಗ	ಕಾಟ್ ಪ್ರಭ್‌ಸಿಮ್ರಾನ್, ಬೌಲರ್ ಜಾನ್ಸೆನ್	0	1
ಕೆ.ಮಫಕಾ	ನಾಟೌಟ್	8	2

ಮತ್ತೊಮ್ಮೆ ಪಂದ್ಯ ಕೈಚೆಲ್ಲಿದ ರಾಜಸ್ಥಾನ | ಪಂಜಾಬ್ ಪರ ಮಿಂಚಿದ ವಧೇರಾ, ಶಶಾಂಕ್

ರಾಯಲ್ಸ್ ವಿರುದ್ಧ ಕಿಂಗ್ಸ್‌ಗೆ ಜಯ

ಜೈಪುರ: ಮತ್ತೊಮ್ಮೆ ಕಳಪೆ ಆಟ ಮುಂದುವರೆಸಿದ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ್ ರಾಯಲ್ಸ್ ತಂಡವು ಭಾನುವಾರ ತನ್ನ ತವರಿನಲ್ಲಿ ನಡೆದ ಐಪಿಎಲ್ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು 10 ರನ್‌ಗಳ ಸೋಲಿಗೆ ಶರಣಾಯಿತು.

ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಪಂಜಾಬ್ ತಂಡವು ನೇಹಲ್ ವಧೇರಾ ಮತ್ತು ಶಶಾಂಕ್ ಸಿಂಗ್‌ರವರ ಅರ್ಧ ಶತಕಗಳ ನೆರವಿನಿಂದ 219 ರನ್‌ಗಳನ್ನು ಪೇರಿಸಿತು. 220 ರನ್‌ಗಳ ಗೆಲುವಿನ ಗುರಿ ಪಡೆದ ರಾಜಸ್ಥಾನ್ ರಾಯಲ್ಸ್ ತಂಡ ಆರಂಭದಲ್ಲಿ ಸ್ಫೋಟಕ ಬ್ಯಾಟಿಂಗ್ ನಡೆಸಿದ್ದರೂ, ಕೊನೆಗೆ 209 ರನ್‌ಗಳನ್ನಷ್ಟೇ ಗಳಿಸಲು ಸಾಧ್ಯವಾಯಿತು.

ಪಂಜಾಬ್‌ಗೆ ಆರಂಭಿಕ ಆಘಾತ: ಪಂಜಾಬ್ ತಂಡದ ಆರಂಭ ಅಷ್ಟೇನೂ ಉತ್ತಮವಾಗಿರಲಿಲ್ಲ. ಆರಂಭಿಕ ಬ್ಯಾಟ್ಸ್ ಮನ್ ಪ್ರಿಯಾಂಶು ಆರ್ಯ 7 ಬಾಲ್‌ಗಳನ್ನು ಎದುರಿಸಿ 9 ರನ್ ಗಳಿಸಿದರು. ಆ ಬಳಿಕ ಮಿಚೆಲ್ ಓವನ್ 2 ಬಾಲ್‌ಗಳನ್ನು ಎದುರಿಸಿ ಯಾವುದೇ ರನ್ ಗಳಿಸದೆ ಪೆವಿಲಿಯನ್ ಸೇರಿದರು. 10 ಬಾಲ್‌ಗಳಲ್ಲಿ 21 ರನ್ ಗಳಿಸಿದ್ದ ಪ್ರಭ್‌ಸಿಮ್ರಾನ್ ತುಷಾರ್ ದೇಶಪಾಂಡೆ ಬೌಲಿಂಗ್‌ನಲ್ಲಿ ತಮ್ಮ ವಿಕೆಟ್ ಒಪ್ಪಿಸಿದರು. ಹೀಗೆ ಕೇವಲ 34 ರನ್‌ಗಳಿಗೆ ಮೂರು ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿದ ವೇಳೆ ನೆಹಾಲ್ ವಧೇರಾ ಪಂಜಾಬ್ ತಂಡದ ಇನ್ನಿಂಗ್ಸ್ ಜವಾಬ್ದಾರಿಯನ್ನು ವಹಿಸಿಕೊಂಡು 25 ಎಸೆತಗಳಲ್ಲಿ ಅರ್ಧಶತಕ ಗಳಿಸಿದರು. ಅವರು ಔಟಾದ ನಂತರ, ಶಶಾಂಕ್ ಸಿಂಗ್ ಆಕ್ರಮಣಕಾರಿಯಾಗಿ ಬ್ಯಾಟಿಂಗ್ ಪ್ರದರ್ಶನ ತೋರಿಸಿ, ತಂಡವನ್ನು 200 ರನ್‌ಗಳ ಗಡಿ ದಾಟಿಸಿದರು.

ವಧೇರಾ ನಾಲ್ಕನೇ ವಿಕೆಟ್‌ಗೆ ನಾಯಕ ಶ್ರೇಯಸ್ ಅಯ್ಯರ್ ಅವರೊಂದಿಗೆ 67 ರನ್‌ಗಳ ಜತೆಯಾಟಯನ್ನು ಪ್ರದರ್ಶಿಸಿದರು. 37 ಎಸೆತಗಳಲ್ಲಿ ಐದು ಬೌಂಡರಿ ಮತ್ತು ಐದು ಸಿಕ್ಸರ್‌ಗಳ ಸಹಾಯದಿಂದ ಅವರು 70 ರನ್ ಗಳಿಸಿ ಔಟಾದರು. ಕೊನೆಯ ಕೆಲವು ಓವರ್‌ಗಳಲ್ಲಿ ಶಶಾಂಕ್ ಸಿಂಗ್-ಅಜ್ಮತುಲ್ಲಾ ಒಮರ್ಜಾಯ್ ಆರನೇ ವಿಕೆಟ್‌ಗೆ 24 ಎಸೆತಗಳಲ್ಲಿ 60 ರನ್‌ಗಳನ್ನು ಸೇರಿಸಿ ಪಂಜಾಬ್ ತಂಡವನ್ನು ಉತ್ತಮ ಸ್ಥಿತಿಗೆ ತಂದರು. ಶಶಾಂಕ್ 30 ಎಸೆತಗಳಲ್ಲಿ ಐದು ಬೌಂಡರಿ ಮತ್ತು ಮೂರು ಸಿಕ್ಸರ್‌ಗಳೊಂದಿಗೆ ಅಜೇಯ 59 ರನ್ ಗಳಿಸಿದರು. ಪಂಜಾಬ್ ತಂಡದ ಒಮರ್ಜಾಯ್ 9 ಎಸೆತಗಳಲ್ಲಿ ಮೂರು ಬೌಂಡರಿ ಮತ್ತು ಒಂದು ಸಿಕ್ಸರ್‌ನೊಂದಿಗೆ 21 ರನ್ ಗಳಿಸಿ ಅಜೇಯರಾಗುಳಿದರು. ಶ್ರೇಯಸ್ ಅಯ್ಯರ್ 25 ಎಸೆತಗಳಲ್ಲಿ 5 ಬೌಂಡರಿಗಳೊಂದಿಗೆ 30 ರನ್ ಗಳಿಸಿ ತಂಡಕ್ಕೆ ಆಸರೆಯಾದರು.

ರಾಜಸ್ಥಾನ ಪರ ತುಷಾರ್ ದೇಶಪಾಂಡೆ ಎರಡು ವಿಕೆಟ್ ಪಡೆದರೆ, ಕೆ. ಮಫಕಾ, ರಿಯಾನ್ ಪರಾಗ್ ಮತ್ತು ಆಕಾಶ್ ಮಧ್ವಾಲ್ ತಲಾ ಒಂದು ವಿಕೆಟ್ ಪಡೆದರು.

ಜೈಸ್ವಾಲ್- ವೈಭವ್ ಸೂಪರ್ ಬ್ಯಾಟಿಂಗ್: ಗುರಿ ಬೆನ್ನಟ್ಟಿದ ರಾಜಸ್ಥಾನಕ್ಕೆ ಯಶಸ್ವಿ ಜೈಸ್ವಾಲ್ ಮತ್ತು ವೈಭವ್ ಸೂರ್ಯವಂಶಿ ಉತ್ತಮ ಆರಂಭವನ್ನು ನೀಡಿದರು. ಕೇವಲ 4.5 ಓವರ್‌ಗಳಲ್ಲಿ ಮೊದಲ ವಿಕೆಟ್‌ಗೆ ಅವರಿಬ್ಬರೂ 76 ರನ್ ಸೇರಿಸಿದರು. 15 ಎಸೆತಗಳಲ್ಲಿ ನಾಲ್ಕು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳ ಸಹಾಯದಿಂದ 40 ರನ್ ಗಳಿಸಿ, ವೈಭವ್ ಔಟಾದರು. ಅದಾದ ನಂತರವೂ ಅಬ್ಬರದ ಬ್ಯಾಟಿಂಗ್ ಮುಂದುವರೆಸಿದ ಜೈಸ್ವಾಲ್ 24 ಎಸೆತಗಳಲ್ಲಿ ತಮ್ಮ ಅರ್ಧಶತಕವನ್ನು ಪೂರೈಸಿದರು. ಅರ್ಧಶತಕ ಗಳಿಸಿದ ಕೂಡಲೇ ಅವರು ತಮ್ಮ ವಿಕೆಟ್ ಕಳೆದುಕೊಂಡರು.

ಕೈಕೊಟ್ಟ ಮಧ್ಯಮ ಕ್ರಮಾಂಕ: ಈ ಇಬ್ಬರು ಬ್ಯಾಟ್ಸ್‌ಮನ್‌ಗಳ ವಿಕೆಟ್ ಪತನದ ನಂತರ ರಾಜಸ್ಥಾನ ತಂಡವು ಲಯ ಕಳೆದುಕೊಂಡಿದಲ್ಲದೆ ನಿಯಮಿತ ಅಂತರದಲ್ಲಿ ವಿಕೆಟ್‌ಗಳನ್ನು ಕಳೆದುಕೊಂಡಿತು. ನಾಯಕ ಸಂಜು ಸ್ಯಾಮ್ಸನ್ 20 ರನ್ ಗಳಿಸಿ ಔಟಾದರೆ, ರಿಯಾನ್ ಪರಾಗ್ 13 ರನ್ ಗಳಿಸಿ ಪೆವಿಲಿಯನ್ ಸೇರಿದರು. ಕೊನೆಯಲ್ಲಿ ಏಕಾಂಗಿ ಹೋರಾಟ ನಡೆಸಿದ ಧ್ರುವ್ ಜುರೆಲ್ ಅರ್ಧಶತಕ ಬಾರಿಸಿದರಾದರೂ, ಮಧ್ಯಮ ಓವರ್‌ಗಳಲ್ಲಿ ಬ್ಯಾಟರ್‌ಗಳ ನಿಧಾನಗತಿಯ ಬ್ಯಾಟಿಂಗ್ ರಾಜಸ್ಥಾನ್ ಸೋಲಿಗೆ ಕಾರಣವಾಯಿತು. ರಾಜಸ್ಥಾನಕ್ಕೆ ಕೊನೆಯ ಓವರ್‌ನಲ್ಲಿ ಪಂದ್ಯ ಗೆಲ್ಲಲು 22 ರನ್‌ಗಳು ಬೇಕಾಗಿದ್ದವು, ಆದರೆ ಮಾರ್ಕೊ ಜಾನ್ಸನ್‌ರವರು ಜುರೆಲ್ ಅವರನ್ನು ಔಟ್ ಮಾಡಿ ರಾಜಸ್ಥಾನ್ ತಂಡದ ಸೋಲನ್ನು ಖಚಿತಪಡಿಸಿದರು. ಜುರೇಲ್ 31 ಎಸೆತಗಳಲ್ಲಿ ಮೂರು ಬೌಂಡರಿ ಮತ್ತು ನಾಲ್ಕು ಸಿಕ್ಸರ್‌ಗಳ ಸಹಾಯದಿಂದ 53 ರನ್ ಗಳಿಸಿದರು. ಪಂಜಾಬ್ ಪರ ಹರ್‌ಪ್ರೀತ್ ಬ್ರಾರ್ ಮೂರು ವಿಕೆಟ್ ಪಡೆದರೆ, ಜಾನ್ಸೆನ್ ಮತ್ತು ಅಜ್ಮತುಲ್ಲಾ ಒಮರ್ಜಾಯ್ ತಲಾ ಎರಡು ವಿಕೆಟ್ ಪಡೆದರು.

ಕೆ.ಎಲ್ ರಾಹುಲ್ ಆಕರ್ಷಕ ಶತಕ | ಗಿಲ್ ಪಡೆಯ ಬೌಲರ್‌ಗಳು ತತ್ತರ

ಗುಜರಾತ್‌ಗೆ 200 ರನ್‌ಗಳ ಗುರಿ

ದೆಹಲಿ: ಭಾನುವಾರ ಇಲ್ಲಿ ನಡೆದ ಐಪಿಎಲ್ ಟೂರ್ನಿಯ ಲೀಗ್ ಪಂದ್ಯದಲ್ಲಿ ಡೆಲ್ಲಿ ಕನ್ನಡಿಗ ಕೆ.ಎಲ್ ರಾಹುಲ್ ಬಾರಿಸಿದ ಆಕರ್ಷಕ ಶತಕದ ನೆರವಿನಿಂದ ಡೆಲ್ಲಿ ತಂಡವು ಗುಜರಾತ್ ಟೈಟನ್ಸ್‌ಗೆ 200 ರನ್‌ಗಳ ಗುರಿ ನೀಡಿತು.

ಇಲ್ಲಿನ ಅರುಣ್ ಜೇಟ್ಲಿ ಕ್ರಿಕೆಟ್ ಮೈದಾನದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 3 ವಿಕೆಟ್ ಕಳೆದುಕೊಂಡು 199 ರನ್‌ಗಳ ಬೃಹತ್ ಮೊತ್ತ ಕಲೆ ಹಾಕಿತು.

ಡೆಲ್ಲಿ ತಂಡದ ಆರಂಭ ಉತ್ತಮವಾಗಿರಲಿಲ್ಲ. ಆರಂಭಿಕ ಆಟಗಾರ ಡುಪ್ಲೆಸಿಸ್ ರನ್ ಗಳಿಸಲು ಪರದಾಡಿದರು. 10 ಎಸೆತಗಳಲ್ಲಿ ಕೇವಲ 5 ರನ್ ಗಳಿಸಿ ಅರ್ಶದ್ ಖಾನ್ ಬೌಲಿಂಗ್‌ನಲ್ಲಿ ಸಿರಾಜ್‌ಗೆ ಕ್ಯಾಚ್ ನೀಡುವ ಮೂಲಕ ಔಟ್ ಆದರು. ಆ ಬಳಿಕ ಬಂದ ಅಭಿಷೇಕ್ ಪೊರೆಲ್ ಜೊತೆ ಸೇರಿದ ಕೆ.ಎಲ್ ರಾಹುಲ್ ತಂಡದ ಮೊತ್ತದ ವೇಗ ಹೆಚ್ಚಿಸಿದರು. ಪೊರೆಲ್ 19 ಬಾಲ್‌ಗಳಲ್ಲಿ 30 ರನ್ ಗಳಿಸಿ ಸಾಯಿ ಕಿಶೋರ್ ಬೌಲಿಂಗ್‌ನಲ್ಲಿ ಜೋಸ್ ಬಟ್ಲರ್‌ಗೆ ಕ್ಯಾಚ್ ಕೊಟ್ಟು ಔಟ್ ಆದರು. ಅವರ ಇನ್ನಿಂಗ್ಸ್‌ನಲ್ಲಿ 3 ಸಿಕ್ಸರ್ ಮತ್ತು 1 ಬೌಂಡರಿ ಇತ್ತು.

ಆ ನಂತರ ಕ್ರೀಸ್‌ಗೆ ಬಂದ ನಾಯಕ ಅಕ್ಷರ್ ಪಟೇಲ್ 16 ಬಾಲ್‌ಗಳಲ್ಲಿ 25 ರನ್ ಗಳಿಸಿದ್ದಾಗ ಪ್ರಸಿದ್ಧ ಕೃಷ್ಣ ಬೌಲಿಂಗ್‌ನಲ್ಲಿ ಸಾಯಿ ಕಿಶೋರ್‌ಗೆ ಕ್ಯಾಚ್ ನೀಡಿ ಪೆವಿಲಿಯನ್ ಸೇರಿದರು. ಅವರ ಇನ್ನಿಂಗ್ಸ್‌ನಲ್ಲಿ 1 ಸಿಕ್ಸರ್ ಮತ್ತು 2 ಬೌಂಡರಿಗಳಿದ್ದವು. ಅವರು ಔಟಾದಾಗ ಡೆಲ್ಲಿ ತಂಡದ ಮೊತ್ತ 3 ವಿಕೆಟ್‌ಗೆ 151 ರನ್‌ಗಳಾಗಿತ್ತು.

ಒಂದೆಡೆ ವಿಕೆಟ್ ಬೀಳುತ್ತಾ ಸಾಗಿದ್ರೂ ಕ್ರೀಸ್ ಕಚ್ಚಿ ನಿಂತಿದ್ದ ಕನ್ನಡಿಗ ಕೆ.ಎಲ್ ರಾಹುಲ್, 65 ಎಸೆತಗಳಲ್ಲಿ ಬರೋಬ್ಬರಿ 112 ರನ್ ಸಿಡಿಸಿ ಮಿಂಚಿದರು. ಅವರ ಇನ್ನಿಂಗ್ಸ್‌ನಲ್ಲಿ 14 ಬೌಂಡರಿ ಹಾಗೂ 4 ಸಿಕ್ಸರ್ ಕೂಡ ಸೇರಿದ್ದವರು. ಕೊನೆಯಲ್ಲಿ ಸ್ಟಬ್ಸ್ ಅಬ್ಬರಿಸಿ, ಸ್ಫೋಟಕ 21 ರನ್ ಸಿಡಿಸಿದರು. ಅಂತಿಮವಾಗಿ ಡೆಲ್ಲಿ ಕ್ಯಾಪಿಟಲ್ಸ್ ನಿಗದಿತ 20 ಓವರ್‌ಗಳಲ್ಲಿ 199 ರನ್ ಕಲೆಹಾಕಿತು.

ಗುಜರಾತ್ ಟೈಟನ್ಸ್ ಪರ ಅರ್ಶದ್ ಖಾನ್ 1, ಪ್ರಸಿದ್ಧ್ ಕೃಷ್ಣ 1 ಹಾಗೂ ಸಾಯಿ ಕಿಶೋರ್ 1 ವಿಕೆಟ್ ಪಡೆದುಕೊಂಡರು.

ಕೆ.ಎಲ್ ರಾಹುಲ್ ದಾಖಲೆ

ಡೆಲ್ಲಿ ಕ್ಯಾಪಿಟಲ್ಸ್ ಹಾಗೂ ಗುಜರಾತ್ ಟೈಟನ್ಸ್ ನಡುವಿನ ಪಂದ್ಯದಲ್ಲಿ ಕನ್ನಡಿಗ ಕೆಎಲ್ ರಾಹುಲ್ ಹೊಸ ದಾಖಲೆಯೊಂದನ್ನು ಬರೆದಿದ್ದಾರೆ. ಅಮೋಘ ಬ್ಯಾಟಿಂಗ್ ಮಾಡುವ ಮೂಲಕ ಟಿ-20 ಪಂದ್ಯದಲ್ಲಿ 8000 ರನ್ ಸಿಡಿಸಿದ ಆಟಗಾರ ಎಂಬ ದಾಖಲೆ ಮಾಡಿದರು. ಇದಕ್ಕೂ ಮೊದಲು ವಿರಾಟ್ ಕೊಹ್ಲಿ ಭಾರತದ ಪರವಾಗಿ 243 ಇನ್ನಿಂಗ್ಸ್‌ಗಳಲ್ಲಿ 8000 ರನ್ ಸಿಡಿಸುವ ಮೂಲಕ ವೇಗವಾಗಿ 8 ಸಾವಿರ ರನ್ ಸಿಡಿಸಿದ ಭಾರತೀಯ ಬ್ಯಾಟರ್ ಎಂಬ ದಾಖಲೆ ಹೊಂದಿದ್ದರು.

ಇಂಗ್ಲೆಂಡ್ ಸರಣಿಗೆ 10 ಕೆ.ಜಿ ತೂಕ ಇಳಿಸಿದ ಸರ್ಫರಾಝ್

ಮುಂಬೈ: ಮುಂದಿನ ಇಂಗ್ಲೆಂಡ್ ಪ್ರವಾಸಕ್ಕಾಗಿ ಭಾರತ ಟೆಸ್ಟ್ ತಂಡದ ಯುವ ಬ್ಯಾಟ್ಸ್‌ಮನ್ ಸರ್ಫರಾಝ್ ಖಾನ್ ಕಠಿಣ ಸಿದ್ಧತೆಯನ್ನು ನಡೆಸುತ್ತಿದ್ದಾರೆ. ಅವರು ತಮ್ಮ ದೇಹದ ತೂಕದಲ್ಲಿ 10 ಕೆ.ಜಿ ತೂಕವನ್ನು ಇಳಿಸಿಕೊಂಡು, ಕಠಿಣ ಆಹಾರ ಪದ್ಧತಿಯನ್ನು ಅನುಸರಿಸುತ್ತಿದ್ದಾರೆ. 2024ರಲ್ಲಿ ಇಂಗ್ಲೆಂಡ್ ವಿರುದ್ಧ ತವರಿನಲ್ಲಿ ಟೆಸ್ಟ್ ಕ್ರಿಕೆಟ್‌ಗೆ ಪದಾರ್ಪಣೆ ಮಾಡಿದ್ದ ಸರ್ಫರಾಝ್ ಖಾನ್, ಇದೀಗ ವಿದೇಶಿ ನೆಲದಲ್ಲಿ ತಮ್ಮ ಟೆಸ್ಟ್ ವೃತ್ತಿ ಜೀವನದ ಮೊದಲ ಪಂದ್ಯವನ್ನು ಆಡಲು ಎದುರು ನೋಡುತ್ತಿದ್ದಾರೆ. ಅಂದ ಹಾಗೆ 27ರ ಹರೆಯದ ಬ್ಯಾಟ್ಸ್‌ಮನ್ ಭಾರತ-ಎ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಟೆಸ್ಟ್ ಸರಣಿಗೂ ಮುನ್ನ ಭಾರತ-ಎ ತಂಡ, ಇಂಗ್ಲೆಂಡ್ ಲಯನ್ಸ್ ವಿರುದ್ಧ ಎರಡು ಪಂದ್ಯಗಳನ್ನು ಆಡಲಿದೆ. ಆಸ್ಟ್ರೇಲಿಯಾ ವಿರುದ್ಧ ಬಾರ್ಡರ್-ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಒಂದೇ ಒಂದು ಪಂದ್ಯದಲ್ಲಿಯೂ ಆಡಲು ಸರ್ಫರಾಝ್ ಖಾನ್‌ಗೆ ಅವಕಾಶ ಸಿಕ್ಕಿರಲಿಲ್ಲ, ಆದರೆ ಅದಕ್ಕೂ ಮುನ್ನ ನ್ಯೂಜಿಲೆಂಡ್ ವಿರುದ್ಧ ಮುಂಬೈನ ವಾಂಖೆಡೆ ಕ್ರೀಡಾಂಗಣದಲ್ಲಿ ನಡೆದಿದ್ದ ಮೂರನೇ ಟೆಸ್ಟ್‌ನಲ್ಲಿ ಸರ್ಫರಾಝ್ ಕೊನೆಯ ಪಂದ್ಯವನ್ನು ಆಡಿದ್ದರು. ತಮ್ಮ ಟೆಸ್ಟ್ ವೃತ್ತಿ ಜೀವನದಲ್ಲಿ 6 ಪಂದ್ಯಗಳಿಂದ 37.10 ಸರಾಸರಿಯಲ್ಲಿ ಒಂದು ಶತಕ ಹಾಗೂ ಮೂರು ಅರ್ಧಶತಕಗಳು ಸೇರಿದಂತೆ 371 ರನ್‌ಗಳನ್ನು ಕಲೆ ಹಾಕಿದ್ದಾರೆ.

ಟ್ರಾವಿಡ್ ಹೆಡ್‌ಗೆ ಕೋವಿಡ್ ದೃಢ

ಹೈದರಾಬಾದ್: ಸನ್‌ರೈಸರ್ಸ್ ಹೈದರಾಬಾದ್ ತಂಡದ ಆರಂಭಿಕ ಆಟಗಾರ ಟ್ರಾವಿಸ್ ಹೆಡ್‌ಗೆ ಕೊರೊನಾ ವೈರಸ್ ಸೋಂಕು ತಗುಲಿರುವುದು ದೃಢಪಟ್ಟಿದೆ ಎಂದು ತಂಡದ ಮುಖ್ಯ ಕೋಚ್ ಡೇನಿಯಲ್ ವೆಟ್ಟೋರಿ ಭಾನುವಾರ ಬಹಿರಂಗಪಡಿಸಿದ್ದಾರೆ. ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಹೆಡ್ ಆಸ್ಟ್ರೇಲಿಯಾದಲ್ಲಿದ್ದಾಗ ಕೊರೊನಾ ವೈರಸ್ ಸೋಂಕಿಗೆ ತುತ್ತಾಗಿದ್ದಾರೆ, ಅದರಿಂದಾಗಿ ಅವರು ತಕ್ಷಣ ಭಾರತಕ್ಕೆ ಮರಳಲು ಸಾಧ್ಯವಾಗಲಿಲ್ಲ. ಇದೀಗ ಅವರು ಮಂಗಳವಾರ ತಲುಪಲಿದ್ದು, ಮುಂದಿನ ಪಂದ್ಯದಲ್ಲಿ ಆಡುತ್ತಾರೋ ಇಲ್ಲವೋ ಎಂಬುದು ಅವರು ಬಂದ ನಂತರವೇ ನಿರ್ಧರಿಸಲಾಗುವುದು ಎಂದು ಹೇಳಿದ್ದಾರೆ. ಐಪಿಎಲ್ 2021ರ ಸೀಸನ್‌ನಲ್ಲಿ ಕೊರೊನಾ ವೈರಸ್ ಪ್ರಕರಣಗಳು ವರದಿಯಾಗಿದ್ದವು, ಅದರಿಂದಾಗಿ ಪಂದ್ಯಾವಳಿಯನ್ನು ಅರ್ಧಕ್ಕೆ ನಿಲ್ಲಿಸಬೇಕಾಯಿತು ಮತ್ತು ಕೆಲವು ತಿಂಗಳುಗಳ ನಂತರ ಉಳಿದ ಪಂದ್ಯಾವಳಿಯನ್ನು ಯುಎಇಯಲ್ಲಿ ಆಯೋಜಿಸಲಾಗಿತ್ತು.

ಕೆಕೆಆರ್ ತಂಡಕ್ಕೆ ಶಿವಂ ಶುಕ್ಲಾ

ಕೋಲ್ಕತ್ತಾ: ವೆಸ್ಟ್ ಇಂಡೀಸ್ ತಂಡದ ಆಲ್‌ರೌಂಡರ್ ರೋಮನ್ ಪೋವೆಲ್ ಉಳಿದ ಐಪಿಎಲ್ ಪಂದ್ಯಗಳಲ್ಲಿ ಆಡದಿರಲು ನಿರ್ಧರಿಸಿರುವ ಕಾರಣ ಅವರ ಸ್ಥಾನಕ್ಕೆ ಮಧ್ಯಪ್ರದೇಶದ ಸ್ಪಿನ್ನರ್ ಶಿವಂ ಶುಕ್ಲಾ ಅವರನ್ನು ಕೋಲ್ಕತ್ತಾ ತಂಡವು ಬದಲಿ ಆಟಗಾರನಾಗಿ ಸೇರಿಸಿಕೊಂಡಿದೆ. ಈ ವಿಚಾರವನ್ನು ಕೋಲ್ಕತಾ ನೈಟ್ ರೈಡರ್ಸ್ ಭಾನುವಾರ ತನ್ನ ಅಧಿಕೃತ ಪ್ರಕಟನೆಯಲ್ಲಿ ತಿಳಿಸಿದೆ. ಪೋವೆಲ್ ವೈದ್ಯಕೀಯ ಕಾರಣಗಳನ್ನು ಉಲ್ಲೇಖಿಸಿ ಭಾರತಕ್ಕೆ ಮರಳಲು ನಿರಾಕರಿಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ. 29 ವರ್ಷದ ಶಿವಂ ಶುಕ್ಲಾ ಮಧ್ಯಪ್ರದೇಶ ಟಿ20 ಲೀಗ್‌ನ ಉದ್ಘಾಟನಾ ಆವೃತ್ತಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ್ದರು. ಆ ಪಂದ್ಯದಲ್ಲಿ ಐದು ವಿಕೆಟ್ ಸೇರಿದಂತೆ ಒಟ್ಟು 10 ವಿಕೆಟ್‌ಗಳನ್ನು ಪಡೆದು ಪರ್ಪಲ್ ಕ್ಯಾಪ್ ಗೆದ್ದಿದ್ದರು. 2024-25ರ ಸೈಯದ್ ಮುಷ್ತಾಕ್ ಅಲಿ ಟ್ರೋಫಿಯಲ್ಲಿ, ಮಧ್ಯಪ್ರದೇಶ ಪರ ಎಂಟು ವಿಕೆಟ್‌ಗಳನ್ನು ಕಬಳಿಸಿದ್ದರು. ಕೆಕೆಆರ್‌ನ ಕೊನೆಯ ಪಂದ್ಯದಲ್ಲಿ ಅವರು ಆಡುವ ಸಾಧ್ಯತೆ ಇದೆ. ಕೆಕೆಆರ್ ಶನಿವಾರದಂದು ಆರ್‌ಸಿಬಿ ವಿರುದ್ಧದ ಪಂದ್ಯದಲ್ಲಿ ಗೆಲುವು ಸಾಧಿಸುತ್ತಿದ್ದರೆ ಪ್ಲೇ-ಆಫ್‌ನಲ್ಲಿ ಉಳಿಯುವ ಅವಕಾಶವಿತ್ತು, ಆದರೆ ತಂಡದ ಆ ಆಸೆಗೆ ಮಳೆ ತಣ್ಣೀರೆರಚಿತ್ತು.

ಕಳೆದ ಐಪಿಎಲ್ ಗೆಲುವಿನ ಗೌರವ ಅಯ್ಯರ್‌ಗೆ ಸಿಕ್ಕಿರಲಿಲ್ಲ

ಮುಂಬೈ: ಬ್ಯಾಟಿಂಗ್ ದಿಗ್ಗಜ ಸುನೀಲ್ ಗವಾಸ್ಕರ್ ಕೋಲ್ಕತಾ ಫ್ರಾಂಚೈಸಿಯನ್ನು ಟೀಕಿಸಿದ್ದಾರೆ. ಕಳೆದ ಆವೃತ್ತಿಯಲ್ಲಿ ಕೆಕೆಆರ್ ಚಾಂಪಿಯನ್ ಆಗಿದ್ದರೂ, ಅಂದಿನ ಆ ನಾಯಕ ಶ್ರೇಯಸ್ ಅಯ್ಯರ್‌ಗೆ ಅದರ ಯಶಸ್ಸಿನ ಶ್ರೇಯ ಸಿಕ್ಕಿರಲಿಲ್ಲ ಎಂದು ಸುನೀಲ್ ಗಾವಸ್ಕರ್ ಬೇಸರ ವ್ಯಕ್ತಪಡಿಸಿದ್ದಾರೆ.

ಕಳೆದ ಐಪಿಎಲ್ ಆವೃತ್ತಿಯಲ್ಲಿ ಟೂರ್ನಿಯಲ್ಲಿ ಶ್ರೇಯಸ್ ಅಯ್ಯರ್ ಬ್ಯಾಟ್ ಮನ್ ಆಗಿ ಹಾಗೂ ನಾಯಕನಾಗಿ ಯಶಸ್ವಿಯಾಗಿದ್ದರು. ಅವರು ಆಡಿದ್ದ 14 ಇನಿಂಗ್ಸ್‌ಗಳಿಂದ 351 ರನ್‌ಗಳನ್ನು ಕಲೆ ಹಾಕಿದ್ದರು. ಅದರಲ್ಲಿ ಇವರ ಸರಾಸರಿ 39 ಹಾಗೂ ಎರಡು ಅರ್ಧಶತಕಗಳನ್ನು ಬಾರಿಸಿದ್ದರು. ಆ ಮೂಲಕ ಈ ಟೂರ್ನಿಯಲ್ಲಿ ಕೋಲ್ಕತಾ ನೈಟ್ ರೈಡರ್ಸ್ ತಂಡ ಮೂರನೇ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತ್ತು. ಅದರ ಹೊರತಾಗಿಯೂ ಶ್ರೇಯಸ್ ಅಯ್ಯರ್ ಅವರನ್ನು ಕೋಲ್ಕತಾ ಫ್ರಾಂಚೈಸಿ ಉಳಿಸಿಕೊಂಡಿರಲಿಲ್ಲ. ಮೆಗಾ ಹರಾಜಿನಲ್ಲಿ ಪಂಜಾಬ್ ಕಿಂಗ್ಸ್ 26.75 ಕೋಟಿ ರೂ. ಗಳಿಗೆ ಶ್ರೇಯಸ್ ಅಯ್ಯರ್ ಅವರನ್ನು ಖರೀದಿಸಿತ್ತು.ಪಂಜಾಬ್ ಕಿಂಗ್ಸ್ ತಂಡವನ್ನು ಯಶಸ್ವಿಯಾಗಿ ಮುನ್ನೆಡೆಸುತ್ತಿರುವ ಶ್ರೇಯಸ್ ಅಯ್ಯರ್, ವೈಯಕ್ತಿಯಾಗಿಯೂ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನವನ್ನು ತೋರುತ್ತಿದ್ದಾರೆ.

'ಕಳೆದ ಆವೃತ್ತಿಯಲ್ಲಿ ಐಪಿಎಲ್ ಗೆಲುವಿನ ಶ್ರೇಯವನ್ನು ಶ್ರೇಯಸ್ ಅಯ್ಯರ್ ತೆಗೆದುಕೊಂಡಿರಲಿಲ್ಲ. ಎಲ್ಲಾ ಯಶಸ್ಸಿನ ಗೌರವವು ಬೇರೆ ಯಾರಿಗೋ ಸಿಕ್ಕಿತ್ತು. ಮೈದಾನದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ಅರಿತುಕೊಂಡು ಅದಕ್ಕೆ ತಕ್ಕಂತೆ ಪ್ರಮುಖ ಪಾತ್ರವನ್ನು ನಾಯಕ ನಿರ್ವಹಿಸುತ್ತಾರೆ. ಆದರೆ ಡಗೌಟ್‌ನಲ್ಲಿ ಕುಳಿತುಕೊಂಡಿರುವವರು ಈ ಕೆಲಸವನ್ನು ಮಾಡುವುದಿಲ್ಲ. ಈ ವರ್ಷ ಅವರಿಗೆ ಪಂಜಾಬ್ ಫ್ರಾಂಚೈಸಿ ನೀಡುತ್ತಿದೆ, ಯಾರೊಬ್ಬರೂ ಕೋಚ್ ರಿಕಿ ಪಾಂಟಿಂಗ್‌ಗೆ ಹೆಚ್ಚಿನ ಶ್ರೇಯ ನೀಡುತ್ತಿಲ್ಲ ಎಂದು ಗವಾಸ್ಕರ್ ಹೇಳಿದ್ದಾರೆ.



ಪಂತ್ ಪಡೆಗೆ ಮಾಡು ಇಲ್ಲವೇ ಮಡಿ ಪರಿಸ್ಥಿತಿ | ಕಮಿನ್ಸ್ ಬಳಗಕ್ಕೆ ಔಪಚಾರಿಕ ಪಂದ್ಯ

ಇಂದು ಹೈದರಾಬಾದ್‌ಗೆ ಲಖನೌ ಸವಾಲು

ಲಖನೌ: ಇಲ್ಲಿನ ಏಕನಾ ಕ್ರಿಕೆಟ್ ಸ್ಟೇಡಿ ಯಂನಲ್ಲಿ ಸೋಮವಾರ ನಡೆಯಲಿರುವ ಐಪಿಎಲ್ ಪಂದ್ಯಾವಳಿಯಲ್ಲಿ ಆತಿಥೇಯ ಸೂಪರ್ ಜೈಂಟ್ಸ್ ಲಖನೌ ತಂಡವು ಸನ್‌ರೈಸರ್ಸ್ ಹೈದರಾಬಾದ್ ತಂಡವನ್ನು ಎದುರಿಸಲಿದೆ. ಹನ್ನೊಂದು ಅಂಕ ಗಳಿಸಿರುವ ರಿಷಬ್ ಪಂತ್ ಪಡೆಯು ಈ ಪಂದ್ಯವೂ ಸೇರಿದಂತೆ ಇನ್ನು ಉಳಿದಿರುವ 3 ಪಂದ್ಯಗಳನ್ನು ಉತ್ತಮ ರನ್‌ರೇಟ್ ಅಂತರದಲ್ಲಿ ಗೆದ್ದರೆ ಲಖನೌಗೆ ಪ್ಲೇ ಆಫ್ ಆಸೆಯನ್ನು ಜೀವಂತವಾಗಿ ಇರಿಸಿಕೊಳ್ಳುವ ಅವಕಾಶ ಇದೆ. ಆದರೆ 11 ಪಂದ್ಯಗಳ ನ್ನಾಡಿ 3 ಪಂದ್ಯಗಳಲ್ಲಿ ಅಷ್ಟೇ ಗೆದ್ದಿರುವ ಪಾಟ್ ಕಮಿನ್ಸ್ ನಾಯಕತ್ವದ ಹೈದರಾ ಬಾದ್ ತಂಡವು ಈಗಾಗಲೇ ಪ್ಲೇ ಆಫ್ ಅವಕಾಶದಿಂದ ವಂಚಿತವಾಗಿರುವ ಕಾರಣ ಅದಕ್ಕೆ ಇದೊಂದು ಔಪಚಾರಿಕ ಪಂದ್ಯವೆನಿಸಲಿದೆ.

ಮಾರ್ಚ್-24ರಂದು ನಡೆದಿದ್ದ ಪಂದ್ಯದಲ್ಲಿ ಲಖನೌ ತಂಡವು ಡೆಲ್ಲಿ ವಿರುದ್ಧ ಸೋಲೊಪ್ಪಿತು. ಆದರೆ ಎರಡನೇ ಪಂದ್ಯದಲ್ಲಿ ಅದು ಹೈದರಾಬಾದ್ ತಂಡ ವನ್ನು 5 ವಿಕೆಟ್‌ಗಳಿಂದ ಮಣಿಸಿ, ಟೂರ್ನಿಯಲ್ಲಿ ಆರಂಭದ ಗೆಲುವನ್ನು ಈ ಸಲ ಪಡೆಯಿತು. ಆ ನಂತರದ ಪಂದ್ಯದಲ್ಲಿ ಲಖನೌ ತಂಡವು ಪಂಜಾಬ್ ವಿರುದ್ಧ ಪರಾಭವಗೊಂಡಿತ್ತು.

ಲಖನೌ ತಂಡ ಆ ನಂತರ ಪುಟಿದೆದ್ದು ಹ್ಯಾಟ್ರಿಕ್ ಗೆಲುವನ್ನು ಪಡೆದುಕೊಂಡಿತು. ಏಪ್ರಿಲ್-4ರಂದು ಮುಂಬೈ ವಿರುದ್ಧ, ಏಪ್ರಿಲ್-8ರಂದು ಕೋಲ್ಕತ್ತಾ ವಿರುದ್ಧ ಮತ್ತು ಏಪ್ರಿಲ್-12ರಂದು ಗುಜರಾತ್ ವಿರುದ್ಧವೂ ಜಯ ದಾಖಲಿಸಿತು.

ಏಪ್ರಿಲ್-14ರಂದು ನಡೆದ ಪಂದ್ಯ ದಲ್ಲಿ ಚೆನ್ನೈ ವಿರುದ್ಧ ಲಖನೌ ಸೋಲು ಕಂಡಿತ್ತು, ಆದರೆ ಏಪ್ರಿಲ್-19ರಂದು ಅದು ರಾಜಸ್ಥಾನದ ವಿರುದ್ಧ ಗೆಲುವು ದಾಖಲಿಸಿತು. ಬಳಿಕ ಲಖನೌ ತಂಡಕ್ಕೆ ಹ್ಯಾಟ್ರಿಕ್ ಸೋಲು ಎದುರಾಯಿತು. ಏಪ್ರಿಲ್-22ರಂದು ಡೆಲ್ಲಿ ವಿರುದ್ಧ, 27ರಂದು ಮುಂಬೈ ವಿರುದ್ಧ ಮತ್ತು ಮೇ-4ರಂದು ಪಂಜಾಬ್ ವಿರುದ್ಧವೂ ಸೋತು ತನ್ನ ಪ್ಲೇ ಆಫ್ ಅವಕಾಶವನ್ನು ಕಠಿಣವಾಗಿರಿಸಿದೆ.

ಈ ಸಲದ ಐಪಿಎಲ್‌ನಲ್ಲಿ ಅಸ್ಥಿರ ಪ್ರದರ್ಶನದ ಮೂಲಕ ಹೈದರಾಬಾದ್ ತಂಡವು ಈಗಾಗಲೇ ಪ್ಲೇ ಆಫ್ ಅವಕಾಶದಿಂದ ಹೊರಹೋಗಿದೆ. ಮಾರ್ಚ್-23ರಂದು ನಡೆದ ಮೊದಲ ಪಂದ್ಯದಲ್ಲಿ ಹೈದರಾಬಾದ್ ತಂಡವು ರಾಜಸ್ಥಾನ ತಂಡದ ವಿರುದ್ಧ ಗೆದ್ದು ಶುಭಾರಂಭ ಮಾಡಿದ್ದರೂ, ಆ ಬಳಿಕ ಆಟಗಾರರ ಅಸ್ಥಿರ ಪ್ರದರ್ಶನ ತಂಡಕ್ಕೆ ಮುಳುವಾ ಯಿತು. ಮಾರ್ಚ್-27ರಂದು ಲಖನೌ ವಿರುದ್ಧ, ಮಾರ್ಚ್-30ರಂದು ಡೆಲ್ಲಿ ವಿರುದ್ಧ, ಏಪ್ರಿಲ್-3ರಂದು ಕೋಲ್ಕತ್ತಾ ವಿರುದ್ಧ ಮತ್ತು ಏಪ್ರಿಲ್-6ರಂದು ಗುಜ ರಾತ್ ವಿರುದ್ಧ ಸೋತು ಸತತ ಮುಖ ಭಂಗಕ್ಕೊಳಗಾಯಿತು. ಏಪ್ರಿಲ್-12 ರಂದು ಅದು ಪಂಜಾಬ್ ವಿರುದ್ಧ ಗೆದ್ದರೂ, ನಂತರ ಸತತವಾಗಿ 2 ಪಂದ್ಯ ಗಳಲ್ಲಿ ಮುಂಬೈ ವಿರುದ್ಧ ಸೋಲೊಪ್ಪಿತು. ಏಪ್ರಿಲ್-25ರಂದು ಚೆನ್ನೈ ವಿರುದ್ಧ ಗೆದ್ದಿದ್ದ ಹೈದರಾಬಾದ್, ಬಳಿಕ ಗುಜರಾತ್ ವಿರುದ್ಧ ಪರಾಭವಗೊಂಡಿತ್ತು. ಮೇ-5 ರಂದು ಡೆಲ್ಲಿ ವಿರುದ್ಧ ಸಂಪೂರ್ಣ ಪಂದ್ಯ ನಡೆಯದ ಕಾರಣ ಪಲಿತಾಂಶ ಕಾಣುವಲ್ಲಿ ವಿಫಲವಾಯಿತು. ಸೋಮವಾರ ತನ್ನ ತವರು ನೆಲದಲ್ಲಿ ನಡೆಯುವ ಪಂದ್ಯವು ಲಖನೌ ಮಟ್ಟಿಗೆ ಪ್ರತಿಷ್ಠೆಯ ಪಂದ್ಯ, ಹಾಗಾಗಿ ಅದು ಹೈದರಾಬಾದ್ ವಿರುದ್ಧ ಮೇಲುಗೈ ಸಾಧಿಸುವ ಆತ್ಮವಿಶ್ವಾಸದಲ್ಲಿದೆ.

ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್ | ಭಾರತಕ್ಕೆ ಮುನ್ನಡೆ

ಮಣಿಕಾ, ಮಾನವ್ ಶುಭಾರಂಭ

ದೋಹಾ: ಭಾರತದ ಆಟಗಾರರಾದ ಮಣಿಕಾ ಬಾತ್ರಾ ಮತ್ತು ಮಾನವ್ ಠಕ್ಕರ್ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಟೇಬಲ್ ಟೆನಿಸ್ ಚಾಂಪಿಯನ್‌ಶಿಪ್‌ನಲ್ಲಿ ಶುಭಾರಂಭ ಮಾಡಿದ್ದಾರೆ. ಮಹಿಳೆಯರ ಸಿಂಗಲ್ಸ್‌ನಲ್ಲಿ 22ನೇ ಶ್ರೇಯಾಂಕದ ಮಣಿಕಾ ಮೊದಲ ಸುತ್ತಿನಲ್ಲಿ 4-0ರಿಂದ (11-5, 116, 11-8, 11-2) ನೈಜೀರಿಯಾದ ಫಾತಿಮಾ ಬೆಲ್ಲೊ ಅವರನ್ನು ಮಣಿಸಿ ಎರಡನೇ ಸುತ್ತು ಪ್ರವೇಶಿಸಿದರು. ಕೇವಲ 24 ನಿಮಿಷದಲ್ಲಿ ಎದುರಾಳಿ ಆಟಗಾರ್ತಿಯನ್ನು ಮಣಿಕಾ ಹಿಮ್ಮೆಟ್ಟಿಸಿದರು. 64ರ ಘಟ್ಟದಲ್ಲಿ ಭಾರತದ ಆಟಗಾರ್ತಿಗೆ ಕೊರಿಯಾದ ಪಾರ್ಕ್ ಗಹಿಯೋನ್ ಎದುರಾಳಿಯಾಗಿದ್ದಾರೆ.

ಭಾರತದ ಅಗ್ರಮಾನ್ಯ ಪುರುಷರ ಸಿಂಗಲ್ಸ್ ಆಟಗಾರ ಮಾನವ್ ಆರಂಭಿಕ ಸುತ್ತಿನಲ್ಲಿ 4-1ರಿಂದ (11-3, 11-8, 6-11, 11-7. 14-12) ನ್ಯೂಜಿಲೆಂಡ್‌ನ ತಿಮೋಥಿ ಜೋಯ್ ಅವರನ್ನು ಸೋಲಿಸಿದರು. ಉದಯೋನ್ಮುಖ ಆಟಗಾರ ಅಂಕುರ್ ಭಟ್ಟಾಚಾರ್ಜಿ ಮೊದಲ ಸುತ್ತಿನಲ್ಲೇ 1-4ರಿಂದ (11-4, 7-11, 9-11, 10-12, 8-11) ಸೋಲು ಕಂಡರು. ಪುರುಷರ ಡಬಲ್ಸ್‌ನಲ್ಲಿ ಒಂಬತ್ತನೇ ಶ್ರೇಯಾಂಕದ ಮನುಷ್ ಶಾ ಮತ್ತು ದಿಯಾ ಚಿಟಾಲೆ ಜೋಡಿಯು ಶುಭಾರಂಭ ಮಾಡಿತು. 3-0ರಿಂದ (11-2, 11-7, 11-6) ಮಲಿಸ್ಸಾ ನಸ್ತಿ ವಿರುದ್ಧ ಗೆಲುವು ಸಾಧಿಸಿದರು. ಅನುಭವಿ ಹರ್ಮೀತ್ ದೇಸಾಯಿ ಮತ್ತು ಸತ್ಯನ್ ಜ್ಞಾನಶೇಖರನ್ ಜೋಡಿಗೆ ನಿರಾಸೆಯಾಯಿತು. ಈ ಜೋಡಿಯು ಆರಂಭಿಕ ಸುತ್ತಿನಲ್ಲಿ 1-3ರಿಂದ (9-11, 12-10, 14-16, 10-12) ರಿಂದ ಆಸ್ಟ್ರಿಯಾದ ಮಾಸಿಜ್ ಕೊಲೊಡ್ಜಿಜೆಕ್ ಮತ್ತು ಮೊಲ್ಡೊವಾದ ವ್ಲಾಡಿಸ್ಲಾವ್ ಉರ್ಸು ವಿರುದ್ಧ ಮುಗ್ಗರಿಸಿತು.

ಮಿಶ್ರ ಡಬಲ್ಸ್‌ನಲ್ಲಿ ಯಶಸ್ವಿನಿ ಘೋರ್ಪಡೆ ಅವರೊಂದಿಗೆ ಕಣಕ್ಕೆ ಇಳಿದಿದ್ದ ದೇಸಾಯಿ ಅವರಿಗೆ ಆಘಾತವಾಯಿತು. 14ನೇ ಶ್ರೇಯಾಂಕದ ಭಾರತದ ಜೋಡಿಯು 2-0 ಮುನ್ನಡೆ ಪಡೆದು, ನಂತರ ಲಯ ಕಳೆದುಕೊಂಡಿತು. 2-3ರಿಂದ (11-8, 116, 10-12, 8-11, 10-12) ಫ್ರಾನ್ಸ್‌ನ ತಿಬಾಲ್ಟ್ ಪೊರೆಟ್ ಮತ್ತು ಲಿಯಾನಾ ಹೊಚಾರ್ಟ್ ಜೋಡಿಗೆ ಮಣಿಯಿತು.

ತಿರುಪತಿಗೆ ಗಂಭೀರ್ ಭೇಟಿ

ತಿರುಪತಿ: ಇಂಗ್ಲೆಂಡ್ ಪ್ರವಾಸಕ್ಕೂ ಮುನ್ನ ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಅವರು ದೇವಸ್ಥಾನಗಳ ಭೇಟಿಯನ್ನು ನಿರಂತರವಾಗಿ ಮಾಡುತ್ತಿದ್ದಾರೆ. ಎರಡು ದಿನಗಳ ಹಿಂದಷ್ಟೇ ಮುಂಬೈನ ಸಿದ್ಧಿವಿನಾಯಕ ದೇವಸ್ಥಾನಕ್ಕೆ ಭೇಟಿ ನೀಡಿ ವಿಶೇಷ ಪೂಜೆ ಸಲ್ಲಿಸಿದ್ದರು. ಭಾನುವಾರ ತಿರುಮಲದ ಸುಪ್ರಸಿದ್ಧ ವೆಂಕಟೇಶ್ವರ ದೇಗುಲಕ್ಕೆ ಭೇಟಿ ನೀಡಿ ಪ್ರಾರ್ಥನೆ ಸಲ್ಲಿಸಿದ್ದಾರೆ. ಗೌತಮ್ ಗಂಭೀರ್ ಅವರು ಪತ್ನಿ ಸಮೇತರಾಗಿ ತಿರುಪತಿಗೆ ಭೇಟಿ ನೀಡಿರುವ ವಿಡಿಯೊ ವನ್ನು ಸುದ್ದಿಸಂಸ್ಥೆಯೊಂದು ಎಕ್ಸ್‌ನಲ್ಲಿ ಹಂಚಿಕೊಂಡಿದೆ.

ಭಾರತ ಕ್ರಿಕೆಟ್ ತಂಡದ ಇಂಗ್ಲೆಂಡ್ ಪ್ರವಾಸವು ಜೂನ್ 20ರಂದು ಲೀಡ್ಸ್‌ನ ಹೆಡಿಂಗ್ಲಿಯಲ್ಲಿ ಮೊದಲ ಟೆಸ್ಟ್‌ನೊಂದಿಗೆ ಆರಂಭವಾಗಲಿದೆ. ಎಡ್ಜ್‌ಬಾಸ್ಟನ್, ಲಾರ್ಡ್ಸ್, ಓಲ್ಡ್ ಟ್ರಾಫರ್ಡ್ ಮತ್ತು ಕೆನ್ನಿಂಗ್ಟನ್ ಓವಲ್ ಕ್ರೀಡಾಂಗಣದಲ್ಲಿ ಉಳಿದ ನಾಲ್ಕು ಟೆಸ್ಟ್‌ಗಳನ್ನು ಆಯೋಜಿಸಲಿವೆ. ಈಗಾಗಲೇ ಇಂಗ್ಲೆಂಡ್ ಲಯನ್ಸ್ ವಿರುದ್ಧ ಆರಂಭಗೊಳ್ಳಲಿರುವ 2 ಪಂದ್ಯಗಳ ಸರಣಿಗೆ ಭಾರತ-ಎ ತಂಡ ಪ್ರಕಟಗೊಂಡಿದೆ.

ಭಾರತ-ಎ ತಂಡದೊಂದಿಗೆ ಗಂಭೀರ್ ಕೂಡ ಇಂಗ್ಲೆಂಡ್‌ಗೆ ತೆರಳಲಿದ್ದಾರೆ. ಮುಂಚಿತವಾಗಿಯೇ ಇಂಗ್ಲೆಂಡ್ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದು, ಮೀಸಲು ಕ್ರಿಕೆಟಿಗರ ಪ್ರತಿಭೆಗಳನ್ನು ತಿಳಿದುಕೊಳ್ಳುವುದು ಗಂಭೀರ್ ಅವರ ಉದ್ದೇಶ ಎನ್ನಲಾಗಿದೆ. ಅನುಭವಿ ಆಟಗಾರರಾದ ವಿರಾಟ್ ಕೊಹ್ಲಿ ಮತ್ತು ರೋಹಿತ್ ಟೆಸ್ಟ್‌ಗೆ ನಿವೃತ್ತಿ ಹೇಳಿದ ಕಾರಣ ಯುವ ಆಟಗಾರರೊಂದಿಗೆ ಗಂಭೀರ್ ಇಂಗ್ಲೆಂಡ್ ಸವಾಲನ್ನು ಎದುರಿಸಬೇಕಿದೆ.

ಆರ್‌ಸಿಬಿ ಆಟಗಾರರಲ್ಲಿ ಚೈತನ್ಯ ತುಂಬಿದ ಕ್ರಿಸ್ ಗೇಲ್

ಬೆಂಗಳೂರು: ಶನಿವಾರ ಇಲ್ಲಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಬೇಕಿದ್ದ ಕೋಲ್ಕತ್ತಾ ನೈಟ್ ರೈಡರ್ಸ್ ಮತ್ತು ರಾಯಲ್ ಚಾಲೆಂಜರ್ಸ್ ಬೆಂಗಳೂರಿನ ನಡುವಿನ ಪಂದ್ಯ ಮಳೆಯಿಂದಾಗಿ ಒಂದು ಎಸೆತವೂ ಬೌಲ್ ಆಗದೆ ರದ್ದಾದಾಗ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರರೂ ನಿರಾಶೆಯಲ್ಲಿದ್ದರು. ಆದರೆ ಅಂದು ರಾತ್ರಿ ದಿಢೀರನೆ ಆರ್‌ಸಿಬಿ ಡ್ರೆಸ್ಸಿಂಗ್ ರೂಮ್‌ಗೆ ತೆರಳಿದ ತಂಡದ ಮಾಜಿ ಆಟಗಾರ ಕ್ರಿಸ್ ಗೇಲ್ ಇಡೀ ತಂಡಕ್ಕೆ ಹೊಸ ಚೈತನ್ಯ ತುಂಬುವ ಕೆಲಸ ಮಾಡಿದರು, ಅದರ ವಿಡಿಯೋವನ್ನು ಆರ್‌ಸಿಬಿ ತನ್ನ ಸೋಶಿಯಲ್ ಮೀಡಿಯಾ ಖಾತೆಯಲ್ಲಿ ಹಂಚಿಕೊಂಡಿದೆ.

ಆರ್‌ಸಿಬಿ ಪರ ಬಹಳಷ್ಟು ವರ್ಷ ಆಡಿದ್ದ ಕ್ರಿಸ್ ಗೇಲ್ ಪಂದ್ಯ ನೋಡಲು ಚಿನ್ನಸ್ವಾಮಿ ಕ್ರೀಡಾಂಗಣಕ್ಕೆ ಆಗಮಿಸಿದ್ದರು. ಆದರೆ ಮಳೆಯಿಂದಾಗಿ ಪಂದ್ಯದ ಟಾಸ್ ಕೂಡ ನಡೆಯಲಿಲ್ಲ. ಆಟಗಾರರನ್ನು ಭೇಟಿಯಾಗಲು ಡ್ರೆಸ್ಸಿಂಗ್ ರೂಮ್‌ಗೆ ದಿಢೀರನೆ ಬಂದ ಗೇಲ್ ರನ್ನು ಫಿಲ್ ಸಾಲ್ಟ್ ಸೇರಿದಂತೆ ಆರ್‌ಸಿಬಿಯ ಎಲ್ಲಾ ಆಟಗಾರರು ಆತ್ಮೀಯವಾಗಿ ಸ್ವಾಗತಿಸಿದರು. ಅದುವರೆಗೂ ನಿರಾಶೆಯಲ್ಲಿದ್ದ ಆಟಗಾರರಲ್ಲಿ ಗೇಲ್‌ರನ್ನು ನೋಡಿದಾಕ್ಷಣ ಸಂತೋಷ ತುಂಬಿ ತುಳುಕಿತು.

ಗೇಲ್ 2011 ರಲ್ಲಿ ಆರ್‌ಸಿಬಿ ಸೇರಿದರು. 2018ರಲ್ಲಿ ಪಂಜಾಬ್ ಕಿಂಗ್ಸ್ ಸೇರುವ ಮೊದಲು ಏಳು ಆವೃತ್ತಿಗಳಲ್ಲಿ ಆರ್‌ಸಿಬಿ ತಂಡದಲ್ಲಿ ಇದ್ದರು. 2021ರ ಆವೃತ್ತಿಯು ಐಪಿಎಲ್‌ನಲ್ಲಿ ಅವರ ಕೊನೆಯ ಆವೃತ್ತಿಯಾಗಿತ್ತು.

142 ಐಪಿಎಲ್ ಪಂದ್ಯಗಳನ್ನಾಡಿದ ಗೇಲ್ 39.72 ಸರಾಸರಿಯಲ್ಲಿ 4965 ರನ್ ಗಳಿಸಿದ್ದಾರೆ. ಇದರಲ್ಲಿ ಆರು ಶತಕ ಮತ್ತು 31 ಅರ್ಧಶತಕಗಳು ಸೇರಿವೆ.